# ವೇದಾಂತ ಸಂದೇಶಗಳು

## ಸಂಪುಟ 5

## ಭಾಗ - 4





ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573211, ದೂರವಾಣಿ : 08175-573820

www.adhyatmaprakasha.org

# ಶ್ರೀಶ್ರೀಗಳವರ ಕೃತಿಗಳು

## (ಅಧ್ಯಾತ್ಮಪ್ರಕಾಶ ಪತ್ರಿಕೆಯಿಂದ ಆಯ್ದ ಲೇಖನಗಳ ಸಂಗ್ರಹ)

1923ರಲ್ಲಿ ಪ್ರಾರಂಭವಾದ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ 1975ರವರೆಗೂ ಶ್ರೀ ಶ್ರೀಗಳವರೇ ಭಕ್ತಿ, ಜ್ಞಾನ, ವೈರಾಗ್ಯ ಮತ್ತು ವೇದಾಂತದಲ್ಲಿ ಅಭಿರುಚಿಯನ್ನುಂಟು ಮಾಡುವಂತಹ ಲೇಖನಗಳನ್ನು ಬರೆದು ಪ್ರಕಟಿಸುತ್ತಿದ್ದರು ಈಗ ಹಳೆಯ ಸಂಪುಟಗಳು ದೊರಕುತ್ತಿಲ್ಲ. ಈ ಲೇಖನಗಳು ಈಗಿನ ಸನ್ನಿವೇಶಕ್ಕೂ ಸಹ ಉಪಯುಕ್ತವಾಗುತ್ತವೆ ಎಂದು ಅನೇಕ ಭಕ್ತರ ಅಪೇಕ್ಷೆಯಂತೆ ಗ್ರಂಥ ರೂಪದಲ್ಲಿ ಹೊರ ತಂದಿರುವ ಕೆಲವು ಪುಸ್ತಕಗಳ ಕಿರುಪರಿಚಯ.

### 1. ಋಗ್ವೇದೀಯ ಪುರುಷಸೂಕ್ತ (ಮಂತ್ರಾರ್ಥ ವಿವೇಚನೆ)

ಅ.ಪ್ರ. ಪತ್ರಿಕೆಯ 24ನೆ ಸಂಪುಟದ (ಸೆಪ್ಟೆಂಬರ್ 1954ರಿಂದ ಆಗಸ್ಟ್ 1955) 12 ಲೇಖನಗಳ ಸಂಕಲನ. ಪೂಜೆ ಮಾಡುವ ಪ್ರತಿಯೊಬ್ಬ ಆಸ್ತಿಕನಿಗೂ ತುಂಬ ಉಪಕಾರಿಯಾಗಿದೆ. ನಿಜವಾದ ಅರ್ಥವು ತಾತ್ವಿಕವಾಗಿ ಹೇಗೆ ವಿಸ್ತೃತವಾಗಿದೆ ಮತ್ತು ಕೇವಲ ಕರ್ಮಪರವಾಗಿರದೆ, ಭಕ್ತಿ ಉಪಾಸನೆ, ಜ್ಞಾನಪರವಾಗಿದೆಯೆಂಬುದನ್ನು ಮಾರ್ಮಿಕವಾಗಿ ಹೃದಯಕ್ಕೆ ತಾಕುವ ಹಾಗೆ ಶ್ರೀ ಶ್ರೀಗಳವರು ಪ್ರತಿಪಾದಿಸಿದ್ದಾರೆ. ಎಲ್ಲ ವೇದದವರಿಗೂ ಮತ್ತು ಆಸ್ತಿಕ ಮಹಾಶಯರಿಗೂ ಉಪಯುಕ್ತವಾದ ಗ್ರಂಥ. (ಎರಡನೆಯ ಮುದ್ರಣ, 2011, ಪು. 115, ಬೆಲೆ. 30 ರೂ.)

### 2. ವೇದಾಂತ ಸಂದೇಶಗಳು : ಸಂಪುಟ 1 (ಪರಮಾರ್ಥ ಚಿಂತನೆ)

1946 ಸೆಪ್ಟೆಂಬರ್‌ನಿಂದ 1949 ಆಗಸ್ಟ್‌ರವರೆಗೆ ''ಈ ತಿಂಗಳ ಸಂದೇಶ'' ಎಂಬ ಶೀರ್ಷಿಕೆಯಲ್ಲಿ ಶ್ರೀಶ್ರೀಗಳವರು ಬರೆದು ಅ.ಪ್ರ. ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದ 36 ಲೇಖನಗಳ ಸಂಗ್ರಹ. ''ಭಗವಂತನಿಗೆ ಯಾವ ಹೆಸರು, ಪರಮಾತ್ಮನನ್ನು ಎಲ್ಲಿ ಕಾಣಬೇಕು, ಸ್ತೋತ್ರ, ಪ್ರಾರ್ಥನೆಗಳನ್ನು ಹೇಗೆ ಮಾಡಬೇಕು, ದುಃಖ ಕಷ್ಟ ಪರಿಹಾರಕ್ಕೆ ಭಗವಂತನನ್ನೇ ಶರಣು ಹೊಂದಬೇಕು'' ಎಂಬಿವೇ ಮುಂತಾದ ಮಹತ್ಪೂರ್ಣವಾದ ವಿಚಾರಗಳಿಂದ ತುಂಬಿ, ತತ್ತ್ವಜಿಜ್ಞಾಸುಗಳಿಗೆ ದಾರಿದೀಪದಂತಿದೆ. ಸಂಸ್ಕೃತ ಬಾರದವರಿಗೂ, ಸರಿಯಾದ ಗುರುಗಳು ದೊರಕದವರಿಗೂ ಈ ಗ್ರಂಥವು ಮಾರ್ಗದರ್ಶನವಾಗಿದೆ.

(ಎರಡನೆಯ ಮುದ್ರಣ, 2011, ಪು. 218, ಬೆಲೆ. 50 ರೂ.)

### 3. ವೇದಾಂತ ಸಂದೇಶಗಳು : ಸಂಪುಟ 2 (ಉಪನಿಷತ್ ಸಿರಿ)

ಬೇರೆ ಬೇರೆ ಉಪನಿಷತ್ತುಗಳ ವಾಕ್ಯಗಳನ್ನು ಸಂಚಿಕೆಗೊಂದರಂತೆ ಅ.ಪ್ರ. ಪತ್ರಿಕೆಯಲ್ಲಿ ಸಂಪುಟ 8, 9, 21, 26, 27ರಲ್ಲಿ ಪ್ರಕಟಿಸಿದ್ದ 52 ಲೇಖನಗಳ ಸಂಗ್ರಹ. ಮೊದಲು ದಶಶಾಂತಿ ಮಂತ್ರದ ಅರ್ಥ ಮತ್ತು ವಿವರಣೆ, ಅನಂತರ (1) ಇರಿವಿನ ಅರಿವು (2) ಆನಂದ ಸ್ವರೂಪವಾದ ಆತ್ಮನ ವಿಚಾರ (3) ಅಧ್ಯಾತ್ಮ ಸಾಧನಗಳು (4) ಜ್ಞಾನಸಾಧನೆಗಳು ಮತ್ತು (5) ಸಾಧನ ಕ್ರಮ ಎಂಬ ಐದು ಅಧ್ಯಾಯಗಳಲ್ಲಿ ಲೇಖನಗಳನ್ನು ಅಳವಡಿಸಿದೆ. ಧ್ಯಾನಯೋಗವನ್ನು ಹೇಗೆ ಮಾಡಬೇಕು ಮತ್ತು ಉಪಾಸನಾ ಕ್ರಮವನ್ನೂ ಶಾಸ್ತ್ರೀಯ ರೀತಿಯಲ್ಲಿ ತಿಳಿಸಿದೆ.

(ಮೊದಲನೆಯ ಮುದ್ರಣ, 2010, ಪು. 247, ಬೆಲೆ. 50 ರೂ.)

(ರಕ್ಷಾಕವಚದ ಮರು ಹಾಳೆಯಲ್ಲಿ ಮುಂದುವರೆದಿದೆ.)

ಅಧ್ಯಾತ್ಮಗ್ರಂಥಾವಳಿ

# ವೇದಾಂತ ಸಂದೇಶಗಳು

## ಸಂಪುಟ -5

## ಭಾಗ 4

## ಶ್ರೀ ಶ್ರೀಗಳವರ ಹಿತವಚನಗಳು


ಲೇಖಕರು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು



ಕ್ರಮಾಂಕ : 251

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ- 573211
ದೂರವಾಣಿ : 08175 273820
Visit us at www.adhyatmaprakasha.Org.

2011

# ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| | | | | | **ಭಾಗ–I** | |
| 1. | 14 | 5 | ಜನವರಿ | 1943 | ಸಂಕಟ ಬಂದಾಗ ವೆಂಕಟರಮಣ | 1 |
| 2. | 14 | 6 | ಫೆಬ್ರವರಿ | 1943 | ಉದ್ಯೋಗಸ್ಥಾನದಲ್ಲಿಯೂ ದೇವರು. | 2 |
| 3. | 14 | 7 | ಮಾರ್ಚ್ | 1943 | ಕುಟುಂಬಭಾವನೆ | 3 |
| 4. | 14 | 9 | ಮೇ | 1943 | ಲಾಭದ ವ್ಯಾಪಾರ | 5 |
| 5. | 14 | 10 | ಜೂನ್ | 1943 | ದಾನಕ್ಕೆ ಪಾತ್ರರು | 6 |
| 6. | 14 | 12 | ಆಗಸ್ಟ್ | 1943 | ಮಕ್ಕಳ ವಿದ್ಯಾಭ್ಯಾಸ | 7 |
| 7. | 15 | 2 | ಅಕ್ಟೋಬರ್ | 1943 | ತೀರ್ಥಯಾತ್ರೆ | 8 |
| 8. | 15 | 3 | ನವಂಬರ್ | 1943 | ಸವರನ್ನಿನ ಪೂಜೆ | 9 |
| 9. | 15 | 5 | ಜನವರಿ | 1944 | ದಾನ | 10 |
| 10. | 15 | 10 | ಜೂನ್ | 1944 | ಲೋಭ | 12 |
| 11. | 15 | 11 | ಜುಲೈ | 1944 | ಅಧ್ಯಾತ್ಮವಿದ್ಯೆ | 14 |
| 12. | 15 | 12 | ಆಗಸ್ಟ್ | 1944 | ಮನಸ್ಸನ್ನು ನೇರ್ಪಡಿಸಿಕೊಳ್ಳುವುದು | 16 |
| 13. | 16 | 1 | ಸಪ್ಟೆಂಬರ್ | 1946 | ದೇವರನ್ನು ಬಯ್ಯುವ ಹುಚ್ಚು ಬೇಡ | 17 |
| 14. | 16 | 2 | ಅಕ್ಟೋಬರ್ | 1946 | ಉದ್ಯೋಗವೇ ಕರ್ಮಯೋಗವಾಗಲಿ! | 19 |
| 15. | 16 | 5 | ಜನವರಿ | 1947 | ಗುರುವಿನಲ್ಲಿ ಯಾವ ಭಾವನೆ ಇರಬೇಕು? | 21 |
| 16. | 16 | 6 | ಫೆಬ್ರವರಿ | 1947 | ವಿದ್ಯಾರ್ಥಿಗಳಿಗೆ ಸಾಧನ | 24 |
| 17. | 16 | 7 | ಮಾರ್ಚ್ | 1947 | ಹೆಣ್ಣುಮಕ್ಕಳಿಗೆ ಅಧ್ಯಾತ್ಮಸಾಧನ | 28 |
| 18. | 16 | 8 | ಏಪ್ರಿಲ್ | 1947 | ವ್ಯಾಪಾರದಲ್ಲಿ ಪ್ರಾಮಾಣಿಕತೆ | 30 |
| 19. | 16 | 9 | ಮೇ | 1947 | ಶಾಸ್ತ್ರವ್ಯಾಖ್ಯಾನದ ಸದುಪಯೋಗ | 32 |
| 20. | 16 | 10 | ಜೂನ್ | 1947 | ಸತತವಾಗಿ ಸಾಧನಮಾಡುವದು ಸಾಧ್ಯವೆ? | 35 |
| 21. | 16 | 11 | ಜುಲೈ | 1947 | ಉಪನಯನ | 37 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 22. | 16 | 12 | ಆಗಸ್ಟ್ | 1947 | ಭಗವನ್ನಾಮದ ಮಹಿಮೆ | 40 |
| 23. | 17 | 1 | ಸೆಪ್ಟೆಂಬರ್ | 1947 | ಸತ್ಯವನ್ನೇ ನುಡಿಯಬೇಕು | 43 |
| 24. | 17 | 3 | ನವೆಂಬರ್ | 1947 | ಸತ್ಸಂಗದ ರಹಸ್ಯ | 45 |
| 25. | 17 | 4 | ಡಿಸೆಂಬರ್ | 1947 | ಲೋಕದ ದುಃಖನಿವಾರಣೆಗೆ ಈಗೇನು ಮಾಡಬೇಕು? | 47 |
| 26. | 17 | 5 | ಜನವರಿ | 1948 | ಧನದ ಉಪಯೋಗ | 50 |
| 27. | 17 | 6 | ಫೆಬ್ರುವರಿ | 1948 | ನಗರವಾಸ | 52 |
| 28. | 17 | 7 | ಮಾರ್ಚ್ | 1948 | ವೇದಾಂತ ವಿಚಾರ | 54 |
| 29. | 17 | 8 | ಏಪ್ರಿಲ್ | 1948 | ಉಪಾಧ್ಯಾಯರ ಕರ್ತವ್ಯ | 56 |
| 30. | 17 | 9 | ಮೇ | 1948 | ಸಂಸ್ಕೃತ ಕಲಿಯುವದರಿಂದ ಪರಮಲಾಭ | 58 |
| 31. | 17 | 10 | ಜೂನ್ | 1948 | ದಾಂಭಿಕತನದಿಂದ ಹಾನಿ | 60 |
| 32. | 17 | 11 | ಜುಲೈ | 1948 | ಬಡತನವೂ ಸಿರಿತನವೂ | 61 |
| 33. | 18 | 4 | ಡಿಸೆಂಬರ್ | 1948 | ಸಾಕ್ಷಾತ್ಕಾರ | 63 |
| 34. | 18 | 6 | ಫೆಬ್ರುವರಿ | 1949 | ಸತ್ಸಂಗ | 64 |
| 35. | 18 | 7 | ಮಾರ್ಚ್ | 1949 | ವಿತಂತುಗಳ ಆಚಾರ | 66 |
| 36. | 18 | 8 | ಏಪ್ರಿಲ್ | 1949 | ಪರೀಕ್ಷೆ | 69 |
| 37. | 18 | 9 | ಮೇ | 1949 | ಜೀವನವೆಲ್ಲವೂ ಈಶ್ವರ ಪೂಜೆಯಾಗಲಿ | 71 |
| 38. | 18 | 10 | ಜೂನ್ | 1949 | ಮದುವೆಯ ಉದ್ದೇಶ | 73 |
| 39. | 18 | 11 | ಜುಲೈ | 1949 | ಮಕ್ಕಳ ವಿಷಯದಲ್ಲಿ ಕರ್ತವ್ಯ | 76 |
| 40. | 18 | 12 | ಆಗಸ್ಟ್ | 1949 | ಸಂಧ್ಯಾವಂದನ | 79 |
| 41. | 19 | 1 | ಸಪ್ಟೆಂಬರ್ | 1949 | ಹರಿಜನಪ್ರೇಮ | 81 |
| 42. | 19 | 2 | ಅಕ್ಟೋಬರ್ | 1949 | ಹರಿಜನಪ್ರೇಮ | 83 |
| 43. | 19 | 3 | ನವಂಬರ್ | 1949 | ಪರಮತಸಹನೆ | 85 |
| 44. | 19 | 4 | ಡಿಸೆಂಬರ್ | 1949 | ಪಾರಿವ್ರಾಜ್ಯ | 88 |
| 45. | 19 | 5 | ಜನವರಿ | 1950 | ಮುಪ್ಪಿನಲ್ಲಿ ಮಾಡಬೇಕಾದದ್ದು | 90 |

ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 46. | 19 | 7 | ಮಾರ್ಚ್ | 1950 | ಮನಮೆಚ್ಚಿದಂತೆ ನಡೆಯುವದು | 92 |
| 47. | 19 | 8 | ಏಪ್ರಿಲ್ | 1950 | ಜನರನ್ನು ತಿದ್ದುವದು | 94 |
| 48. | 19 | 9 | ಮೇ | 1950 | ಉದ್ಯೋಗದ ಘನತೆ | 96 |
| 49. | 19 | 10 | ಜೂನ್ | 1950 | ಆಶ್ರಮಸಂನ್ಯಾಸ | 98 |
| 50. | 19 | 11 | ಜುಲೈ | 1950 | ಧರ್ಮಶಾಸ್ತ್ರವೂ ಸಮಾಜಸ್ಥಿತಿಯೂ | 101 |
| 51. | 19 | 12 | ಆಗಸ್ಟ್ | 1950 | ಬೆಳಗ್ಗೆ ಮುಂಚಿತವಾಗಿ ಏಳುವದು | 103 |
| 52. | 20 | 1 | ಸಪ್ಟೆಂಬರ್ | 1950 | ಹಳ್ಳಿಗಳ ಅಭಿವೃದ್ಧಿ | 104 |
| 53. | 20 | 2 | ಅಕ್ಟೋಬರ್ | 1950 | ಅಧ್ಯಾತ್ಮಸಾಧನದಿಂದಾಗುವ ಪ್ರಯೋಜನ | 106 |
| 54. | 20 | 3 | ನವಂಬರ್ | 1950 | ಉಪನ್ಯಾಸಗಳು, ಉಪದೇಶಗಳು | 108 |
| 55. | 20 | 4 | ಡಿಸೆಂಬರ್ | 1950 | ಹುಡುಗರು ಗೀತೆಯನ್ನು ಹೇಗೆ ಉಪಯೋಗಿಸಬೇಕು? | 110 |
| 56. | 20 | 5 | ಜನವರಿ | 1951 | ಸಾತ್ತ್ವಿಕವೇಷಭಾಷೆಗಳು | 113 |
| 57. | 20 | 6 | ಫೆಬ್ರವರಿ | 1951 | ವೈರಬುದ್ಧಿಯಿಂದಾಗುವ ಹಾನಿ | 116 |
| 58. | 20 | 7 | ಮಾರ್ಚ್ | 1951 | ವ್ಯವಹಾರಕ್ಕೆ ಅಂಟದೆ ಇರುವದು | 118 |
| 59. | 20 | 8 | ಏಪ್ರಿಲ್ | 1951 | ಗುರುಸೇವೆಯ ಗುಟ್ಟು | 119 |
| 60. | 20 | 9 | ಮೇ | 1951 | ಸಂನ್ಯಾಸದ್ವಯ | 122 |
| 61. | 20 | 10 | ಜೂನ್ | 1951 | ಪರಮಾರ್ಥದ ಹಸಿವು | 124 |
| 62. | 20 | 11 | ಜುಲೈ | 1951 | ಮೌನದ ಸ್ವರೂಪ | 125 |
| 63. | 20 | 12 | ಆಗಸ್ಟ್ | 1951 | ಸಾಧನಕ್ರಮ | 126 |
| 64. | 21 | 1 | ಸೆಪ್ಟೆಂಬರ್ | 1951 | ಭಗವಂತನಿಗಾಗಿ ಸರ್ವತ್ಯಾಗ | 128 |
| 65. | 21 | 2 | ಅಕ್ಟೋಬರ್ | 1951 | ಆಚಾರಗಳೂ ರಾಜಕೀಯ ನಿರ್ಬಂಧಗಳೂ | 129 |
| 66. | 21 | 3 | ನವೆಂಬರ್ | 1951 | ಬಡತಿಯ ಆಶೆ | 131 |
| 67. | 21 | 4 | ಡಿಸೆಂಬರ್ | 1951 | ಯುವಕರು ತೆಗೆದುಕೊಳ್ಳಬೇಕಾದ ಎಚ್ಚರಿಕೆ | 133 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಕ್ರ. ಸಂ. | ಸಂ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 68. | 21 | 5 | ಜನವರಿ | 1952 | ಬೇನೆ ಬಿದ್ದಾಗ ಮನಸ್ಸನ್ನು ಹೇಗಿಟ್ಟುಕೊಂಡಿರಬೇಕು? | 135 |
| 69. | 21 | 6 | ಫೆಬ್ರುವರಿ | 1952 | ನಮ್ಮ ಸುತ್ತುವಳೆಯವನ್ನು ಹಿತಕರವಾಗಿ ಮಾಡಿಕೊಳ್ಳುವ ಬಗೆ | 137 |
| 70. | 21 | 7 | ಮಾರ್ಚ್ | 1952 | ನಿತ್ಯರೋಗಕ್ಕೆ ಮದ್ದು | 138 |
| 71. | 21 | 8 | ಏಪ್ರಿಲ್ | 1952 | ಮತ್ತೊಬ್ಬರ ವಿಷಯದ ಮಾತು | 139 |
| 72. | 21 | 9 | ಮೇ | 1952 | ಗೃಹಸ್ಥಧರ್ಮ | 140 |
| 73. | 21 | 10 | ಜೂನ್ | 1952 | ಸಾಧಕನ ಗುರಿ | 142 |
| 74. | 21 | 11 | ಜುಲೈ | 1952 | ನಾಮಸ್ಮರಣೆಯೂ ವ್ಯವಹಾರವು | 143 |
| 75. | 21 | 12 | ಆಗಸ್ಟ್ | 1952 | ಹವ್ಯಾಸಗಳನ್ನು ತಪ್ಪಿಸುವದು | 144 |


### ಭಾಗ–II


| | | | | | | |
|---|---|---|---|---|---|---|
| 76. | 22 | 1 | ಸೆಪ್ಟೆಂಬರ್ | 1952 | ನಾಮಸ್ಮರಣೆಗೆ ಅಡ್ಡಿಗಳು ಹೋಗುವದು ಹೇಗೆ? | 147 |
| 77. | 22 | 2 | ಅಕ್ಟೋಬರ್ | 1952 | ಅಧ್ಯಾತ್ಮಪ್ರಕಾಶವನ್ನು ಅರಿಯುವದು ಹೇಗೆ? | 148 |
| 78. | 22 | 3 | ನವೆಂಬರ್ | 1952 | ಕುಟುಂಬ ಪೋಷಣೆ | 150 |
| 79. | 22 | 4 | ಡಿಸೆಂಬರ್ | 1952 | ವ್ಯವಹಾರವೂ ಪರಮಾರ್ಥವೂ | 151 |
| 80. | 22 | 5 | ಜನವರಿ | 1953 | ಮಹಿಳೆಯರೂ ವ್ಯವಹಾರವೂ | 152 |
| 81. | 22 | 6 | ಫೆಬ್ರುವರಿ | 1953 | ಆಪತ್ಕಾಲದಲ್ಲಿ ಏನು ಮಾಡಬೇಕು? | 154 |
| 82. | 22 | 7 | ಮಾರ್ಚ್ | 1953 | ವೇದಾಂತವನ್ನು ಚರ್ಚಿಸುವ ಕ್ರಮ | 156 |
| 83. | 22 | 8 | ಏಪ್ರಿಲ್ | 1953 | ಶ್ರದ್ಧಾದಿಗಳ ಆವಶ್ಯಕತೆ | 157 |
| 84. | 22 | 9 | ಮೇ | 1953 | ಹರಿಕೀರ್ತನೆ | 158 |
| 85. | 22 | 10 | ಜೂನ್ | 1953 | ವೇದಾಂತವಿಚಾರದಲ್ಲಿ ಶ್ರದ್ಧೆ | 160 |
| 86. | 22 | 11 | ಜುಲೈ | 1953 | ವೈರಬುದ್ಧಿಯನ್ನು ನುಂಗಿಕೊಳ್ಳುವದು | 161 |
| 87. | 22 | 12 | ಆಗಸ್ಟ್ | 1953 | ಮನಸ್ಸನ್ನು ನಿಗ್ರಹಮಾಡಿಕೊಳ್ಳುವದು | 163 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 88. | 23 | 1 | ಸೆಪ್ಟೆಂಬರ್ | 1953 | ಶಾಂತಿ ಸುಖಗಳು ದೊರಕುವದಕ್ಕೆ ಮಾರ್ಗ | 165 |
| 89. | 23 | 2 | ಅಕ್ಟೋಬರ್ | 1953 | ಗ್ರಾಮನೈರ್ಮಲ್ಯ ಸಭೆಯ ಕರ್ತವ್ಯ | 167 |
| 90. | 23 | 3 | ನವಂಬರ್ | 1953 | ವೇದಾಂತದಿಂದ ಧನಸಂಪಾದನೆ | 169 |
| 91. | 23 | 4 | ಡಿಸೆಂಬರ್ | 1953 | ಗೀತಾಜಯಂತಿಯ ಉತ್ಸವ | 171 |
| 92. | 23 | 5 | ಜನವರಿ | 1954 | ಸ್ವಪ್ನ ಸಿದ್ಧಿಯ ಉಪಯೋಗ | 173 |
| 93. | 23 | 6 | ಫೆಬ್ರುವರಿ | 1954 | ವ್ಯವಹಾರವೂ ಅಧ್ಯಾತ್ಮಸಾಧನವೂ | 174 |
| 94. | 23 | 8 | ಏಪ್ರಿಲ್ | 1954 | ತಾನೇ ತನಗೆ ಶತ್ರು, ತಾನೇ ತನಗೆ ಮಿತ್ರ | 176 |
| 95. | 23 | 9 | ಮೇ | 1954 | ಪರಮಾತ್ಮನನ್ನೇ ಆಶ್ರಯಿಸಿದರೆ ಸುಖ | 177 |
| 96. | 23 | 10 | ಜೂನ್ | 1954 | ದೇವರ ಲೋಕ | 179 |
| 97. | 23 | 12 | ಆಗಸ್ಟ್ | 1954 | ಈಶ್ವರನನ್ನೇ ನಂಬುವದು | 180 |
| 98. | 24 | 1 | ಸೆಪ್ಟೆಂಬರ್ | 1954 | ಪರಮಾತ್ಮನು ಲಭಿಸುವದಕ್ಕೆ ಮಾರ್ಗ | 181 |
| 99. | 24 | 2 | ಅಕ್ಟೋಬರ್ | 1954 | ಅಧ್ಯಾತ್ಮದ ಚರ್ಚಾಸಂಘ | 182 |
| 100. | 24 | 3 | ನವಂಬರ್ | 1954 | ಸತ್ಸಂಗದಿಂದಾಗುವ ಲಾಭ | 184 |
| 101. | 24 | 4 | ಡಿಸೆಂಬರ್ | 1954 | ಪರಿವ್ರಾಜಕನ ಧರ್ಮ | 186 |
| 102. | 24 | 5 | ಜನವರಿ | 1955 | ಸಂಸಾರಿಗಳಿಗೆ ಅಧ್ಯಾತ್ಮಸಾಧನೆ | 188 |
| 103. | 24 | 6 | ಫೆಬ್ರುವರಿ | 1955 | ಅನಾಸಕ್ತಿ, ಸಂನ್ಯಾಸ | 190 |
| 104. | 24 | 7 | ಮಾರ್ಚ್ | 1955 | ಅಧ್ಯಾತ್ಮಸಾಧನದ ಮೊದಲನೆಯ ಹೆಜ್ಜೆಗಳು | 193 |
| 105. | 24 | 8 | ಏಪ್ರಿಲ್ | 1955 | ದುಃಖಕ್ಕೆ ಕಾರಣ | 195 |
| 106. | 24 | 9 | ಮೇ | 1955 | ಅಧ್ಯಾತ್ಮವಿಚಾರವು ಸಫಲವಾಗುವದು ಹೇಗೆ | 197 |
| 107. | 24 | 10 | ಜುಲೈ | 1955 | ಸೇಡುತೀರಿಸಿಕೊಳ್ಳುವ ಪ್ರವೃತ್ತಿ | 199 |
| 108. | 24 | 11 | ಆಗಸ್ಟ್ | 1955 | ಆಧ್ಯಾತ್ಮಿಕಸಾಧನಗಳು | 201 |
| 109. | 25 | 1 | ಸೆಪ್ಟೆಂಬರ್ | 1955 | ಅಧ್ಯಾತ್ಮಸಾಧನೆಗೆ ಅಡ್ಡಿಗಳು | 203 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 110. | 25 | 2 | ಅಕ್ಟೋಬರ್ | 1955 | ಅಧ್ಯಾತ್ಮಸಾಧನೆಗೆ ಅವಕಾಶವನ್ನು ಕಲ್ಪಿಸಿಕೊಳ್ಳುವದು ಹೇಗೆ? | 204 |
| 111. | 25 | 3 | ನವಂಬರ್ | 1955 | ಬಾಹ್ಯಕರ್ಮಗಳಿಂದ ಅಧ್ಯಾತ್ಮಸಾಧನಕ್ಕೆ ಬಲ | 206 |
| 112. | 25 | 4 | ಡಿಸೆಂಬರ್ | 1955 | ಅಧ್ಯಾತ್ಮವಿದ್ಯೆಯಿಂದ ಲಾಭ | 207 |
| 113. | 25 | 5 | ಜನವರಿ | 1956 | ಬ್ರಾಹ್ಮಣ್ಯರಕ್ಷಣೆ | 210 |
| 114. | 25 | 6 | ಫೆಬ್ರುವರಿ | 1956 | ಅಧ್ಯಾತ್ಮಸಾಧನಗಳು ಅಳವಡುವದು ಹೇಗೆ? | 212 |
| 115. | 25 | 7 | ಮಾರ್ಚ್ | 1956 | ಧನದ ಉಪಯೋಗ | 213 |
| 116. | 25 | 8 | ಏಪ್ರಿಲ್ | 1956 | ನಿಜವಾದ ವಿದ್ಯೆ | 215 |
| 117. | 25 | 9 | ಮೇ | 1956 | ದಾನದ ತತ್ತ್ವ | 217 |
| 118. | 25 | 10 | ಜೂನ್ | 1956 | ಜೀವನದ ಧ್ಯೇಯ | 219 |
| 119. | 25 | 11 | ಜುಲೈ | 1956 | ಕಷ್ಟಕಾಲದಲ್ಲಿಯೂ ಧರ್ಮವನ್ನು ಬಿಡದೆ ಇರುವದು | 221 |
| 120. | 25 | 12 | ಆಗಸ್ಟ್ | 1956 | ತತ್ತ್ವವಿಚಾರಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವದು | 223 |
| 121. | 26 | 1 | ಸೆಪ್ಟೆಂಬರ್ | 1956 | ಆಧಿವ್ಯಾಧಿಗಳು | 224 |
| 122. | 26 | 2 | ಅಕ್ಟೋಬರ್ | 1956 | ವಿದ್ಯಾಭ್ಯಾಸ | 225 |
| 123. | 26 | 3 | ನವೆಂಬರ್ | 1956 | ಸದ್ಗುರುಭಕ್ತಿ | 227 |
| 124. | 26 | 4 | ಡಿಸೆಂಬರ್ | 1956 | ನಿವೃತ್ತಿಧರ್ಮಕ್ಕೆ ಸಿದ್ಧತೆ | 229 |
| 125. | 26 | 5 | ಜನವರಿ | 1957 | ಸಮತ್ವಬುದ್ಧಿ | 231 |
| 126. | 26 | 6 | ಫೆಬ್ರುವರಿ | 1957 | ಕರ್ಮದ ಫಲ | 233 |
| 127. | 26 | 7 | ಮಾರ್ಚ್ | 1957 | ಮೋಹಬಂಧದಿಂದ ಮುಕ್ತಿ | 234 |
| 128. | 26 | 8 | ಏಪ್ರಿಲ್ | 1957 | ಎಲ್ಲರನ್ನೂ ಮೆಚ್ಚಿಸುವದು | 236 |
| 129. | 26 | 9 | ಮೇ | 1957 | ವೇದಾಂತದಿಂದ ಲಾಭವಾದದ್ದಕ್ಕೆ ಗುರುತು | 237 |
| 130. | 26 | 10 | ಜೂನ್ | 1957 | ಸಾಧನೆಗೆ ಸ್ಥೈರ್ಯ ಬೇಕು | 238 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 131. | 26 | 11 | ಜುಲೈ | 1957 | ಕುಟುಂಬಪೋಷಣೆ | 239 |
| 132. | 26 | 12 | ಆಗಸ್ಟ್ | 1957 | ಜನರ ಮನಸ್ಸನ್ನು ಒಲಿಸುವದು | 240 |
| 133. | 27 | 1 | ಸೆಪ್ಟೆಂಬರ್ | 1957 | ಆಸ್ತಿಕ್ಯಬುದ್ಧಿ | 242 |
| 134. | 27 | 2 | ಅಕ್ಟೋಬರ್ | 1957 | ದರಿದ್ರನಾರಾಯಣ | 243 |
| 135. | 27 | 3 | ನವೆಂಬರ್ | 1957 | ಉಪಾಸನೆಯ ಆವಶ್ಯಕತೆ | 245 |
| 136. | 27 | 4 | ಡಿಸೆಂಬರ್ | 1957 | ಮನಸ್ಸಿಗೆ ಶಾಂತಿ | 247 |
| 137. | 27 | 5 | ಜನವರಿ | 1958 | ಬ್ರಾಹ್ಮಣ್ಯ ರಕ್ಷಣೆ | 250 |
| 138. | 27 | 6 | ಫೆಬ್ರವರಿ | 1958 | ವಯಸ್ಸಾದ ಹಾಗೆ ಏನು ಚಿಂತಿಸಬೇಕು? | 252 |
| 139. | 27 | 7 | ಮಾರ್ಚ್ | 1958 | ಸಂನ್ಯಾಸಾಶ್ರಮವು ಸಾರ್ಥಕವಾಗುವ ಬಗೆ | 254 |
| 140. | 27 | 8 | ಏಪ್ರಿಲ್ | 1958 | ಗುರುಕೃಪೆಯು ಹೇಗೆ ಆಗುವದು? | 256 |
| 141. | 27 | 9 | ಮೇ | 1958 | ಸಾವಿನ ಅಂಜಿಕೆ | 258 |
| 142. | 27 | 10 | ಜೂನ್ | 1958 | ವಿವಾಹದ ಅರ್ಥ | 261 |
| 143. | 27 | 11 | ಜುಲೈ | 1958 | ಆರ್ಜವ | 263 |
| 144. | 27 | 12 | ಆಗಸ್ಟ್ | 1958 | ಮಹಿಳೆಯರು ಮಾಡಬಹುದಾದ ದೇಶಸೇವೆ | 265 |
| 145. | 28 | 1 | ಸೆಪ್ಟೆಂಬರ್ | 1958 | ನಿಜವಾದ ವಿದ್ಯೆ | 267 |
| 146. | 28 | 2 | ಅಕ್ಟೋಬರ್ | 1958 | ಭಗವಂತನ ನಾಮಸ್ಮರಣೆಯೇ ಅಧ್ಯಾತ್ಮಸಾಧನ | 268 |
| 147. | 28 | 3 | ನವೆಂಬರ್ | 1958 | ಪ್ರಾರಬ್ಧ ಪ್ರಯತ್ನ | 270 |
| 148. | 28 | 4 | ಡಿಸೆಂಬರ್ | 1958 | ಓದುವವರೂ ಅಧ್ಯಾತ್ಮಸಾಧನವೂ | 271 |
| 149. | 28 | 5 | ಜನವರಿ | 1959 | ವೇದಾಂತಚರ್ಚೆಯೂ ಅಧ್ಯಾತ್ಮಸಾಧನವೂ | 272 |
| 150. | 28 | 6 | ಫೆಬ್ರವರಿ | 1959 | ಆರ್ಜವದಿಂದ ಜ್ಞಾನಪ್ರಾಪ್ತಿ | 273 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 151. | 28 | 7 | ಮಾರ್ಚ್ | 1959 | ವರ್ತಮಾನಪತ್ರಿಕೆಗಳೂ ಗ್ರಂಥಕಾಲಕ್ಷೇಪವೂ | 275 |
| 152. | 28 | 8 | ಏಪ್ರಿಲ್ | 1959 | ಜನತಾಸೇವೆ | 277 |
| 153. | 28 | 9 | ಮೇ | 1959 | ವಿವಾಹದ ಕಗ್ಗಂಟಿನ ಪ್ರಶ್ನೆ | 278 |
| 154. | 28 | 10 | ಜೂನ್ | 1959 | ಜೀವನದ ಗುರಿ | 281 |
| 155. | 28 | 11 | ಜುಲೈ | 1959 | ಸದ್ಗುರುವಿನ ಅನುಗ್ರಹ | 283 |
| 156. | 28 | 12 | ಆಗಸ್ಟ್ | 1959 | ವೈರಾಗ್ಯ ಜೀವನ | 284 |


### ಭಾಗ–III


| | | | | | | |
|---|---|---|---|---|---|---|
| 157. | 29 | 1 | ಸೆಪ್ಟೆಂಬರ್ | 1959 | ಭೌತಿಕವಿಜ್ಞಾನವೂ ತತ್ತ್ವಜ್ಞಾನವೂ | 286 |
| 158. | 29 | 2 | ಅಕ್ಟೋಬರ್ | 1959 | ಮನಸ್ಸಿನ ದುಗುಡಕ್ಕೆ ಪ್ರತೀಕಾರ | 287 |
| 159. | 29 | 3 | ನವಂಬರ್ | 1959 | ಮಿತಸಂತತಿಯೂ ಕುಟುಂಬಭರಣವೂ | 288 |
| 160. | 29 | 4 | ಡಿಸೆಂಬರ್ | 1959 | ದೀಪಾವಳಿಯಲ್ಲಿ ಮಾಡತಕ್ಕದ್ದೇನು? | 289 |
| 161. | 29 | 5 | ಜನವರಿ | 1960 | ವಿದ್ಯಾಭ್ಯಾಸವೂ ಪರಮಾರ್ಥದ ಒಲವೂ | 290 |
| 162. | 29 | 6 | ಫೆಬ್ರವರಿ | 1960 | ವೇದಾಂತವಿಚಾರದಲ್ಲಿ ಮುಂದುವರಿಯುವದು ಹೇಗೆ? | 291 |
| 163. | 29 | 7 | ಮಾರ್ಚ್ | 1960 | ವೈದ್ಯವಿದ್ಯೆ | 292 |
| 164. | 29 | 8 | ಏಪ್ರಿಲ್ | 1960 | ಇಂಗ್ಲಿಷು, ಸಂಸ್ಕೃತ | 293 |
| 165. | 29 | 9 | ಮೇ | 1960 | ವಿವಾಹದ ಪಾವಿತ್ರ್ಯ | 295 |
| 166. | 29 | 10 | ಜೂನ್ | 1960 | ಪ್ರಾರ್ಥನೆಯ ಆವಶ್ಯಕತೆ | 298 |
| 167. | 29 | 11 | ಜುಲೈ | 1960 | ಆಚಾರದ ಆವಶ್ಯಕತೆ | 299 |
| 168. | 29 | 12 | ಆಗಸ್ಟ್ | 1960 | ಆಚಾರವಿಶೇಷಗಳು | 301 |
| 169. | 30 | 1 | ಸೆಪ್ಟೆಂಬರ್ | 1960 | ಚಿತ್ತಶುದ್ಧಿ | 303 |
| 170. | 30 | 3 | ಅಕ್ಟೋಬರ್ | 1960 | ಹನುಮಂತನ ಭಾಷೆ | 304 |
| 171. | 30 | 4 | ನವಂಬರ್ | 1960 | ಅಧ್ಯಾತ್ಮಸಾಧನೆಗೆ ಅಡಚಣೆ | 305 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 172. | 30 | 5 | ಜನವರಿ | 1961 | ಜನಾಂಗದ ಒಗ್ಗಟ್ಟಿಗೆ ಉಪಾಯ | 306 |
| 173. | 30 | 6 | ಫೆಬ್ರವರಿ | 1961 | ವಿಶ್ರಾಂತಿ | 308 |
| 174. | 30 | 7 | ಮಾರ್ಚ್ | 1961 | ಸಂನ್ಯಾಸ | 309 |
| 175. | 30 | 8 | ಏಪ್ರಿಲ್ | 1961 | ಸ್ವಾಮಿಭೃತ್ಯ ಸಂಬಂಧ | 310 |
| 176. | 30 | 9 | ಮೇ | 1961 | ರಾಮನಾಮ | 311 |
| 177. | 30 | 10 | ಜೂನ್ | 1961 | ದೇವತಾರ್ಚನೆ | 312 |
| 178. | 30 | 11 | ಜುಲೈ | 1961 | ನಮ್ಮ ಕರ್ಮಕ್ಕೆ ಯಾರು ಹೊಣೆ? | 313 |
| 179. | 30 | 12 | ಆಗಸ್ಟ್ | 1961 | ರಾಮಾಯಣ ಮಹಾಭಾರತಗಳು | 314 |
| 180. | 31 | 1 | ಸೆಪ್ಟಂಬರ್ | 1961 | ಶ್ರೀಕೃಷ್ಣಭಗವಂತ | 315 |
| 181. | 31 | 2 | ಅಕ್ಟೋಬರ್ | 1961 | ಸರ್ವಸಹಾನುಭೂತಿ | 317 |
| 182. | 31 | 3 | ನವೆಂಬರ್ | 1961 | ಪರಮಾತ್ಮನ ಸಾಕ್ಷಾತ್ಕಾರ | 318 |
| 183. | 31 | 4 | ಡಿಸೆಂಬರ್ | 1961 | ಹೊರಗಿನ ವೇಷದ ಬೆಲೆ | 319 |
| 184. | 31 | 5 | ಜನವರಿ | 1962 | ವೇದಾಂತಾಭ್ಯಾಸ | 321 |
| 185. | 31 | 6 | ಫೆಬ್ರವರಿ | 1962 | ಸತ್ಸಂಗವೂ ಪರಮಾತ್ಮನ ಧ್ಯಾನವೂ | 322 |
| 186. | 31 | 7 | ಮಾರ್ಚ್ | 1962 | ವೃತ್ತಾಂತಪತ್ರಿಕೆಗಳನ್ನು ಓದುವದು | 323 |
| 187. | 31 | 8 | ಏಪ್ರಿಲ್ | 1962 | ಹಣೆಯಲ್ಲಿ ಧರ್ಮದ ಲಾಂಛನವನ್ನು ಧರಿಸುವ ಪದ್ಧತಿ | 324 |
| 188. | 31 | 9 | ಮೇ | 1962 | ಶಂಕರಜಯಂತಿ, ಶಂಕರಾರಾಧನೆ | 325 |
| 189. | 31 | 10 | ಜೂನ್ | 1962 | ಯಾವುದಕ್ಕೆ ಎಷ್ಟು ಬೆಲೆ | 326 |
| 190. | 31 | 11 | ಜುಲೈ | 1962 | ಗುರುಪೂರ್ಣಿಮೆ | 327 |
| 191. | 31 | 12 | ಆಗಸ್ಟ್ | 1962 | ಸಾಧನದಲ್ಲಿ ಸ್ಥಿರತ್ವ | 328 |
| 192. | 32 | 1 | ಸೆಪ್ಟೆಂಬರ್ | 1962 | ಸದಾಚಾರ | 329 |
| 193. | 32 | 2 | ಅಕ್ಟೋಬರ್ | 1962 | ಪ್ರೇಮವಿವಾಹ | 330 |
| 194. | 32 | 3 | ನವೆಂಬರ್ | 1962 | ದೆವ್ವಗಳಕಾಟ | 331 |
| 195. | 32 | 4 | ಡಿಸೆಂಬರ್ | 1962 | ನಾಸ್ತಿಕ್ಯ | 332 |
| 196. | 32 | 5 | ಜನವರಿ | 1963 | ಆಪತ್ಕಾಲದಲ್ಲಿ ಏನು ಮಾಡಬೇಕು ? | 334 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 197. | 32 | 6 | ಫೆಬ್ರುವರಿ | 1963 | ಸಂನ್ಯಾಸದತತ್ವ | 335 |
| 198. | 32 | 7 | ಮಾರ್ಚ್ | 1963 | ಸಂನ್ಯಾಸಿಗಳ ಕರ್ತವ್ಯ | 336 |
| 199. | 32 | 8 | ಏಪ್ರಿಲ್ | 1963 | ಅಪರಿಹಾರ್ಯ ರೋಗಗಳು | 337 |
| 200. | 32 | 9 | ಮೇ | 1963 | ಬದುಕು ನಿತ್ಯವಲ್ಲ | 338 |
| 201. | 32 | 10 | ಜೂನ್ | 1963 | ಪ್ರಾರ್ಥನೆಯನ್ನು ಹೇಗೆ ಮಾಡಬೇಕು? | 339 |
| 202. | 32 | 11 | ಜುಲೈ | 1963 | ಈಶ್ವರನಲ್ಲಿ ಅಚಲ ಶ್ರದ್ಧೆ | 339 |
| 203. | 32 | 12 | ಆಗಸ್ಟ್ | 1963 | ಅಧ್ಯಾತ್ಮ ವಿದ್ಯೆಯ ಮಾರ್ಗ | 341 |
| 204 | 33 | 1 | ಸೆಪ್ಟಂಬರ್ | 1963 | ಕಷ್ಟಕಾಲ | 342 |
| 205. | 33 | 2 | ಅಕ್ಟೋಬರ್ | 1963 | ಜೀವನದ ಗುರಿ | 343 |
| 206. | 33 | 3 | ನವೆಂಬರ್ | 1963 | ಸತ್ಸಂಗ | 344 |
| 207. | 33 | 4 | ಡಿಸೆಂಬರ್ | 1963 | ತೀರ್ಥಕ್ಷೇತ್ರಗಳು | 345 |
| 208. | 33 | 5 | ಜನವರಿ | 1964 | ಗೀತಾ ಜಯಂತಿ | 346 |
| 209. | 33 | 6 | ಫೆಬ್ರುವರಿ | 1964 | ವೇದಾಂತ ಪ್ರಚಾರ | 347 |
| 210. | 33 | 7 | ಮಾರ್ಚ್ | 1964 | ವ್ಯಾಧಿಶಮನಕ್ಕೆ ಉಪಾಯ | 348 |
| 211. | 33 | 8 | ಏಪ್ರಿಲ್ | 1964 | ಅನುಷ್ಠಾನ | 349 |
| 212. | 33 | 9 | ಮೇ | 1964 | ಸಾತ್ವಿಕ ಮನಸ್ಸು | 350 |
| 213. | 33 | 10 | ಜೂನ್ | 1964 | ಸಂನ್ಯಾಸ | 351 |
| 214. | 33 | 11 | ಜುಲೈ | 1964 | ಶಂಕರಾರಾಧನೆ | 352 |
| 215. | 33 | 12 | ಆಗಸ್ಟ್ | 1964 | ಉಪನಯನವೂ, ಉಪಾಕರ್ಮವೂ | 354 |
| 216. | 34 | 1 | ಸೆಪ್ಟಂಬರ್ | 1964 | ಸಂನ್ಯಾಸಿಗಳೂ, ಸಾಧುಗಳೂ | 355 |
| 217. | 34 | 2 | ಅಕ್ಟೋಬರ್ | 1964 | ಮತ್ತೊಬ್ಬರಿಗಾಗಿ ಅನುಷ್ಠಾನವನ್ನು ಮಾಡುವುದು | 356 |
| 218. | 34 | 3 | ನವೆಂಬರ್ | 1964 | ಗಣಪತಿಯ ಪೂಜೆ | 357 |
| 219. | 34 | 4 | ಡಿಸೆಂಬರ್ | 1964 | ಗೋತ್ರ ಪ್ರವರಗಳು | 358 |
| 220. | 34 | 5 | ಜನವರಿ | 1965 | ಜ್ಞಾನಕ್ಕೆ ಸಾಧನ | 359 |
| 221. | 34 | 6 | ಫೆಬ್ರುವರಿ | 1965 | ಈಗಿನ ಸ್ಥಿತಿಯಲ್ಲಿಯೇ ತತ್ವಪ್ರಾಪ್ತಿ | 361 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 222. | 34 | 7 | ಮಾರ್ಚ್ | 1965 | ಅಕ್ಷರ ವಿದ್ಯೆ | 362 |
| 223. | 34 | 8 | ಏಪ್ರಿಲ್ | 1965 | ಅಧ್ಯಾತ್ಮ ವಿದ್ಯೆಯ ಗುರಿ | 363 |
| 224. | 34 | 9 | ಮೇ | 1965 | ಸಂನಿವೇಶಕ್ಕೆ ಹೊಂದಿಕೊಳ್ಳುವುದು | 364 |
| 225. | 34 | 10 | ಜೂನ್ | 1965 | ಅಧ್ಯಾತ್ಮ ವಿದ್ಯೆಯನ್ನು ಹೇಗೆ ಸಂಪಾದಿಸಿಕೊಳ್ಳಬೇಕು? | 365 |
| 226. | 34 | 11 | ಜುಲೈ | 1965 | ಕೀರ್ತಿಕಾಮ | 367 |
| 227. | 34 | 12 | ಆಗಸ್ಟ್ | 1965 | ಸದ್ಗುರುಸೇವೆ | 368 |
| 228. | 35 | 1 | ಸೆಪ್ಟಂಬರ್ | 1965 | ಸರ್ವತ್ರ ಭಗವದ್ಭಾವನೆ | 370 |
| 229. | 35 | 2 | ಅಕ್ಟೋಬರ್ | 1965 | ವಿದ್ಯಾಶಾಲೆಗಳ ಬೋಧಕರವೃತ್ತಿ | 372 |
| 230. | 35 | 3 | ನವೆಂಬರ್ | 1965 | ವೈದ್ಯವೃತ್ತಿ | 374 |
| 231. | 35 | 4 | ಡಿಸೆಂಬರ್ | 1965 | ದೇಶಭಕ್ತಿಯನ್ನು ಹೇಗೆ ತೋರಿಸಬೇಕು? | 377 |
| 232. | 35 | 5 | ಜನವರಿ | 1966 | ವೇದಾಂತ ವಿದ್ಯೆಯಿಂದ ಐಹಿಕ ಪ್ರಯೋಜನವುಂಟೇ? | 380 |
| 233. | 35 | 6 | ಫೆಬ್ರುವರಿ | 1966 | ವೇದಾಂತದಲ್ಲಿ ಎಲ್ಲರಿಗೂ ಅಧಿಕಾರವಿಲ್ಲವೇ? | 382 |
| 234. | 35 | 7 | ಮಾರ್ಚ್ | 1966 | ವೈರಾಗ್ಯಭಾವನೆ | 384 |
| 235. | 35 | 8 | ಏಪ್ರಿಲ್ | 1966 | ಜ್ಞಾನದ ತತ್ವ | 386 |
| 236. | 35 | 9 | ಮೇ | 1966 | ತರ್ಕದ ಉಪಯೋಗ | 387 |
| 237. | 35 | 10 | ಜೂನ್ | 1966 | ವಿದ್ಯಾಭ್ಯಾಸ | 389 |
| 238. | 35 | 11 | ಜುಲೈ | 1966 | ಕೃಷಿ ಜೀವನ | 390 |
| 239. | 35 | 12 | ಆಗಸ್ಟ್ | 1966 | ಗೋರಕ್ಷಣೆ | 391 |
| 240. | 36 | 1 | ಸೆಪ್ಟಂಬರ್ | 1966 | ಅದ್ವೈತಿಗಳು, ಶೈವರೊ ವೈಷ್ಣವರೊ? | 395 |
| 241. | 36 | 2 | ಅಕ್ಟೋಬರ್ | 1966 | ಪಾಂಚರಾತ್ರರನ್ನು ಶಂಕರಾಚಾರ್ಯರು ಖಂಡಿಸಿದಾರೆಯೆ ? | 397 |
| 242. | 36 | 3 | ನವೆಂಬರ್ | 1966 | ಪರಮಹಂಸ ಪಾರಿವ್ರಾಜ್ಯ | 399 |
| 243. | 36 | 4 | ಡಿಸೆಂಬರ್ | 1966 | ತೀರ್ಥಯಾತ್ರೆ | 401 |
| 244. | 36 | 5 | ಜನವರಿ | 1967 | ವೇದಾಂತ ಜ್ಞಾನದ ಉಪಯೋಗ | 403 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 245. | 36 | 6 | ಫೆಬ್ರವರಿ | 1967 | ಆರ್ಜವ | 406 |
| 246. | 36 | 7 | ಮಾರ್ಚ್ | 1967 | ಆಚಾರ | 408 |
| 247. | 36 | 8 | ಏಪ್ರಿಲ್ | 1967 | ವೇದಾಂತಕ್ಕೆ ಅಧಿಕಾರ | 410 |
| 248. | 36 | 9 | ಮೇ | 1967 | ಕಾಮ್ಯ ನಿಷಿದ್ಧಗಳ ತ್ಯಾಗ | 411 |
| 249. | 36 | 10 | ಜೂನ್ | 1967 | ಸ್ತೋತ್ರಪಾಠ, ಭಜನೆ | 412 |
| 250. | 36 | 12 | ಆಗಸ್ಟ್ | 1967 | ಸದ್ಗುರುವಿನಲ್ಲಿ ಆರ್ಜವ | 414 |


### ಭಾಗ–IV


| | | | | | | |
|---|---|---|---|---|---|---|
| 251. | 37 | 1 | ಸೆಪ್ಟಂಬರ್ | 1967 | ಬುದ್ಧಿಯೂ, ಹೃದಯವೂ | 416 |
| 252. | 37 | 2 | ಅಕ್ಟೋಬರ್ | 1967 | ಆಧ್ಯಾತ್ಮಜ್ಞಾನಕ್ಕೆ ಮುಖ್ಯವಾದ ಅಡ್ಡಿ | 418 |
| 253. | 37 | 3 | ನವೆಂಬರ್ | 1967 | ನಿಜವಾದ ಆಶ್ರಮವು ಎಲ್ಲಿದೆ? | 420 |
| 254. | 37 | 4 | ಡಿಸೆಂಬರ್ | 1967 | ಕುಟುಂಬ ಪ್ರೇಮ | 421 |
| 255. | 37 | 5 | ಜನವರಿ | 1968 | ಓದುವುದಕ್ಕೆ ಆರಿಸಿಕೊಳ್ಳಬೇಕಾದ ಪುಸ್ತಕಗಳು | 422 |
| 256. | 37 | 6 | ಫೆಬ್ರವರಿ | 1968 | ವೇದಾಂತವು ಸಾರ್ವತ್ರಿಕವಲ್ಲವೆ? | 422 |
| 257. | 37 | 7 | ಮಾರ್ಚ್ | 1968 | ಬ್ರಾಹ್ಮಣ್ಯದ ಮಹತ್ವ | 423 |
| 258. | 37 | 8 | ಏಪ್ರಿಲ್ | 1968 | ಜಾತ್ಯಭಿಮಾನ | 425 |
| 259. | 37 | 9 | ಮೇ | 1968 | ನೈಷ್ಠಿಕ ಬ್ರಹ್ಮಚರ್ಯ | 427 |
| 260. | 37 | 10 | ಜೂನ್ | 1968 | ವರ್ಣಾಶ್ರಮ ವ್ಯವಸ್ಥೆ | 429 |
| 261. | 37 | 11 | ಜುಲೈ | 1968 | ಸದ್ಗುರು ಸೇವೆ | 432 |
| 262. | 37 | 12 | ಆಗಸ್ಟ್ | 1968 | ರಾಮಾಯಣ ಮಹಾಭಾರತಗಳು | 434 |
| 263. | 38 | 1 | ಸೆಪ್ಟಂಬರ್ | 1968 | ಸದಾಚಾರ | 436 |
| 264. | 38 | 2 | ಅಕ್ಟೋಬರ್ | 1968 | ಅಧ್ಯಾತ್ಮವಿಚಾರಸಂಘಗಳು | 438 |
| 265. | 38 | 3 | ನವೆಂಬರ್ | 1968 | ವಿದ್ಯಾರ್ಥಿಗಳ ಜೀವನ | 440 |
| 266. | 38 | 4 | ಡಿಸೆಂಬರ್ | 1968 | ಸರಕಾರಿಯ ನೌಕರಿ | 442 |
| 267. | 38 | 5 | ಜನವರಿ | 1969 | ಜ್ಞಾನಸಾಧನಸಂಘದವರು ಏನು ಮಾಡಬೇಕು? | 443 |

## ಲೇಖನಗಳ ಮೂಲ-ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 268. | 38 | 6 | ಫೆಬ್ರವರಿ | 1969 | ಪರೋಪಕಾರ | 444 |
| 269. | 38 | 7 | ಮಾರ್ಚ್ | 1969 | ಸಂನ್ಯಾಸವನ್ನು ಯಾವಾಗಹೇಗೆ ಮಾಡಬೇಕು ? | 446 |
| 270. | 38 | 8 | ಏಪ್ರಿಲ್ | 1969 | ಮೌನವನ್ನು ಹೇಗೆ ಮಾಡಬೇಕು? | 448 |
| 271. | 38 | 9 | ಮೇ | 1969 | ಅಧ್ಯಾತ್ಮವಿದ್ಯೆಯಲ್ಲಿ ಶ್ರದ್ಧೆಯ ಸ್ಥಾನ | 450 |
| 272. | 38 | 10 | ಜೂನ್ | 1969 | ಆಶ್ರಮಧರ್ಮ | 452 |
| 273. | 38 | 11 | ಜುಲೈ | 1969 | ಶ್ರದ್ಧೆ | 454 |
| 274. | 38 | 12 | ಆಗಸ್ಟ್ | 1969 | ಅಧ್ಯಾತ್ಮ ಸಾಧನವೂ ಸಿದ್ಧಾಂತವೂ | 456 |
| 275. | 39 | 1 | ಸೆಪ್ಟಂಬರ್ | 1969 | ಪರರ ಗುಣದೋಷಗಳ ವಿಮರ್ಶೆ | 458 |
| 276. | 39 | 2 | ಅಕ್ಟೋಬರ್ | 1969 | ಅಧ್ಯಾತ್ಮವಿದ್ಯಾ ಕಾಲಕ್ಷೇಪ | 459 |
| 277. | 39 | 3 | ನವೆಂಬರ್ | 1969 | ರಾಮಕೃಷ್ಣಹರಿ | 460 |
| 278. | 39 | 4 | ಡಿಸೆಂಬರ್ | 1969 | ಅಧ್ಯಾತ್ಮವಿದ್ಯೆ | 461 |
| 279. | 39 | 5 | ಜನವರಿ | 1970 | ಮನಸ್ಸಿಗೆ ಶಾಂತಿ | 461 |
| 280. | 39 | 6 | ಫೆಬ್ರವರಿ | 1970 | ವೈರಾಗ್ಯದ ಮರ್ಮ | 462 |
| 281. | 39 | 7 | ಮಾರ್ಚ್ | 1970 | ಯೋಗ ಸಿದ್ಧಿ | 464 |
| 282. | 39 | 8 | ಏಪ್ರಿಲ್ | 1970 | ಮನಃಶಾಂತಿಗೆ ಸಾಧನೆ | 466 |
| 283. | 39 | 9 | ಮೇ | 1970 | ಮರಣಕಾಲದಲ್ಲಿ ಭಗವಂತನ ಸ್ಮರಣೆ | 469 |
| 284. | 39 | 10 | ಜೂನ್ | 1970 | ಅಧ್ಯಾತ್ಮವಿದ್ಯಾ ಪ್ರಸಾರ | 469 |
| 285. | 39 | 11 | ಜುಲೈ | 1970 | ಆಶ್ರಮವಾಸ | 471 |
| 286. | 39 | 12 | ಆಗಸ್ಟ್ | 1970 | ಮನೆಯಲ್ಲಿ ಅಧ್ಯಾತ್ಮವಿದ್ಯಾಭ್ಯಾಸ | 474 |
| 287. | 40 | 1 | ಸೆಪ್ಟಂಬರ್ | 1970 | ತತ್ವವಿಚಾರ ಸಾಧನಾನುಷ್ಠಾನ | 475 |
| 288. | 40 | 2 | ಅಕ್ಟೋಬರ್ | 1970 | ವಾಸನೆ ಅಥವಾ ಸಂಸ್ಕಾರ | 477 |
| 289. | 40 | 3 | ನವೆಂಬರ್ | 1970 | ಭಕ್ತಿಯೂ, ಜ್ಞಾನವೂ | 478 |
| 290. | 40 | 4 | ಡಿಸೆಂಬರ್ | 1970 | ಈಶ್ವರನ ವಿಷಯಕ್ಕೆ ಶಂಕೆಗಳ ಸುರಿಮಳೆ | 479 |
| 291. | 40 | 5 | ಜನವರಿ | 1971 | ಪರಮಾತ್ಮ ಸಾಧನೆಯಲ್ಲಿ ಅಹಂಕಾರವು ಸಲ್ಲದು | 480 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 292. | 40 | 6 | ಫೆಬ್ರುವರಿ | 1971 | ಬ್ರಾಹ್ಮಣ್ಯ | 481 |
| 293. | 40 | 7 | ಮಾರ್ಚ್ | 1971 | ಉಪನಯನ | 483 |
| 294. | 40 | 8 | ಏಪ್ರಿಲ್ | 1971 | ಬ್ರಹ್ಮಚರ್ಯ | 485 |
| 295. | 40 | 9 | ಮೇ | 1971 | ಸಂನ್ಯಾಸಾಶ್ರಮ | 488 |
| 296. | 40 | 10 | ಜೂನ್ | 1971 | ಗುರು ಸೇವೆ | 490 |
| 297. | 40 | 11 | ಜುಲೈ | 1971 | ಭಾವನೆಯ ಆವಶ್ಯಕತೆ | 491 |
| 298. | 40 | 12 | ಆಗಸ್ಟ್ | 1971 | ಭೋಗ, ಭಯ, ಕ್ರೋಧ | 493 |
| 299. | 41 | 1 | ಸೆಪ್ಟಂಬರ್ | 1971 | ಸಂನ್ಯಾಸಾಶ್ರಮ | 495 |
| 300. | 41 | 2 | ಅಕ್ಟೋಬರ್ | 1971 | ಸಾಧನಗಳ ಸ್ಥಾನ | 497 |
| 301. | 41 | 3 | ನವೆಂಬರ್ | 1971 | ತಪಸ್ಸಿನಲ್ಲಿ ಮಿತಿ | 498 |
| 302. | 41 | 4 | ಡಿಸೆಂಬರ್ | 1971 | ವೇಷ , ಭಾಷೆ | 500 |
| 303. | 41 | 5 | ಜನವರಿ | 1972 | ಯಜ್ಞದಾನ ತಪಸ್ಸುಗಳು | 502 |
| 304. | 41 | 6 | ಫೆಬ್ರುವರಿ | 1972 | ಭಗವದ್ಭಕ್ತಿ | 505 |
| 305. | 41 | 7 | ಮಾರ್ಚ್ | 1972 | ಸಂನ್ಯಾಸಾಶ್ರಮ | 507 |
| 306. | 41 | 8 | ಏಪ್ರಿಲ್ | 1972 | ಭಜನೆ | 509 |
| 307. | 41 | 9 | ಮೇ | 1972 | ಗೀತಾರ್ಥ ಪ್ರಚಾರ | 511 |
| 308. | 41 | 10 | ಜೂನ್ | 1972 | ಸರ್ವತ್ರ ಭಗವದ್ಭಾವನೆ | 512 |
| 309. | 41 | 11 | ಜುಲೈ | 1972 | ಧ್ಯಾನಯೋಗಕ್ಕೆ ಅಣಿಯಾಗುವುದು | 513 |
| 310. | 41 | 12 | ಆಗಸ್ಟ್ | 1972 | ಅಧಿಕಾರವಾದ | 515 |
| 311. | 42 | 1 | ಸೆಪ್ಟಂಬರ್ | 1972 | ಬ್ರಹ್ಮವಿದ್ಯೆಯ ಈಗಿನ ದುರವಸ್ಥೆ | 516 |
| 312. | 42 | 2 | ಅಕ್ಟೋಬರ್ | 1972 | ಸಾಧನೆಯ ಕ್ರಮ | 517 |
| 313. | 42 | 3 | ನವೆಂಬರ್ | 1972 | ಚಾತುರ್ಮಾಸ್ಯವೂ ಮಹಾಲಯವೂ | 518 |
| 314. | 42 | 4 | ಡಿಸೆಂಬರ್ | 1972 | ಪರಮಹಂಸಪರಿವ್ರಾಜ್ಯ | 519 |
| 315. | 42 | 5 | ಜನವರಿ | 1973 | ಪತಿಭಕ್ತಿ | 521 |
| 316. | 42 | 6 | ಫೆಬ್ರುವರಿ | 1973 | ಉತ್ಸವಗಳು | 523 |
| 317. | 42 | 7 | ಮಾರ್ಚ್ | 1973 | ಸಾಧುಗಳ ಅನುಕರಣೆ | 526 |
| 318. | 42 | 8 | ಏಪ್ರಿಲ್ | 1973 | ಸಂನ್ಯಾಸದ ತತ್ತ್ವ | 527 |

ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 319. | 42 | 9 | ಮೇ | 1973 | ಜಪದ ಮರ್ಮ | 528 |
| 320. | 42 | 10 | ಜೂನ್ | 1973 | ಆತ್ಮ ನಿಶ್ಚಯ | 529 |
| 321. | 42 | 11 | ಜುಲೈ | 1973 | ಅಧ್ಯಾತ್ಮವಿದ್ಯೆಯು ಯಾರಿಗಾಗಿ ಹೇಳಿದ್ದು? | 530 |
| 322. | 42 | 12 | ಆಗಸ್ಟ್ | 1973 | ಇನ್ನಾದರೂ ಕಾಲವನ್ನು ಸದುಪಯೋಗಮಾಡಿಕೊಳ್ಳಬಾರದೆ? | 531 |
| 323. | 43 | 4 | ಡಿಸೆಂಬರ್ | 1973 | ಪರಮಹಂಸನ ನಿಷ್ಠೆ | 532 |
| 324. | 43 | 5 | ಜನವರಿ | 1974 | ಭಗವಂತನಲ್ಲಿ ಮೊರೆಯಿಡುವುದು | 533 |
| 325. | 43 | 6 | ಫೆಬ್ರವರಿ | 1974 | ಅನುಭವ | 534 |
| 326. | 43 | 7 | ಮಾರ್ಚ್ | 1974 | ಆತ್ಮನ ಸರ್ವವ್ಯಾಪ್ತಿ | 535 |
| 327. | 43 | 8 | ಏಪ್ರಿಲ್ | 1974 | ಅಧ್ಯಾತ್ಮಶಾಸ್ತ್ರದ ಸದುಪಯೋಗ | 537 |
| 328. | 43 | 9 | ಮೇ | 1974 | ಆತ್ಮೈಕತ್ವವಿದ್ಯೆಯಲ್ಲಿ ನಿಷ್ಠೆ | 538 |
| 329. | 43 | 10 | ಜೂನ್ | 1974 | ಋಜುಭಾವ | 538 |
| 330. | 43 | 11 | ಜುಲೈ | 1974 | ಮಹಾವಾಕ್ಯಜಪ | 540 |
| 331. | 43 | 12 | ಆಗಸ್ಟ್ | 1974 | ಮೋಕ್ಷವೆಂಬುದು ನಿತ್ಯಸಿದ್ಧ | 541 |
| 332. | 44 | 1 | ಸೆಪ್ಟಂಬರ್ | 1974 | ಪಾರಿವ್ರಾಜ್ಯವು ವಿಹಿತವೆ? | 542 |
| 333. | 44 | 2 | ಅಕ್ಟೋಬರ್ | 1974 | ಎಲ್ಲಕ್ಕೂ ಹೆಚ್ಚಿನ ಓದು | 544 |
| 334. | 44 | 3 | ನವೆಂಬರ್ | 1974 | ಭಕ್ತಿಯೂ ಅನುಭವವೂ | 546 |
| 335. | 44 | 4 | ಡಿಸೆಂಬರ್ | 1974 | ವ್ಯವಹಾರವನ್ನು ಪರೀಕ್ಷೆ ಮಾಡುವುದು ಹೇಗೆ? | 547 |
| 336. | 44 | 5 | ಜನವರಿ | 1975 | ಗುರುಗಳಾಗುವ ಹವಣಿಕೆಯೇಕೆ ? | 549 |
| 337. | 44 | 6 | ಫೆಬ್ರವರಿ | 1975 | ಅಹಂಕಾರ, ಮಮಕಾರಗಳ ತ್ಯಾಗವೇ ಉತ್ತಮ ಸಾಧನ | 550 |

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

अध्यात्म

ಹೊಳೆನರಸೀಪುರ

# ವೇದಾಂತ ಸಂದೇಶಗಳು–ಸಂಪುಟ 5

## ಭಾಗ–4

## 251. ಬುದ್ಧಿಯೂ ಹೃದಯವೂ

(ಸೆಪ್ಟೆಂಬರ್ 1967)

*ನಿಮ್ಮ ಪತ್ರವು ತಲುಪಿದೆ. ಬುದ್ಧಿಯು ಚುರುಕಾಗಿದ್ದರೆ ವೇದಾಂತಾರ್ಥವನ್ನು ತಾನೇ ಊಹಿಸಿ ತಿಳಿದುಕೊಳ್ಳುವದಕ್ಕಾಗದೆ? ಈ ವಿಷಯದಲ್ಲಿ ಆಚಾರ್ಯನು ಸಹಾಯ ಮಾಡತಕ್ಕದ್ದೇನಿದ್ದೀತು? ಇತರ ಶಾಸ್ತ್ರಗಳಲ್ಲಿ ಹೇಗೆ ತಾನು ಕಲಿತಿದ್ದನ್ನು ಗುರುವು ಶಿಷ್ಯರಿಗೆ ಹೇಳಿಕೊಡುತ್ತಾನೋ ಅಷ್ಟಕ್ಕಿಂತ ಇಲ್ಲಿ ಏನು ಹೆಚ್ಚಿನ ಸಹಾಯವು ಸಿಕ್ಕೀತು? ನಿಗಮವ್ಯಾಕರಣಾದಿಗಳ ಸಹಾಯವಿದ್ದರೆ ಬುದ್ಧಿವಂತನಾದವನು ಯಾರೊಬ್ಬರ ಸಹಾಯವೂ ಇಲ್ಲದೆ ತಾನೇ ವೇದಾಂತಾರ್ಥವನ್ನು ಊಹಿಸಿಕೊಳ್ಳಲಾರನೆ?–ಎಂಬುದು ನಿಮ್ಮ ಪ್ರಶ್ನೆ.*

ಇಂದ್ರಿಯಮನೋಬುದ್ಧಿಗಳಲ್ಲಿ ಸರಿಯಾದ ಪಾಟವ(ಜಾಣತನ)ವಿದ್ದರೆ ಬಾಹ್ಯವಿಷಯಗಳನ್ನು ಶಾಸ್ತ್ರಾಭ್ಯಾಸದ ಬಲವಿದ್ದವನು ಅವಶ್ಯವಾಗಿ ತಾನೇ ಊಹಿಸಬಲ್ಲನೆಂಬುದು ನಿಶ್ಚಯ. ಏಕೆಂದರೆ ಬಾಹ್ಯಾರ್ಥಗಳ ಸ್ವರೂಪಸ್ಥಿತಿಕಾರ್ಯಗಳನ್ನು ತರ್ಕಬಲದಿಂದ ಊಹಿಸಿಕೊಳ್ಳಲು ಅವುಗಳ ಯೋಗ್ಯತೆಯಲ್ಲಿಯೇ ಅಲ್ಲಿ ಬೇಕಾಗಿರುವ ಸಾಧನ. ಆದರೆ ಆತ್ಮಾದಿಪದಾರ್ಥಗಳು ಬಾಹ್ಯಾರ್ಥಗಳಂತೆ ಪ್ರಮೇಯವಲ್ಲ, ಎಂದರೆ ಯಾವ ಸಾಧನಕ್ಕೂ ವಿಷಯಗಳಲ್ಲ. ಅಧ್ಯಾತ್ಮವಿಷಯಗಳನ್ನು ಅರಿತುಕೊಳ್ಳುವದಕ್ಕೆ ಬಾಹ್ಯದೃಷ್ಟಿಯೇ ಅಡ್ಡಿಯಾಗಿರುತ್ತದೆ. ವಿಜ್ಞಾತೃ, ವಿಜ್ಞಾನ, ವಿಜ್ಞೇಯ–ಎಂಬ ವಿಭಾಗವನ್ನನುಸರಿಸಿ ವಿಚಾರ ಮಾಡುವ ಕ್ರಮವೇ ಇಲ್ಲಿ ತತ್ತ್ವವನ್ನು ತಿಳಿಯುವದಕ್ಕೆ ಅಡ್ಡಿಯಾಗಿರುತ್ತದೆ. ಆದ್ದರಿಂದ ಇಲ್ಲಿ ಈ ಕ್ರಮದಿಂದ ಪುರುಷಾರ್ಥವು ಸಿಕ್ಕುವಂತಿಲ್ಲ. ''ನಿಮ್ಮ ಕರಣಗಳನ್ನು ಉಪಶಮಮಾಡಿಕೊಂಡು ನಿಮ್ಮೊಳಗೇ ನೋಡುವ ದಾರಿಯನ್ನು ಹಿಡಿಯಿರಿ'' ಎಂದು ಬೋಧಿಸುವ ಶಾಸ್ತ್ರವೂ ಅದನ್ನು ಅನುಭವಕ್ಕೆ ತಂದುಕೊಂಡಿರುವ ಆಚಾರ್ಯನೂ ಇಲ್ಲಿ ಅತ್ಯಂತವಾಗಿ ಅವಶ್ಯ.

ಆದ್ದರಿಂದಲೇ ಶ್ರುತಿಯು 'ನೈಷಾತರ್ಕೇಣ ಮತಿರಾಪನೇಯಾ ಪ್ರೋಕ್ತಾನ್ಯೇನೈವ ಸುಜ್ಞಾನಾಯ ಪ್ರೇಷ್ಠ'(ಕ. 2–2,9) ಇದು ಇಂದ್ರಿಯಮನಆದಿಸಾಧನಗಳಿಂದ ತರ್ಕಿಸಿ ತಿಳಿದುಕೊಳ್ಳುವ ವಿಷಯವಲ್ಲ, ಬೇರೊಂದು ದಾರಿಯನ್ನು ಕಂಡುಕೊಂಡಿರುವವನು ಉಪದೇಶಿಸಿದರೇ ಸರಿಯಾದ ತಿಳಿವಳಿಕೆಯಾದೀತು–ಎಂದು ಸಾರುತ್ತಿದೆ. ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಮ್ ಬ್ರಹ್ಮನಿಷ್ಠಮ್ ॥ ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್ ಪ್ರಶಾಂತಚಿತ್ತಾಯ

ಶಮಾನ್ವಿತಾಯ । ಯೇನಾಕ್ಷರಂ ಪುರುಷಂ ವೇದ ಸತ್ಯಂ ಪ್ರೋವಾಚ ತಾಂ ತತ್ತ್ವತೋ ಬ್ರಹ್ಮವಿದ್ಯಾಮ್ ॥'' ಮುಂ.1–2, 12–13) ಅದನ್ನು ಸರಿಯಾಗಿ ಅನುಭವಕ್ಕೆ ತಂದುಕೊಳ್ಳುವದಕ್ಕೆ ಗುರುವನ್ನೇ ಬಳಿ ಸಾರಬೇಕು. ಹೀಗೆ ತನ್ನನ್ನು ಬಳಿಸಾರಿದ ಶಿಷ್ಯನು ಪ್ರಶಾಂತಚಿತ್ತನೂ ಶಮಾದಿಗುಣಗಳುಳ್ಳವನೂ ಆಗಿದ್ದರೆ ಸರ್ವವಿಕಾರರಹಿತವಾದ ಆ ಪರಮಾರ್ಥತತ್ತ್ವವನ್ನು ಆಚಾರ್ಯನು ಉಪದೇಶಿಸಬೇಕು– ಎಂದು ಸ್ಪಷ್ಟಾಕ್ಷರಗಳಿಂದ ನುಡಿಯುತ್ತಿದೆ.

ಬಾಹ್ಯವಿಷಯಗಳ ಶಾಸ್ತ್ರಗಳಲ್ಲಿ ಇಂದ್ರಿಯಕೌಶಲವು ಹೇಗೆ ಅವಶ್ಯವೋ ಸರ್ವಾಂತರವಾದ ಆತ್ಮತತ್ತ್ವದ ವಿಷಯದಲ್ಲಿ ಅಂತರ್ಮುಖತ್ವಕ್ಕೆ ಬೇಕಾದ ಶಮದಮಾದಿಗಳೂ ನಮ್ಮ ಚಿತ್ತವನ್ನು ಒಳಕ್ಕೆ ತಿರುಗಿಸಬಲ್ಲ ಅನುಭವಿಯಾದ ಆಚಾರ್ಯನ ಉಪದೇಶವೂ ಹಾಗೇ ಅತ್ಯವಶ್ಯವು. ಇಲ್ಲಿ ಶಾಸ್ತ್ರಾಚಾರ್ಯರು ಇಲ್ಲದ ತತ್ತ್ವವನ್ನೇನೂ ಸೃಷ್ಟಿಮಾಡಿಕೊಡುವದಿಲ್ಲ. ಅದರ ಕಡೆಗೆ ನಮ್ಮ ಚಿತ್ತವನ್ನು ತಿರುಗಿಸುವಂತೆ ನಮ್ಮನ್ನು ಒಲಿಯಿಸುತ್ತಾರೆ. ಆಗ ಶಾಸ್ತ್ರಾರ್ಥವು ತನಗೆ ತಾನೇ ಹೊಳೆಯುತ್ತದೆ.

ಗುರುಗಳೂ ಶಾಸ್ತ್ರಗಳೂ ಅನೇಕವಾಗಿರುವದರಿಂದಲೂ ಪರಸ್ಪರವಾಗಿ ವಿರುದ್ಧವಾಗಿರುವದರಿಂದಲೂ ಅವುಗಳೆಲ್ಲವನ್ನೂ ಅಸಡ್ಡೆ ಮಾಡಬೇಕು. ತರ್ಕಪ್ರಧಾನವಾದ ಬುದ್ಧಿಯನ್ನು ಬಿಟ್ಟು ಜೀವನದಲ್ಲಿ ತನ್ನನ್ನು ಎದುರಿಸುವ ತೊಡಕಿನ ಪ್ರಶ್ನೆಗಳನ್ನೆಲ್ಲ ಯಾವ ಪೂರ್ವಾಭಿನಿವೇಶವೂ ಇಲ್ಲದೆ ಇದ್ದದ್ದು ಇದ್ದಂತೆ ನೋಡುವ ಅಭ್ಯಾಸವನ್ನಿಟ್ಟುಕೊಳ್ಳಬೇಕು– ಎಂದು ಬೋಧಿಸುವವರೂ ಉಂಟು. ಆದರೆ ಗುರುಗಳನ್ನೂ ಶಾಸ್ತ್ರಗಳನ್ನೂ ಬಿಟ್ಟು ಸ್ವತಂತ್ರಪ್ರಜ್ಞೆಯಿಂದ ನಿಜವನ್ನು ನೋಡಬಲ್ಲವರು ಲೋಕದಲ್ಲಿ ಎಷ್ಟು ಮಂದಿ ಇರುತ್ತಾರೆ? ಈ ಉಪದೇಶದಲ್ಲಿ ಸಾರಾಂಶವೂ ಇದೆ. ಅನುಭವಕ್ಕೆ ವಿರುದ್ಧವಾಗಿ ಕುತರ್ಕ ಮಾಡುವವರನ್ನು ಕೈ ಬಿಟ್ಟು ಸಾರ್ವತ್ರಿಕಾನುಭವಕ್ಕೆ ಹೊಂದುವ ತತ್ತ್ವವನ್ನು ಮಾತ್ರ ತೆಗೆದುಕೊಳ್ಳಬೇಕು– ಎಂಬ ಸೂತ್ರವನ್ನು ಅನುಸರಿಸುವದೇ ಯುಕ್ತ

ಬುದ್ಧಿಯು ವಿಷಯಗಳನ್ನು ತರ್ಕಿಸುವದರಲ್ಲಿಯೇ ಸಮರ್ಥವಾಗಿರುತ್ತದೆ. ಹೃದಯವು ತನ್ನತ್ತ ತಿರುಗಿದವರಿಗೆ ತತ್ತ್ವವನ್ನು ಬೆಳಗಿಸಿ ತೋರಿಸುತ್ತದೆ. ಪರಮಾತ್ಮನು ಹೃದಯದಲ್ಲಿಯೇ ತೋರಿಕೊಳ್ಳುತ್ತಾನೆ. ಆದ್ದರಿಂದಲೇ ಇದಕ್ಕೆ 'ಹೃದ್ಯಯಮ್' (ಹೃದಯದಲ್ಲಿ ಇವನು ಇರುವನು) ಎಂಬ ಅರ್ಥವನ್ನು ಕೊಡುವ 'ಹೃದಯ'ವೆಂಬ ಶಬ್ದವು ಇದಕ್ಕೆ ಅನ್ವರ್ಥವಾಗಿದೆ– ಎಂಬ ಶ್ರುತಿವಚನವೂ ಇದೆ.

ಆದ್ದರಿಂದ ನಾವು ತರ್ಕವನ್ನು ತಗ್ಗಿಸಬೇಕು. ಹೃದಯವನ್ನು ಅರಳಿಸುವ ಶಮದಮಾದಿಸದ್ಗುಣಗಳನ್ನು ಸಂಪಾದಿಸಿಕೊಳ್ಳಬೇಕು. ಈಗೇನಾದರೂ ನಿಮ್ಮ ಪ್ರಶ್ನೆಗೆ ಉತ್ತರವು ಬಂದಂತಾಯಿತೆ?

# 252. ಅಧ್ಯಾತ್ಮಕಜ್ಞಾನಕ್ಕೆ ಮುಖ್ಯವಾದ ಅಡ್ಡಿ

(ಅಕ್ಟೋಬರ್ 1967)

*ನಿಮ್ಮ ಪತ್ರವು ಬಂದಿರುತ್ತದೆ. ನನಗೆ ಅಧ್ಯಾತ್ಮವಿಚಾರದಲ್ಲಿ ಬಹಳ ಆಸಕ್ತಿಯಿರುತ್ತದೆ. ಆದರೆ ನಾನು ಶ್ರವಣಕ್ಕೆಂದು ಹೋಗುವ ಆಶ್ರಮಗಳಲ್ಲಿರುವ ಆಹಾರ ವಿಹಾರವ್ಯವಸ್ಥೆಯು ಸ್ವಲ್ಪವೂ ಸರಿಯಾಗಿಲ್ಲ. ಶರೀರಸ್ಥಿತಿಗೆ ತಕ್ಕಷ್ಟು ಅನುಕೂಲ್ಯವೂ ಇಲ್ಲದ ಕಡೆಯಲ್ಲಿ, ಅಧ್ಯಾತ್ಮವಿಚಾರವು ಸಾಗುವದೆಂತು? ಸ್ವತಂತ್ರವಾಗಿ ವಿಚಾರಮಾಡಿದರೆ ತತ್ತ್ವಜ್ಞಾನವು ಲಭಿಸಲಾರದೆಂದೂ ಸದ್ಗುರುವಿನಿಂದಲೇ ಅದು ಸಿಕ್ಕಬೇಕೆಂದೂ ಅಧ್ಯಾತ್ಮಗ್ರಂಥಗಳಲ್ಲಿ ಬರೆದಿರುತ್ತದೆ. ಕೆಲವರು ಸಂನ್ಯಾಸಿಗಳು ಹಾಗೆಂದೇ ಹೇಳುತ್ತಿದಾರೆ. ಇಂಥ ಸ್ಥಿತಿಯಲ್ಲಿ ನನ್ನ ಅಧ್ಯಾತ್ಮವಿದ್ಯಾಸಾಧನವು ನಿರ್ವಿಘ್ನವಾಗಿ ಸಾಗುವದೆಂತು? ಇದಕ್ಕೆ ತಾವು ಯಾವದಾದರೊಂದು ಸುಲಭಸಾಧ್ಯವಾದ ಉಪಾಯವನ್ನು ಹೇಳಿಕೊಟ್ಟರೆ ಕೃತಜ್ಞನಾಗಿರುತ್ತೇನೆ–ಎಂದು ಬರೆದಿರುತ್ತೀರಿ.*

ಅಧ್ಯಾತ್ಮವಿದ್ಯೆಯ ಅಭ್ಯಾಸ–ಎಂಬುದು ಈಗಿನ ಕಾಲೇಜುಗಳಲ್ಲಿ ಯಾವದಾದರೊಂದು ಪದವಿಗೆ ಬೇಕಾಗಿರುವ ವಿದ್ಯಾಭ್ಯಾಸಕ್ರಮದಂತೆ ಅಲ್ಲವೆಂದು ನನಗೆ ತೋರುತ್ತಿದೆ. ತಮ್ಮ ಮಕ್ಕಳು ಆರೋಗ್ಯದಲ್ಲಿದ್ದುಕೊಂಡು ಯಾವ ಕ್ಲೇಶವೂ ಇಲ್ಲದೆ ವಿದ್ಯಾಭ್ಯಾಸವನ್ನು ಮಾಡಿಕೊಳ್ಳಲಿ ಎಂದು ತಂದೆತಾಯಿಗಳು ಮಕ್ಕಳನ್ನು ಹಾಸ್ಟೆಲ್ (ವಿದ್ಯಾರ್ಥಿಭವನ) ಗಳೆಂಬ ಭೋಜನಾದಿಸೌಕರ್ಯಗಳುಳ್ಳ ಸ್ಥಾನಗಳಲ್ಲಿ ಇಳಿಸಿರುತ್ತಾರೆ. ಅಲ್ಲಿ ಅವರಿಗೆ ಎರಡುಹೊತ್ತು ಊಟ, ಒಪ್ಪತ್ತು ಅಥವಾ ಎರಡುಸಲ ಕಾಫಿ, ತಿಂಡಿ–ಇವುಗಳ ಸೌಕರ್ಯವೂ ಇರುತ್ತದೆ. ಅವರಿಗೆ ಕ್ರೀಡಾದಿಗಳ ಸೌಲಭ್ಯ, ಚರ್ಚಾಕೂಟಾದಿಗಳಲ್ಲಿ ವಿನೋದ ಮುಂತಾದವುಗಳಲ್ಲಿ ಅವಕಾಶ ಇಷ್ಟನ್ನೂ ಆ ಪ್ರೌಢಪಾಠಶಾಲೆಗಳ್ಲಿ ಏರ್ಪಡಿಸಿರುತ್ತದೆ. ಆ ಹುಡುಗರು ದೈವಯೋಗದಿಂದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಮುಂದಕ್ಕೆ ಬಂದರೆ ಅವರಿಗೆ ಯಾವದಾದರೂ ಸರಕಾರಿಯ ನೌಕರಿ ಅಥವಾ ಯಾವದಾದರೂ ಕಂಪೆನಿಯಲ್ಲಿ ಉದ್ಯೋಗದೊರೆತರೆ ಸರಿ; ಇಲ್ಲದಿದ್ದರೆ ಹಾಸ್ಟೆಲಿನಲ್ಲಿದ್ದ ಆ ವಿಲಾಸಜೀವನವು ಮುಂದೆ ಲೋಕವ್ಯವಹಾರದಲ್ಲಿ ಅವರಿಗೆ ಬಹಳ ಕ್ಲೇಶಗಳಿಗೆ ಎಡೆಯನ್ನುಂಟುಮಾಡುತ್ತದೆ. ಇದು ಈಗಿನ ಲೌಕಿಕವಿದ್ಯಾಭ್ಯಾಸದ ಪದ್ಧತಿ.

ಅಧ್ಯಾತ್ಮವಿದ್ಯಾಭ್ಯಾಸ ಎಂಬುದರ ಪ್ರಕಾರವನ್ನು ಬಲ್ಲವರು ತಿಳಿಯಿಸಿರುವ ರೀತಿಯು ಇದಕ್ಕಿಂತ ತೀರ ವಿಲಕ್ಷಣವಾಗಿರುತ್ತದೆ. ಆತ್ಮ ಎಂಬುದು ನಮ್ಮೆಲ್ಲರ ತೀರ ಒಳಗಿರುವ ನಮ್ಮ ಸ್ವರೂಪದ ಅನುಭವ. ಅದರ ಅರಿವನ್ನು ಸಂಪಾದಿಸುವದಕ್ಕೆ ಹೊರಗಿನ ವಿಷಯಗಳಲ್ಲಿ ನೆಟ್ಟಿರುವ ಮನಸ್ಸೇ ಅಡ್ಡಿಯಾಗಿರುತ್ತದೆ. ವಿಷಯಗಳು ಸುಖದುಃಖಗಳನ್ನು ಕೊಡುವಂಥ ಪದಾರ್ಥಗಳು; ಇಂದ್ರಿಯಗಳು ಅವುಗಳ ಭೋಗದಿಂದ ಎಂದೆಂದಿಗೂ ಹೊರಮುಖವಾಗಿಯೇ ಇದ್ದುಕೊಂಡು, ಬಾಹ್ಯಭೋಗ್ಯಗಳ

ವಿಚಾರದಲ್ಲಿಯೇ ಮುಳುಗಿರುವಂತೆ ಜನರ ಮನಸ್ಸನ್ನು ಸೆಳೆಯುತ್ತಿರುತ್ತವೆ. ಒಳಗಿರುವ ಆತ್ಮನ ಜ್ಞಾನಕ್ಕೇ ಇದೇ ಮುಖ್ಯವಾದ ವಿಘ್ನವಾಗಿರುವದರಿಂದ ಸಾತ್ತ್ವಿಕವಾದ ಆಹಾರವಿಹಾರಗಳೂ ಸಜ್ಜನರ ಸಹವಾಸವೂ ಅಧ್ಯಾತ್ಮವಿದ್ಯಾಭ್ಯಾಸಕ್ಕೆ ಮುಖ್ಯ ಸಹಕಾರಿಯಾಗಿರುತ್ತವೆ. ಶರೀರವನ್ನು ಭೋಗಗಳ ಅನುಭವದಿಂದ ಅಧ್ಯಾತ್ಮಚಿಂತನೆಗೆ ಅಡ್ಡಿಮಾಡಿಕೊಳ್ಳುವದು ಸರಿಯೆಂದು ಯಾವನು ತಾನೆ ಹೇಳಬಲ್ಲನು?

ನೀವು ಹೇಳುವ ಆಶ್ರಮಗಳಲ್ಲಿ ಎಂಥ ಆಹಾರವಿಹಾರಕ್ರಮವಿದೆಯೋ ನನಗೆ ತಿಳಿಯದು. ಆಯುಸ್ಸು, ಸತ್ತ್ವ, ಬಲ, ಆರೋಗ್ಯ, ಸುಖ, ಪ್ರೀತಿ–ಇಷ್ಟನ್ನೂ ಕೊಡುವ ರಸವತ್ತಾದ ಸ್ನಿಗ್ಧ, ಸ್ಥಿರ, ಹೃದ್ಯವಾದ ಸಾತ್ತ್ವಿಕಾಹಾರಗಳುಕೂಡ, ಭೋಗಲೋಲುಪ್ತ ರಾದವರಿಗೆ ಒಗ್ಗದೆ ಇರುವವು. ಅವರಿಗೆ ಕಾಮಕರ್ಮಗಳಿಗೆ ಉತ್ತೇಜಕವಾಗಿರುವ ರಾಜಸಾಹಾರಗಳೇ ಬೇಕಾಗಿರುತ್ತವೆ. ಈಗಿನ ಲೌಕಿಕ ವ್ಯವಹಾರಕ್ಕೆ ಅವು ಲಾಭದಾಯಕವೆಂದು ನಿಮಗೆ ತೋರಬಹುದು; ಆದರೆ ಅಧ್ಯಾತ್ಮವಿದ್ಯೆಗೆ ಬೇಕಾಗಿರುವ ಅಂತರ್ದೃಷ್ಟಿಯನ್ನು ಸಂಪಾದಿಸಬೇಕೆನ್ನುವವರಿಗೆ ಅವು ನಿಶ್ಚಯವಾಗಿಯೂ ವಿಘ್ನಕಾರಿಗಳಾಗಿರುತ್ತವೆ.

ಶರೀರವನ್ನು ಕೊಬ್ಬಿಸಿ, ಸೂಕ್ಷ್ಮವಿಚಾರದಳಿಗೆ ಮನಸ್ಸನ್ನು ಹರಿಯಗೊಡಿಸದೆ ಇರುವ ರಾಜಸತಾಮಸಾಹಾರಗಳನ್ನೇ ಯಥೇಚ್ಛವಾಗಿ ಬಳಸಿಕೊಳ್ಳುತ್ತಾ ಲೌಕಿಕವಾದ ವ್ಯವಹಾರದಲ್ಲಿ ಮನಬಂದಂತೆ ಇಂದ್ರಿಯಗಳನ್ನು ಹರಿಯಬಿಡುತ್ತಿರುವದು ಅಧ್ಯಾತ್ಮವಿದ್ಯೆಯ ಸಾಧಕನಿಗೆ ಸರ್ವಪ್ರಕಾರದಿಂದಲೂ ಪ್ರತಿಬಂಧಕವೆಂಬುದನ್ನು ನೀವು ಮೊದಲು ಮನಗಾಣಬೇಕು. ತತ್ತ್ವಜಿಜ್ಞಾಸುಗಳಾದವರು ಸದಾಚಾರ, ಸದ್ವಿಚಾರ, ಸದ್ವ್ಯವಹಾರ–ಇವುಗಳಲ್ಲಿಯೇ ಕಾಲಯಾಪನೆಯನ್ನು ಮಾಡುತ್ತಿರುವ ಅಧ್ಯಾತ್ಮ ವಿದ್ಯಾರಸಿಕರ ಸಹವಾಸವನ್ನು ಮೊದಲು ಸಂಪಾದಿಸಿಕೊಳ್ಳಬೇಕು. ಭಗವದ್ಗೀತೆಯಂಥ ಆಧ್ಯಾತ್ಮಿಕವಿಚಾರದ ಗ್ರಂಥಗಳ ಪಠನೆಯಲ್ಲಿ ಕಾಲಕ್ಷೇಪವನ್ನು ಮಾಡುತ್ತಾ ಅವುಗಳಲ್ಲಿ ಹೇಳಿರುವ ಅಮಾನಿತ್ವಾದಿಜ್ಞಾನಸಾಧನಗಳನ್ನು ಅಭ್ಯಾಸಮಾಡುವದಕ್ಕೆ ಮನಸ್ಸನ್ನು ಒಲಿಯಿಸಿಕೊಳ್ಳಬೇಕು. ಹಾಗಾದರೆ ಮಾತ್ರವೇ ಅಧ್ಯಾತ್ಮವಿಚಾರವು ಫಲಕಾರಿ ಯಾಗುವದು. ಪ್ರಾಕೃತರಾದವರ ಜನಸಂದಣಿಯಲ್ಲಿ ವ್ಯವಹಾರವನ್ನು ಮಾಡುವದು, ಕಾಮಕ್ರೋಧಾದಿಗಳನ್ನು ಬೆಳೆಯಿಸುವ ಆಹಾರವಿಹಾರಗಳನ್ನು ಜೀವನದಲ್ಲಿ ನಿಯಮವಾಗಿಟ್ಟುಕೊಳ್ಳುವದು–ಇಂಥವರು ಅಧ್ಯಾತ್ಮವಿದ್ಯಾ ವಾಙ್ಮಯದ ಪರಿಚಯವನ್ನು ಎಷ್ಟೇ ಮಾಡಿಕೊಂಡಿರಲಿ, ಅವೆಲ್ಲ ಭುಕ್ತಿಗಾದೀತೇ ಹೊರತು ಸಂಸಾರಬಂಧದಿಂದ ಮುಕ್ತಿಯನ್ನು ಪಡೆದುಕೊಳ್ಳುವದಕ್ಕೆ ಎಂದಿಗೂ ಸಾಧಕವಾಗಲಾರವೆಂದು ನಿಶ್ಚಯಿಸಿ ಕೊಳ್ಳಬೇಕು.

## 253. ನಿಜವಾದ ಆಶ್ರಮವು ಎಲ್ಲಿದೆ ?

### (ನವಂಬರ್ 1967)

ನಿಮ್ಮ ಪತ್ರವನ್ನು ಓದಿ ಅಭಿಪ್ರಾಯವನ್ನು ತಿಳಿದುಕೊಂಡಿರುತ್ತೇನೆ. ನೀವು ಒಂದು *ವಿವಿಕ್ತವಾದ ಸ್ಥಳದಲ್ಲಿ ಒಂದು ಹೊಸ ಆಶ್ರಮವನ್ನು ಸ್ಥಾಪಿಸುವ ಯೋಚನೆಯನ್ನು ಮಾಡುತ್ತಿದೀರೆಂಬುದು ಸ್ತುತ್ಯವಾದದ್ದೇ. ಧರ್ಮದ ವಿಷಯಕ್ಕೆ ಉಪೇಕ್ಷೆಯು ಹೆಚ್ಚುತ್ತಿರುವ ಈ ಕಾಲದಲ್ಲಿ ಧಾರ್ಮಿಕ ಸಂಸ್ಥೆಗಳು ಅಲ್ಲಲ್ಲಿರುವದೇ ಆಧ್ಯಾತ್ಮಿಕವಿಚಾರಕ್ಕೆ ಉತ್ತೇಜಕವಾಗಿರುವ ದೆಂಬುದಕ್ಕೆ ಸಂಶಯವಿಲ್ಲ.*

ಈವರೆಗೆ ನೀವು ಬೇರೆಬೇರೆಯ ಆಶ್ರಮಗಳ ಪರಿಚಯವನ್ನು ಮಾಡಿ ಕೊಂಡಿರುತ್ತೀರಿ. ಯಾವದೊಂದು ಆಶ್ರಮದಲ್ಲಿಯೂ ನಿಮಗೆ ಮನಃಶಾಂತಿಯೂ ದೊರಕಿಲ್ಲದಿರುವದು ನಿಮಗೆ ಆಶ್ರಮದ ಧ್ಯೇಯವು ಹೇಗಿರಬೇಕೆಂಬ ಬಗ್ಗೆ ವಿಚಾರಪ್ರಚೋದಕವಾಗಿರಬೇಕೆಂದು ತೋರುತ್ತದೆ. ನಿಮ್ಮ ಪ್ರಶ್ನೆಗೆ ಸಂಕ್ಷಿಪ್ತವಾದ ಉತ್ತರವನ್ನು ಬರೆಯಬೇಕೆಂದು ಈ ಎರಡು ಸಾಲುಗಳನ್ನು ಬರೆಯುತ್ತಿದೇನೆ.

ಆಶ್ರಮದಲ್ಲಿ ಮುಖ್ಯವಾಗಿ ತಪಸ್ಸಿನ ಪ್ರಭಾವವು ವ್ಯಾಪ್ತವಾಗಿರಬೇಕೆಂದು ನನ್ನ ಮತ. ತಪಸ್ಸೆಂದರೆ, ಇಂದ್ರಿಯಗಳ ಮತ್ತು ಮನಸ್ಸಿನ ಐಕಾಗ್ರ್ಯ. ಇಂದ್ರಿಯಗಳು ಹೊರಗಿನ ವಿಷಯಗಳಲ್ಲಿ ಹರಿದಾಡದೆ ಇದ್ದು ಮನಸ್ಸು ಆತ್ಮಚಿಂತನೆಯಲ್ಲಿಯೇ ನಿರತವಾಗಿದ್ದರೆ 'ಉತ್ತಮತಪಸ್ಸು' ವಶವಾದಂತೆ. ಇಂಥ ತಪಸ್ಸು ಯಾವ ಮನಸ್ಸಿನಲ್ಲಿರುವದೋ ಅದರಲ್ಲಿ ಲೌಕಿಕತಾಪತ್ರಯದ ಕೋಟಲೆಯಿಲ್ಲದೆ ನಿಜವಾದ ವಿಶ್ರಾಂತಿಯು ನೆಲಸಿರುತ್ತದೆ. ಆಶ್ರಮದಲ್ಲಿ ಹೊರಗಿನ ತೋರಿಕೆಯ ದೃಶ್ಯಗಳು—ಹೂ ಹಣ್ಣುಗಳ ಉದ್ಯಾನ, ಪೂಜಾ ಮಂದಿರ, ಜಪಾದಿಗಳ ಅನುಷ್ಠಾನವನ್ನು ಮಾಡುತ್ತಿರುವ ಸಾಧಕರು—ಮುಂತಾದವರು ಇರುವರೆಂಬುದು ನಿರೀಕ್ಷಿಸತಕ್ಕದ್ದೇ. ಅನ್ನದಾನಾದಿಗಳೂ ತತ್ತ್ವವಿಚಾರಕ್ಕೆ ಬರುವ ಮುಮುಕ್ಷುಗಳತಂಡವೂ ಆಶ್ರಮಕ್ಕೆ ಭೂಷಣವೇ ಸರಿ. ಆದರೆ ಯಾರಲ್ಲಿ ಸಾಧಕರ ಮನಸ್ಸು, ಮೇಲೆ ನಾನು ಸೂಚಿಸಿರುವ ಮನಸ್ಸಿನ ಐಕಾಗ್ರ್ಯವೆಂಬ ತಪಸ್ಸಿನ ಬೆಳದಿಂಗಳಿಂದ ವ್ಯಾಪ್ತವಾಗಿರುವದೋ ಅದೇ ನಿಜವಾದ 'ಆಶ್ರಮ'ವೆನಿಸೀತು. ಅಂಥ ಆಶ್ರಮದಿಂದ ಅಲ್ಲಿಗೆ ಬರುವವರಮೇಲೆಯೇ ಅಲ್ಲದೆ ಹೊರಗಿನ ಸಾತ್ತ್ವಿಕಸಾಧಕರಮೇಲೆಯೂ ಉತ್ತಮಪರಿಣಾಮವಾದೀತು. ನೀವು ನಿರ್ಮಿಸಬೇಕೆಂದಿರುವ ಆಶ್ರಮಕ್ಕೆ ಇಂಥ ತಪಸ್ಸಿನ ಸಂಪತ್ತು ಭಗವಂತನ ಅನುಗ್ರಹದಿಂದ ಲಭಿಸಲಿ!—ಎಂದು ಹಾರೈಸುತ್ತೇನೆ.

# 254. ಕುಟುಂಬಪ್ರೇಮ

## (ಡಿಸೆಂಬರ್ 1967)

*ನಿಮ್ಮ ಪತ್ರವು ತಲುಪಿರುತ್ತದೆ. ಮಕ್ಕಳು ದುಡಿಯುವ ಸ್ಥಿತಿಗೆ ಬಂದಿರುತ್ತಾರಾದರೂ ಅವರಲ್ಲಿ ಒಬ್ಬೊಬ್ಬರ ಸಂಸಾರವೂ ದೊಡ್ಡದಾಗುತ್ತಾ ಬರುತ್ತಿದೆ. ಅವರು ಒಬ್ಬೊಬ್ಬರು ಒಂದೊಂದು ದೂರವಾದ ಸ್ಥಳದಲ್ಲಿರುವದರಿಂದಲೂ ನನ್ನಲ್ಲಿರುವ ಪೂಜ್ಯಬುದ್ಧಿಯಿಂದ ಆಗಾಗ್ಗೆ ತಮ್ಮತಮ್ಮ ಯೋಗಕ್ಷೇಮದ ಬಗ್ಗೆ ಬರೆಯುತ್ತಲೇ ಇರುವದರಿಂದಲೂ ನನಗೆ ಏನು ಮಾಡಬೇಕೆಂಬುದೇ ಬಗೆಹರಿಯುತ್ತಿಲ್ಲ. ನನಗೂ ವಯಸ್ಸಾಗುತ್ತಾಬಂತು; ಈಗಲಾದರೂ ಪರಮಾರ್ಥಚಿಂತನೆಗೆ ಸ್ವಲ್ಪ ವಿರಾಮವನ್ನು ಕಲ್ಪಿಸಿಕೊಳ್ಳಬೇಡವೆ?– ಎನ್ನಿಸುತ್ತಿದೆ. ಆದರೆ ನಮ್ಮವರೆಂಬ ಭಾವನೆಯು ನನ್ನನ್ನು ಆಗಾಗ್ಗೆ ಕಾಡುತ್ತಿರುತ್ತದೆ. ಈ ಪೀಕಲಾಟದಿಂದ ಪಾರಾಗುವದಕ್ಕೆ ಏನಾದರೂ ಉಪಾಯವಿದೆಯೆ? ತಿಳಿಸೋಣಾಗಬೇಕು–ಎಂತ ಬರೆದಿರುತ್ತೀರಿ.*

ಕುಟುಂಬಿಗರೆಲ್ಲರಿಗೂ ಇದೊಂದು ತೊಡಕಿನ ಪ್ರಶ್ನೆಯೇ ಸರಿ. ಈ ವಿಷಯದಲ್ಲಿ ಮತ್ತೊಬ್ಬರ ಬುದ್ಧಿವಾದವು ಯಾವ ಕೆಲಸಕ್ಕೂ ಬರಲಾರದು. ನೀವು ಒಂದು ಪ್ರಶ್ನೆಗೆ ಮೊಟ್ಟಮೊದಲು ಉತ್ತರವನ್ನು ಕಂಡುಕೊಳ್ಳಬೇಕು. ನಿಮಗೆ ನಿಜವಾಗಿಯೂ ಪರಮಾರ್ಥಚಿಂತನೆಗೆ ಕಾಲಾವಕಾಶವು ಬೇಕಾಗಿದೆಯೆ? ಅಥವಾ ಕುಟುಂಬವು ದೊಡ್ಡದಾದ್ದರಿಂದ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಳ್ಳುವದು ಆಗುವಂತಿಲ್ಲ ಎಂದು ಅಷ್ಟಕ್ಕೇ ತೃಪ್ತರಾಗಿದ್ದೀರೊ? ನನಗೇನೂ ಈ ಬಗೆಗೆ ಬರೆಯಬೇಕಾದದ್ದಿಲ್ಲ; ನಿಮಗೆ ನೀವೇ ಉತ್ತರವನ್ನು ಹೇಳಿಕೊಂಡರೆ ಸಾಕಾಗಿದೆ.

ನಿಜವಾಗಿಯೂ ಎಲ್ಲಕ್ಕಿಂತಲೂ ಪರಮಾರ್ಥವೇ ಹೆಚ್ಚಿನದು; ಅದೇ ನನ್ನ ಗುರಿ. ಅದಕ್ಕಾಗಿ ನನ್ನ ಕಾಲವನ್ನು ಹಾಕಿದರೆ ಕುಟುಂಬದವರಿಗೆ ಅನ್ಯಾಯವಾಗುವದಿಲ್ಲವೆ?– ಎಂಬುದೇ ನಿಮ್ಮ ಪ್ರಶ್ನೆಯಾಗಿದ್ದರೆ, ನನ್ನ ಉತ್ತರವು ಇಷ್ಟೇ: ಪರಮಾರ್ಥವು ಕುಟಂಬಕ್ಕೆಲ್ಲ ಬೇಕು. ಅವರಿಗೆಲ್ಲ ಅವರವರ ಯೋಗ್ಯತೆಗೆ ತಕ್ಕಂತೆ ಸಾಧನಗಳನ್ನೂ ವಿಚಾರವನ್ನೂ ಕೈಕೊಳ್ಳುವಂತೆ ಮಾಡಿ ನೀವು ನಿಮ್ಮ ಗುರಿಯನ್ನು ಬಿಡದೆ ಸಾಧನೆಗೇ ಹೊರಟು ಬಿಡಬಹುದು. ಅದರಿಂದ ಯಾವ ಪಾಪವೂ ಬರಲಾರದು; ಬಂಧುಗಳು ಯಾರೇ ಆದರೂ 'ಬಂಧ'ಗಳಾಗಬಾರದು. ಹಾಗಿಲ್ಲದೆ ನಿಮಗೇ ತತ್ತ್ವವಿಚಾರದ ಅಥವಾ ಅಧ್ಯಾತ್ಮ ಸಾಧನಗಳ ಕಡೆಗೆ ಅಷ್ಟು ಹೆಚ್ಚಿನ ಒಲವು ಇಲ್ಲದಿದ್ದರೆ, ಮಕ್ಕಳ ಕುಟುಂಬಗಳ ಸುಖದುಃಖದಲ್ಲಿಯೇ ಭಾಗಿಗಳಾಗಿರಿ. ಇಂತಿಷ್ಟು ಕಾಲವೆಂದು ಗೊತ್ತುಮಾಡಿಕೊಂಡು ಆಯಾ ಮಕ್ಕಳ ಜೊತೆಯಲ್ಲಿಯೇ ಇದ್ದು ಬಿಡಬಹುದು. ನಿತ್ಯಾಹ್ನಿಕ, ಭಗವನ್ನಾಮಸ್ಮರಣೆ, ಅತಿಥಿಸೇವೆ–ಮುಂತಾದ ಸಾಧನಗಳಿಂದ ನಿಮಗೂ ನಿಮ್ಮ ಮಕ್ಕಳಿಗೂ ಮನಃಶಾಂತಿ ಯಾಗುವಂತೆ ಪ್ರಯತ್ನಿಸುತ್ತಿರಿ. ಭಗವಂತನು ಕಾಲಾನುಕಾಲಕ್ಕೆ ಸೌಕರ್ಯಗಳನ್ನು ಒದಗಿಸುವನೆಂಬುದಕ್ಕೆ ಸಂಶಯವಿಲ್ಲ.

## 255. ಓದುವದಕ್ಕೆ ಆರಿಸಿಕೊಳ್ಳಬೇಕಾದ ಪುಸ್ತಕಗಳು

### (ಜನವರಿ 1968)

*ನಿಮ್ಮ ಪ್ರಶ್ನೆಗೆ ಉತ್ತರವನ್ನು ಕೊಡುವದು ತಡವಾಯಿತು. ಈಗ ನಾನು ಗೀತಾಜಯಂತಿಯ ಉತ್ಸವವನ್ನು ನಿರೀಕ್ಷಿಸುತ್ತಿದೇನಾದ್ದರಿಂದ ಅದರ ಸ್ಮರಣೆಯಿಂದಲೇ ನಿಮಗೆ ಉತ್ತರವನ್ನು ಬರೆಯುತ್ತಿದೇನೆ. ಸಂಸ್ಕೃತವು ಒಂದಿಷ್ಟೂ ಬಾರದೆ ಇದ್ದರೆ, ಭಾರತದೇಶದ ಸಂಸ್ಕೃತಿಯ ಪರಿಚಯವು ಇದೆಯೆಂದು ಹೇಳಿಕೊಳ್ಳುವ ಎದೆ ಯಾರಿಗೂ ಬರಲಾರದು. ಮೊದಲು ಸಂಸ್ಕೃತಭಾಷೆಯ ಅಭ್ಯಾಸವನ್ನು ಬಲಪಡಿಸಿಕೊಳ್ಳಿರಿ. ಮಹಾಭಾರತದಲ್ಲಿ ಭಗವದ್ಗೀತೆ, ರಾಮಾಯಣದಲ್ಲಿ ಸುಂದರಕಾಂಡ–ಇವುಗಳನ್ನು ಆರಿಸಿಕೊಂಡು ಪಠಿಸುವ ಪದ್ಧತಿಯನ್ನು ಇಟ್ಟುಕೊಳ್ಳಿರಿ.*

ನಿಮಗೆ ಸಂಸ್ಕೃತದ ಮೇಲಿನ ಗೌರವವು ಮೂಡಬೇಕಾದರೆ ರಾಮಾಯಣ ಮಹಾಭಾರತಗಳ ಕೆಲವು ಭಾಗಗಳನ್ನಾದರೂ ಅವಶ್ಯವಾಗಿ ಓದಿರಿ. ಧರ್ಮ, ಅರ್ಥ, ಕಾಮ, ಮೋಕ್ಷ–ಎಂಬ ಪುರುಷಾರ್ಥಗಳ ಕಡೆಗೆ ಲಕ್ಷ್ಯವಿಡುವದೇ ಭಾರತದೇಶದ ಸಂಸ್ಕೃತಿಯ ಹೆಗ್ಗುರುತು. ಭಾರತ ರಾಮಾಯಣಗಳು ದೇಶಭಾಷೆಯಲ್ಲಿಯೂ ಇವೆ; ಮೂಲಗ್ರಂಥಗಳ ಅನುವಾದಗಳೂ ಕನ್ನಡದಲ್ಲಿ ಈಗ ಸಿಕ್ಕುತ್ತವೆ. ಇತಿಹಾಸಪುರಾಣಗಳಲ್ಲಿ ವೇದಾರ್ಥವನ್ನು ಹಿಗ್ಗಿಸಿ ಜನಾನುರಾಗಕ್ಕೆ ಪಾತ್ರವಾಗುವಂತೆ ತಿಳಿಸಿದೆ. ಆದ್ದರಿಂದ ಭಾರತದೇಶದವನು–ಎಂದು ಕರೆದುಕೊಳ್ಳುವವನು ಅವುಗಳನ್ನು ತಪ್ಪದೆ ಓದಬೇಕು. ಅಕ್ಷರಸ್ಥರಲ್ಲದವರು ಪುರಾಣಶ್ರವಣವನ್ನಾದರೂ ಮಾಡಬೇಕು.

ರಾಮ, ಕೃಷ್ಣ–ಎಂಬೀ ಎರಡು ನಾಮಗಳಲ್ಲಿ ಭೂಲೋಕದಲ್ಲೆಲ್ಲ ಅತ್ಯಂತ ಪ್ರಸಿದ್ಧವೆನಿಸಿರುವ ಇತಿಹಾಸಗಳ–ರಾಮಾಯಣಮಹಾಭಾರತಗಳ–ಸಾರವನ್ನು ಹಿಂಡಿಟ್ಟಿದೆ. ದೇವಾಲಯಗಳಲ್ಲಿ ಇತಿಹಾಸಪುರಾಣಗಳನ್ನು ಶ್ರವಣಮಾಡಿಸುವ ಪದ್ಧತಿಯು ಈಗಲೂ ಕೆಲವು ಕಡೆಗಳಲ್ಲಿ ಉಳಿದುಕೊಂಡಿದೆ. ಪುರಾಣಶ್ರವಣದಿಂದ ದೇಶಭಕ್ತಿಯೂ ಈಶಭಕ್ತಿಯೂ ಮೊಳೆತು ಚಿಗುರಿ ಮರವಾಗುವದು. ಇಹಪರಸೌಖ್ಯಗಳಲ್ಲಿ ಅಭಿಲಾಷೆಯಿರುವವರು ಅದರ ಲಾಭವನ್ನು ಕಳೆದುಕೊಳ್ಳಬಾರದು.

## 256. ವೇದಾಂತವು ಸಾರ್ವತ್ರಿಕವಲ್ಲವೆ?

### (ಫೆಬ್ರವರಿ 1968)

*ವೇದಾಂತವನ್ನು ಯಾರಿಗೆ ಹೇಳಿಕೊಡಬೇಕು? ಎಲ್ಲರಿಗೂ ಏತಕ್ಕೆ ಹೇಳಿಕೊಡಬಾರದು? ಇದನ್ನೊಂದು ರಹಸ್ಯವಾಗಿಟ್ಟುಕೊಳ್ಳುವದರಿಂದ ಇದು ಸಾರ್ವತ್ರಿಕವಾದ ವ್ಯಾಪ್ತಿಯಿರುವ ವಿಷಯವಲ್ಲವೆಂದೇ ಆಗುವದಿಲ್ಲವೆ?–ಎಂಬುದು ನಿಮ್ಮ ಪ್ರಶ್ನೆ.*

ಈ ಪ್ರಶ್ನೆಯಲ್ಲಿಯೂ ನಿಜದ ಅಂಶವಿಲ್ಲದೆ ಇಲ್ಲ. ವೇದಾಂತವೆಂದರೇನೆಂಬುದನ್ನು ನೀವು ಮೊದಲು ಮನಸ್ಸಿಗೆ ಹತ್ತಿಸಿಕೊಂಡರೆ ಈ ಪ್ರಶ್ನೆಯೇ ಏಳುವದಿಲ್ಲ. 'ವೇದಾಂತ' ವೆಂಬ ಶಬ್ದಕ್ಕೆ ವೇದದ ಅಂತದಲ್ಲಿರುವ ಉಪನಿಷತ್ತು–ಎಂದು ಅಕ್ಷರಾರ್ಥ. ವೇದದ ಅಭಿಪ್ರಾಯವನ್ನರಿತು ಅದರಂತೆ ನಡೆಯಬಲ್ಲವರಿಗೆ ವೇದಾಂತವೆಂದಾದರೆ ಅದು ಎಲ್ಲರಿಗೂ ಅಲ್ಲವೇ ಅಲ್ಲವೆಂಬುದು ಮೇಲೆಯೇ ಕಾಣಿಸುತ್ತಿದೆ.

ಇನ್ನು ವೇದಾಂತವೆಂದರೆ ಬ್ರಹ್ಮವಿದ್ಯೆ, ಎಲ್ಲರಿಗೂ ಆತ್ಮನಾಗಿರುವ ಪರಮಾತ್ಮನಲ್ಲಿಯೇ ನೆಲೆನಿಲ್ಲುವ ಉಪನಿಷದ್ವಿದ್ಯೆ–ಎಂದಾದರೆ ಇದು, ಆತ್ಮನೇ ನನಗೆ ಬೇಕು ಎಂದು ಮಿಕ್ಕದ್ದೆಲ್ಲವನ್ನೂ ಬಿಟ್ಟು ತನ್ನ ಆತ್ಮನ ಸ್ವರೂಪವನ್ನೇ ಅನುಭವಕ್ಕೆ ತಂದುಕೊಳ್ಳಬೇಕೆಂಬ ಧೀರನಿಗೆ ಮೀಸಲಾಗಿರುವದೆಂದು ಹೇಳುವದು ಅಯುಕ್ತವೆನಿಸದು. ಅನಾತ್ಮವೇ ಬೇಕೆಂಬವನಿಗೆ ಆತ್ಮವಿದ್ಯೆ ಏತಕ್ಕೆ ಬೇಕು? ಅಥವಾ ಅದನ್ನು ಅವನಿಗೆ ಹೇಳಿದರೆ ತಾನೆ ಏನು ಪ್ರಯೋಜನ? ವೇದಾಂತವೆಂಬುದು ಹೀಗೆ ಅನಾತ್ಮದಲ್ಲಿ ವೈರಸ್ಯದಿಂದ ಆತ್ಮನ ನಿಜವನ್ನೇ ಅರಿತುಕೊಳ್ಳಬೇಕೆಂದು ಹಂಬಲಿಸುವವರಿಗೇ ಫಲಕಾರಿಯಾಗುವದು–ಎಂಬುದು ನಿಜವಾದರೂ ಜನಜೀವನವನ್ನು ಸುಖಶಾಂತಿಗಳಿಗಾಗಿ ಅಣಿಮಾಡಬೇಕೆನ್ನುವವರು ಅವಶ್ಯವಾಗಿ ವೇದಾಂತದ ಪ್ರಥಮ ಸೋಪಾನವಾದ 'ತ್ರಿವರ್ಗವಿದ್ಯೆ' ಯನ್ನು–ಧರ್ಮ, ಅರ್ಥ, ಕಾಮ–ಇವುಗಳ ಪರಸ್ಪರ ಸಂಬಂಧವನ್ನು ತಿಳಿಯಹೇಳುವ ಧರ್ಮಶಾಸ್ತ್ರ, ಪುರಾಣೇತಿಹಾಸಗಳು–ಇವುಗಳನ್ನು ಎಲ್ಲರಿಗೂ ಹೇಳಲೇ ಬೇಕು–ಎಂದು ಶಾಸ್ತ್ರದಲ್ಲಿ ಹೇಳಿಯೇ ಇರುತ್ತದೆ. ಅದನ್ನು ಹೇಳದೆ ಇರುವದರಿಂದ ಜನರಿಗೆ ಜೀವನದಲ್ಲಿ ವಿಷಯಭೋಗವೇ ಸಾರ–ಎಂಬ ತಪ್ಪುತಿಳಿವಳಿಕೆ ಉಂಟಾಗಿರುತ್ತದೆ. ತಮ್ಮತಮ್ಮ ಕರ್ತವ್ಯಗಳನ್ನು ಪರಮೇಶ್ವರನ ಆರಾಧನೆ ಎಂದು ಮಾಡುತ್ತಾ ಇಹಜೀವನವನ್ನು ಸಾಗಿಸುತ್ತಿದ್ದರೆ ಅದರಿಂದ ಚಿತ್ತಶುದ್ಧಿಯೂ ಕ್ರಮಕ್ರಮವಾಗಿ ಪರಮಾರ್ಥಸಾಧನೆಯೂ ಆಗುವವೆಂಬುದನ್ನು ನಾವು ಮೊದಲು ತಿಳಿದುಕೊಳ್ಳಬೇಕು.

'ಆತ್ಮ ಅನಾತ್ಮ', 'ಸತ್ಯ,ಮಿಥ್ಯೆ'–ಎಂದು ಮುಂತಾಗಿ ಕೆಲವು ಪಾರಿಭಾಷಿಕ ಶಬ್ದಗಳನ್ನು ಉಪಯೋಗಿಸಿಕೊಂಡು ಹರಟೆಯ ಉಪನ್ಯಾಸವನ್ನು ಕೊಡುವದೇ ವೇದಾಂತವೆಂದು ನೀವು ಭಾವಿಸಿದ್ದರೆ ಅದಕ್ಕೆ ನನ್ನ ಉತ್ತರವೇನೂ ಇಲ್ಲ. ಅದು ಸಾರ್ವತ್ರಿಕವಾಗಿಯೇ ಇದೆ ಎನ್ನುವಷ್ಟು ಎಲ್ಲೆಲ್ಲಿಯೂ ಹಬ್ಬಿರುತ್ತದೆ.

## 257. ಬ್ರಾಹ್ಮಣ್ಯದ ಮಹತ್ತ್ವ

### (ಮಾರ್ಚ್ 1968)

*ಈಗ ನಾನು ಬರೆಯುತ್ತಿರುವದು ಒಂದು ಬಹಿರಂಗಪತ್ರ. ಭರತಖಂಡದಲ್ಲಿರುವ ಹಿಂದುಗಳಲ್ಲಿ ವರ್ಣಾಶ್ರಮಧರ್ಮಕ್ಕನುಗುಣವಾಗಿ ಸಮಾಜವನ್ನು ವಿಂಗಡಿಸಿರುವದು ಒಂದು*

*ವಿಶೇಷ. ಜನರ ಜೀವನದಮಟ್ಟದಮೇಲೆ ಉತ್ತಮವರ್ಗ, ಮಧ್ಯಮವರ್ಗ, ಕೆಳಗಿನವರ ವರ್ಗ–ಎಂದು ವರ್ಗಗಳಾಗಿ ಮಿಕ್ಕ ಸಮಾಜಗಳು ವಿಂಗಡವಾಗಿರುತ್ತವೆ. ಭರತಖಂಡದಲ್ಲಿ ಮಾತ್ರ ಇಹಪರಮರುಷಾರ್ಥಗಳನ್ನು ಗುರಿಯಲ್ಲಿಟ್ಟು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ–ಎಂದು ನಾಲ್ಕು ವರ್ಣಗಳಾಗಿ ವಿಂಗಡಿಸಿರುತ್ತಾರೆ; ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ–ಎಂಬ ನಾಲ್ಕು ಆಶ್ರಮಿಗಳಾಗಿ ದ್ವಿಜರನ್ನು ವಿಂಗಡಿಸಿರುವದೂ ಇಲ್ಲಿರುವ ಒಂದು ಅಸಾಧಾರಣ ಪದ್ಧತಿ. ಮಿಕ್ಕ ಸಮಾಜಗಳಲ್ಲಿ ಅವರವರ ಇಹಸಂಪತ್ತು ಹೆಚ್ಚಾದಂತೆ ಒಂದು ವರ್ಗದವರು ಮತ್ತೊಂದು ವರ್ಗದವರಾಗಬಹುದು, ಆದರೆ ವರ್ಣಗಳು ಧಾರ್ಮಿಕಸ್ಥಿತಿಯನ್ನು ಅವಲಂಬಿಸಿರುವದಲ್ಲದೆ ಜಾತಿಯನ್ನೂ–ವಂಶಾನುಕ್ರಮವನ್ನೂ–ಅವಲಂಬಿಸಿರುತ್ತವೆ. ಸತ್ತ್ವರಜಸ್ತಮೋಗುಣಗಳ ತಾರತಮ್ಯದಿಂದ ಉಂಟಾಗಿರುವ ಬ್ರಾಹ್ಮಣ್ಯಾದಿಗಳನ್ನು ಆನುವಂಶಿಕವಾಗಿ ಸಾವಿರಾರು ವರ್ಷಗಳಿಂದ ನಡೆಯಿಸಿಕೊಂಡು ಬಂದಿರುವ ಸಮಾಜವು ಭಾರತದೇಶದಲ್ಲಲ್ಲದೆ ಮತ್ತೆ ಯಾವ ದೇಶದಲ್ಲಿಯೂ ಇರುವದಿಲ್ಲ.*

ಮನುಷ್ಯನಿಗೆ–ಇತರ ಪ್ರಾಣಿಗಳಂತೆ–ನೈಸರ್ಗಿಕವಾಗಿರುವ ಕಾಮಕ್ರೋಧಾದಿಗಳ ನಿಮಿತ್ತದಿಂದ ಈ ವಿಂಗಡದಲ್ಲಿ ಆಗಾಗ್ಗೆ ಸಂಕರವಾಗಿರುವದೇನೂ ಆಶ್ಚರ್ಯವಲ್ಲ. ಆದರೂ ಭಗವಂತನು ಧರ್ಮಪ್ರಿಯನಾದ್ದರಿಂದ ಬ್ರಾಹ್ಮಣ್ಯದಲ್ಲಿ ಅವನಿಗೆ ಅಭಿಮಾನ ವುಂಟು. ಶ್ರೀಶಂಕರಭಗವತ್ಪಾದರವರು ತಮ್ಮ ಗೀತಾಭಾಷ್ಯದಲ್ಲಿ ಬರೆದಿರುವದೇನೆಂದರೆ: **"ವಿವೇಕವಿಜ್ಞಾನವು ಹಾನಿಯಾದಕಾರಣ ಧರ್ಮವು ಅಧರ್ಮದ ಹೆಚ್ಚಿಗೆಯಿಂದ ಕುಗ್ಗಿ ಅಧರ್ಮವೇ ಹೆಚ್ಚಲಾಗಿ ಜಗತ್ತಿನಸ್ಥಿತಿಯನ್ನು ರಕ್ಷಿಸುವದಕ್ಕಾಗಿ ಭೂಮಿಯ ಬ್ರಹ್ಮವಾದ ಬ್ರಾಹ್ಮಣ್ಯರಕ್ಷಣೆಗಾಗಿ ಭಗವಂತನು ದೇವಕಿಯಲ್ಲಿ ವಸುದೇವನಿಂದ ತನ್ನೊಂದಂಶದಿಂದ ಕೃಷ್ಣನಾಗಿ ಜನಿಸಿದನು. ಬ್ರಾಹ್ಮಣ್ಯವನ್ನು ಕಾಪಾಡಿದರಲ್ಲವೆ, ವೈದಿಕಧರ್ಮವನ್ನು ಕಾಪಾಡಿದಂತೆ ಆಗುವದು? ಏಕೆಂದರೆ ವರ್ಣಾಶ್ರಮ ಭೇದಗಳೆಲ್ಲವೂ ಅದಕ್ಕೆ ಅಧೀನ ವಾಗಿರುತ್ತವೆ."**

ಆಚಾರ್ಯರ ಈ ವಾಕ್ಯವು ಎಷ್ಟು ಅರ್ಥಗರ್ಭಿತವಾಗಿದೆಯೆಂಬುದನ್ನು ಬ್ರಾಹ್ಮಣರೆಲ್ಲರೂ ಮನಸ್ಸಿಗೆ ತಂದುಕೊಳ್ಳಬೇಕು. ಈಗ ಕಲಿಮಹಿಮೆಯಿಂದ ಅಧರ್ಮವು ಹೆಚ್ಚುತ್ತಿದೆ. ಇದಕ್ಕೆ ಜನರಲ್ಲಿ ಕಾಮವು ಎದ್ದುಕೊಂಡು ಸರಿಯಾದ ತಿಳಿವಳಿಕೆಯನ್ನು ಮೊಟಕು ಮಾಡಿರುವದೇ ಕಾರಣ. ಇದರಿಂದ ಜಗತ್ತಿನ ಸ್ಥಿತಿಯು ಏರುಪೇರಾಗುತ್ತದೆ. ಈಗ ಭಗವಂತನಾಗಲಿ, ಭಗವದ್ಭಕ್ತರಾದ ಮಹಾತ್ಮರಾಗಲಿ ಅವತರಿಸಿ ಭೂಲೋಕದ ಬ್ರಹ್ಮವೆನಿಸಿರುವ ಬ್ರಾಹ್ಮಣ್ಯವನ್ನು ರಕ್ಷಿಸುವದು ಅವಶ್ಯವಾಗಿದೆ. ಬ್ರಾಹ್ಮಣ್ಯವನ್ನು ಕಾಪಾಡಿಕೊಂಡರೇ ವೈದಿಕಧರ್ಮವನ್ನು ಕಾಪಾಡಿಕೊಂಡಂತೆ; ಏಕೆಂದರೆ ವರ್ಣಾಶ್ರಮ ಧರ್ಮಗಳು ಬ್ರಾಹ್ಮಣ್ಯವನ್ನು ಅವಲಂಬಿಸಿರುತ್ತದೆ. ಇಷ್ಟು ಅಭಿಪ್ರಾಯಗಳನ್ನು ವಿಚಾರಶೀಲರಾದ ಬ್ರಾಹ್ಮಣರು ಮನಸ್ಸಿನಲ್ಲಿ ಮತ್ತೆಮತ್ತೆ ಮೆಲುಕುಹಾಕುವದು ಅತ್ಯವಶ್ಯ.

ಈ ಲೋಕದಲ್ಲಿ ಯಾವನೊಬ್ಬನು ತನ್ನ ಧರ್ಮವನ್ನು ಕಡೆಗಣಿಸಿದರೂ ಪತಿತನಾಗುತ್ತಾನೆ; ಆದರಿಂದ ಅವನಿಗೆ ಇಹಪರಸುಖಗಳು ದೂರವಾಗುತ್ತವೆ. ವಿಷಯ ಭೋಗಗಳೇ ಸುಖವೆಂದು ಭ್ರಮಿಸಿರುವದರಿಂದ ನಾವು ಕಾಮನ ಸೆರೆಯಾಳುಗಳಾಗಿ ಅಧರ್ಮಕ್ಕೆ ಕೈಹಾಕುವೆವು. ಸುಖವು ಭೋಗಕ್ಕಿಂತ ಬೇರೆಯಾದದ್ದು. ಅದು ಮನಸ್ಸಿಗೆ ನೆಮ್ಮದಿಯನ್ನು ಕೊಟ್ಟು ತಳಮಳವನ್ನು ತಪ್ಪಿಸುತ್ತದೆ; ಧರ್ಮದಿಂದಲೇ ಸುಖವು ಸಿಕ್ಕೀತೇ ಹೊರತು ಅಧರ್ಮದಿಂದ ಸಿಕ್ಕಲಾರದು. ಇದು ಸಾಮಾನ್ಯ ವ್ಯಕ್ತಿಯ ಮಾತಾಯಿತು. ಆದರೆ ಬ್ರಾಹ್ಮಣನ ವಿಷಯವು ಹೀಗಲ್ಲ; ಅವನು ಧರ್ಮವನ್ನು ಬಿಟ್ಟರೆ ಅಧರ್ಮದಿಂದುಂಟಾಗುವ ಅಧೋಗತಿಯನ್ನು ತಾನು ಪಡೆಯುವನಲ್ಲದೆ, ಸಮಾಜದಲ್ಲಿರುವ ಉಳಿದ ತಂಡದವರನ್ನೂ ಅಧರ್ಮಕ್ಕೆ ವಶಗೊಳಿಸುತ್ತಾನೆ. ಆದ್ದರಿಂದ ಬ್ರಾಹ್ಮಣರ ಮೇಲೆ ಹೆಚ್ಚಿನ ಹೊಣೆಗಾರಿಕೆಯು ಬಿದ್ದಿರುತ್ತದೆ. ಅವರು ತಾವೂ ಧರ್ಮದಲ್ಲಿರಬೇಕು; ಮಿಕ್ಕವರಿಗೂ ಧರ್ಮವನ್ನು ಅನುಸರಿಸುವದಕ್ಕೆ ಮೇಲುಪಙ್ಕ್ತಿಯಾಗಿರಬೇಕು. ಇಲ್ಲದಿದ್ದರೆ ತಮ್ಮತಮ್ಮ ವೈಯಕ್ತಿಕ ಅಧರ್ಮಕ್ಕೇ ಅಲ್ಲದೆ, ಮಿಕ್ಕವರು ಮಾಡುವ ಪಾಪಾಚರಣೆಯಲ್ಲಿಯೂ ಅವರು ಭಾಗಿಗಳಾಗಬೇಕಾಗುತ್ತದೆ. ಈಗ ಭೂಲೋಕದ ಇತರ ಪ್ರದೇಶಗಳಂತೆ ಭಾರತದಲ್ಲಿಯೂ ಸಮಾಜವು ಬಹಳ ಗಲಿಬಿಲಿಯಾಗಿರುತ್ತದೆ. ಜನರು ಕಾಮಪರವಶರಾಗಿ ಪಾಪಾಚರಣೆಗೆ ಅಂಜದೆ ಸ್ವೈರಚಾರಿಗಳಾಗುತ್ತಿದಾರೆ. ಬ್ರಾಹ್ಮಣ ಭ್ರಾತೃಗಳಿರಾ, ಇದನ್ನು ತಪ್ಪಿಸುವ ಯೋಗ್ಯತೆಯು ನಿಮ್ಮಲ್ಲಿ ಕೆಲವರಿಗಾದರೂ ಇನ್ನೂ ಇದೆ. ಭಾರತದೇಶವನ್ನು ಧರ್ಮಕ್ಕೆ ಆದರ್ಶವಾಗಿ ಮಾಡುವ ಕೀರ್ತಿಯನ್ನು ಗಳಿಸುವಿರೊ, ಅಥವಾ ನೀವೂ ಧರ್ಮಭ್ರಷ್ಟರಾಗಿ ಎಲ್ಲರನ್ನೂ ನರಕದದಾರಿಗೆ ತಿರುಗಿಸುವ ಹಾದಿಯನ್ನೇ ಹಿಡಿಯುವಿರೊ? ಚೆನ್ನಾಗಿ ಆಲೋಚಿಸಿರಿ.

## 258. ಜಾತ್ಯಭಿಮಾನ

### (ಏಪ್ರಿಲ್ 1968)

*ನಿಮ್ಮ ಪತ್ರವು ತಲುಪಿರುತ್ತದೆ. ಕಲಿಯುಗದಲ್ಲಿ ವರ್ಣಸಂಕರವು ಹೆಚ್ಚಾಗುತ್ತಿರುವದರಿಂದಲೂ ಜಾತ್ಯಭಿಮಾನವು ರಾಗದ್ವೇಷಗಳಿಗೆ ಕಾರಣವಾಗಿರುವದರಿಂದಲೂ ವರ್ಣಾಶ್ರಮ ವಿಭಾಗದ ವಿಚಾರವನ್ನು ಕೈಬಿಟ್ಟು ನಾವೆಲ್ಲರೂ ಹಿಂದುಗಳೆಂಬ ಅಭಿಮಾನವನ್ನು ಬೆಳೆಯಿಸಿಕೊಂಡು ಒಗ್ಗಟ್ಟಾಗಿ ನಡೆಯುವದು ಈಗ್ಗೆ ಕ್ಷೇಮಕರವಲ್ಲವೆ?–ಎಂದು ಕೇಳಿರುತ್ತೀರಿ.*

'ಜಾತ್ಯಭಿಮಾನ' ಎಂಬ ಶಬ್ದವನ್ನು ಕೆಲವರು ರಾಷ್ಟ್ರನಾಯಕರು ತಮ್ಮತಮ್ಮ ಸ್ವಾರ್ಥಕ್ಕಾಗಿ ಬಳಕೆಗೆ ತಂದಿರುತ್ತಾರೆ. 'ಸಮಾಜಸುಧಾರಣೆ' ಯಲ್ಲಿ ಅಭಿರುಚಿಯುಳ್ಳವರು

'ವೇದದಲ್ಲಿ ಜಾತಿಯ ಹೆಸರುಗಳಿಲ್ಲ, ಅವರವರ ಉದ್ಯೋಗಗಳಿಂದ ಆಯಾ ವರ್ಣದವರೆಂದು ಅಲ್ಲಿ ಹೇಳಿದೆ'– ಎನ್ನುವ ಪಾಶ್ಚಾತ್ಯವಿಮರ್ಶಕರ ಅಭಿಪ್ರಾಯಗಳನ್ನು ಜನರ ಮುಂದೆ ಒಡ್ಡುತ್ತಿದ್ದಾರೆ. ನೀವು 'ಜಾತ್ಯಭಿಮಾನ' ವೆಂಬ ಶಬ್ದಕ್ಕೆ ನಿಂದ್ಯಾರ್ಥವನ್ನು ಏತಕ್ಕೆ ಮಾಡಿಕೊಂಡಿರೋ ನನಗೆ ತಿಳಿಯದಾಗಿದೆ.

'ಜಾತೀಯತೆ' ಎಂಬ ನಾಮಕರಣದಿಂದ ಪತ್ರಿಕೆಗಳಲ್ಲಿಯೂ ಭಾಷಣಗಳಲ್ಲಿಯೂ ಉಪಯೋಗಿಸುತ್ತಿರುವ ಅಪರಾಧವು ತಮ್ಮತಮ್ಮ ಜಾತಿಯ ಹೆಸರನ್ನಿಟ್ಟುಕೊಂಡಿರುವವರಿಗೆ ವ್ಯವಹಾರದಲ್ಲಿ ಕೆಲಕೆಲವು ಸೌಕರ್ಯಗಳನ್ನು ಕಲ್ಪಿಸುವದಕ್ಕೂ ಬೇರೆಯ 'ಜಾತಿ'ಯವರನ್ನು ಕೆಳಕ್ಕೆ ತಳ್ಳುವದಕ್ಕೆ ಪ್ರಯತ್ನಿಸುವ ಕೃತಿಗೂ ಮೀಸಲಾಗಿರುತ್ತದೆ. ಆದರೆ ಇಲ್ಲಿ ನಾವು ಹೇಳುತ್ತಿರುವ ವರ್ಣವಿಭಾಗವು ಶಾಸ್ತ್ರೋಕ್ತಧರ್ಮವನ್ನು ಬಿಡದೆ ಆನುವಂಶಿಕವಾಗಿ ನಡೆಯಿಸಿಕೊಂಡು ಬರುತ್ತಿರುವ ಪ್ರಶಸ್ತಪದ್ಧತಿಯನ್ನು ಕುರಿತದ್ದು. ವೇದಾಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹ–ಎಂಬ ಷಟ್ಕರ್ಮಗಳನ್ನು ಕೈಯಲ್ಲಾದಷ್ಟು ಮಟ್ಟಿಗಾದರೂ ಕಡ್ಡಾಯವಾಗಿ ನಡೆಯಿಸಿಕೊಂಡು ಬರುವವನೂ ದಮಶಮತಪಃಶೌಚಾದಿಗಳನ್ನು ಸ್ಥಾಪಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಲೇ ಇರುವವನೂ ಬ್ರಾಹ್ಮಣನು. ಹೀಗೆಯೇ ಅಧ್ಯಯನಾದಿಗಳನ್ನು ಮಾಡುತ್ತಾ ಶೌರ್ಯತೇಜೋಧೃತಿಯೇ ಮುಂತಾದವುಗಳನ್ನು ಕಾಪಾಡಿಕೊಳ್ಳುವವನು ಕ್ಷತ್ರಿಯನು. ವೈಶ್ಯಶೂದ್ರಶಬ್ದಗಳ ಅರ್ಥವನ್ನೂ ಹೀಗೆಯೇ ತಿಳಿಯಬೇಕು. ತಮ್ಮತಮ್ಮ ವರ್ಣದ ಧರ್ಮವನ್ನು ಕಾಪಾಡಿಕೊಂಡು ವ್ಯವಹರಿಸುವ ವರ್ಣವಿಭಾಗದ ಪದ್ಧತಿಯಿಂದ ಎಲ್ಲಾ ಕರ್ಮಗಳೂ ಧರ್ಮವೂ ಊರ್ಜಿತವಾಗುವದಕ್ಕೆ ಅವಕಾಶವಾದೀತೇ ಹೊರತು ಇದರಿಂದ ರಾಗದ್ವೇಷಾದಿಗಳು ಹೆಚ್ಚುವದಕ್ಕೆ ಯಾವ ಕಾರಣವೂ ಇರುವದಿಲ್ಲ.

ವೇದದಲ್ಲಿ ಯಾಜನವನ್ನು ಮಾಡಿಸುವ ಪುರೋಹಿತರನ್ನು ಬ್ರಾಹ್ಮಣರೆನ್ನುತ್ತಿದ್ದರೇ ಹೊರತು ಆಗ ಬ್ರಾಹ್ಮಣಜಾತಿಯೇ ಇರಲಿಲ್ಲ–ಎಂಬುದು ಸರಿಯಲ್ಲ. ಬ್ರಾಹ್ಮಣರು ಪುರೋಹಿತರಾಗಿದ್ದುದು ನಿಜವಾದರೂ ಎಲ್ಲ ಜಾತಿಯವರೂ ಪುರೋಹಿತರಾಗಿರುತ್ತಿದ್ದರೆಂದು ಕಲ್ಪಿಸುವದಕ್ಕೆ ಯಾವ ಆಧಾರವೂ ಇಲ್ಲ. 'ಬ್ರಾಹ್ಮಣನಿಗೆ ಎಂಟನೆಯ ವರ್ಷದಲ್ಲಿ ಉಪನಯವನ್ನು ಮಾಡಿಸಬೇಕು' ಮುಂತಾದ ವಿಧಿಗಳಿರುವದರಿಂದ ಬ್ರಾಹ್ಮಣಜಾತಿಯೇ ಮುಂತಾದ ಬೇರೆಬೇರೆಯ ಜಾತಿಗಳವರು ವೇದಕಾಲದಲ್ಲಿಯೇ ಇದ್ದರೆಂದೇ ಕಲ್ಪಿಸಬೇಕಾಗುತ್ತದೆ; 'ಯಸ್ಮೈ ಕೃಣೋತಿ ಬ್ರಾಹ್ಮಣಸ್ಥಮ್ ರಾಜನ್ ಪಾರಯಾಮಸಿ' ಮುಂತಾಗಿರುವ ಮಂತ್ರದಲ್ಲಿ ವೈದ್ಯಚಿಕಿತ್ಸಾಕ್ರಮವನ್ನು ತಿಳಿದ ಬ್ರಾಹ್ಮಣರು ರೋಗಿಗಳಿಗೆ ಚಿಕಿತ್ಸೆ ಮಾಡುತ್ತಿದ್ದರೆಂದು ಹೇಳಿದೆಯಾದ್ದರಿಂದ ವೃತ್ತಿಯಿಂದ ಬ್ರಾಹ್ಮಣಾದಿವರ್ಣ

ವಿಭಾಗವನ್ನು ಗೊತ್ತು ಮಾಡುತ್ತಿದ್ದರೆಂಬುದು ಸುಳ್ಳಾಗುತ್ತದೆ. ಪುರುಷಸೂಕ್ತದಲ್ಲಿ ಬ್ರಾಹ್ಮಣನು ಪ್ರಜಾಪತಿಯ ಮುಖದಿಂದ ಉತ್ಪನ್ನನಾದನು, ಕ್ಷತ್ರಿಯನು ಬಾಹುವಿನಿಂದ ಜನಿಸಿದನು–ಎಂದು ಮುಂತಾಗಿ ವರ್ಣಗಳನ್ನು ವಿಭಾಗಿಸಿ ಹೇಳಿರುವದು ಜಾತಿಯ ವಿಂಗಡವು ಆಗ ಇದ್ದಿತೆಂಬುದನ್ನೇ ಸ್ಪಷ್ಟಪಡಿಸುತ್ತದೆ. ಹೀಗೆಯೇ ವೇದದಲ್ಲಿ 'ಗೃಹಪತಿ', 'ಬ್ರಹ್ಮಚಾರಿ', 'ಮುನಿ'– ಎಂಬ ಹೆಸರುಗಳೂ ಕಂಡು ಬಂದಿರುವದರಿಂದ ಆಶ್ರಮ ವಿಭಾಗವೂ ವೇದಕಾಲದಲ್ಲಿದ್ದಿತೆಂದು ನಿಶ್ಚಯವಾಗುತ್ತದೆ.

**'ಯಥೋಮಾಂ ವಾಚಂ ಕಲ್ಯಾಣೀಮಾದಾನಿ ಜನೇಭ್ಯಃ '**; –ಮುಂತಾದ ಮಂತ್ರದಲ್ಲಿ ವೇದವನ್ನು ಎಲ್ಲಾ ಜಾತಿಯವರಿಗೂ ಹೇಳಬಹುದೆಂಬ ಅನುಜ್ಞೆ ಕಾಣುತ್ತಿದೆ–ಎಂದು ನಿಮಗೆ ಯಾರೋ ಸಮಾಜಸುಧಾರಕರು ಹೇಳಿರಬೇಕು. ಶುಕ್ಲ ಯಜುರ್ವೇದದಲ್ಲಿರುವ ಈ ಮಂತ್ರದಲ್ಲಿ ವೇದವನ್ನು ಇತರರಿಗೆ ಹೇಳಿಕೊಡುವ ಸೊಲ್ಲೇ ಇಲ್ಲ; ಎಲ್ಲಾ ವರ್ಣದವರಲ್ಲಿಯೂ ಅನುದ್ವೇಗಕರವಾಗಿ ಮಾತನಾಡುವಂತೆ ಅನುಗ್ರಹಿಸಬೇಕು ಎಂಬ ಪ್ರಾರ್ಥನೆಯಿದೆ.

ಬ್ರಾಹ್ಮಣರಂತೆ, ಕ್ಷತ್ರಿಯವೈಶ್ಯಶೂದ್ರರಿಗೂ ಶ್ರುತಿಸ್ಮೃತಿಪುರಾಣಗಳಲ್ಲಿ ಹೇಳಿರುವ ತಮ್ಮತಮ್ಮ ಕರ್ಮಗಳನ್ನು ವಿಧಿವತ್ತಾಗಿ ಮಾಡಿ ಇಹಪರಸುಖಗಳನ್ನೂ ಮೋಕ್ಷವನ್ನೂ ಪಡೆಯುವ ಅಧಿಕಾರವಿದೆಯೆಂದೇ ಶಾಸ್ತ್ರದಲ್ಲಿ ಹೇಳಿರುತ್ತದೆ. ಇದರಿಂದ ಜಾತ್ಯಭಿಮಾನವು ಪುರುಷಾರ್ಥಪ್ರಾಪ್ತಿಗೆ ಸಾಧನವೆಂದಾದೀತೇ ಹೊರತು ಅದರಿಂದ ಯಾವ ಕೆಡುಕೂ ಯಾರಿಗೂ ಆಗಲಾರದು. ಈ ವಿಷಯದಲ್ಲಿ ನಿಮಗೆ ಮತ್ತೇನಾದರೂ ಸಂಶಯವಿದೆಯೆ? ತಿಳಿಸಿದರೆ ಕೈಯಲ್ಲಾದ ಮಟ್ಟಿಗೂ ಅದನ್ನು ಪರಿಹರಿಸುವದಕ್ಕೆ ಪ್ರಯತ್ನಿಸುವೆನು.

## 259. ನೈಷ್ಠಿಕಬ್ರಹ್ಮಚರ್ಯ

### (ಮೇ 1968)

*ನಿಮ್ಮ ಪತ್ರವು ತಲುಪಿ ಅಭಿಪ್ರಾಯವಾಯಿತು. 'ಬ್ರಹ್ಮಚರ್ಯವು ಜ್ಞಾನ ಸಂಪಾದನೆಗೆ ಹೆಚ್ಚಿನ ಸಾಧನವಾದ್ದರಿಂದ ಅದನ್ನೇ ನಾನು ಅನುಸರಿಸಿಕೊಂಡು ಬರುತ್ತಿದೇನೆ. ಆದರೆ ಈ ಕಾಲದಲ್ಲಿ ನನಗೆ ಸರಿಯಾಗಿ ಕಾಲಕಾಲಕ್ಕೆ ಭೋಜನವು ಸಿಕ್ಕುವದೂ ಕಷ್ಟತರವಾಗಿರುತ್ತದೆ. ಮದುವೆಯಾಗುವ ಇಚ್ಛೆಯು ಎಂದೋ ಬಿಟ್ಟುಹೋಯಿತು. ಆದರೂ ವಾಸಕ್ಕೆ ಒಂದು ಆಸರೆ, ಕ್ಷುತ್ತೃಷೆಗಳ ಪರಿಹಾರಕ್ಕೆ ಸಾಧನ–ಇಷ್ಟೂ ದೊರೆಯದೆ ಇರುವರಿಂದ ಏನುಮಾಡಬೇಕೆಂಬುದು ತಿಳಿಯದೆ ಇದೆ. ತಮಗೆ ತಿಳಿದಂತೆ ಎಲ್ಲಿಯಾದರೂ ಭೋಜನ ಸೌಕರ್ಯವೂ ಅಧ್ಯಾತ್ಮಸಾಧನಕ್ಕೆ ಸೌಕರ್ಯವೂ ಇರುವ ಸ್ಥಳವು ಯಾವದಾದರೂ ಕಂಡುಬಂದಿದ್ದರೆ ನನಗೆ ತಿಳಿಸಬೇಕು; ಮತ್ತು*

*ಈಗಿನ ಸ್ಥಿತಿಯಲ್ಲಿ ಯಾವ ಸಾಧನವನ್ನು ಮಾಡಿದರೆ ನನಗೆ ಶ್ರೇಯಸ್ಕರವಾದೀತು?—ಎಂಬುದನ್ನು ನಿರ್ದೇಶಮಾಡಿದರೆ ಉಪಕೃತನಾಗುತ್ತೇನೆ' ಎಂದು ಬರೆದಿರುತ್ತೀರಿ.*

ಬ್ರಹ್ಮಚರ್ಯವೆಂದರೆ ಮದುವೆಯಾಗದಿರುವದು ಎಂಬ ಅರ್ಥವನ್ನು ನೀವು ಕಲ್ಪಿಸಿಕೊಂಡಿರುವದಕ್ಕೆ ಯಾವ ಶಾಸ್ತ್ರಾಧಾರವೂ ಇಲ್ಲ. ವೇದದಲ್ಲಿ ಉಪಕುರ್ವಾಣ, ನೈಷ್ಠಿಕ—ಎಂದು ಎರಡು ಬಗೆಯ ಆಶ್ರಮಗಳನ್ನು ವರ್ಣಿಸಿದೆ. ಬ್ರಹ್ಮವೆಂದರೆ ವೇದವು; ಗುರುಗಳ ಬಳಿಯಲ್ಲಿದ್ದು ವೇದಾಭ್ಯಾಸವನ್ನು ಮಾಡಿ ಧರ್ಮಜಿಜ್ಞಾಸೆಯನ್ನು ಮಾಡುವವನು ಮೊದಲನೆಯ ತರಗತಿಗೆ ಸೇರಿದ ಬ್ರಹ್ಮಚಾರಿ. ಧರ್ಮದ ತತ್ತ್ವವನ್ನು ತಿಳಿದುಕೊಂಡ ಬಳಿಕ ಅದನ್ನು ಅನುಷ್ಠಾನಕ್ಕೆ ತರುವೆನೆಂದು ಅನುರೂಪಳಾದ ಹೆಂಡತಿಯನ್ನು ಮದುವೆಯಾಗಿ ಶ್ರೌತಸ್ಮಾರ್ತಕರ್ಮಗಳನ್ನು ಮಾಡುತ್ತಾ ಕುಟುಂಬಭರಣವನ್ನು ಮಾಡುವದೂ ಅತಿಥಿಅಭ್ಯಾಗತರನ್ನು ಸತ್ಕರಿಸುವದೂ ಸಮಾಜಕ್ಕೆ ಹಿತವನ್ನು ಬಯಸಿ ಸ್ವಧರ್ಮವನ್ನು ಆಚರಿಸುವದೂ ಅವನ ಕರ್ತವ್ಯವು. ಬದುಕಿರುವವರೆಗೂ ಗುರುಸೇವೆಯನ್ನೇ ಮಾಡುತ್ತಾ ವೇದವನ್ನು ಅಭ್ಯಾಸಮಾಡುತ್ತಾ ಧರ್ಮದಿಂದ ಇರುವವನು ನೈಷ್ಠಿಕಬ್ರಹ್ಮಚಾರಿಯು. ಅವನಿಗೆ ದೇವಯಾನಮಾರ್ಗವಾಗಿ ಬ್ರಹ್ಮಲೋಕಪ್ರಾಪ್ತಿ ಯಾಗುವದೆಂದು ಶಾಸ್ತ್ರವಿದೆ. ಈ ಕಾಲದಲ್ಲಿ ಅಧ್ಯಯನದಸೊಲ್ಲೂ ಇಲ್ಲದೆ, ಯಾವದೋ ಕಾರಣದಿಂದ ಮದುವೆಯಾಗದೆ ಇದ್ದರೂ ವೃಷೋತ್ಸರ್ಗದಿಂದ ಹರಿಯಬಿಟ್ಟ ಹೋರಿಯಂತೆ ಕಂಡಕಡೆಗೆ ತಿರುಗುತ್ತಾ ಲೌಕಿಕಕರ್ಮದಲ್ಲಿ ವ್ಯಾಪೃತರಾಗಿರುವವರೂ ತಾವು ನೈಷ್ಠಿಕಬ್ರಹ್ಮಚಾರಿಗಳೆಂದು ಜಂಭಕೊಚ್ಚಿಕೊಳ್ಳುವದುಂಟು. ರಾಗದ್ವೇಷಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟು ಜೀವನವನ್ನು ಅಪಾಯಕ್ಕೆ ಒಡ್ಡಿಕೊಂಡಿರುವವರನ್ನು ಬ್ರಹ್ಮಚಾರಿಗಳೆನ್ನುವದಕ್ಕಿಂತ ಆಸುರಸಂಪತ್ತಿನ ಸೇವಕರೆನ್ನುವದೇ ಹೆಚ್ಚು ಒಪ್ಪುತ್ತದೆ.

ಗೃಹಸ್ಥರಾಗಿರುವವರು ಮನೆಯಲ್ಲಿದ್ದುಕೊಂಡಿದ್ದು ವೇದೋಕ್ತಕರ್ಮವನ್ನು ಮಾಡುತ್ತಲೂ ತಮಗೆ ಇಷ್ಟವೆಂದು ತೋರಿದ ಉಪಾಸನೆಯನ್ನು ಮಾಡುತ್ತಲೂ ಇರಬಹುದು. ಆದರೆ ಅಪರಬ್ರಹ್ಮದ ಉಪಾಸನೆಗಿಂತ ಪರಬ್ರಹ್ಮಜ್ಞಾನವೇ ಹೆಚ್ಚಿನದೆಂದು ತಿಳಿದವರಾದರೆ, ಅವರೂ ಬ್ರಹ್ಮವಿದ್ಯೆಗಾಗಿ ಗುರುಕುಲವಾಸಕ್ಕೆ ಹೋಗಬೇಕಾಗುವದು. ಪಿಪ್ಪಲಾದರ ಬಳಿಯಲ್ಲಿ ಸುಕೇಶನೇ ಮೊದಲಾದ ಆರುಜನರು ಒಂದುವರ್ಷ ಬ್ರಹ್ಮಚರ್ಯದಿಂದ ಇದ್ದು ಪ್ರಶ್ನೆಮಾಡಿ ತತ್ತ್ವವನ್ನು ಅರಿತುಕೊಂಡರೆಂದು ಉಪನಿಷತ್ತಿನಲ್ಲಿ ಹೇಳಿರುವದು—ಈ ಎರಡನೆಯ ಬಗೆಯ ಬ್ರಹ್ಮಚರ್ಯೆ, ಇದು ಬ್ರಹ್ಮವಿದ್ಯೆಗಾಗಿ ಮಾಡುತ್ತಿದ್ದ ಬ್ರಹ್ಮಚರ್ಯೆ ಎಂಬುದು ಆಯಾ ಉಪನಿಷದ್ಭಾಗದಿಂದಲೇ ಗೊತ್ತಾಗುತ್ತದೆ.

ಈ ಕಾಲಕ್ಕೆ ವೇದೋಕ್ತವಾದ ಬ್ರಹ್ಮಚರ್ಯಾಶ್ರಮದ ರೂಪವು, ಗಾರ್ಹಸ್ಥ್ಯಾದಿ ಗಳಂತೆಯೇ ಮಸುಳಿಸಿರುತ್ತದೆಯೆಂಬುದು ನಿಜ. ಆದರೂ ಸ್ವೇಚ್ಛೆಯಿಂದ ಕಾಲವನ್ನು

ಹಾಕುತ್ತಾ ವೇದಾಂತವನ್ನಾಗಲಿ ಮತ್ತೆ ಯಾವ ವಿದ್ಯೆಯನ್ನಾಗಲಿ ಅಭ್ಯಾಸ ಮಾಡುವೆನೆಂದು ಹೇಳಿಕೊಳ್ಳುವದು ಎಂದಿಗೂ ಶಿಷ್ಟಲೋಕಸಮ್ಮತವಾಗಲಾರದು. ಯಮನಿಯಮಗಳಿಲ್ಲದೆ, ನಾಲಗೆಯ ಚಾಪಲ್ಯವನ್ನು ಕಳೆದುಕೊಳ್ಳುವದಕ್ಕಾಗಿ ಹವಣಿಸುತ್ತಾ 'ನಾನು ಬ್ರಹ್ಮಚಾರಿ, ನನಗೆ ಊಟಹಾಕುವವರಿಲ್ಲವಲ್ಲ!' ಎಂದು ಹಂಬಲಿಸಬೇಡಿರಿ. ಆಶ್ರಮಕ್ಕೆ ಹೇಳಿರುವ ಯಮನಿಯಮಗಳನ್ನು ಪಾಲಿಸಬೇಕು. ಅದರಲ್ಲಿಯೂ 'ಯಮಾನ್ ಪತತ್ಯಕುರ್ವಾಣೋ ನಿಯಮಾನ್ ಕೇವಲಾನ್ ಭಜನ್' ಎಂಬಂತೆ ಮನಃಪ್ರಧಾನವಾದ ಯಮಗಳು ಅವಶ್ಯವಾಗಿ ಅನುಷ್ಠಾನ ಮಾಡತಕ್ಕವು; ನಿಯಮಗಳನ್ನು ಬಿಡಬಾರದು; ಆದರೆ ಯಮಗಳನ್ನು ಆಚರಿಸದೆ ಬರಿಯ ನಿಯಮಗಳನ್ನು ತೋರುಗಾಣಿಕೆಗೆ ಇಟ್ಟುಕೊಂಡಿರುವದು ವ್ಯರ್ಥ. ಆದ್ದರಿಂದ ಭಗವದ್ಗೀತೆಯಲ್ಲಿ ಹೇಳಿರುವ ಅಮಾನಿತ್ವ, ಅದಂಭಿತ್ವ, ಅಹಿಂಸೆ, ಕ್ಷಮೆ, ಋಜುತ್ವ–ಮುಂತಾದ ಜ್ಞಾನಸಾಧನಗಳನ್ನು ಎಡೆಬಿಡದೆ ಸಾಧಿಸುವ ವ್ರತವನ್ನು ಹಿಡಿಯಿರಿ. ಇದರಿಂದ ಮನಸ್ಸು ಬ್ರಹ್ಮದಲ್ಲಿಯೇ ನೆಲಸುವ ಬ್ರಹ್ಮನಿಷ್ಠೆಗೆ ಅಣಿಯಾಗುವದು.

ಈ ವಿಷಯಕ್ಕೆ ನಿಮಗೆ ಹೆಚ್ಚಿಗೆಯ ವಿವರವೇನಾದರೂ ಬೇಕಾದರೆ ದಯವಿಟ್ಟು ತಿಳಿಸಿರಿ.

## 260. ವರ್ಣಾಶ್ರಮ ವ್ಯವಸ್ಥೆ

(ಜೂನ್1968)

*"ವರ್ಣಾಶ್ರಮಧರ್ಮಗಳು ವಂಶಪರಂಪರೆಯಿಂದ ಆಯಾ ಜಾತಿಯವರು ಅನುಷ್ಠಾನ ಮಾಡತಕ್ಕವೊ, ಅಥವಾ ತಮ್ಮ ತಮ್ಮ ಸ್ವಭಾವಕ್ಕೆ ತಕ್ಕಂತೆ ಅವರವರು ಆರಿಸಿಕೊಳ್ಳುವ ಕ್ರಿಯೆಗಳೊ? **'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ'** ಎಂಬ ವಾಕ್ಯದಲ್ಲಿ ಭಗವಂತನು ಸತ್ತ್ವಾದಿಗುಣಗಳಿಗೆ ಅನುಸಾರವಾಗಿಯೇ ಬ್ರಾಹ್ಮಣಾದಿಕರ್ಮಗಳನ್ನು ಸೃಷ್ಟಿಮಾಡಿದ್ದೇನೆಂದು ಸ್ಪಷ್ಟವಾಗಿ ಹೇಳಿರುತ್ತಾನಲ್ಲವೆ? ಆದ್ದರಿಂದ ಮನಸ್ಸಿನ ಸ್ವಭಾವಕ್ಕೆ ತಕ್ಕಂತೆ ಅವರವರು ತಮ್ಮ ತಮ್ಮ ಕರ್ಮವನ್ನು ಆರಿಸಿಕೊಳ್ಳಬಹುದಲ್ಲವೆ? ಇದರಂತೆ ಆಯಾ ಆಶ್ರಮದಲ್ಲಿರುವಾತನಿಗೆ ಮತ್ತೊಂದು ಆಶ್ರಮದ ಕರ್ಮವನ್ನು ಚೆನ್ನಾಗಿ ಮಾಡುವದಕ್ಕೆ ಆದೀತೆಂದು ತೋರುವಾಗ ಆಯಾ ಆಶ್ರಮವನ್ನೇ ಸ್ವೀಕರಿಸುವದು ತಪ್ಪೆ? ಒಬ್ಬ ಗೃಹಸ್ಥನಿಗೆ ಬ್ರಹ್ಮಚರ್ಯಾಶ್ರಮದಲ್ಲಿರುವದು ಹೆಚ್ಚು ಸುಕರವೆಂದು ತೋರಿದರೆ, ಅಥವಾ ಒಬ್ಬ ಸಂನ್ಯಾಸಿಗೆ ಗೃಹಸ್ಥನಾಗಿರುವದರಿಂದಲೇ ತಾನು ಹೆಚ್ಚು ವೀರ್ಯವತ್ತರವಾಗಿ ಧರ್ಮಾನುಷ್ಠಾನವನ್ನು ಮಾಡಬಹುದೆಂದು ತೋರಿದರೆ ಅವನು ಹಾಗೆಯೇ ಮಾಡಬಾರದೇಕೆ? ಸುಪ್ರಸಿದ್ಧರಾದ ಋಷಿಗಳನೇಕರು ಪತ್ನೀಸಮೇತರಾಗಿಯೆ ತಪೋನಿಷ್ಠರಾಗಿರಲಿಲ್ಲವೆ? ಈ ವಿಷಯದಲ್ಲಿ ಕರ್ಮಜಡವಾಗಿರುವ ಸಾಂಪ್ರದಾಯಿಕರ ಅಭಿಪ್ರಾಯವು ಹೇಗೇ*

*ಇರಲಿ, ತತ್ತ್ವದೃಷ್ಟಿಯಿಂದ ತಮ್ಮ ಅಭಿಪ್ರಾಯವೇನೆಂಬುದನ್ನು ದಯವಿಟ್ಟು ತಿಳಿಸೋಣಾಗಬೇಕು''–ಎಂದು ಒಬ್ಬ ಮಹೋದಯರು ಪ್ರಶ್ನೆ ಮಾಡಿರುತ್ತಾರೆ.*

ಇದಕ್ಕೆ ನನ್ನ ಅಭಿಪ್ರಾಯವನ್ನು ಇಲ್ಲಿ ಸಂಕ್ಷೇಪವಾಗಿ ತಿಳಿಸುವೆನು: ವರ್ಣಾಶ್ರಮ ಧರ್ಮಗಳು ಸಂಕರವಾಗುತ್ತಿರುವ ಈ ಕಾಲದಲ್ಲಿ ಯಾರೊಬ್ಬರೂ ಇಂಥ ವರ್ಣದವರು, ಇಂಥ ಆಶ್ರಮದವರು–ಎಂದು ಬಾಹ್ಯಚಿಹ್ನೆಯಿಂದ, ಅಥವಾ ಬಾಹ್ಯಚರ್ಯೆಯಿಂದ ಗೊತ್ತುಪಡಿಸುವದು ಆಗಲಾರದು. 'ಗಾರ್ಹಸ್ಥ್ಯ' ವೆಂಬುದು ಹಲವು ಕಡೆಗಳಲ್ಲಿ ಪ್ರೇಮವಿವಾಹದ ಫಲವಾಗಿಬಿಟ್ಟಿದೆ. 'ಸಂನ್ಯಾಸ'ವೆಂಬುದು ಕಾವಿ ಬಣ್ಣದ ಉಡುಪನ್ನು ಧರಿಸಿದವರಿಗೆಲ್ಲ ನಿಲುಕಿಬಿಟ್ಟಿದೆ. ವಿಧಿವತ್ತಾಗಿ ಮದುವೆಯಾಗದೆ ಇಚ್ಛೆಯಿಂದ ಕೂಡಿಕೆ ಮಾಡಿಕೊಂಡಿರುವವರು ಪರಸ್ಪರವಾಗಿ ವಿವಾಹ ವಿಚ್ಛೇದವನ್ನು ಮಾಡಿಕೊಳ್ಳುವದಕ್ಕೂ ತಮಗೆ ಬೇಕಾದ ಜಾತಿಯ ಅಥವಾ ಕುಲದ ವ್ಯಕ್ತಿಯನ್ನು ಮದುವೆಯಾಗುವದಕ್ಕೂ ಅಡ್ಡಿಯಿರುವದಿಲ್ಲ. ಇದು ಸಮಾಜಸ್ಥಿತಿಯ ವರ್ಣನೆ. ಸರಕಾರದವರೂ ಈ ಸ್ವೇಚ್ಛಾವೃತ್ತಿಗೆ ಸೌಕರ್ಯವನ್ನು ಕಲ್ಪಿಸುವ ಕಾನೂನನ್ನೂ ಮಾಡಿಕೊಟ್ಟಿರುತ್ತಾರೆ.

ಆದರೆ ಶಾಸ್ತ್ರೀಯವಾದ ಧರ್ಮದ ದೃಷ್ಟಿಯಿಂದ ಯಾರು ಬೇಕಾದರೂ ಯಾವ ವರ್ಣದವರನ್ನಾದರೂ ಯಾವ ಆಶ್ರಮದವರು ಯಾವ ಆಶ್ರಮದವರನ್ನಾದರೂ ಸ್ವೀಕರಿಸುವದಕ್ಕೆ ಆದೀತೆ–ಎಂಬುದನ್ನು ಮಾತ್ರ ಇಲ್ಲಿ ನಿರ್ಣಯಿಸಿ ಹೇಳುವದಕ್ಕೆ ಅವಕಾಶವಿದೆ.

ಪ್ರಶ್ನೆ ಮಾಡಿರುವವರು ಉದಾಹರಿಸಿರುವ ಶ್ಲೋಕಕ್ಕೆ ಭಾಷ್ಯವನ್ನು ಬರೆಯುವಾಗ ಶಂಕರಾಚಾರ್ಯರು ಬರೆದಿರುವದೇನೆಂದರೆ: ''ಸಾತ್ತ್ವಿಕನಾದ ಎಂದರೆ ಸತ್ತ್ವ ಪ್ರಧಾನನಾದ ಬ್ರಾಹ್ಮಣನಿಗೆ ಶಮದಮತಪಾದಿಗಳು ಕರ್ಮಗಳು, ಸತ್ತ್ವವು ಅಂಗವಾಗಿ ರಜಸ್ಸು ಪ್ರಧಾನವಾಗಿರು ಕ್ಷತ್ರಿಯನಿಗೆ ಶೌರ್ಯ, ತೇಜಸ್ಸು–ಮುಂತಾದವು ಕರ್ಮಗಳು; ತಮಸ್ಸು ಅಂಗವಾಗಿ ರಜಸ್ಸು ಪ್ರಧಾನವಾಗಿರುವ ವೈಶ್ಯನಿಗೆ ಕೃಷಿವಾಣಿಜ್ಯಾದಿಗಳು ಕರ್ಮಗಳು ; ರಜಸ್ಸು ಅಂಗವಾಗಿ ತಮಸ್ಸೇ ಪ್ರಧಾನವಾಗಿರುವ ಶೂದ್ರನಿಗೆ ಶೂಶ್ರೂಷೆಯೇ ಕರ್ಮ–ಎಂದಿಂತು ಗುಣಕರ್ಮವಿಭಾಗದಿಂದ ಚಾತುರ್ವರ್ಣ್ಯವು ಸೃಷ್ಟವಾಗಿದೆ ಎಂದರ್ಥ.'' ಈ ವಾಕ್ಯದಲ್ಲಿ ಸತ್ತ್ವವೇ ಮುಂತಾದವು ಪ್ರಧಾನವಾಗಿ ಹುಟ್ಟಿರುವ ಬ್ರಾಹ್ಮಣರೇ ಮುಂತಾದವರಿಗೆ ಈ ಕರ್ಮಗಳು ಸೃಷ್ಟವಾಯಿತೊ? ಅಥವಾ ಯಾವಯಾವಾಗ ಈ ಗುಣಗಳು ಎದ್ದುಕೊಳ್ಳುವವೋ ಆಗಾಗ ಆಯಾ ಧರ್ಮಗಳನ್ನು ಅನುಷ್ಠಾನ ಮಾಡಬಹುದು–ಎಂದು ಅರ್ಥವೊ? ನಿಷ್ಪಕ್ಷಪಾತವಾಗಿ ವಿಚಾರಿಸಿದರೆ ಆಯಾ ಜಾತಿಯವರಿಗೆ ಆಯಾ ಗುಣಗಳು ಪ್ರಾಯಶಃ ಸ್ವಭಾವವಾಗಿರುತ್ತವೆ–ಎಂದೇ

ಅರ್ಥವಾಗುತ್ತದೆ. ಇದಲ್ಲದೆ ಬ್ರಾಹ್ಮಣನಿಗೆ ಎಂಟನೆಯ ವರ್ಷದಲ್ಲಿ ಉಪನಯನ ಮಾಡಬೇಕು–ಎಂದು ಮುಂತಾಗಿ ಶಾಸ್ತ್ರಗಳಲ್ಲಿ ಆಯಾ ವರ್ಣದವರಿಗೆ ಇಂಥಿಂಥ ವಯಸ್ಸಿನಲ್ಲಿ ಉಪನಯನ ಮಾಡಬೇಕೆಂದು ಹೇಳಿರುತ್ತದೆ. ಅಲ್ಲಿ ಆಯಾ ಗುಣಗಳು ಎದ್ದುಕೊಂಡಾಗ ಆಯಾ ವಯಸ್ಸಿನಲ್ಲಿ ಉಪನಯನ ಮಾಡಬೇಕು–ಎಂದು ಅರ್ಥ ಮಾಡಿದರೆ ಆಗುತ್ತದೆಯೆ? ಇದನ್ನು ಸಾವಧಾನವಾಗಿ ಪರಿಶೀಲಿಸಬೇಕು. ಜಾತಕರ್ಮವೇ ಮುಂತಾದವುಗಳನ್ನಂತೂ ಗುಣಾನುಸಾರವಾಗಿ ಮಾಡುವದಕ್ಕೆ ಆಗುವದೇ ಇಲ್ಲವೆಂಬುದು ಸ್ಪಷ್ಟವಾಗಿದೆ.

ಇನ್ನು ಆಶ್ರಮದ ವಿಚಾರ. ಬ್ರಹ್ಮಚಾರಿಯಾದವನು ಗುರುಗಳ ಅಪ್ಪಣೆಯನ್ನು ಪಡೆದುಕೊಂಡು ಸ್ನಾತಕನಾಗಬೇಕು; ಗೃಹಸ್ಥನಾದವನು ಸ್ವಧರ್ಮವನ್ನು ಮಾಡುತ್ತಿದ್ದು ಋಣತ್ರಯವನ್ನು ತೀರಿಸಿದ ಬಳಿಕ ವಾನಪ್ರಸ್ಥನಾಗಬೇಕು. ವಿರಕ್ತನಾದವನು ಪರಿವ್ರಾಜಕನಾಗಬೇಕು–ಎಂದು ಆಶ್ರಮಕ್ರಮವನ್ನು ವರ್ಣಿಸುವ ಶಾಸ್ತ್ರವೇ ಸಾಮಾನ್ಯ ನಿಯಮವಾಗಿದೆ. ಬ್ರಹ್ಮಚಾರಿಯೇ ಆಗಲಿ, ಗೃಹಸ್ಥನೇ ಆಗಲಿ ವಾನಪ್ರಸ್ಥನೇ ಆಗಲಿ ಯಾವ ದಿನ ವಿರಕ್ತನಾಗುತ್ತಾನೋ ಅಂದೇ ಪರಿವ್ರಾಜಕನಾಗಬಹುದು–ಎಂಬ ವಿಕಲ್ಪವೂ ಇದೆ. ಆದರೆ ಶ್ರುತಿಸ್ಮೃತಿಗಳಲ್ಲಿ ಎಲ್ಲಿ ಹುಡುಕಿದರೂ ಮೇಲಿನ ಆಶ್ರಮದಲ್ಲಿರುವವರು ಕೆಳಗಿನ ಆಶ್ರಮಕ್ಕೆ ಹಿಂತಿರುಗಬಹುದು ಎಂಬ ವಾಕ್ಯವು ಸಿಕ್ಕುವದಿಲ್ಲ.

ಸಂನ್ಯಾಸಿಯಾದವರು ಗೃಹಸ್ಥನಾಗಿ ಧರ್ಮವನ್ನು ಹೆಚ್ಚು ವೀರ್ಯವತ್ತಾಗಿ ಮಾಡಬಹುದಾದರೆ, ಋಷಿಗಳಂತೆ ಸಪತ್ನೀಕನಾಗಿಯೇ ಧರ್ಮಾನುಷ್ಠಾನವನ್ನು ಮಾಡುತ್ತಾ ಜನತಾ ಸೇವೆಯನ್ನು ಮಾಡಬಹುದಾದರೆ, ಹಾಗೇಕೆ ಮಾಡಬಾರದು? ಎಂಬ ಪ್ರಶ್ನೆಗೆ ಈಗ ಉತ್ತರವನ್ನು ಹೇಳಬೇಕಷ್ಟೆ? ಈ ವಿಷಯದಲ್ಲಿ ಬ್ರಹ್ಮಸೂತ್ರವೊಂದಕ್ಕೆ ಭಾಷ್ಯವನ್ನು ಬರೆಯುವಾಗ ಶಂಕರಾಚಾರ್ಯರು ಬರೆದಿರುವದೇನೆಂದರೆ: ''ಹೇಗೆ ಹಿಂದಿನ ಆಶ್ರಮದಿಂದ ಮುಂದಿನ ಆಶ್ರಮಕ್ಕೆ ಹೋಗಬಹುದೆಂಬ ವಚನಗಳು ಕಾಣಬರುತ್ತವೋ, ಹಾಗೆ ಹಿಂದಿನ ಆಶ್ರಮಕ್ಕೂ ಇಳಿಯಬಹುದೆಂಬ ವಚನಗಳು ಯಾವವೂ ಕಾಣಿಸುವದಿಲ್ಲ. ಹಿಂದಿನ ಆಶ್ರಮದ ಧರ್ಮವನ್ನು ಚೆನ್ನಾಗಿಮಾಡಬೇಕೆಂಬ ಇಚ್ಛೆಯಿಂದ ಕೆಳಕ್ಕಿಳಿಯ ಬಹುದು–ಎಂಬ ಅಭಿಪ್ರಾಯವು ಸರಿಯಲ್ಲ; ಏಕೆಂದರೆ 'ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್' ಎಂದರೆ ತನ್ನ ಧರ್ಮದಲ್ಲಿಸ್ವಲ್ಪ ಮುಕ್ಕಾದರೂ ಚಿಂತೆಯಿಲ್ಲ, ಅದೇ ಮತ್ತೊಬ್ಬರ ಧರ್ಮವನ್ನು ಚೆನ್ನಾಗಿ ಮಾಡಿದ್ದಕ್ಕಿಂತಲೂ ಶ್ರೇಯಸ್ಕರವಾಗಿರುತ್ತದೆ–ಎಂಬ ಗೀತಾವಚನವಿದೆ. ಯಾವದು ಯಾವನಿಗಾಗಿ ವಿಹಿತವಾಗಿದೆಯೋ ಅದು ಅವನ ಧರ್ಮವಾಗಿದ್ದೀತೇ ಹೊರತು ಯಾವದನ್ನು ಯಾವನು ಚೆನ್ನಾಗಿ ಮಾಡಬಹುದೋ ಅದು ಅವನ ಧರ್ಮವಾಗಲಾರದು. ರಾಗಾದಿಗಳ ವಶದಿಂದ

ಹಿಂತಿರುಗಬಹುದೆಂದೂ ಹೇಳಲಾಗದು; ಏಕೆಂದರೆ ನಿಯಮಶಾಸ್ತ್ರವೇ ಬಲವತ್ತರವಾಗಿರುತ್ತದೆ.''

ಹೀಗೆ ಶಾಸ್ತ್ರದೃಷ್ಟಿಯಿಂದ ನೋಡಿದರೆ ಮೇಲಿನ ಆಶ್ರಮದಿಂದ ಜಾರಿ ಕೆಳಕ್ಕೆ ಬರುವದಕ್ಕೆ ಯಾವ ಆಧಾರವೂ ಇರುವದಿಲ್ಲ. ಇನ್ನು 'ಋಷಿಗಳು ಸಪತ್ನೀಕರಾಗಿರಲಿಲ್ಲವೆ?' ಎಂಬ ಪ್ರಶ್ನೆಗೆ 'ಅವರು ಸಂನ್ಯಾಸಿಗಳಾಗಿ ಗಾರ್ಹಸ್ಥ್ಯಕ್ಕೆ ಹಿಂತಿರುಗಿದವರಲ್ಲವಲ್ಲ!' ಎಂಬುದೇ ಉತ್ತರ.

ಸ್ವೇಚ್ಛಾಚಾರದಿಂದ ನಡೆಯುವವರಿಗೆ ಶಾಸ್ತ್ರದ ಕಟ್ಟಾಗಲಿ ಸಮಾಜದ ಕಟ್ಟಾಗಲಿ ಇರುವದಿಲ್ಲ. ಶಿಷ್ಟಾಚಾರವನ್ನು ಸಂಪಾದಿಸಬೇಕೆನ್ನುವವರು ಎಂದಿಗೂ ಶಾಸ್ತ್ರವನ್ನು ಉಲ್ಲಂಘಿಸಲಾರರು. ತರ್ಕಕುಶಲತೆಯಿಂದ ತಮ್ಮ ನಡತೆಯೇ ಸರಿ ಎಂದು ಸಾಧಿಸುವ ಕಾಮಪ್ರಧಾನರಿಗೆ ಯಾರುತಾನೆ ಅಡ್ಡ ಬರುವದಕ್ಕಾದೀತು? 'ಕಳ್ಳತನ ಮಾಡುವದು ಬಡವರ ಹಕ್ಕು!'. 'ಸಮಾಜದವರು ತುಳಿದಿಟ್ಟಿರುವವರನ್ನು ಕೊಂದರೂ ದೋಷವಿಲ್ಲ!; 'ಸರಕಾರದವರು ಜನಗಳ ಹಿತವನ್ನು ಬಯಸದ ಕಾನೂನನ್ನು ಮಾಡಿದರೆ ದಂಗೆಯೆದ್ದು ದೇಶದಲ್ಲಿ ಅನಾಯಕತ್ವವನ್ನು ಸ್ಥಾಪಿಸುವದೇ ಯುಕ್ತ!' ಎಂದು ಮುಂತಾಗಿ ವಾದಿಸುವವರಿಗೂ 'ಧರ್ಮವನ್ನುಲ್ಲಂಘಿಸಿಯೇ ಧಾರ್ಮಿಕರಾಗಿರಬಹುದು!' ಎಂಬ ಕುತಾರ್ಕಿಕರಿಗೂ ಏನು ಹೆಚ್ಚು ಕಡಿಮೆ?

## 261. ಸದ್ಗುರು ಸೇವೆ

### (ಜುಲೈ 1968)

*ನಿಮ್ಮ ಪತ್ರವು ತಲುಪಿ ವಿಷಯವು ಮನಸ್ಸಿಗೆ ಹತ್ತಿದೆ. 'ದೊಡ್ಡವರು' ಎಂದು ಬಹು ಜನರು ಮೆಚ್ಚುವವರನ್ನು ಹತ್ತು ಜನರಂತೆ ನಂಬಿ ಅನುಸರಿಸುತ್ತಿರುವಾಗ ಅವರು ತಟ್ಟನೆ ನಡುನೀರಿನಲ್ಲಿ ಕೈಬಿಟ್ಟರೆ ಏನು ಮಾಡಬೇಕು? 'ತತ್ತ್ವಬೋಧಕರು' ಎಂದು ಸುಪ್ರಸಿದ್ಧರಾಗಿರುವವರೂ ಅಡ್ಡ ದಾರಿಗೆ ಇಳಿದರೆ ಅವರ ಹಿಂಬಾಲಕರು 'ಹಾಂಗೂ ಕೆಟ್ಟೆ, ಹೀಂಗೂ ಕೆಟ್ಟೆ' ಎಂಬ ಗಾದೆಗೆ ಉದಾಹರಣೆಯಾಗುವರಲ್ಲ! ತತ್ತ್ವವಿಚಾರಕ್ಕಾಗಲಿ ಸಾಧನಾನುಷ್ಠಾನಕ್ಕಾಗಲಿ ಎಂಥ ಗುರುವನ್ನು ಸೇವಿಸಬೇಕು? 'ನಿಜವಾದ ಗುರುಗಳು ಈ ಕಾಲಕ್ಕೆ ಸಿಕ್ಕಿಯಾರೆ?' ಎಂದು ಕೇಳಿ ಬರೆದಿರುತ್ತೀರಿ.*

ಗುರು, ಶಿಷ್ಯ, ಉಪದೇಶ–ಇವುಗಳ ತತ್ತ್ವವು ಶಾಸ್ತ್ರದಿಂದಲೇ ತಿಳಿಯತಕ್ಕದ್ದು. ವಾಗ್ವೈಖರಿಯಿಂದಲಾಗಲಿ ನೂರಾರು ಜನರ ಚಿತ್ತವನ್ನು ಸೆಳೆಯುವ ಉಪನ್ಯಾಸಗಳನ್ನು ಬಿಗಿಯುವದರಿಂದಲಾಗಲಿ, ಶಾಸ್ತ್ರಗಳಿಗೆ ವ್ಯಾಖ್ಯಾನವನ್ನು ಮಾಡುವ ಪಾಂಡಿತ್ಯ

ಪ್ರದರ್ಶನದಿಂದಲಾಗಲಿ, ಗುರುಜನರನ್ನು ಗುರುತಿಸುವದು ಸರಿಯಾಗಲಾರದು. ಭಗವಂತನು ಅರ್ಜುನನಿಗೆ ಉಪದೇಶಿಸಿದಾಗ 'ಆ ಜ್ಞಾನವನ್ನು ಗುರುಗಳಿಗೆ ನಮಸ್ಕಾರ ಮಾಡುವದರಿಂದಲೂ ವಿನಯದಿಂದ ಸಮಯವರಿತು ಪ್ರಶ್ನಿಸುವದರಿಂದಲೂ ಸೇವೆ ಯಿಂದಲೂ ಅರಿತುಕೊ; ತತ್ತ್ವದರ್ಶಿಗಳಾದ ಜ್ಞಾನಿಗಳು ಅದನ್ನು ನಿನಗೆ ಉಪದೇಶಿಸುವರು' ಎಂದಿರುತ್ತಾನೆ.

ಇಂಥವರು '**ತತ್ತ್ವದರ್ಶಿಗಳು**' ಎಂಬುದನ್ನು ಹೇಗೆ ಗೊತ್ತುಮಾಡಬೇಕು?– ಎಂಬುದೇ ಇಲ್ಲಿ ಪ್ರಶ್ನೆ. ಮೊದಲನೆಯದಾಗಿ ಉಪದೇಶಕರಾದವರು ಸದಾಚಾರಿಗಳಾಗಿರ ಬೇಕು. ಯಾರು ಶಿಷ್ಟಾಚಾರವನ್ನು ತಿರಸ್ಕರಿಸುವರೋ, ಲೋಕವಿರುದ್ಧವಾದ ಆಚಾರಗಳನ್ನೇ ಅವಲಂಬಿಸಿರುತ್ತಾರೋ, ಅಂಥವರು ಎಂದಿಗೂ ತತ್ತ್ವದರ್ಶಿಗಳಾಗಿರಲಾರರು. ಎರಡನೆಯದಾಗಿ ಸಾಮಾನ್ಯ ಜನರಿಗೆ ಮಾದರಿಯಾಗಿರುವ **ಸಾಧನವಿಶೇಷಗಳನ್ನು** ತಾವೂ ಮಾಡುತ್ತಾ ತಮ್ಮನ್ನು ಬಳಿಸಾರಿದವರಿಗೂ ಅವನ್ನು ಉಪದೇಶಮಾಡುವವರನ್ನೇ ಗುರುಗಳಾಗಿ ಆರಿಸಿಕೊಳ್ಳುವದರಲ್ಲಿ ಕ್ಷೇಮವಿದೆ. ಸತ್ಕರ್ಮಾನುಷ್ಠಾನ, ಪಾರಾಯಣ, ಜಪ, ಧ್ಯಾನ–ಮುಂತಾದವುಗಳ ಮರ್ಮವನ್ನು ಹೇಳಿಕೊಡುವೆವೆನ್ನುತ್ತಾ ತಾವು ಇವುಗಳಲ್ಲಿ ಒಂದನ್ನೂ ಕಣ್ಣೆತ್ತಿ ನೋಡದೆ ಇರುವವರನ್ನು ನಂಬಲಾಗದು. ಜ್ಞಾನಿಗಳು ಕೃತಕೃತ್ಯ ರಾದರೂ ಲೋಕ ಸಂಗ್ರಹಕ್ಕಾಗಿ ಯಾವದಾದರೂ ಅನುಷ್ಠಾನವನ್ನು ಇಟ್ಟುಕೊಂಡೇ ಇರುತ್ತಾರೆ. ಶ್ರೀಕೃಷ್ಣಭಗವಂತನು 'ನನಗೆ ಕರ್ತವ್ಯವೇನೂ ಇಲ್ಲ, ಪಡೆಯಬೇಕಾದದ್ದೂ ಇಲ್ಲ; ಆದರೂ ನಾನು ಕರ್ಮದಲ್ಲಿ ತೊಡಗಿಯೇ ತೀರುತ್ತೇನೆ' ಎಂದು ಹೇಳಿರುವದನ್ನು ನಾವು ನೆನಪಿನಲ್ಲಿಟ್ಟಿರುವದು ಒಳ್ಳೆಯದು.

ಇನ್ನೊಂದು ಮಾತು. ಸದ್ಗುರುಗಳೆಂದು ನಾವು ಎಣಿಸಬೇಕಾದರೆ ಅವರು **'ಸದ್–ಗುರು'** ಗಳಾಗಿರಬೇಕು. ಸತ್ತೆಂಬುದು ಪರಮಾತ್ಮನ ಹೆಸರು. ಯಾರು ಪರಮಾತ್ಮ ನಿಷ್ಠೆಯಲ್ಲಿಯೇ ಕಾಲವನ್ನು ಕಳೆಯುತ್ತಿರುವರೋ, ಯಾರು ಲೋಕವಾರ್ತೆಯಲ್ಲಿ ನಿರತರಾಗದೆ, ಸಾತ್ತ್ವಿಕವರ್ತನದವರಾಗಿ ಭಕ್ತಿ, ಜ್ಞಾನ, ವೈರಾಗ್ಯಗಳ ವಿಚಾರದಲ್ಲಿಯೇ ಸಂಭಾಷಣೆ ಮಾಡುತ್ತಾ, ತಮ್ಮ ಹತ್ತಿರಕ್ಕೆ ಬಂದವರನ್ನು ಭಗವಂತನ ಕಡೆಗೆ ತಿರುಗಿಸುವ ಕಾರ್ಯದಲ್ಲಿ ನಿರತರಾಗಿರುವರೋ ಅವರನ್ನು 'ಸದ್ಗುರು'ವೆಂದು ಭಾವಿಸಬಹುದು. ರಾಜಕಾರಣ, ವರ್ತಕತನ, ಜೂಜು, ವೈದ್ಯ, ಜ್ಯೋತಿಷ, ನಿತ್ಯಪ್ರಯಾಣ, ವಿನೋದಗಳ ಗುಂಪು–ಇವುಗಳಲ್ಲಿಯೇ ಸೇರಿರುವವರು ಎಷ್ಟೇ ಮೇಲಿನ ಭೂಮಿಕೆಯಲ್ಲಿರುವವರೆಂಬ ಪ್ರಖ್ಯಾತಿಯನ್ನು ಗಳಿಸಿದ್ದರೂ ಅವರಿಂದ ದೂರವಿರಬೇಕು.

ಮೂರನೆಯದಾಗಿ ಯಾರು ಎಷ್ಟೇ ಭಾಷಣಗಳನ್ನು ಬಿಗಿಯಲಿ, ಅವರ ಭಾಷಣಗಳಲ್ಲಿ ಸಾಹಿತ್ಯದ ಸವಿ, ಅಲಂಕಾರ, ಪ್ರಾಸಬದ್ಧವಾಕ್ಯಗಳು–ಮುಂತಾದವುಗಳು

ಇವೆಯೆಂಬ ಒಂದೇ ಕಾರಣದಿಂದ ಮರಳಾಗಬಾರದು. ಅವರು ಹೇಳಿದ ಮಾತಿನಲ್ಲಿ ನಿಮಗೆ ಕೂಡಲೆ ವಿಶ್ವಾಸವು ಕೂಡುವದೆ? ಉಪದೇಶಿಸಿದ ಸಾಧನವನ್ನು ಮಾಡಿದ್ದರಿಂದ ನಿಮಗೆ ನಿರೀಕ್ಷಿಸಿದ ಅನುಭವವು ನಿಜವಾಗಿ ಬಂದಿರುವದೆ? ಅವರು ತಿಳಿಸಿಕೊಟ್ಟ ಸಿದ್ಧಾಂತವನ್ನು ಅರಿತ ಮೇಲೆ ನಿಮಗೆ ಸಂಶಯಗಳ ಪರಿಹಾರವಾಗಿದೆಯೆ? ನಿಮ್ಮ ಅಜ್ಞಾನವು ಸ್ವಲ್ಪವಾದರೂ ಹರಿದಿದೆಯೆ? ಮನಸ್ಸಿಗೆ ನೆಮ್ಮದಿ ದೊರಕಿದೆಯೆ?–ಇದನ್ನು ನೀವೇ ನಿರ್ಧರಿಸಿಕೊಳ್ಳಿರಿ. ಹೀಗಿದ್ದರೆ ಅವರನ್ನು ಗುರುಗಳಾಗಿ ಆರಿಸಿಕೊಳ್ಳಬಹುದು; ಇಲ್ಲದಿದ್ದರೆ ಕೂಡದು.

ಗುರುಗಳಾಗಬೇಕೆಂದು ಹವಣಿಸುತ್ತಾ ಇದ್ದರೆ, ಆ ಉಪದೇಶ ಮಾಡುತ್ತೇನೆ. ಈ ಅನುಷ್ಠಾನವನ್ನು ಹೇಳಿಕೊಡುತ್ತೇನೆ–ಎಂದು ಬಹಿರಂಗವಾಗಿ ತಾವೇ ಪ್ರಕಟನೆ ಮಾಡಿ ಕೊಚ್ಚಿಕೊಳ್ಳುತ್ತಿದ್ದರೆ, ಖ್ಯಾತಿ, ಲಾಭ, ಪೂಜೆ–ಇವುಗಳನ್ನೇ ಬಯಸಿ ಶಿಷ್ಯರ ಸಂಖ್ಯೆಯನ್ನು ಕೂಡಿಸುವವರೆಂದು ನಿಮಗೆ ತೋರಿದರೆ, ಅಂಥವರಿಂದ ದೂರ ಇರಬೇಕು. ನೀವು ಕೇಳಿದ ಪ್ರಶ್ನೆಗೆ ತೊಡಕನ್ನು ಬಿಚ್ಚುವ ಪರಿಹಾರವನ್ನು ಹೇಳಿದರೆ, ಅವರು ಮಾತನಾಡದೆ ಇದ್ದರೂ ಅವರ ಸನ್ನಿಧಿಯಲ್ಲಿ ನಿಮ್ಮ ಮನಸ್ಸಿಗೆ ಶಾಂತಿಯು ಬರುವದು ಕಂಡು ಬಂದರೆ, ಅವಶ್ಯವಾಗಿ ಅವರನ್ನು ಗುರುಗಳನ್ನಾಗಿ ಆರಿಸಿಕೊಳ್ಳಿರಿ.

ಹೇಗೇ ಆಗಲಿ, ಅವರ ಪರಿಚಯವನ್ನು ಮಾಡಿಕೊಂಡ ಸ್ವಲ್ಪ ಕಾಲವಾದ ಬಳಿಕವೇ ನಿಜವನ್ನು ಗೊತ್ತುಮಾಡಿಕೊಳ್ಳಬೇಕು. ಅವರ ಅಂತರಂಗ ಬಹಿರಂಗ ವರ್ತನೆಯನ್ನು ನೀವು ನಿರೀಕ್ಷಿಸಿ ಪರೀಕ್ಷಿಸಿಕೊಂಡು ನಿಮಗೆ ಆಗುವ ಅನುಭವದಿಂದಲೇ ಅವರ ಬೆಲೆಯನ್ನು ಒರೆಹಚ್ಚಬೇಕಾಗುವದೆಂಬುದನ್ನು ಮರೆಯದೆ ಇರಿ. ಭಗವಂತನು ನಿಮಗೆ ಅಪರಂಜಿಯ ಸ್ವಭಾವದ ಗುರುಗಳನ್ನು ತೋರಿಸಿಕೊಡಲೆಂದು ಹಾರೈಸುತ್ತೇನೆ.

## 262. ರಾಮಾಯಣ ಮಹಾಭಾರತಗಳು

### (ಆಗಸ್ಟ್ 1968)

*ನೀವು ಕೇಳಿರುವ ಪ್ರಶ್ನೆಯಿಂದ ನನಗೆ ಸ್ವಲ್ಪ ಆಶ್ಚರ್ಯವೇ ಆಯಿತು. ಪ್ರಪಂಚದಲ್ಲೆಲ್ಲ ಅತ್ಯಂತ ದೊಡ್ಡವಾಗಿರುವ ಇತಿಹಾಸಗ್ರಂಥಗಳನ್ನು ಅತ್ಯಂತ ಪುರಾತನ ಕಾವ್ಯಗಳೆಂಬ ದೃಷ್ಟಿಯಿಂದ ನೋಡಿದರೂ ಅವಶ್ಯವಾಗಿ ಎಲ್ಲರೂ ಓದಿ ಅಥವಾ ಶ್ರವಣ ಮಾಡಿ ತಿಳಿದುಕೊಳ್ಳಬೇಕಾದದ್ದು. ಅವಕ್ಕೆ ಈಗಾಗಲೇ ಇಂಗ್ಲೀಷು ಭಾಷೆಯ ಅನುವಾದವಾಗಿರುತ್ತದೆ. ರಷ್ಯ ದೇಶದವರು ಕೂಡ ಅವುಗಳಲ್ಲಿರುವ ನೀತಿಯ ದೃಷ್ಟಿಯಿಂದ ಭಾಷಾಂತರಿಸಿಕೊಂಡಿರುತ್ತಾರೆಂದು ಕೇಳಿದ್ದೇನೆ. ಹೀಗಿರುವಲ್ಲಿ 'ನಿನ್ನ ರಾಮಾಯಣವನ್ನು ಬಿಚ್ಚಬೇಡ!' 'ಈ ರಾಮಾಯಣವನ್ನೆಲ್ಲ ಕೇಳುವವರು*

*ಯಾರು?' ಎಂಬ ಮೂಢರ ಗಾದೆಗಳನ್ನು ಉದಾಹರಿಸಿ 'ರಾಮಾಯಣ ಮಹಾಭಾರತಗಳಿಗಿಂತ ಈಚಿನ ಇತಿಹಾಸಗಳನ್ನು ಓದುವದೇ ಮೇಲಲ್ಲವೆ?' ಎಂದು ಕೇಳಿರುತ್ತೀರಿ.*

ಐತಿಹಾಸಿಕ ಪುರುಷರ ಜೀವನ ಚರಿತ್ರೆಗಳು, ಬೇರೆಬೇರೆಯ ದೇಶದ ಇತಿಹಾಸಗಳು—ಇವೆಲ್ಲ 'ದೇಶಾಭಿಮಾನಿ'ಗಳೆಂದು ಹೇಳಿಕೊಳ್ಳುವವರು ಬರೆದ ಗ್ರಂಥಗಳು. ದೇಶಗಳ ಇತಿಹಾಸದಲ್ಲಿ ರಾಜರುಗಳು, ರಾಷ್ಟ್ರಾಧಿಕಾರಿಗಳು—ಇವರ ವಂಶಾವಳಿ, ಅವರ ಕಾಲದಲ್ಲಿ ಆದ ಯುದ್ಧಗಳು, ದೇಶದ ಭಾಗವನ್ನು ಗೆದ್ದುಕೊಂಡ ಅಥವಾ ಶತ್ರುಗಳಿಗೆ ಸೋತು ಕೊಟ್ಟ ಕಥೆ—ಈ ಘಟನೆಗಳ ಕಾಲವೇ ಮುಂತಾದವುಗಳ ವಿವರವಿರುತ್ತದೆಯೇ ಹೊರತು ಓದುವವರಿಗೆ ಆಗಬಹುದಾದ ಯಾವ ಹೆಚ್ಚಿನ ಲಾಭನಷ್ಟಗಳನ್ನೂ ಕಾಣೆ. ಅಥವಾ ಸ್ವಾರ್ಥಪರರು ಬರೆದ 'ಇತಿಹಾಸಗಳಲ್ಲಿ' ಎಷ್ಟೋ ಕಟ್ಟು ಕಥೆಗಳು ಸೇರಿದ್ದು ದೇಶದೇಶಗಳಿಗೆ ಪರಸ್ಪರ ದ್ವೇಷವನ್ನುಂಟು ಮಾಡುತ್ತಿರುತ್ತವೆ. ಸ್ಕೂಲುಗಳಲ್ಲಿ ಓದುವ 'ಚರಿತ್ರೆ'ಗಳಲ್ಲಿ ಕಲ್ಪನೆಗಳು ಎಷ್ಟೊಂದು ಇವೆಯೆಂಬುದನ್ನು ಇತ್ತೀಚೆಗೆ ಶೋಧನೆ ಮಾಡಿರುವದು ನಿಮಗೆ ತಿಳಿದೇ ಇದೆಯಷ್ಟೆ?

ರಾಮಾಯಣಮಹಾಭಾರತಗಳಲ್ಲಿ ನಿಜವಾಗಿ ನಡೆದ ಕೆಲವು ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಧರ್ಮ, ನೀತಿ, ತತ್ತ್ವ—ಇವುಗಳ ರಹಸ್ಯವನ್ನು ಹೊರಗೆಡಹುವ ಪ್ರಯತ್ನವನ್ನು ಮಾಡಿರುತ್ತದೆ. ಅವು ಬರಿಯ ಕಥೆಗಳಲ್ಲ, ವೈದಿಕ ಸಂಸ್ಕೃತಿಯ ಕೆಚ್ಚನ್ನು ಓದುಗರಿಗೆ ತೋರಿಸಿಕೊಡುವ ಶಾಶ್ವತವಾದ ಶಿಲಾಶಾಸನಗಳಾಗಿರುತ್ತವೆ. ರಾಮಾಯಣಕ್ಕೆ ಕೇಂದ್ರವಾಗಿರುವ 'ರಾಮ', ಭಾರತಕ್ಕೆ ಕೇಂದ್ರವಾಗಿರುವ 'ಕೃಷ್ಣ'—ಇವರು ಬರಿಯ ದೇಶದ ವೀರರೆಂಬ ಕಾರಣದಿಂದ ಅವರ ಸುತ್ತಲೂ ಕಲ್ಪನಾ ಕಥೆಗಳನ್ನು ಕವಿಗಳು ಹೆಣೆದಿರವದಿಲ್ಲ. ವಾಲ್ಮೀಕಿ ಮುನಿಗಳೂ ವ್ಯಾಸರೂ ಋಷಿಗಳು. ಅಂಶಪುರುಷರು, ಅವರು ಶ್ರೀರಾಮ, ಶ್ರೀ ಕೃಷ್ಣ—ಎಂಬ ಭಗವದವತಾರಗಳ ರಹಸ್ಯವನ್ನು ಅನುಭವಕ್ಕೆ ತಂದುಕೊಂಡು ಜನರಿಗೆ ಉಪದೇಶ ಮಾಡಿರುತ್ತಾರೆ. ಸನಾತನಿಗಳಿಗೆ ರಾಮ, ಕೃಷ್ಣ—ಎಂಬಿವು ಜಪಿಸುವ ನಾನು ಮಂತ್ರಗಳಾಗಿವೆ. ಶ್ರೀರಾಮ, ಶ್ರೀಕೃಷ್ಣ—ಇವರುಗಳನ್ನು ಕಥಾನಾಯಕರಾಗಿ ಕಲ್ಪಿಸಿಕೊಂಡು ಇವರ ದಿವ್ಯಚರಿತ್ರೆಯನ್ನು ಮನೋರಂಜಕವಾಗುವಂತೆ ವರ್ಣಿಸಿ ಮೂರು ಕಾಲಕ್ಕೂ ಅನ್ವಯಿಸುವ ಶಾಶ್ವತವಾದ ತತ್ತ್ವಗಳನ್ನು ತಮ್ಮ ಗ್ರಂಥಗಳಲ್ಲಿ ಹುದುಗಿಸಿರುತ್ತಾರೆ, ಆ ಋಷಿಗಳು!

ನಮ್ಮ ಬಾಲಕಬಾಲಕಿಯರಿಗೆ ರಾಮಾಯಣಮಹಾಭಾರತಗಳ ಸಾರವನ್ನು ಅವರವರ ವಯಸ್ಸಿಗೆ ಮತ್ತು ಮನಸ್ಸಿನ ಹಂತಕ್ಕೆ—ತಕ್ಕಂತೆ ಬೋಧಿಸುವ ಗ್ರಂಥಗಳನ್ನು ನಾವು ಪ್ರಕಟಿಸಿ ದೇಶದಲ್ಲೆಲ್ಲ ಹಂಚಿದರೆ ಸನಾತನ ಧರ್ಮಿಗಳಿಗೆ ದೇಶಾಭಿಮಾನ, ನಮ್ಮ ಸಂಸ್ಕೃತಿಯಲ್ಲಿ ಅಭಿಮಾನ, ಧರ್ಮದಲ್ಲಿ ಆಸಕ್ತಿ ಈಶ್ವರಭಕ್ತಿ ವೇದಾಂತತತ್ತ್ವದ

ತಿಳಿವಳಿಕೆ–ಇವಿಷ್ಟೂ ದೊರಕುವವು. ಪಾಶ್ಚಾತ್ತ್ಯರ ಅನುಕರಣೆಯಿಂದ ನಮ್ಮವರು ನೀತಿಬಾಹಿರವಾಗಿ ದೇಶದ ನೆಮ್ಮದಿಗೆ ಭಂಗವನ್ನುಂಟುಮಾಡುವ ಅಪಾಯವೂ ತಪ್ಪುವದು.

ಈಗಿನ ಕಾಲದ ವಿದ್ಯಾಭ್ಯಾಸಕ್ರಮದಲ್ಲಿ ಯಾವ ಮಾರ್ಪಾಡನ್ನು ಮಾಡಬೇಕೆಂದು ದೇಶದ ನಾಯಕರನೇಕರು ಚಿಂತಿಸುತ್ತಿರುವರು. ಧರ್ಮಾರ್ಥಕಾಮಗಳನ್ನು ಸಮರವಾಗಿ ಮಾಡುವ ವಿದ್ಯೆಯನ್ನು ತರುಣರಿಗೆ ಕಲಿಯಿಸಿದರೆ ನಿಶ್ಚಯವಾಗಿ ಇಹಪರಗಳಿಗೆ ಸಾಧನವಾದ ವಿದ್ಯೆಯನ್ನು ಕಲಿಸಿದಂತೆ. ಅದಕ್ಕೆ ರಾಮಾಯಣ ಮಹಾಭಾರತಗಳ ತಿಳಿವಳಿಕೆಯು ಎಷ್ಟರ ಮಟ್ಟಿಗೆ ಸಹಾಯಕವಾಗಿದಾವೆಂಬುದನ್ನು ಅವುಗಳನ್ನು ಓದಿ ಅರ್ಥವನ್ನು ಗ್ರಹಿಸಿರುವ ಜ್ಞಾನವೃದ್ಧರು ಮಾತ್ರ ಹೇಳಬಲ್ಲರು.

ರಾಮಾಯಣವನ್ನು ಶ್ರವಣ ಮಾಡಿಸುವಾಗ ಪುರಾಣಿಕರು ಪಠಿಸುವ ವಾಕ್ಯವನ್ನು ನೀವು ಎಂದಾದರೂ ಕೇಳಿರುತ್ತೀರಾ? ಆ ವಾಕ್ಯದ ಅರ್ಥವು ಹೀಗಿರುತ್ತದೆ: ''ಸತ್ಪುರುಷರಿಗೆ ಸ್ವಸ್ತಿಯಾಗಲಿ, ಸನ್ಮಂಗಳಗಳು ಆಗಲಿ! ಒಂದೊಂದು ಶ್ಲೋಕವನ್ನು ಓದಿದರೂ ಶ್ರವಣ ಮಾಡಿದರೂ ಕಲಿಕೃತವಾದ ಕಲ್ಮಷಗಳನ್ನೆಲ್ಲ ನೀಗುವ ಹೆಚ್ಚಿನ ಸಾಮರ್ಥ್ಯವುಳ್ಳ ವಾಲ್ಮೀಕಿರಚಿತವಾದ ಶ್ರೀಮದ್ರಾಮಾಯಣದಲ್ಲಿ ಇಂದಿನ ಕಥೆಯನ್ನು ಪ್ರಾರಂಭಿಸುವಾಗ ಹಿಂದಿನಕಥೆಯ ಸಾರವನ್ನು ಹೇಳುತ್ತೇನೆ.'' ಸ್ವಾರ್ಥದಿಂದ ಮನುಷ್ಯರಿಗೆ ಉಂಟಾಗುತ್ತಿರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳ ಫಲವಾಗಿ ಈ ಯುಗದ ಜನರಲ್ಲಿ ಪಾಪವು ಹೆಚ್ಚುತ್ತಲೇ ಇರುವದು. ರಾಮಾಯಣದಂಥ ಪವಿತ್ರಗ್ರಂಥಗಳ ಪಠನಶ್ರವಣದಿಂದ ಇವು ತೊಲಗುವವೇ ಇಲ್ಲವೆ, ಎಂಬುದನ್ನು ಅವರವರೇ ಅನುಭವದಿಂದ ಗೊತ್ತುಪಡಿಸಿಕೊಳ್ಳಬೇಕು.

## 263. ಸದಾಚಾರ

### (ಸೆಪ್ಟೆಂಬರ್ 1968)

*ನಿಮ್ಮ ಪತ್ರವನ್ನು ಓದಿಕೊಂಡೆನು. 'ಮಡಿಮೈಲಿಗೆ, ಎಂಜಲುಮುಸುರೆ, ಜಾತಿಕುಲ' ಎಂದು ಹಾರಾಡುವ ಹಳೆಯ ಕಂದಾಚಾರದ ಜನರು ಈ ಇಪ್ಪತ್ತನೆಯ ಶತಮಾನದಲ್ಲಿಯೂ ಇರುತ್ತಾರೆ. ಜನರಲ್ಲಿ ಪರಸ್ಪರವೈಷಮ್ಯವನ್ನು ಬಿತ್ತಿ ಮನಸ್ಸಿಗೆ ಕ್ಲೇಶವನ್ನು ಮಾಡುವದೊಂದನ್ನು ಬಿಟ್ಟರೆ ಇಂಥ ಜನರಿಂದ ಸಮಾಜಕ್ಕೆ ಯಾವ ಸೇವೆಯಾದೀತು? ತಾವು ತಮ್ಮ ಅಭಿಪ್ರಾಯವನ್ನು ಬರೆದು ಸ್ಪಷ್ಟವಾಗಿ ಇಂಥ ನಡತೆಯನ್ನು ಖಂಡಿಸಿದರೆ ದೊಡ್ಡ ಲೋಕೋಪಕಾರವಾದೀತು. ಅಂತರಂಗ*

*ಶುದ್ಧಿಯಿಂದ ಆತ್ಮವಿಚಾರವನ್ನು ಮಾಡುವದನ್ನು ಬಿಟ್ಟು ಇಂಥ ಕ್ಷುದ್ರವಿಷಯಗಳನ್ನು ದೊಡ್ಡದು ಮಾಡಿಕೊಂಡು ಸರ್ವಸಮತಾಬುದ್ಧಿಗೆ ಅಡ್ಡಿಯಾಗಬಹುದೆ? ಈ ವಿಷಯಕ್ಕೆ ತಮ್ಮ ನಿಜವಾದ ಅಭಿಪ್ರಾಯವನ್ನು ಪ್ರಕಟಿಸಿ ಉಪಕಾರ ಮಾಡಬೇಕು'* ಎಂದು ಬರೆದಿರುತ್ತೀರಿ.

ಈ ನಮ್ಮ ಭಾರತದೇಶದವರೆಲ್ಲರೂ ಮತವೈಷಮ್ಯವನ್ನು ಕಿತ್ತೊಗೆದು ನಾವೆಲ್ಲರೂ ಭಾರತೀಯರೇ ಎಂಬ ವಿಶಾಲಭಾವನೆಯನ್ನಿಟ್ಟುಕೊಂಡರೆ ಎಲ್ಲರಿಗೂ ಶ್ರೇಯಸ್ಸಾದೀತು–ಎಂಬುದು ನಿಜ. ಜನರಲ್ಲಿ ಪರಸ್ಪರದ್ವೇಷದ ಬೀಜವನ್ನು ಬಿತ್ತುವವರು ಸಮಾಜಕ್ಕೆ ಶತ್ರುಗಳೇ ಎಂಬುದಕ್ಕೆ ಯಾವ ಸಂಶಯವೂ ಇಲ್ಲ. ಅಧ್ಯಾತ್ಮದೃಷ್ಟಿಯಿಂದ ನೋಡಿದರಂತೂ ಸಾಧಕನಾದವನು ಸರ್ವರಲ್ಲಿಯೂ–ಮನುಷ್ಯರಲ್ಲಿಯೇ ಎಕೆ? ಸರ್ವಪ್ರಾಣಿಗಳಲ್ಲಿಯೂ–ಒಬ್ಬ ಪರಮಾತ್ಮನೇ ಏಕರೂಪನಾಗಿರುತ್ತಾನೆಂಬ ಭಾವನೆಯನ್ನೇ ಅಳವಡಿಸಿಕೊಳ್ಳುವದು ಒಳ್ಳೆಯದು. **'ಸಮಂ ಸರ್ವೇಷು ಭೂತೇಷು ತಿಷ್ಠನ್ತಂ ಪರಮೇಶ್ವರಮ್ । ವಿನಶ್ಯತ್ಸ್ವವಿನಶ್ಯನ್ತಂ ಯಃ ಪಶ್ಯತಿ ಸ ಪಶ್ಯತಿ॥'** ಸರ್ವಭೂತಗಳಲ್ಲಿಯೂ ಸಮನಾಗಿಯೇ ಇದ್ದುಕೊಂಡಿರುವ, ಆ ಪ್ರಾಣಿಗಳು ನಾಶವಾದರೂ ತಾನು ನಾಶವಾಗದೆ ಇರುವ ಪರಮೇಶ್ವರನನ್ನು ಕಂಡವನೇ ತತ್ತ್ವವನ್ನು ಕಂಡವನು– ಎಂದು ಭಗವಂತನೇ ಹೇಳಿರುತ್ತಾನೆ. ಇನ್ನೊಂದುಕಡೆಯಲ್ಲಿ **'ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ। ಶುನಿ ಚೈವ ಶ್ವಪಾಕೇ ಚ ಪಣ್ಡಿತಾಃ ಸಮದರ್ಶಿನಃ॥'** (5–18) ಎಂದು ಅದೇ ಭಗವಂತನೇ ಹೇಳಿರುತ್ತಾನೆ. ಈ ಶ್ಲೋಕವನ್ನು ನೀವೂ ನಿಮ್ಮ ಪತ್ರದಲ್ಲಿ ಉದಾಹರಿಸಿರುತ್ತೀರಿ.

ಇಲ್ಲಿ ಒಂದು ಮಾತು: 'ನಾನು ಮಡಿ, ನೀವೆಲ್ಲಾ ಮೈಲಿಗೆ' ಎಂದು ಮಿಥ್ಯಾಭಿಮಾನ ದಿಂದ ಮತ್ತೊಬ್ಬರನ್ನು ಹಂಗಿಸುವ ದುರಭಿಮಾನವು ಯಾರಿಗೂ ಒಪ್ಪಿಲ್ಲ. 'ಇವನು ಬ್ರಾಹ್ಮಣ, ಬ್ರಾಹ್ಮಣೇತರ; ಇವನು ಉಚ್ಚಜಾತಿಯವನು, ಅವನು ನೀಚಜಾತಿಯವನು' ಎಂದು ಮೇಲುಕೀಳುಭಾವನೆಯಿಂದ ಜನರಲ್ಲಿ ತಾರತಮ್ಯವನ್ನು ಕಲ್ಪಿಸುತ್ತಾ ರಾಗದ್ವೇಷಗಳನ್ನು ಬೆಳೆಯಿಸಿಕೊಳ್ಳುವದಂತೂ ಹೀಗೆ ಬೆಳೆಯಿಸಿಕೊಳ್ಳುವವರಿಗೇ ಅಶ್ರೇಯಸ್ಸಿಗೆ ಕಾರಣ. ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆದರೆ ಹಾಗೆಂದು, ತನಗೆ ಸಾಧ್ಯವಿದ್ದರೂ ಮೈಲಿಗೆಯನ್ನೇ ಇಟ್ಟುಕೊಂಡು ಶುಚಿಯಾಗದವನು, ಎಂಜಲು ಮುಸುರೆಗಳನ್ನು ತಿನ್ನುತ್ತಾ 'ಎಂಜಲೆಂದರೇನು? ಮುಸುರೆಯಾದರೇನು?' ಎಂದು ಅಸಡ್ಡೆಯಿಂದ ಕೊಳಕನಾಗಿರುವದರಲ್ಲಿಯೇ ಹೆಮ್ಮೆಯನ್ನು ತೋರಿಸುವವನೂ ಎಂದಿಗೂ ಸಮಾಜ ಸೇವಕನಾಗಲಾರನು.

ಒಬ್ಬ ಮನುಷ್ಯನು ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಸ್ನಾನ ಮಾಡುತ್ತಿದ್ದನು. ಅಗಸರಿಗೆ ಮಡಿ ಮಾಡುವದಕ್ಕೆಕೊಟ್ಟ ಬಟ್ಟೆಗಳನ್ನು ಇನ್ನೊಂದು ತಂಡದ ಬಟ್ಟೆ ಮನೆಗೆ

ಬರುವವರೆಗೂ, ಒಗೆದುಕೊಳ್ಳದೆ ಹಾಕಿಕೊಂಡು ಆ ಉಡುಪನ್ನೇ ಊಟ, ಕ್ಷೌರ, ಮಲಮೂತ್ರವಿಸರ್ಜನೆ–ಮುಂತಾದವುಗಳ ಕಾಲಕ್ಕೂ ಬಳಸುತ್ತಿದ್ದು ಯಾರಾದರೂ ಶುಚಿತ್ವದ ವಿಷಯಕ್ಕೆ ಮಾತನಾಡಿದರೆ ರೇಗುತ್ತಿದ್ದನು. ಸ್ನಾನಮಾಡಿ ಶುಚಿಯಾಗಿರುವವರ ಬಳಿಗೆ ಮದ್ಯಮಾಂಸಾದಿಗಳ ಸೇವನೆಯಿಂದ ನಾರುವ ಮುಖದವರನ್ನು ಕರೆತಂದು 'ನಿಮಗೆ ಸಮತಾಬುದ್ಧಿಯಿಲ್ಲ; ನೀವು ಸಮಾಜವೈರಿಗಳು!–ಎಂದು ಹಂಗಿಸುತ್ತಿದ್ದನು. ಅವನನ್ನು 'ಆಸುರಸಂಪತ್ತಿನವರಲ್ಲಿ ಶೌಚವಾಗಲಿ, ಆಚಾರವಾಗಲಿ ಇರುವದೇ ಇಲ್ಲ' ಎಂದಿರುವ ಭಗವಂತನ ನುಡಿಗೆ ಉದಾಹರಣೆಯೆನ್ನದೆ ಬೇರೆ ಏನೆನ್ನುವದಕ್ಕಾದೀತು? ಈ ವಿಷಯವನ್ನು ಆಲೋಚಿಸಿ ನಿಮ್ಮ ಅಭಿಪ್ರಾಯವನ್ನು ಇನ್ನೊಮ್ಮೆ ನನಗೆ ಪತ್ರದ ಮೂಲಕ ತಿಳಿಯಿಸಿರಿ.

ಇನ್ನೊಂದು ಮಾತು: ಶರೀರವನ್ನು ಕೊಳೆಯಿಲ್ಲದಂತೆ ಇಟ್ಟುಕೊಳ್ಳುವದರ ಆವಶ್ಯಕತೆಯನ್ನು ಕಂಡುಕೊಂಡವರಲ್ಲಿಯೂ ಹಲವರು ಮನಸ್ಸನ್ನು ಕೊಳೆಯಾಗಿಯೇ ಇಟ್ಟುಕೊಂಡಿರುತ್ತಾರೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ–ಎಂಬ ಕೊಳೆಗಳು ನಮಗೂ ಅರಿಯದಂತೆ ನಮ್ಮ ಮನಸ್ಸಿನಲ್ಲಿ ಬಂದು ಸೇರಿಕೊಳ್ಳುತ್ತಲೇ ಇರುವವು. ಅವುಗಳನ್ನು ಶುಚಿಗೊಳಿಸಿಕೊಳ್ಳದೆ ಇರುವವರು ಹೆಚ್ಚಿದಂತೆಲ್ಲ ಸಮಾಜದಲ್ಲಿ ಕೊಳಕು ಉಂಟಾಗುವದು, ಒಗ್ಗಟ್ಟು ತಪ್ಪುವದು. ಅಂಥ ಜನಾಂಗಕ್ಕೆ ವಿನಾಶವು ಕಟ್ಟಿಟ್ಟ ಬುತ್ತಿಯಾಗುವದು. ಆದ್ದರಿಂದ ಶರೀರದ ಮಡಿಮೈಲಿಗೆಯ ಮಲದಂತೆ ವಾಙ್ಮನಸ್ಸುಗಳ ಮಡಿಮೈಲಿಗೆಗಳ ವಿಚಾರವನ್ನು ಮಾಡುತ್ತಿರುವದೂ ಶ್ರೇಯಸ್ಕರವಾಗುವದು. ಶುಚಿಯಾದ ದೇಹದಂತೆ ಶುಚಿಯಾದ ನುಡಿಯನ್ನೂ ಶುಚಿಯಾದ ವಿಚಾರಗಳ ಮನಸ್ಸನ್ನೂ ಸಂಪಾದಿಸಿಕೊಳ್ಳುವದು ಇನ್ನೂ ಹೆಚ್ಚು ಅವಶ್ಯ. ಇದರ ವಿಷಯದಲ್ಲಿ ನಿಮಗೆ ಮತ್ತೊಂದು ಪತ್ರವನ್ನು ಬರೆಯಬೇಕೆಂದಿರುವೆನು.

## 264. ಅಧ್ಯಾತ್ಮವಿಚಾರಸಂಘಗಳು

### (ಅಕ್ಟೋಬರ್ 1968)

*ನಿಮ್ಮ ಪತ್ರವು ತಲುಪಿತು. 'ಇಲ್ಲಿ ನಾವು, ಕೆಲವರು ತರುಣರು, ಅಧ್ಯಾತ್ಮಜ್ಞಾನದ ವಿಚಾರದಲ್ಲಿ ನಿರತನಾಗಿರಬೇಕೆಂಬ ಸಂಕಲ್ಪದಿಂದ ಒಂದು ಸಂಘವನ್ನು ಏರ್ಪಡಿಸಿಕೊಂಡಿದೇವೆ; ನಮ್ಮಲ್ಲಿ ಕೆಲವರು ಕಾಲೇಜು ಹೈಸ್ಕೂಲುಗಳ ವಿದ್ಯಾರ್ಥಿಗಳು; ಪ್ರತಿ ಭಾನುವಾರವೂ ಒಂದು ಕಡೆ ಸೇರಿ ಯಾವದಾದರೊಂದು ಅಧ್ಯಾತ್ಮವಿಷಯವನ್ನು ಕುರಿತು ಚರ್ಚಿಸುತ್ತೇವೆ. ಆಗಾಗ್ಗೆ ಇಲ್ಲಿಗೆ ಬರುವ ಸಾಧುಸಂತರು, ವಿದ್ವಾಂಸರು–ಮೊದಲಾದ ಮಾರ್ಗದರ್ಶಿಗಳ ಸಹಾಯವನ್ನು*

*ತೆಗೆದುಕೊಳ್ಳುವದಕ್ಕೆ ಅವಕಾಶವನ್ನು ಕಲ್ಪಿಸಿಕೊಂಡು ಅವರಿಂದ ಭಾಷಣವನ್ನು ಮಾಡಿಸಿ ನಮಗೆ ಉಂಟಾದ ಸಂಶಯಗಳನ್ನು ಅವರ ಮುಂದೆ ಇಟ್ಟು ಉತ್ತರವನ್ನು ಪಡೆಯುತ್ತಾ ಇದೇವೆ. ಇದರ ಜೊತೆಗೆ ಬಹಿರಂಗವಾಗಿ ಆಗುವ ಮಹಾತ್ಮರ ಉಪದೇಶಭಾಷಣಗಳನ್ನು ಕೇಳುವ ಅಭ್ಯಾಸವನ್ನೂ ಇಟ್ಟುಕೊಂಡಿರುತ್ತೇವೆ. ನಮ್ಮ ಸಂಘವು ಕೈಕೊಳ್ಳಬಹುದಾದ ಸಾಧನಗಳ ಬಗ್ಗೆ ಸೂಚನೆಗಳನ್ನು ಕೊಟ್ಟು ಉಪಕಾರಮಾಡಬೇಕು' ಎಂದು ಬರೆದಿರುತ್ತೀರಿ.*

ವಿದ್ಯಾರ್ಥಿಗಳಾದವರು ಅಧ್ಯಾತ್ಮವಿಚಾರಕ್ಕೂ ಅವಕಾಶಕಲ್ಪಿಸಿಕೊಳ್ಳಬೇಕೆಂಬ ಯೋಚನೆ ನಿಮಗೆ ಹುಟ್ಟಿದ್ದು ಪ್ರಶಂಸನೀಯವೇ ಸರಿ. ಈಗಿನ ವಿದ್ಯಾಶಾಲೆಗಳಲ್ಲಿ ಕೆಲವು ಬುದ್ಧಿಪ್ರಧಾನವಾದ ವಿಚಾರಗಳು, ಶರೀರದಾರ್ಢ್ಯಕ್ಕೆ ಅವಶ್ಯವಾದ ಆಟಪಾಠಗಳು–ಇಷ್ಟಕ್ಕೆ ಮಾತ್ರ ಏರ್ಪಾಡಿದ್ದು ಧರ್ಮ, ನೀತಿ, ಅಧ್ಯಾತ್ಮಜ್ಞಾನ–ಮುಂತಾದ ವಿಷಯಗಳಿಗೆ ಸ್ವಲ್ಪವೂ ಅವಕಾಶವಿಲ್ಲದೆ ಇರುವದು ಬಹಳ ಶೋಚನೀಯವಾಗಿದೆ. ಮುಖ್ಯವಾಗಿ ಹಿಂದುಗಳಿಗೆ ಧಾರ್ಮಿಕಶಿಕ್ಷಣವು ಸ್ವಲ್ಪವೂ ಸಿಕ್ಕುತ್ತಿಲ್ಲ. ಸನಾತನ ಧರ್ಮವನ್ನವಲಂಬಿಸಿದವರ ಕುಟುಂಬಗಳಲ್ಲಿ ಹುಟ್ಟಿರುವ ಬಾಲಕರು ಮನೆಯಲ್ಲಾಗಲಿ, ಪಾಠಶಾಲೆಗಳಲ್ಲಾಗಲಿ ಧಾರ್ಮಿಕಶಿಕ್ಷಣವು ದೊರೆಯದ್ದರಿಂದ 'ಹೊಟ್ಟೆಬಟ್ಟೆಗಳ ಸಂಪಾದನೆಯ ತಿಳಿವಳಿಕೆಯೇ ವಿದ್ಯೆ' ಎಂಬ ಭಾವನೆಗೆ ಬಲಿಯಾಗುತ್ತಿದಾರೆ. ಆದ್ದರಿಂದ ನೀವು ಅಧ್ಯಾತ್ಮವಿಚಾರಸಂಘವನ್ನು ಏರ್ಪಡಿಸಿಕೊಂಡಿರುವದು ಸಮಯೋಚಿತವಾಗಿದೆ. ಈ ಆಶಾಂಕುರವು ಚೆನ್ನಾಗಿ ಚಿಗುರಿ, ಗಿಡವಾಗಿ, ಹೆಮ್ಮರವಾಗಿ ಬೆಳೆದು ಫಲದಾಯಕವಾಗಲೆಂದು ಹಾರೈಸುತ್ತೇವೆ.

ಅಧ್ಯಾತ್ಮವಿಚಾರವು ಬರಿಯ ತರ್ಕಬುದ್ಧಿಯ ವಿಷಯವೆಂದು ಭಾವಿಸಿಕೊಂಡು ಸಂಘವನ್ನು ಕೇವಲ ಚರ್ಚಾಕೂಟವಾಗಿ (Debating Society) ಮಾರ್ಪಡಿಸಿಕೊಳ್ಳಬಾರದೆಂಬುದು ನನ್ನ ಮೊಟ್ಟಮೊದಲನೆಯ ಸೂಚನೆ. ನೀವು ಮಾಡುತ್ತಿರುವ ಅಧ್ಯಾತ್ಮವಿಚಾರವು ಶ್ರದ್ಧಾಭಕ್ತಿವೈರಾಗ್ಯಾದಿಸಾಧನಗಳ ತಳಹದಿಯಮೇಲೆ ನಿಲ್ಲುವ ಕಟ್ಟಡವಾಗಿರಬೇಕು. ನೀವು ನಿಮ್ಮನಿಮ್ಮ ಮನೆಯಲ್ಲಿ ಬೆಳಗ್ಗೆ ಎದ್ದು ತಾಯಿತಂದೆಗಳಿಗೂ ಹಿರಿಯರಿಗೂ ನಮಸ್ಕಾರಮಾಡುವದು, ನಿಮಗೆ ಇಷ್ಟವಾದ ದೇವತೆಯ–ರಾಮ, ಕೃಷ್ಣ ಶಿವ ಮುಂತಾದವರ–ವರ್ಣಚಿತ್ರಗಳನ್ನು ಇಟ್ಟುಕೊಂಡು ನಮಸ್ಕರಿಸುವದು, ಒಂದೆರಡು ಸ್ತೋತ್ರಗಳನ್ನು ಹೇಳುವ ಅಭ್ಯಾಸ–ಇವನ್ನು ಇಟ್ಟುಕೊಳ್ಳಬೇಕು. ಪಾಠಗಳನ್ನು ಓದುವ ಮುಂಚೆಯೂ ಊಟಉಪಹಾರಾದಿಗಳನ್ನು ಮಾಡುವ ಮುಂಚೆಯೂ ಪರಮೇಶ್ವರನ ಸ್ಮರಣೆಮಾಡುವದನ್ನು ರೂಢಿಗೆ ತಂದುಕೊಳ್ಳಿರಿ. ನಿಮ್ಮ ಸಂಘಗಳು ಸೇರುವಾಗಲೆಲ್ಲ ಆಯಾ ದಿನದ ವಿಚಾರವನ್ನು ಪ್ರಾರಂಭಿಸುವ ಮುಂಚೆ ಭಗವಂತನ ಸ್ತುತಿಯನ್ನು ತಪ್ಪದೆ

ಮಾಡಬೇಕು. ಕೆಲವು ಗೊತ್ತಾದ ದಿನಗಳಲ್ಲಿ ಎಲ್ಲರೂ ಸೇರಿ ಭಗವನ್ನಾಮಕೀರ್ತನೆಯನ್ನು ಮಾಡಬೇಕು.

ಚರ್ಚೆಗೆ ವಿಷಯಗಳನ್ನೂ ಭಾಷಣಕಾರರನ್ನೂ ಆರಿಸಿಕೊಳ್ಳುವಾಗ ಅಧ್ಯಾತ್ಮ ಸಾಧನೆಗೆ ಬೇಕಾದ ವಿಷಯಗಳನ್ನು–ಸ್ನಾನ, ಜಪ, ಪಾರಾಯಣ, ಸ್ತೋತ್ರ, ಧ್ಯಾನ ಇಂಥವುಗಳನ್ನು–ಪಟ್ಟಿಮಾಡಿಟ್ಟುಕೊಂಡು ಅವುಗಳ ವಿಷಯದಲ್ಲಿಯೇ ಸಂಘಕ್ಕೆ ಬರುವ ಹಿರಿಯರಿಂದ ಮತ್ತೆಮತ್ತೆ ಉಪದೇಶವನ್ನು ಪಡೆಯಬೇಕು. ಸಾಧನಗಳನ್ನು ಮಾಡಿ ಭಗವಂತನ ಅನುಗ್ರಹಕ್ಕೆ ಪಾತ್ರರಾದವರು ಸಿಕ್ಕಿದರೆ, ಅವಶ್ಯವಾಗಿ ಅವರಿಂದಲೇ ಕೆಲವು ಉಪದೇಶಗಳನ್ನು ಮತ್ತೆಮತ್ತೆ ಮಾಡಿಸಬೇಕು. ಈಶ್ವರನು ಇದಾನೆ, ಅವನ ಸ್ವರೂಪವೂ ಗುಣವಿಶೇಷಗಳು ಇಂಥವು; ಆತನ ಅನುಗ್ರಹಕ್ಕೆ ಪಾತ್ರರಾಗುವವರಿಗೆ ಇಹಪರಗಳಲ್ಲಿ ಸದ್ಗತಿಯಾಗುತ್ತದೆ–ಎಂಬಿವೇ ಮುಂತಾದ ಆಸ್ತಿಕ್ಯವರ್ಧಕವಾದ ವಿಚಾರಗಳನ್ನು ಕುರಿತ ಉಪದೇಶಗಳನ್ನು ಬಲ್ಲವರಿಂದ ಪಡೆಯುವದೂ ರಾಮಾಯಣ, ಭಾರತ, ಭಾಗವತಾದಿಗಳನ್ನು ಅನುವಾದದಲ್ಲಿಯಾದರೂ ಓದುವದು, ಬೇರೆಬೇರೆಯ ಮತಗಳಲ್ಲಿ ಸುಪ್ರಸಿದ್ಧರಾದ ಆಚಾರ್ಯರುಗಳ ಜೀವನಚರಿತ್ರೆ, ಉಪದೇಶಗಳು– ಇವುಗಳನ್ನೊಳಗೊಂಡಿರುವ ಪುಸ್ತಕಗಳನ್ನು ಸಂಗ್ರಹಿಸಿರುವ ಪುಸ್ತಕಭಂಡಾರವೊಂದನ್ನು ಒಂದು ಕಡೆಯಲ್ಲಿ ಏರ್ಪಡಿಸಿಕೊಳ್ಳುವದೂ ಒಳ್ಳೆಯದು.

ನಿಮಗೆ ಮತ್ತೇನಾದರೂ ಸಂಶಯಗಳು ಬಂದರೆ ಈ ಪತ್ರಿಕೆಯನ್ನು ತರಿಸಿಕೊಳ್ಳುವ ಏರ್ಪಾಡು ಮಾಡಿರಿ. ಅಧ್ಯಾತ್ಮತತ್ತ್ವಜಿಜ್ಞಾಸುಗಳಾದ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ವಿಷಯಗಳಿಗಾಗಿಯೇ ಒಂದೆರಡು ಪುಟಗಳನ್ನು ಮೀಸಲಾಗಿಟ್ಟು ಅವರ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುವದಕ್ಕೆ ಅವಕಾಶವನ್ನು ಸಂಪಾದಕರು ಕಲ್ಪಿಸಿ ಕೊಡುವರು.

## 265. ವಿದ್ಯಾರ್ಥಿಗಳ ಜೀವನ

### (ನವಂಬರ್ 1968)

*ಹಿಂದಿನ ಸಂಚಿಕೆಯಲ್ಲಿ ನಾನು ಬರೆದಿದ್ದ ಪತ್ರವನ್ನು ನೀವು ಒಮ್ಮೆ ಮನಮುಟ್ಟಿ ಓದಿದ್ದೀರೆಂತ ನಂಬಿರುತ್ತೇನೆ. ಆದರಿಂದ ಅಲ್ಪಸ್ವಲ್ಪವಾದರೂ ನಿಮ್ಮ ಜೀವನಮಾರ್ಗಕ್ಕೆ ಕೆಲವು ದಿಗ್ದರ್ಶನಗಳೂ ಸಿಕ್ಕುವವೆಂದು ನನಗೆ ಭರವಸೆ ಇದೆ.*

'ವಿದ್ಯಾರ್ಥಿ' ಎಂಬ ಶಬ್ದಕ್ಕೆ ಅವಿದ್ಯೆಯನ್ನು ನೀಗಿಕೊಂಡು ನಿಜವಾದ ತಿಳಿವನ್ನೇ ಸಂಪಾದಿಸಿಕೊಳ್ಳಬೇಕೆಂದು ಬಿಡದೆ ಹವಣಿಸುತ್ತಿರುವನು ಎಂದು ಅರ್ಥ. ಆದರೆ ಆ

ವಿದ್ಯೆಯು ಯಾವ ವಿಷಯದ್ದಾಗಿರಬೇಕು?—ಎಂಬ ಬಗ್ಗೆ ಅಭಿಪ್ರಾಯ ಭೇದಗಳಿವೆ. ಈಗಿನ ಕಾಲದ ಬೋಧನತಜ್ಞರ ಮತದಂತೆ, ಓದುವದು, ಬರೆಯುವದು, ಲೆಕ್ಕಾಚಾರ, ಭೂಗೋಳಶಾಸ್ತ್ರ, ಪ್ರಪಂಚಪರಿಚಯ, ಮಾನವನ ಇತಿಹಾಸ, ರಾಷ್ಟ್ರಗಳನ್ನು ಆಳುತ್ತಿರುವ ಸರಕಾರಗಳ ಶಾಸನಪದ್ಧತಿ, ಭೌತಿಕವಿಜ್ಞಾನ, ನಾಗರಿಕತೆಯ ಹೆಗ್ಗುರುತುಗಳಾದ ಆರ್ಥಿಕಶಾಸ್ತ್ರ, ನಿತ್ಯ ಜೀವನಕ್ಕೆ ಅವಶ್ಯವಾಗಿ ತಿಳಿಯಬೇಕಾಗಿರುವ ವಾಸ್ತುವಿದ್ಯೆ, ಶಿಲ್ಪವಿದ್ಯೆ, ಜನಾಂಗಗಳಿಗೆ ಇರಬೇಕಾದ ಪರಸ್ಪರವ್ಯವಹಾರಸಂಬಂಧ—ಇಂಥ ವಿಷಯಗಳ ತಿಳಿವಳಿಕೆಯೇ ವಿದ್ಯೆ. ಸ್ವಲ್ಪದರಲ್ಲಿ ಹೇಳಿದರೆ ನಮ್ಮ ಹೊರಗಿನ ಪ್ರಪಂಚಕ್ಕೂ ನಮಗೂ ಇರಬೇಕಾದ ಸಂಬಂಧದ ತಿಳಿವಳಿಕೆಯೇ ವಿದ್ಯೆ.

ಆದರೆ ಇಷ್ಟರಿಂದಲೇ ನಮ್ಮ ವಿದ್ಯೆಯ ಹಸಿವು ಇಂಗುವಂತಿರುವದಿಲ್ಲ. ಬಹು ಪುರಾತನಕಾಲದ ಮಹನೀಯರ ಜೀವನಚರಿತ್ರೆಗಳಿಂದಲೂ ಅವರ ಉಪದೇಶ ದಿಂದಲೂ ಇದಕ್ಕಿಂಥ ಹೆಚ್ಚಾಗಿ ತಿಳಿದುಕೊಳ್ಳಬೇಕಾದ ವಿಷಯಗಳು ಇರುವವೆಂಬುದು ನಮ್ಮ ಸ್ಕೂಲುಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳಿಗೆ ಅದು ಹೇಗೊ, ಕೆಲವರಿಗಾದರೂ, ಮನಸ್ಸಿನಲ್ಲಿ ಮಿಂಚಿ ಬಿಟ್ಟಿರುತ್ತದೆ. ಈಗಿನ ವಿದ್ಯಾಭ್ಯಾಸದ ಹೆಚ್ಚಿನ ಮೆಟ್ಟಿಲುಗಳನ್ನು ಮುಟ್ಟಿ ಪದವೀಧರರಾಗಿ ಅಭ್ಯುದಯಮಾರ್ಗದಲ್ಲಿ ಮುಂದಕ್ಕೆ ಬರುತ್ತಿರುವೆವೆಂದು ಕಂಡುಕೊಂಡ ಬುದ್ಧಿಶಾಲಿಯಾದ ಮಾನವಪ್ರಾಣಿಗಳೊಳಗೆ ಆತ್ಮನೊಬ್ಬನು ಇದಾನೆಂದೇ ತೋರುತ್ತಿರುವದು. ನೀತಿಮತಗಳ ಬೋಧೆಗೆ ಸರ್ಕಾರದವರು ವಿದ್ಯಾಶಾಲೆಗಳಲ್ಲಿ ಯಾವ ಏರ್ಪಾಡನ್ನೂ ಮಾಡಿಕೊಡದೆ ಇರುವದರಿಂದ 'ಜೀವಾತ್ಮನೆಂದರೆ ಯಾವನು, ಅವನಿಗೆ ಪೃಥಿವಿಯ ಮೇಲೆ ಪರಿಮಿತವಾದ ಲೌಕಿಕಜೀವನವನ್ನು ಹೇಗೋ ಸಾಗಿಸಿ ಎಣ್ಣೆಯಾರಿದ ದೀಪದಂತೆ ಮರೆಯಾಗುವದಿಷ್ಟೇ ಜೀವನವೆನಿಸೀತೆ?'—ಎಂಬ ಪ್ರಶ್ನೆಗೆ ಸದುತ್ತರವು ಸಿಕ್ಕಿರುವದಿಲ್ಲ. ಆದ್ದರಿಂದ ನೀವು ನಿಜವಾದ ಅರ್ಥದಲ್ಲಿ ವಿದ್ಯಾರ್ಥಿಗಳೆನಿಸಬೇಕಾದರೆ ಅಧ್ಯಾತ್ಮವಿದ್ಯೆಯ ಮರ್ಮವನ್ನು ತಿಳಿಯಿಸುವ ಉಪನಿಷತ್ತುಗಳನ್ನು ಕುರಿತ ಉಪದೇಶಗಳನ್ನು ಮತ್ತೆಮತ್ತೆ ಶ್ರವಣಮಾಡಬೇಕು. ಮನುಷ್ಯನ ಜೀವಾತ್ಮನು ಈಗ ತಾನಿರುವ ಒಂದೇ ಶರೀರದಲ್ಲಿದ್ದು ಮರೆಯಾಗುವವನಲ್ಲ. ಅವನಿಗೆ ಈ ಜನ್ಮದಲ್ಲಿ ಆಗುತ್ತಿರುವ ವಿಷಯಭೋಗಗಳು, ಶೀತೋಷ್ಣಾದಿವೇದನೆಗಳು, ಅವುಗಳಿಂದಾಗುವ ಸುಖದುಃಖಗಳು—ಇಷ್ಟೇ ಜೀವನಕ್ಕೆ ಎಲ್ಲೆಕಟ್ಟಾಗಿರುವದಿಲ್ಲ. ಈ ಜನ್ಮದಲ್ಲಿ ನಾವು ಮಾಡುವ ಕರ್ಮಗಳಿಗೆ ಹೇಗೆ ಒಳ್ಳೆಯ ಅಥವಾ ಕೆಟ್ಟಫಲಗಳು ಆಗುತ್ತಿರುವವೋ ಹಾಗೆಯೇ ಇಲ್ಲಿ ನಾವು ಇನ್ನೂ ಅನುಭವಿಸದೆ ಇರುವ ಕರ್ಮಫಲಗಳನ್ನು ಲೋಕಾಂತರದಲ್ಲಿಯೂ ಜನ್ಮಾಂತರಗಳಲ್ಲಿಯೂ ಅನುಭವಿಸಲೇಬೇಕಾಗುವದು—ಎಂದು ಶಾಸ್ತ್ರಗಳಲ್ಲಿ

ಹೇಳಿರುವದನ್ನು ನಂಬಿ ಸತ್ಕರ್ಮಗಳನ್ನೇ ಮಾಡುವದು, ನಿಷಿದ್ಧಕರ್ಮಗಳನ್ನು ಬಿಡುವದು–ಇವುಗಳ ವಿಷಯದಲ್ಲಿಯೂ ಎಚ್ಚರಿಕೆಯಿಂದಿರುವದನ್ನು ಅಭ್ಯಾಸಮಾಡಿ ಕಲಿತುಕೊಳ್ಳಬೇಕು. ಇದೇ ನಿಜವಾದ ವಿದ್ಯಾಭ್ಯಾಸ.

ಮನುಷ್ಯನಂತೆ ಮಿಕ್ಕ ಪ್ರಾಣಿಗಳಿಗೂ ಆತ್ಮನಿರುತ್ತಾನೆ. ಪ್ರಾಣಿ ಎಂದರೆ ಪ್ರಾಣಗಳುಳ್ಳವನು; ಜೀವ, ಪ್ರಾಣಿ–ಈ ಎರಡು ಶಬ್ದಗಳಿಗೂ ಒಂದೇ ಅರ್ಥ. ಎಲ್ಲಾ ಜಂತುಗಳಿಗೂ ಎಲ್ಲಾ ಇಂದ್ರಿಯಗಳೂ ಪಟುವಾಗಿರುವದಿಲ್ಲ. ಕೆಲವು ಪ್ರಾಣಿಗಳು ಮನುಷ್ಯನಂತೆಯೇ ಸ್ವಭಾವಸಿದ್ಧವಾದ ರಾಗದ್ವೇಷಗಳಿಂದ ಕೂಡಿದ್ದು ಅನುಕೂಲ ವಾದದ್ದನ್ನು ಬಯಸುವದು, ಪ್ರತಿಕೂಲವಾದದ್ದನ್ನು ಬಿಡುವದು– ಹೀಗೆ ಸ್ವಭಾವದಿಂದಲೇ ನಡೆದುಕೊಳ್ಳುತ್ತಿರುವವು. ಮನುಷ್ಯನಲ್ಲಿರುವ ಒಂದು ವಿಶೇಷವೇನೆಂದರೆ: ಅವನಿಗೆ ಕೂಡಲೆ ಫಲವನ್ನು ಕೊಡುವ ರಾಗದ್ವೇಷಯುಕ್ತವಾದ ಕರ್ಮಗಳೇ ಅಲ್ಲದೆ, 'ನಾಳೆಗೇನು, ನಾಡಿದ್ದಿಗೇನು?' ಎಂಬ ದೂರದೃಷ್ಟಿಯಿದ್ದು ಎಂದಿಗೂ ತನಗೆ ದುಃಖವು ತಟ್ಟಬಾರದು ಎಂಬ ಯೋಚನೆಯಿಂದ ಅದಕ್ಕೆ ತಕ್ಕಂತೆ ತನ್ನ ಮನಸ್ಸನ್ನು ಸಿದ್ಧಪಡಿಸಿಕೊಳ್ಳುವದಕ್ಕೆ ಪ್ರಯತ್ನಿಸಬಲ್ಲವನಾಗಿರುತ್ತಾನೆ. ಆದ್ದರಿಂದಲೇ ಅವನಿಗೆ ಧರ್ಮಾಧರ್ಮಗಳ ವಿವೇಕವನ್ನು ಮಾಡಿಕೊಳ್ಳುವ ಬುದ್ಧಿಶಕ್ತಿಯಿರುತ್ತದೆ. ಅದರಿಂದ ಅತೀಂದ್ರಿಯ ವಿಚಾರವನ್ನು ಮಾಡಿ ಕೊಳ್ಳುವ ಬುದ್ಧಿಶಕ್ತಿಯಿರುತ್ತದೆ. ಆದರಿಂದ ಅತೀಂದ್ರಿಯವಿಚಾರವನ್ನು ಮಾಡುವ ಯೋಗ್ಯತೆ ಇರುತ್ತದೆ. ಇದರಿಂದಲೇ ಅವನು ನಿಜವಾದ–ಅಧ್ಯಾತ್ಮವಿದ್ಯೆಯನ್ನು ಬಯಸುವವನಾಗಿ 'ವಿದ್ಯಾರ್ಥಿ' ಯೆಂಬ ಹೆಸರಿಗೆ ತಕ್ಕವನಾಗುತ್ತಾನೆ. ಓದುಬರಹ, ಲೆಕ್ಕಾಚಾರ, ಈಗಿನ ಜನ್ಮಕ್ಕೆ ಬೇಕಾದ ವಿಷಯಭೋಗಗಳ ಪರಿಚಯ–ಇವುಗಳ ವಿದ್ಯೆಯು ಆ ಅಧ್ಯಾತ್ಮವಿದ್ಯೆಗೆ ಸಾಧನವಾಗಿರುವದರಿಂದ ಅದೂ ಗೌಣಾರ್ಥದಲ್ಲಿವಿದ್ಯೆಯೆನಿಸುತ್ತದೆ.

## 266. ಸರಕಾರಿಯ ನೌಕರಿ

### (ಡಿಸೆಂಬರ್ 1968)

*ನಿಮ್ಮ ಪತ್ರವು ತಲುಪಿರುತ್ತದೆ. 'ನಾನು ಎಷ್ಟೇ ಮನಸ್ಸಿಗೆ ಯುಕ್ತವೆಂದು ತೋರಿದಂತೆ ಕಷ್ಟಪಟ್ಟು ಕೆಲಸ ಮಾಡುತ್ತಿದ್ದರೂ ಇಲ್ಲಿ ನನ್ನನ್ನು ಮೇಲಕ್ಕೇರದಂತೆ ಅಡ್ಡಿ ಮಾಡುವ ಸಂನಿವೇಶಗಳು ಹೆಚ್ಚುತ್ತಿವೆ. ನನಗೆ ಆಗದವರು ಮೇಲಿನ ಅಧಿಕಾರಿಗಳಲ್ಲಿ ಚಾಡಿ ಹೇಳಿ ಅವರ ಮನಸ್ಸನ್ನು ಕೆಡಿಸುತ್ತಾ ಇದಾರೆ. ಈ ಕಾರಣದಿಂದ ನನ್ನ ಮನಸ್ಸಿಗೆ ಶಾಂತಿಯಿಲ್ಲದೇ ಹೋಗುವದರಿಂದ ನನಗೂ ಅರಿವಿಲ್ಲದಂತೆ ಕೆಲವು ತಪ್ಪುಗಳೂ ಆಗುತ್ತಿವೆ. ಇದಕ್ಕೆ ಪರಿಹಾರೋಪಾಯವೇನಾದರೂ ಇದೆಯೆ?' ಎಂದು ಕೇಳಿ ನೀವು ಬರೆದಿರುವ ಪತ್ರವನ್ನು ಪೂರ ಓದಿದೆನು. ಬಹಳ ವ್ಯಥೆಯಾಯಿತು.*

ಅಕಾರಣವಾಗಿ ಹೀಗೆ ಒದಗುವ ಆಪತ್ತುಗಳಿಗೆಲ್ಲ ಭಗವಂತನೇ ಪರಿಹಾರಕನು. ನಾವು ಮಾಡುವ ತಪ್ಪುಗಳಿಗೆ ದುಷ್ಫಲಗಳೂ ಒಳ್ಳೆಯ ಕೆಲಸಗಳಿಗೆ ಸತ್ಫಲವೂ ನಿರ್ವಿಘ್ನವಾಗಿ ಲಭಿಸುವಂತೆ ಮಾಡುವವನು ಆತನೇ. 'ಭಯಕೃದ್ಭಯನಾಶನಃ' ಎಂದು ಭಗವಂತನಿಗೆ ನಾಮಗಳನ್ನು ಬಲ್ಲವರು ಇಟ್ಟಿರುತ್ತಾರೆ.

ನಿಮಗೆ ಉತ್ಸಾಹಭಂಗವಾಗುತ್ತದೆ ಎಂಬ ಕಾರಣದಿಂದ ನೀವು ಈಗ ಮಾಡುತ್ತಿರುವ ಉದ್ಯೋಗದಲ್ಲಿ–ಸ್ವಲ್ಪವೂ ಅನಾಸ್ಥೆಯನ್ನು ತೋರಿಸಬೇಡಿರಿ. 'ದೇವ, ನನ್ನ ಮನಸ್ಸಿಗೆ ಸಮಾಧಾನವನ್ನೂ ನನ್ನ ಸುತ್ತಲೂ ಇರುವವರಿಗೆ ನನ್ನ ವಿಷಯಕ್ಕೆ ಸೌಮನಸ್ಯವನ್ನೂ ಅನುಗ್ರಹಿಸು!' ಎಂದು ಮನಃಪೂರ್ವಕವಾಗಿ ಪ್ರಾರ್ಥನೆಯನ್ನು ಮಾಡುತ್ತಾ ನಿಮ್ಮ ಕೆಲಸವನ್ನು ಎಂದಿನಂತೆ ನಿರಂತರವಾಗಿ ಮಾಡುತ್ತಲೇ ಇರಿ. ಮೇಲಿನ ಅಧಿಕಾರಿಗಳು ಆಡಬಹುದಾದ ಬಿರುನುಡಿಗಳಿಂದ ಸ್ವಲ್ಪವೂ ವಿಷಾದ ಪಡುವದಿಲ್ಲ–ಎಂಬ ಸಂಕಲ್ಪವನ್ನು ಮಾಡಿಕೊಳ್ಳಿ. ಕಾಲಕ್ರಮದಲ್ಲಿ ನಿಮ್ಮ ಹೃದಯದಲ್ಲಿ ಶಾಂತಿ ಸಮಾಧಾನಗಳು ಅಂಕುರಿಸಿ ಚಿಗುರುವವು. ನಿಮ್ಮ ಈ ವರ್ತನದಿಂದಲೇ ನಿಮ್ಮ ಸಹೋದ್ಯೋಗಿಗಳಿಗೂ ಅಧಿಕಾರಿಗಳಿಗೂ ಚಿತ್ತದಲ್ಲಿ ಮಾರ್ಪಾಡಾಗುವದು.

ಭಗವಂತನಲ್ಲಿ ಮನಸ್ಸನ್ನು ಇಟ್ಟುಕೊಂಡು ಕರ್ತವ್ಯವನ್ನು ಮಾಡುವ ಮಾತ್ರದಿಂದಲೇ ಇಂಥ ಅನಿರೀಕ್ಷಿತಫಲವು ಹೇಗಾದೀತೆಂಬ ಶಂಕೆಯನ್ನು ಇಟ್ಟುಕೊಳ್ಳದಿರಿ. ಬಿತ್ತಿದ ಬೀಜದಿಂದ ಗಿಡಮರಹಣ್ಣುಗಳೂ, ಉಂಡ ಆಹಾರದಿಂದ ಹಸಿವು ಇಂಗುವದು, ಶರೀರದಲ್ಲಿ ರಕ್ತಮಾಂಸಾದಿಗಳ ಪುಷ್ಟಿಯಾಗುವದು, ಮನಸ್ಸಿನಲ್ಲಿ ಸಂತೋಷ ವುಂಟಾಗುವದು– ಇವುಗಳೂ ನಮಗೆ ಅರಿಲ್ಲದ ಪ್ರಕಾರದಿಂದಲೇ ಆಗುವಂತೆ, ದೈವಿಕಫಲಗಳೂ ನಿಶ್ಚಿತವಾಗಿ ಆಗುವವು.

## 267. ಜ್ಞಾನಸಾಧನಸಂಘದವರು ಏನು ಮಾಡಬೇಕು?

(ಜನವರಿ 1969)

*ನಿಮ್ಮ ಪತ್ರವು ಬಂದು ತಲುಪಿರುತ್ತದೆ. ನಮಗೆ ಜ್ಞಾನವೇ ಮುಖ್ಯೋದ್ದೇಶವಾಗಿರುತ್ತದೆ; ಆದರ ಉದ್ದೇಶವು ನೆರವೇರುವದಕ್ಕೆ ಬರಿಯ ಉಪನ್ಯಾಸಗಳಿಂದ ಏನು ಪ್ರಯೋಜನ?–ಎಂದು ಸಂಘದವರಾದ ನೀವು ಕೇಳಿರುತ್ತೀರಿ. ಸಂಘದ ಕಾರ್ಯಕಲಾಪಗಳನ್ನು ಯಾವ ರೀತಿ ಮುಂದುವರಿಸಿಕೊಂಡು ಹೋಗಬೇಕೆಂಬುದನ್ನು ಸಂಗ್ರಹವಾಗಿ ತಿಳಿಯಿಸಿಕೊಡಬೇಕು–ಎಂದೂ ಬರೆದಿರುತ್ತೀರಿ.*

ಅಧ್ಯಾತ್ಮಪ್ರಕಾಶ ಪತ್ರಿಕೆಗೆ ನಿಮ್ಮ ಸಂಘದವರು ಒಬ್ಬರೂ ಚಂದಾದಾರರಾಗಿಲ್ಲವೆ? ಆಗಿದ್ದರೆ ಈ ಸಂಪುಟದ ಎರಡನೆಯ ಸಂಚಿಕೆಯಲ್ಲಿ ಬರೆದಿರುವ 'ಅಧ್ಯಾತ್ಮ ವಿಚಾರಸಂಘಗಳು' ಎಂಬ ಲೇಖನವನ್ನು ಇನ್ನೊಮ್ಮೆ ಓದಿ ನೋಡಿರಿ. ಅಲ್ಲಿ ನಿಮ್ಮ ಪ್ರಶ್ನೆಗೆ ಉತ್ತರವಿರುತ್ತದೆ.

ಸಂಘದವರು ಜನತಾಸೇವೆಯಲ್ಲಿ ನಿರತರಾಗಬೇಕೆಂಬ ಹವಣಿಕೆಯನ್ನು ಸದ್ಯಕ್ಕೆ ಕೈಬಿಡುವದು ಒಳ್ಳೆಯದು. ಏಕೆಂದರೆ ಮೊದಲು ತಾವು ಉದ್ಧಾರವಾದವರೇ ಮತ್ತೊಬ್ಬರನ್ನು ಉದ್ಧಾರ ಮಾಡುವದಕ್ಕೆ ಅರ್ಹರಾಗಿರುತ್ತಾರೆ. ನಿಮ್ಮದು 'ಜ್ಞಾನಸಾಧನ' ಸಂಘ; ಜ್ಞಾನಪ್ರಚಾರಕಸಂಘವಲ್ಲ. ಜ್ಞಾನಕ್ಕೆ ಸಾಧನಗಳು ಎರಡು ಬಗೆ. ಉಪನಿಷತ್ತಿನಲ್ಲಿ ಹೇಳಿರವ ವಿವೇಕವೈರಾಗ್ಯ ಶಮದಮಾದಿಗಳು, ಮತ್ತು ಗೀತೆಯಲ್ಲಿ ವಿವರಿಸಿರು ಅಮಾನಿತ್ವಾದಿಗಳು– ಇವು ಮೊದಲನೆಯ ಗುಂಪಿಗೆ ಸೇರಿರುತ್ತವೆ. ಇವು ಅಳವಟ್ಟ ಮೇಲೆ ಶ್ರವಣಮನನಾದಿಗಳೆಂಬ ಮತ್ತೊಂದು ಗುಂಪಿನ ಅಂತರಂಗಸಾಧನಗಳು ಬೇಕಾಗುತ್ತವೆ.

ಈಗ್ಗೆ ನೀವು ಮೊದಲನೆಯ ಮೆಟ್ಟಿಲಿನ ಸಾಧನಗಳನ್ನು ತಿಳಿದುಕೊಂಡು ಅನುಷ್ಠಾನ ಮಾಡುವದು ಅತ್ಯಂತ ಅವಶ್ಯ; ಏಕೆಂದರೆ ಅಧ್ಯಾತ್ಮವಿಚಾರವು ಭೌತಿಕ ವಿಜ್ಞಾನಶಾಸ್ತ್ರದಂತೆ ಕೇವಲ ಬಾಹ್ಯವಸ್ತುಗಳ ಪರೀಕ್ಷಣ ನಿರೀಕ್ಷಣಾದಿಗಳಿಂದ ದಕ್ಕುವದಲ್ಲ. ಈ ಜಗತ್ತಿಗೆಲ್ಲ ಆತ್ಮನಾಗಿರುವ ಭಗವಂತನು ಶ್ರದ್ಧಾಭಕ್ತಿತಾತ್ಪರ್ಯಗಳಿಂದ ತನಗೆ ಶರಣುಬಂದವರಿಗೆ ಮಾತ್ರ ಮೈದೋರುವನು, ಜ್ಞಾನವನ್ನು ಅನುಗ್ರಹಿಸುವನು. ಭಗವದ್ಗೀತೆಯ ಹತ್ತನೆಯ ಅಧ್ಯಾಯವನ್ನು ನೋಡಿ.

ಹಿಂದಿನ ಪತ್ರವನ್ನು ಸಾವಧಾನವಾಗಿ ಓದಿ ನೋಡಿ, ಇದರ ಮೇಲೆ ನಿಮಗೆ ಇನ್ನೇನಾದರೂ ಸಂಶಯವು ತಲೆದೋರಿದರೆ ಬರೆಯಿರಿ. ಅದಕ್ಕೂ ಉತ್ತರವನ್ನು ಬರೆಯುವೆನು.

## 268. ಪರೋಪಕಾರ

### (ಫೆಬ್ರವರಿ 1969)

*ನಿಮ್ಮ ಪತ್ರವು ತಲುಪಿ ವಿಷಯವು ತಿಳಿಯಿತು. "ನಮ್ಮದೊಂದು ಸಣ್ಣ ಹಳ್ಳಿ. ಈ ಊರಿನಲ್ಲಿ ಓದು ಬರಹಬಂದವರು ತಕ್ಕ ಮಟ್ಟಿಗೆ ಇರುತ್ತಾರಾದರೂ ಜನರು ಒಬ್ಬರೊಡನೊಬ್ಬರು ಜಗಳವಾಡುತ್ತಲೇ ಇರುತ್ತಾರೆ. ಆಗಾಗ್ಗೆ ರಾಷ್ಟ್ರದ ವಿಷಯಕ್ಕೆ ಜನರಿಗೆ ತಿಳಿವಳಿಕೆ ಕೊಡುವೆವೆಂಬ ನೆಪದಿಂದ ಬೇರೆ ಬೇರೆಯ ಪಕ್ಷದವರು ಬಂದು ಒಂದು ಪಕ್ಷದವರು ಮತ್ತೊಂದು ಪಕ್ಷದವರನ್ನು*

*ಜರಿಯುವದು, 'ನಮ್ಮ ಪಕ್ಷಕ್ಕೇ ಓಟು (ಮತವನ್ನು) ಕೊಡಿ' ಎಂದು ಕೇಳುವದು–ಹೀಗೆ ನಮ್ಮಗಳ ತಲೆಯನ್ನು ಕೆಡಿಸುತ್ತಿದಾರೆ. ಆಗಾಗ್ಗೆ ಒಬ್ಬೊಬ್ಬರು ಸಾಧುಗಳೊ, ಸಂನ್ಯಾಸಿಗಳೊ ಬರುತ್ತಾರೆ; ಆದರೆ ಅವರ ಉಪದೇಶಗಳು ನಮಗೆ ಅರ್ಥವೇ ಆಗುತ್ತಿಲ್ಲ. ಈ ಸ್ಥಿತಿಯಲ್ಲಿ ನಾವು ಇಹಪರಸುಖಗಳನ್ನು ಪಡೆಯುವದಕ್ಕೆ ಯಾವ ಮಾರ್ಗವನ್ನು ಅನುಸರಿಸಬಹುದು? ನಮ್ಮ ಅಲ್ಪಬುದ್ಧಿಗೆ ಎಟುಕುವ ಯಾವದಾದರೂ ಸಾಧನವಿದ್ದರೆ ತಿಳಿಸಿಕೊಟ್ಟು ಉಪಕಾರ ಮಾಡಬೇಕು'' ಎಂದು ಬರೆದಿರುತ್ತೀರಿ.*

ಹೆಚ್ಚಿನ ಅಧ್ಯಾತ್ಮಸಾಧನೆಯನ್ನು ಮಾಡುವದಕ್ಕೂ ಅಧ್ಯಾತ್ಮವಿಚಾರವನ್ನು ಮಾಡುವ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವದಕ್ಕೂ ಆಗದಿದ್ದರೂ ಎಲ್ಲಕ್ಕೂ ತಳಹದಿಯಾಗಿರುವ ಒಂದು ಅಧ್ಯಾತ್ಮಸಾಧನವಿದೆ. ಅದನ್ನು ಮಾಡಿಕೊಂಡರೆ ಅವಶ್ಯವಾಗಿ ನಮ್ಮ ಮೇಲೆ ಭಗವಂತನ ಅನುಗ್ರಹವು ಆಗಿಯೇ ತೀರುವದು–ಎಂಬ ಶ್ರದ್ಧೆಯನ್ನು ಮೊದಲು ಸಂಪಾದಿಸಿಕೊಳ್ಳಬೇಕು. ಈ ಶ್ರದ್ಧೆಯು ಎಂಥ ಕೀಳಂತಸ್ತಿನ ಬುದ್ಧಿಯವರನ್ನೂ ಉದ್ಧಾರ ಮಾಡುತ್ತದೆ–ಎಂದು ನನ್ನ ನಂಬಿಕೆ.

ಭಗವದ್ಗೀತೆಯಲ್ಲಿ ಒಂದು ಶ್ಲೋಕವಿದೆ; **'ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್। ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ'** (18–46) ಈ ಶ್ಲೋಕದ ಅಭಿಪ್ರಾಯವೇನೆಂದರೆ: ಎಲ್ಲಾ ಜೀವರೂ ಒಬ್ಬನೇ ಭಗವಂತನಿಂದ ಹುಟ್ಟಿ ಬಂದಿರುತ್ತಾರೆ; ಆ ಭಗವಂತನ ಸಂನಿಧಿಯಲ್ಲಿಯೇ ಇದ್ದುಕೊಂಡು ತಮ್ಮ ಎಲ್ಲಾ ವ್ಯವಹಾರವನ್ನೂ ಮಾಡುತ್ತಿರುತ್ತಾರೆ. ಆತನನ್ನು ತನ್ನ ಕರ್ಮದಿಂದ ಅಭ್ಯರ್ಚನೆ ಮಾಡಿದರೆ ಮಾನವನು ಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ. ಈ ಅಭಿಪ್ರಾಯವನ್ನು ಮನಸ್ಸಿನಲ್ಲಿ ಮೆಲುಕು ಹಾಕಿ ಅರಗಿಸಿಕೊಂಡರೆ ನಮ್ಮೆಲ್ಲರಿಗೂ ಅಧ್ಯಾತ್ಮ ಸಾಧನೆಯ ಒಳಗುಟ್ಟು ಮನದಟ್ಟಾಗುವದು.

ಪ್ರಾಣಿಗಳೆಲ್ಲವೂ ತಮ್ಮ ತಾಯಿತಂದೆಗಳಿಂದ ಹುಟ್ಟುವವೆಂಬುದು ಲೋಕ ಪ್ರಸಿದ್ಧವಾಗಿದೆಯಷ್ಟೆ? ಆದರೆ ತಂದೆ ತಾಯಿಗಳ ಸಂಬಂಧವು ನಿಮಿತ್ತಮಾತ್ರವಾಗಿರುತ್ತದೆ. ಸಮುದ್ರದ ಅಲೆಗಳು ಒಂದರ ಹಿಂದೊಂದು ಏಳುತ್ತಿರುವದರಿದ ಒಂದಕ್ಕೊಂದು ನಿಮಿತ್ತವಾಗಿರುವಂತೆ ಕಂಡರೂ ಎಲ್ಲಾ ಅಲೆಗಳಿಗೂ ಸಮುದ್ರವೇ ಆಧಾರವಾಗಿದ್ದು, ಎಲ್ಲಾ ಅಲೆಗಳೂ ಒಂದೇ ಸಮುದ್ರದಿಂದ ಎದ್ದು ತೋರಿಕೊಂಡು, ಕೊನೆಗೆ ಎಲ್ಲವೂ ಸಮುದ್ರ ದೊಳಗೇ ಅಡಗಿಕೊಳ್ಳುವಂತೆ, ನಾವುಗಳೆಲ್ಲರೂ ಚಿದಾನಂದಸಾಗರನಾದ ಒಬ್ಬನೇ ಪರಮಾತ್ಮನಿಂದ ಎದ್ದುಕೊಂಡು, ಅವನ ಸಂನಿಧಿಯಲ್ಲಿಯೇ ನಮ್ಮ ಎಲ್ಲಾ ಕಾರ್ಯ ಕರಣಗಳ ವ್ಯಾಪಾರಗಳನ್ನೂ ಮಾಡುತ್ತಿದ್ದು, ಕೊನೆಗೆ ಅವನಲ್ಲಿಯೇ ಒಂದಾಗಿ ಸೇರಿಕೊಳ್ಳುವವರಾಗಿರುತ್ತೇವೆ.

ನಾನು 'ಓದುವವನು, ಬರೆಯುವವನು, ಗ್ರಂಥಕ್ಕೆ ವ್ಯಾಖ್ಯಾನವನ್ನು ಮಾಡುವವನು', 'ನಾನು ದುಷ್ಟರನ್ನು ದಮನ ಮಾಡುವವನು, ಧರ್ಮಕ್ಕಾಗಿ ಶರೀರವನ್ನು ಬಲಿಕೊಡುವದಕ್ಕೆ ಸಿದ್ಧನಾಗಿರುವವನು, ಬಲಶಾಲಿ', 'ನಾನು ದಿನಸಿಗಳ ಅಥವಾ ಪದಾರ್ಥಗಳ ವ್ಯಾಪಾರವನ್ನು ಮಾಡುವವನು' 'ನಾನು ಶ್ರಮದಿಂದ ಜನರಿಗೆ ಕೆಲಸವನ್ನು ಮಾಡಿಕೊಡಬಲ್ಲವನು, ಶಿಲ್ಪಿ, ಬಡಗಿ, ಕಮ್ಮಾರ, ಅಕ್ಕಸಾಲೆ, ನೇಯ್ಗೆಯವನು, ಚಿತ್ರಗಾರ, ಸಂಗೀತಗಾರ, ನಟನು, ಪಾಕಕುಶಲನು'—ಎಂದು ಮುಂತಾಗಿ ಒಂದೊಂದು ಕೆಲಸದಲ್ಲಿ ಕೈಕೆಲಸದಲ್ಲಿ, ಕಲಾಕೌಶಲದಲ್ಲಿ, ಅಥವಾ ಮತ್ತೆ ಯಾವದಾದರೊಂದು ವಿದ್ಯೆಯಲ್ಲಿ ಜಾಣನಾಗಿರುವೆನೆಂಬ ಹೆಮ್ಮೆಯು ನಮ್ಮಲ್ಲಿ ಒಬ್ಬೊಬ್ಬರಿಗೂ ಇರಬಹುದು. ಆದರೆ ಈ ಪ್ರವೃತ್ತಿಗಳಿಗೆಲ್ಲ ಮೂಲವು ಆ ಭಗವಂತನೇ.

ಹೀಗಿರುವದರಿಂದ 'ನನ್ನ ಇರವು, ನಡೆ, ನುಡಿ—ಎಲ್ಲವೂ ಆ ಭಗವಂತನ ಅನುಗ್ರಹದಿಂದಲೇ ನನಗೆ ದೊರೆತಿರುತ್ತದೆ. ನನ್ನ ಇಡಿಯ ಜೀವನವೇ, ಹೆಚ್ಚೇಕೆ, ನನ್ನ ನನ್ನತನವೇ, ಆತನದು—ಎಂಬ ದೃಢವಾದ ನಂಬಿಕೆಯು ಬಂದರೆ ತಿಳಿಯತಕ್ಕದ್ದೆಲ್ಲವನ್ನೂ ತಿಲಿದುಕೊಂಡಂತೆ ಆಯಿತು; ಮಾಡಬೇಕಾದ್ದೆಲ್ಲವನ್ನೂ ಮಾಡಿದಂತೆ ಆಯಿತು. ಆದ್ದರಿಂದ ನಿಮ್ಮ ಊರಿನಲ್ಲಿ ಯಾರುಯಾರಿಗೆ ಯಾವಯಾವ ವಿದ್ಯೆಯಲ್ಲಿ, ಯಾವಯಾವ ಉದ್ಯೋಗದಲ್ಲಿ, ಯಾವ ಯಾವ ಕುಶಲವಿದ್ಯೆಯಲ್ಲಿ ಜಾಣತನವಿರುವದೋ ಅದನ್ನು 'ಇದು ಭಗವಂತನ ಪ್ರಸಾದವು; ಆತನು ಎಲ್ಲ ಪ್ರಾಣಿಗಳಲ್ಲಿಯೂ ಇರುತ್ತಾನೆ; ಆದ್ದರಿಂದ ನನಗೆ ಆತನು ಇತ್ತಿರುವ ಕೌಶಲವನ್ನು ಆತನ ಅರ್ಚನೆಗೇ ಉಪಯೋಗಿಸುವೆನು. ಈ ವಿದ್ಯೆಯು ಯಾರಿಗೆ ಇಲ್ಲವೋ ಅವರಿಗೆ ಅದರ ಪ್ರಯೋಜನವನ್ನು ಮಾಡಿಕೊಡುವೆನು. ಇದರಿಂದ ಆತನು ಸುಪ್ರೀತನಾಗಲಿ!' ಎಂಬ ಸಂಕಲ್ಪವನ್ನು ಮಾಡಿಕೊಳ್ಳಿರಿ. ಇದರಿಂದ ನಿಮಗೆ ಸಕಲಪುರುಷಾರ್ಥಗಳೂ ಲಭಿಸುವವು. ಈ ತತ್ತ್ವವನ್ನು ಜೀವನ ವ್ಯವಹಾರಕ್ಕೆ ಹೇಗೆ ಅನ್ವಯಿಸಿಕೊಳ್ಳಬೇಕೆಂಬುದನ್ನು ಇನ್ನೊಂದು ಪತ್ರದಲ್ಲಿ ವಿವರಿಸುವೆವು.

## 269. ಸಂನ್ಯಾಸವನ್ನು ಯಾವಾಗ, ಹೇಗೆ ಮಾಡಬೇಕು?

**(ಮಾರ್ಚ್ 1969)**

*ನಿಮ್ಮ ಪತ್ರವು ತಲುಪಿರುತ್ತದೆ. ''ನನಗೆ ಆಗಾಗ್ಗೆ ವ್ಯವಹಾರದಲ್ಲಿ ವೈರಾಗ್ಯವುಂಟಾಗಿ ಸಂನ್ಯಾಸಿಯಾಗಿ ಆಯುಸ್ಸನ್ನು ಕಳೆಯಬೇಕೆನಿಸಿರುತ್ತದೆ. ಕೆಲವು ತಿಂಗಳುಗಳಿಂದ ಈಚೆಗೆ ಈ ಇಚ್ಛೆಯು ಉತ್ಕಟವಾಗುತ್ತಿದೆ. 'ಯಾವಾಗ ಈ ಇಚ್ಛೆಯನ್ನು ನೆರವೇರಿಸಿಕೊಳ್ಳಲಿ?' ಎಂಬ ಯೋಚನೆಯು ಬಲವಾಗಿ ಹತ್ತಿಕೊಂಡಾಗ ಊಟ, ಸಾಮಾನ್ಯವ್ಯವಹಾರ, ನಿದ್ರೆ—ಯಾವದೂ*

*ಬೇಕೆನಿಸುತ್ತಿಲ್ಲ. ಮನೆಯವರು ಆಗಾಗ್ಗೆ 'ನಿನ್ನ ಮನಸ್ಸಿನಲ್ಲಿ ಏನೋ ಚಿಂತೆಯು ವ್ಯಾಪಿಸಿ ಕೊಂಡಿರುವಂತೆ ಕಾಣಿಸುತ್ತಿದೆ. ಇದನ್ನು ನಮ್ಮಲ್ಲಿ ತೋಡಿಕೊಳ್ಳದೇಇದ್ದರೆ, ಮತ್ತೆ ಯಾರಿಗೆ ಹೇಳಬೇಕೆಂದಿರುವೆ?' ಎಂದು ಆಗಾಗ್ಗೆ ಪ್ರಶ್ನಿಸಿ ಪೀಡಿಸುತ್ತಿರುತ್ತಾರೆ. ಇಂಥ ಸಂದರ್ಭದಲ್ಲಿನಾನು ಹೇಗೆ ಮಾಡಬೇಕು?–ದಯವಿಟ್ಟು ತಿಳಿಯಿಸಿ ಕಾಪಾಡಬೇಕು'' ಎಂದು ಬರೆದಿದ್ದೀರಿ.*

ಅಧ್ಯಾತ್ಮಚಿಂತೆಯು ಬಲವಾದಂತೆ ವ್ಯವಹಾರದಲ್ಲಿ ವೈರಾಗ್ಯವುಂಟಾಗುವದೆಂಬುದು ಒಂದು ಶುಭಚಿಹ್ನೆಯೇ ಸರಿ. ಆದರೆ ಆ ವೈರಾಗ್ಯದ ಮಟ್ಟವು ಎಷ್ಟು?–ಎಂಬುದನ್ನು ತಿಳಿದುಕೊಂಡು ಕೆಲಸವನ್ನು ಮಾಡಬೇಕು. ನೀವು ಆಗಾಗ್ಗೆ ಈ ಪ್ರಶ್ನೆಯನ್ನು ಹಾಕಿ ಕಾಗದ ಬರೆಯುತ್ತಿದ್ದೀರಿ; ಉತ್ತರವನ್ನು ನಾನು ಬರೆಯದೇಇದ್ದದ್ದರಿಂದ ಬೇಸರವಾಗಿಯೊ, ಏನೊ ಸುಮ್ಮನಾಗಿಬಿಡುತ್ತಿದ್ದೀರಿ. ಆದ್ದರಿಂದ ನೀವು ನಮ್ಮಲ್ಲಿಗೆ ಬಂದು ಮುಖತಃ ಮಾತನಾಡಿಕೊಂಡು ಮುಂದಿನ ಕಾರ್ಯವನ್ನು ನಿರ್ಣಯಿಸುವದು ಒಳ್ಳೆಯದು, ಆದರೆ ನಿಮಗೆ ನನ್ನ ತೂಷ್ಣೀಭಾವದಿಂದ ಬೇಸರವಾಗದೆ ಇರಲೆಂದು ಈ ಪತ್ರವನ್ನು ಈಗ ಬರೆದಿರುತ್ತೇನೆ. ಮಿಕ್ಕದ್ದು ಎದುರಿಗೆ ಮಾತನಾಡಿ ನಿಶ್ಚಯಿಸೋಣ.

ನೀವು ಬ್ರಹ್ಮಚಾರಿಯೊ, ಗೃಹಸ್ಥರೊ?–ಎಂಬುದನ್ನು ಕೂಡ ಈವರೆಗೆ ಸ್ಪಷ್ಟವಾಗಿ ತಿಳಿಸಿಲ್ಲ. ನೀವು ಬ್ರಹ್ಮಚಾರಿಯಾಗಿದ್ದರೆ ಇಷ್ಟು ದೀರ್ಘಕಾಲ ಏತಕ್ಕೆ ಮದುವೆಯಾಗಲಿಲ್ಲ? ಅದನ್ನು ಮೊದಲು ಹೇಳಿರಿ. ನಿಮಗೆ ವೇದಮಂತ್ರಗಳ ಪರಿಚಯ, ಸಂಸ್ಕೃತಭಾಷೆಯ ತಿಳಿವಳಿಕೆ, ಶಾಸ್ತ್ರವಿಚಾರದಲ್ಲಿ ಇರುವ ತಿಳಿವಳಿಕೆ–ಇವುಗಳನ್ನು ಮೊದಲು ನೋಡಿಕೊಳ್ಳಿರಿ. ಬ್ರಹ್ಮಚಾರಿಯಾದವನು ಅಧ್ಯಯನವನ್ನು ಮುಗಿಸಿಕೊಂಡು ಗುರುಗಳ ಅಪ್ಪಣೆಯನ್ನು ಪಡೆದು ಗೃಹಸ್ಥನಾಗಿ ಧರ್ಮಾಚರಣೆಯನ್ನು ಮಾಡಬೇಕು. ಗೃಹಸ್ಥನಾದವನು ಕುಟುಂಬ ಪೋಷಣೆ, ಅತಿಥಿಸೇವೆ–ಇವುಗಳನ್ನು ಮಾಡುತ್ತಾ ಶಾಸ್ತ್ರೋಕ್ತವಾದ ಕರ್ಮವನ್ನು ಮಾಡಬೇಕು. ಸುಮ್ಮನೆ ಕರ್ಮವನ್ನು ಮಾಡದೇಇರುವದರಿಂದ ಅಥವಾ ಸಂನ್ಯಾಸಿಯ ವೇಷವನ್ನು ಹಾಕಿಕೊಂಡಮಾತ್ರದಿಂದ ಯಾವ ಪ್ರಯೋಜನವೂ ಆಗಲಾರದು–ಎಂದು ಭಗವದ್ಗೀತೆಯಲ್ಲಿ (ಗೀ. 3–4) ಹೇಳಿರುತ್ತದೆ. ಗೃಹಸ್ಥನಾಗಿರುವವನಿಗೆ ವ್ಯವಹಾರದ ಫಲಗಳಲ್ಲಿ ಆಸೆಯಿಲ್ಲದಿದ್ದರೆ, ಅಥವಾ ಲೋಕಾಂತರದ ಫಲದಲ್ಲಿಯೂ ಆಸೆಯಿಲ್ಲದಿದ್ದರೆ, ಆಗಲೂ ಕಾಮ್ಯಕರ್ಮಗಳನ್ನು ಬಿಡುವದೆಂಬ ಒಂದು ಸಂನ್ಯಾಸವಿದೆ; ಯಾವ ಕರ್ಮವನ್ನು ಮಾಡಿದರೂ ಸಂಗತ್ಯಾಗ, ಫಲತ್ಯಾಗ–ಇವುಗಳಿಂದ ಚಿತ್ತ ಪಾವಿತ್ರ್ಯವನ್ನು ಪಡೆದು ಕೊಳ್ಳಬಹುದು–ಎಂದು ಅದೇ ಭಗವದ್ಗೀತೆಯಲ್ಲಿ (ಗೀ.18–2) ಹೇಳಿರುತ್ತದೆ. ಆದ್ದರಿಂದ ನಿಮಗೆ ಅಧ್ಯಾತ್ಮಜ್ಞಾನವನ್ನೇ ಸಂಪಾದಿಸಿಕೊಂಡು ಸಂಸಾರದಿಂದ ಮುಕ್ತರಾಗಬೇಕೆಂಬ ಅಭಿಲಾಷೆಯಿದ್ದರೆ ಶಾಸ್ತ್ರೋಕ್ತವಾದ ಕರ್ಮಗಳನ್ನು ಯಥಾಶಕ್ತಿಯಾಗಿ ಮಾಡುತ್ತಾ ನಾನು ಕರ್ಮವನ್ನು ಮಾಡುತ್ತೇನೆ ಎಂಬ ಸಂಗವಾಗಲಿ, ಇದರಿಂದ ನನಗೆ ಇಂಥ ಫಲವಾಗ

ಬೇಕೆಂಬ ಇಚ್ಛೆಯಾಗಲಿ ಇಲ್ಲದಂತೆ ಕರ್ಮವನ್ನು ಈಶ್ವರನಿಗೆ ಅರ್ಪಣೆಮಾಡುತ್ತಾ ಚಿತ್ತ ಶುದ್ಧಿಯನ್ನು ಸಂಪಾದಿಸಿಕೊಂಡು ತತ್ತ್ವವಿಚಾರವನ್ನು ಮಾಡಿರಿ. ಇದೂ ಒಂದು ಬಗೆಯ ಸಂನ್ಯಾಸ (ಗೀ. 18–5,6).

ಈಗಿನ ಕಾಲಕ್ಕೆ ನೈಷ್ಠಿಕಬ್ರಹ್ಮಚರ್ಯ (ಗುರುವಿನ ಶುಶ್ರೂಷೆಯಲ್ಲಿಯೇ ಕಾಲಹರಣ ಮಾಡುವದು), ವಾನಪ್ರಸ್ಥ (ಕಾಯಕ್ಲೇಶಪ್ರಧಾನವಾದ ತಪಸ್ಸು ಮಾಡುವ ಆಶ್ರಮ) ಇವೆರಡೂ ಆಚರಣೆಯಲ್ಲಿ ಕಾಣಬರುವದಿಲ್ಲ. ಆದ್ದರಿಂದ ಗೃಹಸ್ಥನಾಗಿದ್ದು ವಿರಕ್ತನಾದವನು, ಅಥವಾ ಬ್ರಹ್ಮಚರ್ಯದಲ್ಲಿಯೇ ವಿರಕ್ತನಾಗಿರುವವನು, ಪರಮಹಂಸಸಂನ್ಯಾಸಿಯಾಗಬಹುದು. ಆದರೆ ಅದಕ್ಕೆ ವೇದಾಂತಶ್ರವಣ, ಮನನ, ನಿದಿಧ್ಯಾಸನಗಳನ್ನು ಮಾಡುವ ಇಚ್ಛೆಯೂ ಶಕ್ತಿಯೂ ಇರಬೇಕು. ಹಾಗಿಲ್ಲದೆ 'ಸಂನ್ಯಾಸಿ' ಎನಿಸಿಕೊಳ್ಳಬೇಕೆಂದು ಹಂಬಲಿಸುವವನು ಪ್ರಪಂಚವೂ ಇಲ್ಲದೆ, ಪರಮಾರ್ಥವೂ ಇಲ್ಲದೆ ಉಭಯಭ್ರಷ್ಟನಾಗುವನು. ಆದ್ದರಿಂದ ನೀವು ಕರ್ಮಗಳನ್ನು ಈಶ್ವರಾರ್ಪಣಬುದ್ಧಿಯಿಂದ ಮಾಡುವ ಗಾರ್ಹಸ್ಥ್ಯವನ್ನಾಗಲಿ, ಪರಮಾತ್ಮನಲ್ಲಿಯೇ ಏಕಾಂತಭಕ್ತಿಯಿಂದ ವ್ಯವಹರಿಸುತ್ತಾ ಗುರುಗಳ ಬಳಿಯಲ್ಲಿ ಶ್ರವಣಾದಿಗಳನ್ನು ಮಾಡುವ ಪಾರಮಹಂಸ್ಯವನ್ನಾಗಲಿ ಗುರಿಯಾಗಿಟ್ಟುಕೊಳ್ಳುವ ಆದರ್ಶಗೃಹಸ್ಥರೋ, ಆದರ್ಶಸಂನ್ಯಾಸಿಗಳೋ ಆಗುವದಕ್ಕೆ ಯತ್ನಿಸಬೇಕು. ಹಾಗಿಲ್ಲದೆ ದಂಭದ ಆಶ್ರಮಸ್ವೀಕಾರವನ್ನು ಮಾಡಿ ಆತ್ಮಪರ ವಂಚಕನಾಗುವ ಹಂಬಲಿಗೆ ಹೋಗದಿರಿ. ಇದೇ ನನ್ನ ನಿಶ್ಚಿತವಾದ ಮತ.

## 270. ಮೌನವನ್ನು ಹೇಗೆ ಮಾಡಬೇಕು?

(ಏಪ್ರಿಲ್ 1969)

*ನೀವು ಪತ್ರದ ಮೂಲಕ ಕೇಳಿರುವ ಪ್ರಶ್ನೆಗೆ ಇಲ್ಲಿ ಸಂಕ್ಷೇಪವಾಗಿ ಉತ್ತರವನ್ನು ಬರೆದಿರುತ್ತೇನೆ. ಹೆಚ್ಚಿಗೆಯ ವಿಷಯವನ್ನು ನೀವು ಇಲ್ಲಿಗೆ ಬಂದಾಗಲೇ ವಿಚಾರಮಾಡೋಣ. 'ಕೆಲವು ಜನರು ನನ್ನನ್ನು ಈಚೆಗೆ ತುಚ್ಛವಾಗಿ ಕಾಣುತ್ತಾರೆ, ಅವರು 'ಎಲೊ, ತಲೊ' ಎಂದು ಏಕವಚನದಿಂದ ಮಾತನಾಡಿಸುವಾಗ ನನಗೆ ಮನಸ್ಸಿನಲ್ಲಿ ತಳಮಳವಾಗುತ್ತದೆ. ಕೋಪತಾಪಗಳಿಗೆ ಸಿಕ್ಕಿಕೊಳ್ಳದೆ ಇರುವದಕ್ಕಾಗಿ ನಾನು ಉತ್ತರಪ್ರದೇಶದಲ್ಲಿ ಪ್ರಸಿದ್ಧವಾಗಿರುವ ಒಂದು ತಪೋಭೂಮಿಗೆ ಹೋಗಿ ಏಕಾಂತದಲ್ಲಿದ್ದು ಸಾಧನವನ್ನು ಮಾಡಬೇಕು ಎನಿಸುತ್ತದೆ; ಅಥವಾ ಕೆಲವು ತಿಂಗಳುಗಳವರೆಗೆ ಯಾರನ್ನೂ ಮಾತನಾಡಿಸದೆ ಮೌನದಿಂದ ಇದ್ದು ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳಬೇಕೆಂದು ಮಾಡಿರುತ್ತೇನೆ. ಮೌನವು ನಿರ್ವಿಘ್ನವಾಗಿ ಸಿದ್ಧಿಸುವದಕ್ಕೆ ಕೈಕೊಳ್ಳಬೇಕಾದ ಸಾಧನವೇನಾದರೂ ಇದ್ದರೆ ದಯವಿಟ್ಟು ಬರೆಯಿಸೋಣವಾಗಲಿ!' ಎಂದು ಕೇಳಿರುತ್ತೀರಿ.*

ಮಾತನಾಡುವ ಹವ್ಯಾಸವು ಯಾರಿಗೆ ಹೆಚ್ಚಾಗಿರುವದೋ ಅವರು ಬೀಳು ಮಾತುಗಳಿಂದ ಆಯಾಸವನ್ನು ಮಾತ್ರ ಹೊಂದುವರು; ಅವರು ತಮ್ಮನ್ನುತಾವೇ ಕೊಚ್ಚಿಕೊಳ್ಳುವ ಹವಣಿಕೆಗೆ ಪಾತ್ರರಾಗುವರು; ಸುಳ್ಳನ್ನು ಆಡುವದಕ್ಕೆ ಹೇಸುವದಿಲ್ಲ; ಬಿರು ನುಡಿಗಳನ್ನಾಡಿ ಮತ್ತೊಬ್ಬರ ಮನಸ್ಸನ್ನು ನೋಯಿಸುವದೂ ಅವರಿಗೆ ಅಯುಕ್ತವೆನಿಸುವ ದಿಲ್ಲ. ಎಚ್ಚರಿಕೆಯಿಲ್ಲದೆ ಒಮ್ಮೆ ತಾವು ಹೇಳಿದ್ದನ್ನು ತಪ್ಪಾದರೂ ಅದನ್ನೇ ಸರಿಯೆಂದು ಸಾಧಿ ಸುವದಕ್ಕೂ ಹೋಗಬಹುದು. ಕಾಡುಹರಟೆಯಿಂದ ಮನಸ್ಸೂ ಮಲಿನವಾಗಿ ಗೊತ್ತುಗುರಿಯಿಲ್ಲದೆ ಮಾತನಾಡುತ್ತಲೇ ಇರವ ಚಟಕ್ಕೂ ಅವರು ಪಕ್ಕಾಗುವರು. ಆದ್ದರಿಂದ ವಾಙ್ಮೌನವನ್ನು ಮಾಡಬೇಕೆಂದು ನೀವು ಯೋಚಿಸುತ್ತಿರುವದು ಒಂದು ಶುಭಸೂಚನೆಯೇ ಸರಿ.

ಆದರೆ ದೊಡ್ಡವರು ನಿಜವಾದ ಮೌನವನ್ನು ಸಾಧಿಸಿರುವದರ ಗುರಿಯು ಅಷ್ಟೇ ಅಲ್ಲ. ಮಾತು ಬಿಟ್ಟಿರುವ ಮೌನವು ಹೊರಗೆ ಯಾವ ದುಷ್ಪರಿಣಾಮವನ್ನುಂಟುಮಾಡದೆ ಇದ್ದರೂ ಸುಮ್ಮನೆ ಕುಳಿತಿರುವವನಿಗೆ ಮನಸ್ಸು ಬಗೆಬಗೆಯಿಂದ ಹರಿದಾಡುವದಕ್ಕೆ ಮೊದಲುಮಾಡಬಹುದಾದ ಅಂಜಿಕೆಯಿದೆ. ಮನಸ್ಸಿನಲ್ಲಿ ಕಾಮ, ಕ್ರೋಧ, ಲೋಭ, ಮೋಹ–ಮುಂತಾದ ದೋಷಗಳು ಕಡಲಿನ ಅಲೆಗಳಂತೆ ಎದ್ದುಕೊಳ್ಳುತ್ತಿರುವಲ್ಲಿ ಬರಿಯ ವಾಙ್ಮೌನವು ಯಾವ ಸತ್ಫಲವನ್ನು ಕೊಟ್ಟೀತು? ಮೂಕಜಂತುಗಳು ಯಾವಾಗಲೋ ಒಂದೊಂದುಸಲ ಕೂಗುವದಲ್ಲದೆ ಯಾವ ಮಾತನ್ನೂ ಆಡುವದಿಲ್ಲ. ಆದರೆ ಅಷ್ಟು ಮಾತ್ರದಿಂದ ಅವು ಮೌನವಾಗಿವೆ ಎನ್ನಬಹುದೆ? ಜನರು ಅರಣ್ಯದಲ್ಲಿ ವಾಸಮಾಡಿದ್ದ ರಿಂದಲೇ ಮುನಿಗಳಾಗುವದಿಲ್ಲ; 'ಮುನಿಗಳಿಗೆ ಮೂಗಿನ ತುದಿಯಲ್ಲಿಯೇ ಇರುವದಲ್ಲವೆ, ಮುನಿಸು?' ಎಂದು ಒಬ್ಬ ಕವಿ ನುಡಿದಿರುತ್ತಾನೆ. ಆದ್ದರಿಂದ ವಾಙ್ಮೌನಕ್ಕಿಂತಲೂ ಮನೋಮೌನವನ್ನು ಸಾಧಿಸುವದಕ್ಕೆ ಪ್ರಯತ್ನಿಸುವದು ಹೆಚ್ಚಿನ ಶ್ರೇಯಸ್ಸಿಗೆ ಕಾರಣವಾಗುವದೆಂದು ನನ್ನ ನಂಬಿಕೆ.

ಉಪನಿಷತ್ತಿನಲ್ಲಿ ಮೌನವೆಂಬ ಶಬ್ದಕ್ಕೆ ಬಹಳ ಹೆಚ್ಚಿನ ಬೆಲೆಯನ್ನು ಕೊಟ್ಟಿರುತ್ತದೆ, ಸರ್ವಕರ್ಮಸಂನ್ಯಾಸವನ್ನು ಮಾಡಿದ ಮಹನೀಯನು ತತ್ತ್ವವನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವದು ಪಾಂಡಿತ್ಯವೆನಿಸುವದು; ಹಾಗೆ ತಿಳಿದುಕೊಂಡಬಳಿಕ ತನ್ನ ವಿದ್ವತ್ತೇ ಮುಂತಾದದ್ದನ್ನು ಮೆರೆಯಿಸದೆ ಏನೂ ಅರಿಯದ ಹುಡುಗನಂತೆ ಅಮಾನಿತ್ವದಿಂದ ಇರುವದು ಬಾಲ್ಯವು. ಈ ಎರಡೂ ಅಳವಟ್ಟಮೇಲೆ ಮನಸ್ಸನ್ನು ತತ್ತ್ವದ ಅನುಸಂಧಾನಕ್ಕೇ ಮೀಸಲಾಗಿಟ್ಟುಕೊಳ್ಳಬಹುದಾಗುವದು; ಈ ಅನುಸಂಧಾನವೇ ಮೌನವು (ಬೃ.3–5–1). ಇದೇ ಅಭಿಪ್ರಾಯವನ್ನು ಮಹಾಭಾರತದಲ್ಲಿ ಈ ಶ್ಲೋಕದಲ್ಲಿ ಸಂಗ್ರಹಿಸಿದೆ:

ಮೌನಾನ್ನ ಸ ಮುನಿರ್ಭವತಿ ನಾರಣ್ಯವಸನಾನ್ಮುನಿಃ ।
ಸ್ವಲಕ್ಷಣಂ ತು ಯೋ ವೇದ ಸ ಮುನಿಶ್ರೇಷ್ಠ ಉಚ್ಯತೇ ॥

ಸುಮ್ಮನಿರುವದರಿಂದ ಮುನಿಯಾಗಲಾರನು, ಕಾಡಿನಲ್ಲಿ ವಾಸಮಾಡುವದರಿಂದಲೂ ಮುನಿಯಾಗುವದಿಲ್ಲ; ತನ್ನ ಆತ್ಮನ ಸ್ವರೂಪವನ್ನು ಯಾವನು ತಿಳಿದಿರುವನೋ ಆತನೇ ಮುನಿಶ್ರೇಷ್ಠನೆನಿಸುತ್ತಾನೆ.

ಇದುವರೆಗೆ ನಾನು ಹೇಳಿರುವದು ಮೌನಶಬ್ದದ ಮುಖ್ಯಾರ್ಥ. ಸಾಮಾನ್ಯ ಸಾಧಕರಿಗೆ ಮೌನವೆಂದರೆ ಪರಮಾತ್ಮನ ನಾಮದ ಕೀರ್ತನೆ ಅಥವಾ ಜಪ. ಪರಮಾತ್ಮನ ನಾಮವೂ ಶಬ್ದವೇ ಆದರೂ ಲೌಕಿಕ ಸಂಭಾಷಣೆಯಿಂದ ಅಥವಾ ಲೌಕಿಕ ವೃತ್ತಾಂತಗಳನ್ನು ಕೇಳಿ ಅಥವಾ ಓದುವದರಿಂದ ಆಗುವ ವಾಗ್ದೋಷಗಳೆಲ್ಲವೂ ನಾಮಕೀರ್ತನೆಯಿಂದ ಅಥವಾ ನಾಮಜಪದಿಂದ ಮಾಯವಾಗುವವು. ಆದ್ದರಿಂದ ಅದೇ ಅಧ್ಯಾತ್ಮಮಾರ್ಗದಲ್ಲಿ ಮೊದಲನೆಯ ಹೆಜ್ಜೆಯ ಮೌನವಾಗುವದು. ಇದು ಹೇಗೆಂಬುದನ್ನು ಇನ್ನೊಂದು ಪತ್ರದಲ್ಲಿ ನಿಮಗೆ ತಿಳಿಸುವೆನು.

## 271. ಅಧ್ಯಾತ್ಮವಿದ್ಯೆಯಲ್ಲಿ ಶ್ರದ್ಧೆಯ ಸ್ಥಾನ

(ಮೇ 1969)

*ನಿಮ್ಮ ಪತ್ರವು ತಲುಪಿರುತ್ತದೆ. ''ಅಧ್ಯಾತ್ಮವಿದ್ಯೆಗೆ ಶ್ರದ್ಧೆಯೇ ಮುಖ್ಯವಾಗಿ ಬೇಕೊ, ಬುದ್ಧಿಗೇ ಹೆಚ್ಚಿನ ಬೆಲೆಯೊ? ಕೆಲವರು 'ಶಾಸ್ತ್ರವನ್ನೂ ಗುರುಗಳನ್ನೂ ಶ್ರದ್ಧೆಯಿಂದ ನಂಬಿದರೆ ಮಾತ್ರ ಈ ವಿದ್ಯೆಯಲ್ಲಿ ಮುಂದುವರಿಯಬಹುದು' ಎನ್ನುತ್ತಾರೆ. ಮತ್ತೆ ಕೆಲವರು 'ಈ ಶಾಸ್ತ್ರವು ತರ್ಕಬದ್ಧವಾಗಿದೆ, ಈಗಿನ ಭೌತಿಕವಿಜ್ಞಾನಕ್ಕೆ ಹೊಂದುಗೆಯಾಗಿರುವದು ಅಧ್ಯಾತ್ಮವಿದ್ಯೆಯೊಂದೇ' ಎನ್ನುತ್ತಾರೆ. ಈ ವಿಷಯದಲ್ಲಿ ಯಾರ ಮತವು ಸರಿ? ನನ್ನ ಈ ಸಂಶಯವನ್ನು ಬಗೆಹರಿಯಿಸಿಕೊಡಬೇಕು''–ಎಂತ ಬರೆದಿರುತ್ತೀರಿ.*

'ಶ್ರದ್ಧೆ' ಎಂಬ ಮಾತಿನ ಅರ್ಥವನ್ನು ಗೊತ್ತುಪಡಿಸಿಕೊಳ್ಳುವವರೆಗೂ ಈ ಸಂಶಯವು ತಪ್ಪಿದ್ದಲ್ಲ. ಸನಾತನಧರ್ಮದಲ್ಲಿ ಶಾಸ್ತ್ರೋಕ್ತಕರ್ಮಗಳನ್ನು ಶ್ರದ್ಧೆಯಿಂದ ಮಾಡಿದವರಿಗೆ ಮಾತ್ರ ಕರ್ಮದ ಫಲವು ದೊರಕುತ್ತದೆ ಎನ್ನುತ್ತಾರೆ. ಅಲ್ಲಿ ಶ್ರದ್ಧೆಯೆಂದರೆ ಸಾಧನಕ್ಕೂ ಫಲಕ್ಕೂ ಇರುವ ಸಂಬಂಧದ ವಿಷಯದಲ್ಲಿ ನಂಬಿಕೆ, ಶಾಸ್ತ್ರೋಕ್ತಕರ್ಮಗಳನ್ನು ಮಾಡಿದರೆ ಈ ಲೋಕದಲ್ಲಿ ಅಥವಾ ಪರಲೋಕದಲ್ಲಿ ಕರ್ಮಕ್ಕೆ ತಕ್ಕಂತೆ ಫಲವು ಅವಶ್ಯವಾಗಿ ಆಗುವದು ಎಂಬ ನಂಬಿಕೆಯಿರುವ ಅಧಿಕಾರಿಯು

ಕರ್ಮವನ್ನು ಮಾಡಿದರೆ, ಅದು ಸಫಲವಾಗುವದು ಎಂದು ಸನಾತನಧರ್ಮದವರ ಭಾವನೆ.

ಇನ್ನು 'ಅಧ್ಯಾತ್ಮವಿದ್ಯೆ' ಎಂಬ ಶಬ್ದಕ್ಕೆ ಉಪಾಸನೆ ಅಥವಾ ಆತ್ಮತತ್ತ್ವಜ್ಞಾನ ಎಂಬ ಎರಡು ಅರ್ಥಗಳಿರುವವು. ಉಪಾಸನೆ ಎಂದರೆ ಶಾಸ್ತ್ರದಲ್ಲಿ ಹೇಳಿರುವಂತೆ ಆಯಾ ಪ್ರತ್ಯಯವನ್ನೇ ಎಡೆಬಿಡದೆ ಭಾವಿಸುವದು. ಆ ಉಪಾಸನೆಗೆ ಶಾಸ್ತ್ರದಲ್ಲಿ ಹೇಳಿದ ಫಲವು ಅವಶ್ಯವಾಗಿ ಆಗುವದೆಂಬ ದೃಢವಾದ ನಂಬಿಕೆ ಬೇಕು. ಇಂಥಿಂಥ ಕರ್ಮವನ್ನು ಅಥವಾ ಇಂಥಿಂಥ ಉಪಾಸನೆಯನ್ನು ಈ ರೀತಿಯಲ್ಲಿ ಅಧಿಕಾರಿಯಾದವನು ಮಾಡಿದರೆ ಇಂಥ ಫಲವು ಅವಶ್ಯವಾಗಿ ಆಗುವದು ಎಂಬ ಗಟ್ಟಿಯಾದ ನಂಬಿಕೆಯಿರಬೇಕು. ದೂರದಲ್ಲಿರುವ ಒಂದು ಊರಿಗೆ ಹೋಗುವದಕ್ಕೆ ಇಂಥ ಮಾರ್ಗವಾಗಿ ಹೋದರೆ ಆವೂರನ್ನು ಮುಟ್ಟಬಹುದು—ಎಂದು ಆಪ್ತರಾದವರು ಹೇಳಿದರೆ, ಅಥವಾ ರೈಲುಮಾರ್ಗದರ್ಶಿ ಪುಸ್ತಕದಿಂದ ನಮಗೆ ತಿಳಿದರೆ, ಅದರಲ್ಲಿ ನಂಬಿಕೆಯಿಂದ ನಾವು ಅದಕ್ಕಾಗಿ ಹಣವನ್ನು ಖರ್ಚುಮಾಡಿ ಪ್ರಯಾಣ ಮಾಡುತ್ತಿರುವೆವು; ವೈದ್ಯನು ಹೇಳಿದರೆ ಔಷಧವನ್ನು ಸೇವಿಸಿ ಪಥ್ಯವನ್ನು ಮಾಡಿ ಆರೋಗ್ಯವನ್ನು ಪಡೆಯುತ್ತಿರುವೆವು. ಅಲ್ಲವೆ? ಅದರಂತೆಯೇ ಈ ಲೋಕದಲ್ಲಿ ಅಥವಾ ಪರಲೋಕದಲ್ಲಿ ಆಗಬೇಕಾಗಿರುವ ಕರ್ಮಗಳಿಗೆ ಅಥವಾ ಉಪಾಸನೆಗಳಿಗೆ ಶ್ರದ್ಧೆ (ನಂಬಿಕೆ) ಬೇಕೆಂಬುದು ಸ್ಪಷ್ಟ.

ಇನ್ನು 'ಅಧ್ಯಾತ್ಮವಿದ್ಯೆ' ಎಂದರೆ ತತ್ತ್ವಜ್ಞಾನವೆಂಬ ಅರ್ಥವನ್ನು ಇಟ್ಟುಕೊಂಡಾಗ ನಮ್ಮ ಸ್ವರೂಪವು ನಿಜವಾಗಿ ಅದ್ವಿತೀಯಪರಮಾರ್ಥವೇ ಎಂದು ಶಾಸ್ತ್ರದಲ್ಲಿ ಹೇಳಿರುವದನ್ನು ಸುಮ್ಮನೆ ಹಾಗೆಂದು ನಂಬಿ ಕೂತುಕೊಳ್ಳುವದಕ್ಕೆ ಆಗುವಂತಿಲ್ಲ. ಈಗಲೇ ಇಲ್ಲಿಯೇ ನೀವು ಒಬ್ಬೊಬ್ಬರೂ ನಿತ್ಯಶುದ್ಧಬುದ್ಧಮುಕ್ತಸ್ವಭಾವವುಳ್ಳ ಪರಬ್ರಹ್ಮವೇ ಆಗಿರುವಿರಿ—ಎಂದು ಶಾಸ್ತ್ರವು ಹೇಳಿದ ಮೇಲೆಯೇ ನಮಗೆ 'ಅಲ್ಪಬುದ್ಧಿಯುಳ್ಳ ಅಲ್ಪಶಕ್ತಿಯುಳ್ಳ ಮರ್ತ್ಯನಾದ ಎಷ್ಟೋ ಅಂಜಿಕೆಗಳಿಗೆ ತುತ್ತಾಗಿರುವ ನಾನು ಸರ್ವಜ್ಞವೂ ಸರ್ವಶಕ್ತಿಯುಳ್ಳದ್ದೂ ಅಮೃತವೂ ಅಭಯವೂ ಆದ ಬ್ರಹ್ಮವು ಹೇಗಾದೇನು?—ಎಂಬ ಶಂಕೆಯುಂಟಾಗುವದು ಸ್ವಾಭಾವಿಕವಾಗಿದೆ. ಆದರೆ ಭೌತಿಕವಿಜ್ಞಾನ, ಗಣಿತ—ಮುಂತಾದ ಶಾಸ್ತ್ರಗಳಲ್ಲಿ ಬಲ್ಲವರು ಕಂಡು ಸಿದ್ಧಪಡಿಸಿರುವ ತತ್ತ್ವಗಳು ಹಾಗೆಯೇ ಇರಬೇಕೆಂಬ ನಂಬಿಕೆಯಿಂದ ನಾವೂ ಪ್ರಯತ್ನಪೂರ್ವಕವಾಗಿ ಅದನ್ನು ಅರಿತುಕೊಂಡು ಹೇಗೆ ಆಯಾ ವಿಷಯದಲ್ಲಿ ಜ್ಞಾನಿಗಳಾಗುವೆವೋ ಹಾಗೆಯೇ 'ಶಾಸ್ತ್ರವೂ ಗುರುಗಳೂ ಹೇಳುವದು ನಿಜವಾಗಿರಬೇಕು; ಅದು ಹೇಗೆಂಬುದನ್ನು ವಿಚಾರ ಮಾಡಿ ಅನುಭವಕ್ಕೆ ತಂದು ಕೊಳ್ಳುವೆನು' ಎಂಬ ಶ್ರದ್ಧೆಯಿಂದ ದೃಢವಿಶ್ವಾಸದಿಂದ ಬಲ್ಲವರಲ್ಲಿ ಅನುಭವಾನುಸಾರ

ವಾಗಿ ಚರ್ಚಿಸಿ, ನಮ್ಮಲ್ಲಿಯೇ ನಾವು ಏಕಾಗ್ರಚಿತ್ತದಿಂದ ನೋಡಿಕೊಂಡರೆ ಅವಶ್ಯವಾಗಿ ಪರಮಾರ್ಥತತ್ತ್ವವು ಅನುಭವಕ್ಕೆ ಬರುವದು.

ಆದ್ದರಿಂದ ನೀವು ಮಾಡಬೇಕಾಗಿರುವ ಸಾಧನಕ್ಕೆ ತಕ್ಕಂತೆ ಶ್ರದ್ಧೆಯೂ ಬೇಕು, ತರ್ಕವೂ ಬೇಕಾಗುವದು. ಆತ್ಮಜ್ಞಾನವು ಮಾತ್ರ ಇಲ್ಲಿಯೇ—ಊಟ ಮಾಡಿದವನಿಗೆ ತೃಪ್ತಿಯಾಗುವಂತೆ—ಅನುಭವರೂಪವಾದ ಫಲದಲ್ಲಿ ಕೊನೆಗಾಣುವದು. ಹೇಗೇ ಆಗಲಿ, ಪರಮೇಶ್ವರನು ನಮ್ಮಗಳ ಆತ್ಮನೇ ಆಗಿರುತ್ತಾನಾದ್ದರಿಂದ ಆತನ ಕಡೆಗೆ ತಿರುಗುವದಕ್ಕೆ ಹೊರಗಿನ ವಿಷಯಗಳ ಹಂಬಲ ಹೋಗಬೇಕು; ಭಗವಂತನು ಅನುಗ್ರಹಿಸಿದರೆ ನಮ್ಮ ಸಾಧನಸಂಪತ್ತು ಮೈಗೂಡುವದು—ಎಂದು ಗಟ್ಟಿಯಾಗಿ ನಂಬಿ 'ದೇವ, ನನ್ನ ಸಾಧನ ಮಾರ್ಗವು ಮೈಗೂಡಿಕೊಳ್ಳುವಂತೆ ಅನುಗ್ರಹಿಸು' ಎಂದು ಶ್ರದ್ಧಾಭಕ್ತಿಗಳಿಂದ ಎಡೆಬಿಡದೆ ಪ್ರಾರ್ಥಿಸುತ್ತಿರಿ.

## 272. ಆಶ್ರಮಧರ್ಮ

(ಜೂನ್ 1969)

*ನಿಮ್ಮ ಪತ್ರವು ತಲುಪಿರುತ್ತದೆ. "ನಾನು ನನ್ನ ಆಯುಸ್ಸನ್ನೆಲ್ಲ ಬ್ರಹ್ಮಚರ್ಯದಲ್ಲಿಯೇ ಕಳೆಯಬೇಕೆಂಬ ಇಚ್ಛೆಯುಳ್ಳವನು. ಆದರೆ ನನ್ನ ಹಿರಿಯರೂ ಇಷ್ಟಮಿತ್ರರೂ 'ನೀವು ಮದುವೆಯಾಗಿ ಗೃಹಸ್ಥರಾಗಿರುವದು ಒಳ್ಳೆಯದು' ಎಂದು ಮತ್ತೆಮತ್ತೆ ಒತ್ತಿ ಹೇಳುತ್ತಿದಾರೆ. ಈ ಸಮಯದಲ್ಲಿ ತಟಸ್ಥರಾಗಿದ್ದು ಧರ್ಮದಲ್ಲಿಯೇ ದೃಷ್ಟಿಯುಳ್ಳವರ ಹಿತವಚನವನ್ನು ಕೇಳಿ ಮುಂದುವರಿಯುವದು ಒಳ್ಳೆಯದಾದೀತು—ಎಂಬ ಅಭಿಪ್ರಾಯದಿಂದ ಈ ಪತ್ರವನ್ನು ತಮಗೆ ಬರೆದಿರುತ್ತೇನೆ. ತಮ್ಮ ಅಭಿಪ್ರಾಯವನ್ನು ದಯವಿಟ್ಟು ಬಿಚ್ಚುನುಡಿಯಿಂದ ತಿಳಿಸಿದರೆ ಕೃತಜ್ಞನಾಗಿರುವೆನು"—ಎಂದು ಬರೆದಿರುತ್ತೀರಿ.*

ಕಲಿಗಾಲದಲ್ಲಿ ವರ್ಣಸಂಕರವಾಗುವದೆಂದೂ ಆಶ್ರಮಧರ್ಮವು ಸಾಗುವದು ಕಷ್ಟವೆಂದೂ ಪುರಾಣಗಳಲ್ಲಿ ಹೇಳಿರುವಂತೆಯೇ ಈಗ ನೇರಾಗಿ ಅನುಭವಕ್ಕೆ ಬರುತ್ತಿದೆ. ಇದಕ್ಕೆ ನಮ್ಮ ದೇಶದಲ್ಲಿ ಬೇರೆ ಬೇರೆಯ ಮತಾಚಾರದವರು ಹೊರಗಿನಿಂದ ಬಂದು ಸೇರಿರುವದರಿಂದಲೇ ಅಲ್ಲದೆ ನವನಾಗರಿಕತೆಯ ಹೊಸಹೊಸ ಶೋಧಗಳಿಂದ ಒದಗಿರುವ ಭೋಗಸಾಮಗ್ರಿಗಳ ರಾಶಿಯನ್ನು ಕಂಡು ಮನುಷ್ಯರಲ್ಲಿ ಹೆಚ್ಚಿಕೊಂಡಿರುವ ಕಾಮವೂ ಕಾರಣವಾಗಿರುತ್ತದೆ.

ಈಗ್ಗೆ ಬ್ರಾಹ್ಮಣರಲ್ಲಿ ಯಾವ ಆಶ್ರಮಧರ್ಮವೂ ಸರಿಯಾಗಿ ನಡೆಯುತ್ತಿಲ್ಲ. ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ—ಎಂಬ ಆಶ್ರಮಧರ್ಮವನ್ನು ಕಾಪಾಡಿಕೊಂಡಿರು

ವವರಿಗೆ ಪುಣ್ಯಲೋಕವೂ ಬ್ರಹ್ಮಸಂಸ್ಥನಾದ ಪರಮಹಂಸನಿಗೆ ಅಮೃತತ್ವವೂ ಫಲವೆಂದು ಉಪನಿಷತ್ತಿನಲ್ಲಿ ಹೇಳಿರುತ್ತದೆ. ಗುರುಕುಲದಲ್ಲಿ ಸಾಂಗಾಧ್ಯಯನವನ್ನು ಮಾಡಿದಬಳಿಕ ಯಾವ ಧರ್ಮದಲ್ಲಿದ್ದುಕೊಂಡರೆ ತನಗೆ ಶ್ರೇಯಸ್ಸಾಗುವದೆಂದು ಮನದಟ್ಟಾಗುವದೋ ಆ ಆಶ್ರಮವನ್ನೇ ಸ್ವೀಕರಿಸಬೇಕು–ಎಂದು ಆಪಸ್ತಂಬರು ಹೇಳಿರುತ್ತಾರೆ. ಅಧ್ಯಯನವನ್ನು ಮಾಡಿ ಗಾರ್ಹಸ್ಥ್ಯವನ್ನು ಪಡೆಯುವ ಬ್ರಹ್ಮಚಾರಿಯು ಉಪಕುರ್ವಾಣನು; ಗುರುಸೇವೆಯನ್ನು ಮಾಡುತ್ತಲೇ ಅಧ್ಯಯನ ನಿಷ್ಠನಾಗಿಯೇ ಶರೀರವನ್ನು ಸವೆಯಿಸುವ ವ್ರತವುಳ್ಳವನು ನೈಷ್ಠಿಕಬ್ರಹ್ಮಚಾರಿ. ಇನ್ನು ಅಧ್ಯಯನಾನಂತರದಲ್ಲಿ ಗುರುವಿನ ಅಪ್ಪಣೆಯನ್ನು ಪಡೆದು ಪತ್ನೀಸಮೇತನಾಗಿ ವೇದೋಕ್ತ ಧರ್ಮವನ್ನು ಆಚರಿಸುತ್ತಿರುವವನು ಗೃಹಸ್ಥನು. ಯಜ್ಞ, ದಾನ, ತಪಸ್ಸು–ಎಂಬ ಕರ್ಮಗಳೂ ಇತರಾಶ್ರಮಿಗಳಂತೆ ಅಹಿಂಸಾದಿಗಳೂ ಯಥಾಶಕ್ತಿಯಾಗಿ ಗೃಹಸ್ಥನು ಮಾಡುವ ಕರ್ಮಗಳು. ಕೃಚ್ಛ್ರವೇ ಮುಂತಾದ ತಪಸ್ಸುಗಳನ್ನು ಮಾಡಿ ದೇಹವನ್ನು ಕೃಶಗೊಳಿಸುತ್ತಾ ಸ್ವಾಶ್ರಮೋಕ್ತಕರ್ಮಗಳನ್ನು ಆಚರಿಸುವವನು ವಾನಪ್ರಸ್ಥನು. ಸರ್ವಕರ್ಮಗಳನ್ನೂ ಸಂನ್ಯಾಸಮಾಡಿ ಕೇವಲ ಭಿಕ್ಷಾಚರ್ಯೆಯಿಂದ ಜೀವನ ಯಾತ್ರೆಯನ್ನು ಸಾಗಿಸುತ್ತಾ ಬ್ರಹ್ಮಜ್ಞಾನವನ್ನು ಸಂಪಾದಿಸಿಕೊಂಡು ಜ್ಞಾನನಿಷ್ಠನಾಗುವದಕ್ಕೆ ಹವಣಿಸುತ್ತಿರುವವನು ಪರಮಹಂಸಸಂನ್ಯಾಸಿ. ಈ ನಾಲ್ಕು ಆಶ್ರಮದವರಿಗೂ ಯಥಾಶಕ್ತಿಯಾಗಿ ದಶಧರ್ಮಗಳನ್ನು ಪಾಲಿಸುತ್ತಿರುವದು ಅವಶ್ಯವಾಗಿರುತ್ತದೆ. ಇದು ಶಾಸ್ತ್ರದೃಷ್ಟಿಯಿಂದ ವಿಂಗಡಿಸಿ ಹೇಳಿದ ಚಾತುರಾಶ್ರಮ್ಯ.

ಈಗಿನ ಸ್ಥಿತಿ ನಿಮಗೆ ತಿಳಿದೇ ಇದೆ. ಬ್ರಾಹ್ಮಣನು ಯಾವ ಆಶ್ರಮದ ಕರ್ಮವನ್ನೂ ಮಾಡದೆ ಹೊಟ್ಟೆಯಪಾಡಿಗಾಗಿ ಯಾವದಾದರೊಂದು ಉದ್ಯೋಗವನ್ನು ವಹಿಸುತ್ತಾ ಕಾಲಕ್ಷೇಪವನ್ನು ಮಾಡುತ್ತಿದಾನೆ. ಆದ್ದರಿಂದ ಮದುವೆ ಮಾಡಿಕೊಳ್ಳದೆ ಇರುವದೇ ಬ್ರಹ್ಮಚರ್ಯ, ಗಂಡಹೆಂಡಿರು ಸಂಸಾರವನ್ನು ಮಾಡಿಕೊಂಡಿರುವದೇ ಗಾರ್ಹಸ್ಥ್ಯ ಎಂದಾಗಿಬಿಟ್ಟಿದೆ, ಈ ಕಾಲಕ್ಕೆ. ವಾನಪ್ರಸ್ಥರು–ಈಗ ಯಾರು ಎಲ್ಲಿದಾರೆಯೋ ಕಾಣೆ. ಸಂನ್ಯಾಸಿಗಳು ಕಾಷಾಯದಂಡಗಳು, ಅಥವಾ ಕಾಷಾಯಮಾತ್ರ–ಇಷ್ಟರಿಂದಲೇ ತಮಗೆ ಖ್ಯಾತಿ, ಲಾಭ, ಪೂಜೆ–ಮುಂತಾದ ಸೌಕರ್ಯಗಳು ಒದಗಬೇಕೆಂದು ನಿರೀಕ್ಷಿಸುತ್ತಿದಾರೆ. ಹೀಗೆ ವೇಷಧಾರಿಗಳಾದ ಆಶ್ರಮಿಗಳು ಹೆಚ್ಚಾಗುತ್ತಿರುವ ಈ ಕಾಲದಲ್ಲಿ ನಾನು ಹೇಗೆ ವರ್ತಿಸಬೇಕೆಂಬುದನ್ನು ಮತ್ತೊಬ್ಬರು ಹೇಗೆ ತಿಳಿಸಿಕೊಟ್ಟಾರು? ಶಾಸ್ತ್ರದ ಆಶ್ರಯವನ್ನು ಆಧಾರವಾಗಿಟ್ಟುಕೊಂಡು ನಾವು ಯಾವ ಆಶ್ರಮದಲ್ಲಿದ್ದರೂ ಶಕ್ತಿಯಿದ್ದಷ್ಟುಮಟ್ಟಿಗೆ ದೇಶಕಾಲೋಚಿತವಾಗಿ ಆಪದ್ಧರ್ಮವನ್ನಾದರೂ ನಡೆಯಿಸಬಹುದು.

ಆದ್ದರಿಂದ ಶಾಸ್ತ್ರಾಧ್ಯಯನವನ್ನಾಗಲಿ ಏಕಾಂತವಾಸ, ಜಪಧ್ಯಾನಾದಿ ಸಾಧನಗಳ ನ್ನಾಗಲಿ ಮಾಡದೆ ಯಾವಜ್ಜೀವವೂ ಮದುವೆಯಿಲ್ಲದೆ ಇರುವೆನೆಂಬ ಸಂಕಲ್ಪಮಾತ್ರದಿಂದ ನೈಷ್ಠಿಕಬ್ರಹ್ಮಚರ್ಯವು ದಕ್ಕಲಾರದು. ಸದ್ಗುರುಗಳನ್ನು ಸೇವೆಮಾಡುತ್ತಾ ಶಾಸ್ತ್ರಾಭ್ಯಾಸ ವನ್ನೂ ಮಾಡುತ್ತಾ ಅಧ್ಯಾತ್ಮಸಾಧನವನ್ನು ಮಾಡುತ್ತಲಾದರೂ ಇರಬಹುದು, ಅಥವಾ ವೇದಾಂತಾಭ್ಯಾಸವೂ ಆಗಿ ವಿರಕ್ತರೂ ಆಗಿದ್ದರೆ ಪರಿವ್ರಾಜಕರಾಗಿ ಧರ್ಮಪರರಾಗಿ ಜ್ಞಾನನಿಷ್ಠೆಗೆ ಉಪಾಯಗಳನ್ನು ಅಭ್ಯಾಸಮಾಡುತ್ತಿರಬಹುದು–ಎಂಬುದು ನನ್ನ ಅಭಿಪ್ರಾಯ. ನೀವೂ ಯುಕ್ತಾಯುಕ್ತವಿಚಾರವನ್ನು ಮಾಡಿ ನೋಡಿರಿ.

## 273. ಶ್ರದ್ಧೆ

### (ಜುಲೈ 1969)

*ಶ್ರದ್ಧೆಯಿಂದ ಮಾಡಿದ ಕರ್ಮಕ್ಕೇ ಫಲವಾಗುವದೆಂದು ಆಗಾಗ್ಗೆ ಹೇಳಲಾಗುತ್ತಿದೆ. ಶ್ರದ್ಧೆಯು ಲೋಕದಲ್ಲಿ ಯಾವ ಕೆಲಸಕ್ಕಾದರೂ ಬೇಕೇಬೇಕೆಂಬುದು ನಿಜವಾದರೂ ಜನ್ಮಾಂತರದಲ್ಲಿ ಅಥವಾ ಪರಲೋಕದಲ್ಲಿ ತಾನು ಮಾಡಿದ ಕರ್ಮಕ್ಕೆ ಫಲವಾಗುವದೆಂಬುದನ್ನು ಸಾಧಕನು ನಂಬುವದು ಕಷ್ಟವಲ್ಲವೆ? ಈ ಲೋಕದ ವಿಷಯಗಳ ಭೋಗವನ್ನು ಕೈಬಿಟ್ಟು ಲೋಕಾಂತರದಲ್ಲಿ ಫಲವಾಗುವದೆಂದು ನಂಬುವವನಿಗೆ 'ನಿಜವು ಹೀಗಿಲ್ಲದಿದ್ದರೆ ನಾನು ಇದ್ದದ್ದನ್ನು ಕೈ ಬಿಟ್ಟು ಎಲ್ಲಿ ಮೋಸ ಹೋದೇನೊ!'–ಎಂಬ ಸಂಶಯವು ಬರುವದು ಸ್ವಾಭಾವಿಕ. ನನಗೇನೋ ಶಾಸ್ತ್ರದಲ್ಲಿಯೂ ದೊಡ್ಡವರ ಉಪದೇಶಗಳಲ್ಲಿಯೂ ನಂಬಿಕೆಯಿದೆ; ಆದರೆ ಆಗಾಗ್ಗೆ ಈ ಸಂಶಯವೂ ತಲೆಹಾಕುತ್ತಿದೆ. ಪರಲೋಕದಲ್ಲಿ ಕಾಲಾಂತರದಲ್ಲಿ ಆಗುವ ಫಲದ ವಿಚಾರವು ಇಲ್ಲಿ ಬದುಕಿರುವವರಿಗೆ ಗೊತ್ತಾಗುವ ಸಂಭವವಿದೆಯೆ? ಸಾಧಕನಾದವನು ಸಂಶಯವನ್ನು ನೀಗಿಕೊಂಡು ಪೂರ್ಣಶ್ರದ್ಧೆಯನ್ನು ಸಂಪಾದಿಸಿಕೊಳ್ಳುವದಕ್ಕೇನುಮಾಡಬೇಕು? ಇದನ್ನು ದಯವಿಟ್ಟು ನನಗೆ ತಿಳಿಸಿರಿ. ನನಗೆ ಪೂರ್ಣಶ್ರದ್ಧೆಯು ಬರುವದಕ್ಕೆ ಏನು ಮಾಡಲಿ?–ಎಂದು ಕೇಳಿ ನೀವು ಬರೆದಿರುವ ಪತ್ರವು ತಲುಪಿದೆ.*

ಶ್ರದ್ಧೆಯೆಂಬುದೊಂದು ದೈವಿಕಸಂಪತ್ತು; ಅದು ಈಶ್ವರನ ಅಥವಾ ಸಿದ್ಧ ಪುರುಷರ ಅನುಗ್ರಹದಿಂದಲೇ ಮೈಗೂಡಿಕೊಳ್ಳಬೇಕು. ಆದರೆ ತರ್ಕಬದ್ಧವಾದ ಪ್ರಶ್ನೆಗೆ ತರ್ಕಬದ್ಧವಾಗಿಯೇ ಉತ್ತರವನ್ನು ಮಾಡಬೇಕಾದದ್ದರಿಂದ ಕೆಲವು ವಾಕ್ಯಗಳನ್ನು ಇಲ್ಲಿ ಬರೆಯುವೆನು. '**ಶ್ರದ್ಧಾವಾನ್ ಲಭತೇ ಜ್ಞಾನಮ್**' । (ಗೀ. 4–39 ಶ್ರದ್ಧಾವಂತನಿಗೆ ಜ್ಞಾನವು ದೊರೆಯುವದು) ಎಂದು ಹೇಳಿ '**ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ । ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ॥** (ಗೀ.4–40 ತಿಳಿಯದೆ ಇರುವವನು ಶ್ರದ್ಧಾಹೀನನಾಗಿ ಸಂಶಯಾತ್ಮಕನಾಗಿದ್ದರೆ ಈ

ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ಪುರುಷಾರ್ಥವು ದೊರಕದು, ಅವನಿಗೆ ಸುಖವೂ ದೊರಕದು) ಎಂದು ಭಗವಂತನು ಸಂಶಯಗ್ರಸ್ತನಾದವನನ್ನು ನಿಂದಿಸಿರುತ್ತಾನೆ. ಜ್ಞಾನವೆಂಬುದು ಈಗಲೇ ಇಲ್ಲಿಯೇ ನಮ್ಮ ಆತ್ಮನಾಗಿರುವ ಭಗವಂತನ ಸ್ವರೂಪದ ಜ್ಞಾನವಾದ್ದರಿಂದ ಅದರ ಬಗ್ಗೆ ಸಂಶಯವುಂಟಾಗುವದಕ್ಕೆ ಕಾರಣವೇ ಇಲ್ಲ. ಮಕ್ಕಳಿಗೆ ಪಾಠಶಾಲೆಯಲ್ಲಿ ಲೌಕಿಕಜ್ಞಾನವಾಗುವದು ಎಂಬ ನಂಬಿಕೆಯಿಲ್ಲದಿದ್ದರೆ ಯಾರು ತಾನೆ ಅವರ ವಿದ್ಯಾಭ್ಯಾಸಕ್ಕಾಗಿ ಶ್ರಮಪಡುತ್ತಿದ್ದರು? ನೀವು ಹೇಳುವಂತೆ ವೈದ್ಯ, ಕೃಷಿ–ಮುಂತಾದವುಗಳಲ್ಲಿ ಶ್ರದ್ಧೆಯಿರುವದರಿಂದಲೇ ಜನರು ಔಷಧ ಸೇವನೆ, ನೆಲವನ್ನು ಉಳುವದು–ಮುಂತಾದ ಲೌಕಿಕಕಾರ್ಯಗಳಲ್ಲಿ ತೊಡಗುತ್ತಾರೆ. ಅದರಂತೆ ಆತ್ಮಜ್ಞಾನಕ್ಕಾಗಿ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಿಸುವವನಿಗೂ ಶ್ರದ್ಧೆಯು ಬೇಕು–ಎಂಬುದು ಸ್ಪಷ್ಟವೇ ಆಗಿದೆ.

ಪರಲೋಕದಲ್ಲಿ ಅಥವಾ ಜನ್ಮಾಂತರದಲ್ಲಿ ಆಗುವ ಕರ್ಮೋಪಾಸನೆಗಳಿಗೆ ಫಲವು ಆದೀತೆಂದು ಹೇಗೆ ನಂಬಬೇಕು? ಮತ್ತೊಬ್ಬರಿಗಾದರೂ ಈ ಫಲವು ದೊರಕಿದೆ ಎಂಬುದೂ ಶ್ರದ್ಧೆಯಿಂದಲೇ ನಂಬತಕ್ಕದ್ದಾಗಿದೆಯಲ್ಲವೆ?–ಎಂಬ ಪ್ರಶ್ನೆ ಎದ್ದುಕೊಳ್ಳುವದು ಸ್ವಾಭಾವಿಕ. ಆದರೆ ಭಗವಂತನು ಈ ವಿಷಯಕ್ಕೆ '**ಅಶ್ರದ್ಧಯಾಹುತಂ ದತ್ತಂ ತಪಸ್ತಪ್ತಂ ಕೃತಂ ಚ ಯತ್ । ಅಸದಿತ್ಯುಚ್ಯತೇ ಪಾರ್ಥ ನ ಚ ತತ್ ಪ್ರೇತ್ಯ ನೋ ಇಹ॥**' (ಗೀ. 18–28) ಶ್ರದ್ಧೆಯಿಲ್ಲದೆ ಹೋಮಮಾಡಿದ್ದು, ದಾನಮಾಡಿದ್ದು, ತಪಸ್ಸುಮಾಡಿದ್ದು, ಅಥವಾ ಮತ್ತೆ ಯಾವದಾದರೊಂದು ಕರ್ಮವನ್ನು ಮಾಡಿದ್ದು ವ್ಯರ್ಥ; ಅದಕ್ಕೆ ಪರಲೋಕದಲ್ಲಿಯೂ ಫಲವಿಲ್ಲ, ಇಲ್ಲಿಯೂ ಇಲ್ಲ–ಎಂದು ಸ್ಪಷ್ಟವಾಗಿ ಹೇಳಿರುತ್ತಾನೆ. ಕರ್ಮ, ಉಪಾಸನೆ–ಮುಂತಾದವುಗಳಿಗೆ ಇಲ್ಲಿಯೇ ಫಲವಾಗುವಂತಿಲ್ಲವೆಂಬುದು ಮೇಲೆಯೇ ಕಾಣುತ್ತದೆ. ಆದರೂ ಕರ್ಮವನ್ನು ಶ್ರದ್ಧೆಯಿಂದ ಮಾಡುವವನಿಗೂ ಉಪಾಸನೆಯನ್ನು ಶ್ರದ್ಧಾಭಕ್ತಿಗಳಿಂದ ಮಾಡುವವನಿಗೂ ಈ ಜನ್ಮದಲ್ಲಿಯೇ ಅಂತಃಕರಣದಲ್ಲಾಗುವ ಸಂಸ್ಕಾರವು ಅನುಭವಗೋಚರವಾಗುವದರಿಂದ, ಕಾಲಾಂತರದಲ್ಲಾಗುವ ಬೆಳೆಯ ಅಂಕುರದಿಂದಲೇ ಶ್ರದ್ಧೆಯುಂಟಾಗುವಂತೆ, ಇಲ್ಲಿಯೂ ಅವಶ್ಯವಾಗಿ ಉಂಟಾಗುವದು.

ಶಾಸ್ತ್ರವಿಧಾನವನ್ನರಿಯದವರು ಕೂಡ ಶ್ರದ್ಧೆಯಿಂದ ಆರಾಧನೆಮಾಡಿದರೆ ಅವರವರ ಶ್ರದ್ಧೆಗನುಗುಣವಾಗಿ ಫಲವು ಅವಶ್ಯವಾಗಿ ಸಿಕ್ಕುವದೆಂದು ಭಗವಂತನು ಗೀತೆಯ ಹದಿನೇಳನೆಯ ಅಧ್ಯಾಯದಲ್ಲಿ ಹೇಳಿರುತ್ತಾನೆ. ಅಂಥವರು ಮಾಡಿದ ಕರ್ಮದಲ್ಲಿರಬಹುದಾದ ನ್ಯೂನಾತಿರೇಕಗಳಿಗೆ ಭಗವನ್ನಾಮಸ್ಮರಣೆಯಿಂದ ಪ್ರಾಯಶ್ಚಿತ್ತವಾದಂತೆ

ಆಗಿ ಅವರ ಅನುಷ್ಠಾನಕ್ಕೂ ಸಾದ್ಗುಣ್ಯವುಂಟಾಗುವದೆಂದು ಆತನೇ ಹೇಳಿರುತ್ತಾನೆ. ಆದ್ದರಿಂದ ಶ್ರದ್ಧೆಯ ವಿಷಯಕ್ಕೆ ಸಂಶಯಪಡುವದಕ್ಕೆ ಯಾವ ಕಾರಣವೂ ಇಲ್ಲವೆಂದು ನನಗೆ ತೋರುತ್ತಿದೆ. ಭಗವಂತನ ಅನುಗ್ರಹದಿಂದ ನಿಮಗೂ ಈ ವಿಷಯದಲ್ಲಿ ಶ್ರದ್ಧೆಯು ಬೆಳೆದುಕೊಳ್ಳಲೆಂದು ಹಾರೈಸುತ್ತೇನೆ.

## 274. ಅಧ್ಯಾತ್ಮಸಾಧನವೂ ಸಿದ್ಧಾಂತವೂ

(ಆಗಸ್ಟ್ 1969)

*ನಿಮ್ಮ ಪತ್ರವು ತಲುಪಿರುತ್ತದೆ. ನೀವು ಕೇಳಿರುವ ಪ್ರಶ್ನೆಗಳು ಅದ್ವೈತ ಸಿದ್ಧಾಂತದ ಮೇಲೆ ಬೇರೆಯ ಪ್ರಸ್ಥಾನಗಳನ್ನು ಅವಲಂಬಿಸಿರುವವರು ಎತ್ತುವ ಆಕ್ಷೇಪಗಳಾಗಿರುತ್ತವೆ. ಈ ಪಕ್ಷಪ್ರತಿಪಕ್ಷಗಳಲ್ಲಿ ಯಾರ ಮತವು ಸರಿ?–ಎಂಬುದನ್ನು ನಿರ್ಣಯಿಸುವವರು ಶ್ರುತಿಗಳು, ತರ್ಕ–ಇವುಗಳ ಸಾರವನ್ನು ಆಗಲೇ ಗೊತ್ತುಮಾಡಿಕೊಂಡವರಾಗಿರಬೇಕು. ಎರಡೂ ಪ್ರಸ್ಥಾನಗಳ ಪ್ರಧಾನಪ್ರಮೇಯ ತತ್ತ್ವಗಳನ್ನು ಅರಿತವರಾಗಿರಬೇಕು. ಅಂಥವರ ಪ್ರಶ್ನೆಗಳಿಗೆ ಮತ್ತೊಬ್ಬರು ಕೊಡುವ ಉತ್ತರಗಳು ಹೇಗೆತಾನೆ ಚಿತ್ತಸಮರ್ಪಕವಾದಾವು? ಆದರೆ ನೀವು ನಿಮಗೆ ಉಂಟಾಗಿರುವ ಕೆಲವು ಸಂಶಯಗಳನ್ನು ಮಾತ್ರ ಪರಿಹರಿಸಬೇಕೆಂದು ಕೇಳಿರುವದರಿಂದ ಸಾಮಾನ್ಯ ರೀತಿಯಿಂದ ಕೆಲವು ಸೂಚನೆಗಳನ್ನು ಇಲ್ಲಿ ಬರೆಯುತ್ತಿದೇನೆ. ಆದ್ದರಿಂದ ಪ್ರಶ್ನೆಗಳಿಗೆ ನೇರಾಗಿ ಉತ್ತರವನ್ನು ಕೊಡಲಿಲ್ಲವಲ್ಲ!–ಎಂಬ ಕಳವಳಕ್ಕೆ ಅವಕಾಶವನ್ನು ಕೊಟ್ಟುಕೊಳ್ಳಬೇಡಿರಿ.*

ಅದ್ವೈತಸಿದ್ಧಾಂತವೆಂಬುದು ತರ್ಕದಿಂದ ನಿರ್ಣಯಮಾಡಬೇಕಾಗಿರುವ ಕೆಲವು ತೊಡಕಿನ ಪ್ರಶ್ನೆಗಳ ಕಗ್ಗಂಟು ಎಂಬ ಭಾವನೆಯನ್ನು ಎಲ್ಲಕ್ಕೂ ಮೊದಲು ನೀವು ತೊಲಗಿಸಿಕೊಳ್ಳಬೇಕು. ಅದ್ವೈತಜ್ಞಾನವು ಹೇಗೆ ಆಗುವದೆಂಬ ವಿಷಯಕ್ಕೆ ವೇದಾಂತ ಸಂಪ್ರದಾಯವನ್ನು ಬಲ್ಲವರಾದ ಶ್ರೀಗೌಡಪಾದಾಚಾರ್ಯರು ಅನುಗ್ರಹಿಸಿರುವ ಈ ಉಪದೇಶವಾಕ್ಯವನ್ನು ಮನನ ಮಾಡಬೇಕಾದದ್ದು ಅವಶ್ಯ:

**ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ।**
**ಅಜಮನಿದ್ರಮಸ್ವಪ್ನಮದ್ವೈತಂ ಬುಧ್ಯತೇ ತದಾ ॥** **ಗೌ.ಕಾ.1–16**

ಜೀವನು ಎಂದರೆ 'ನಾನು ಕರ್ತೃಭೋಕ್ತೃವಾದ ಸಂಸಾರಿಯು' ಎಂದು ಗಟ್ಟಿಯಾಗಿ ನಂಬಿರುವಾತನು. ಅವನಿಗೆ ಅನಾದಿಕಾಲದಿಂದಲೂ ಒಂದು ಧೀರ್ಘವಾದ ಸ್ವಪ್ನವು ಕಾಣುತ್ತಿರುವದು. ಗಾಢನಿದ್ರೆಯಲ್ಲಿರುವವನಿಗೆ ತಟ್ಟನೆ ಒಂದು ಕನಸಾದರೆ, ಅದನ್ನೇ ಎಚ್ಚರವೆಂದು ಭಾವಿಸುವಂತೆ, ಸಂಸಾರಿಗಳಾದ ಜೀವರು ಪರಮಾರ್ಥವನ್ನು ಅರಿಯದೆ

ಇರುವದೆಂಬ ನಿದ್ರೆಯಲ್ಲಿ ದ್ವೈತರೂಪವಾದ– ಅನೇಕ ಕರ್ತೃಭೋಕ್ತೃಗಳಿಂದ ಕೂಡಿದ ಪ್ರಪಂಚದೊಳಗಿದ್ದುಕೊಂಡು ಕೆಲಕೆಲವು ಸಾಧನಗಳನ್ನುಪಯೋಗಿಸಿಕೊಂಡು ಬಗೆಬಗೆಯ ಕೆಲಸಗಳನ್ನು ಮಾಡುತ್ತಾ ಅವುಗಳ ಫಲವನ್ನು ಪಡೆದುಕೊಂಡು ಸುಖದುಃಖಗಳನ್ನು ಅನುಭವಿಸುತ್ತಿರುವವರು ನಾವು– ಎಂದುಕೊಂಡಿರುತ್ತಾರೆ. ಆದರೆ ಶ್ರೀಕೃಷ್ಣಭಗವಂತನು ಹೇಳಿರುವಂತೆ ಜ್ಞಾನಿಗಳು ಮಿಕ್ಕ ಎಲ್ಲಾ ಪ್ರಾಣಿಗಳಿಗೂ ಆಗುತ್ತಿರುವ ಈ ನಿದ್ರಾಪ್ರಪಂಚದ ತತ್ತ್ವವನ್ನು ಇದೆಲ್ಲವೂ ಪರಮಾರ್ಥವಾದ ಅದ್ವೈತತತ್ತ್ವವೇ ಎಂದು ಅರಿತುಕೊಂಡು ಎಚ್ಚರದಿಂದಿರುತ್ತಾರೆ. **'ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿಸಂಯಮೀ'** (ಗೀ.2–69) ಎಂಬ ಗೀತಾಶ್ಲೋಕಾರ್ಧದ ಅಭಿಪ್ರಾಯವಿದು.

ಇದೇ ಪ್ರಪಂಚದಲ್ಲಿರುವಂತೆ ನಮ್ಮಗಳಿಗೆ ಕಾಣುತ್ತಿರುವ ಜ್ಞಾನಿಗಳೂ ಇರುತ್ತಾರೆ. ದ್ವಿಭಾಷಾಭಿಜ್ಞರಾದವರು ಒಂದು ಭಾಷೆಯನ್ನು ಇನ್ನೊಂದಕ್ಕೆ ಪರಿವರ್ತಿಸುವ ಶಕ್ತಿಯುಳ್ಳವರಾಗಿರುವಂತೆ, ಎಚ್ಚತ್ತಿರುವೆವೆಂದು ಭಾವಿಸಿರುವ ಸಂಸಾರಿಗಳು ಕನವರಿಸಿಕೊಳ್ಳುತ್ತಿದಾರೆಂಬುದನ್ನು ಅವರು ಬಲ್ಲರು. ಈ ಜಗತ್ತೆಲ್ಲವೂ ಇತರರಿಗೆ ಸತ್ಯವೆಂದು ತೋರುತ್ತಿದ್ದರೂ ಇದು ಪರಮಾತ್ಮನೇ ಎಂಬುದನ್ನೂ ಅವರು ಬಲ್ಲರು. ಮಿಕ್ಕವರಿಗೂ ಈ ತತ್ತ್ವನ್ನು ಹೇಳಿಕೊಡುವ ಸಾಮರ್ಥ್ಯವೂ ಅವರಿಗಿರುತ್ತದೆ.

ಆತ್ಮಾನುಭವಿಗಳಾದ ಆಚಾರ್ಯರು ನಮಗೆ ಉಂಟಾಗಿರುವ ಈ ಅನಾದಿ ನಿದ್ರೆಯಲ್ಲಿ ಕಾಣುತ್ತಿರುವ ಕನಸಿನಿಂದ ನಮ್ಮನ್ನು ಮೆಲ್ಲಮೆಲ್ಲಗೆ ಎಚ್ಚರಿಸುವದಕ್ಕೆಂದು ಕರ್ಮಯೋಗ, ಧ್ಯಾನಯೋಗ, ಭಕ್ತಿಯೋಗ, ಜ್ಞಾನಯೋಗ– ಎಂಬ ಸಾಧನಗಳನ್ನು ನಮ್ಮ ನಮ್ಮ ಯೋಗ್ಯತೆಗೆ ತಕ್ಕಂತೆ ಉಪದೇಶಿಸುವರು. ಅಂಥ ಸದ್ಗುರುಗಳ ಉಪದೇಶದಿಂದ ನಮಗೆ ಸಾಧನಾನುಷ್ಠಾನದಲ್ಲಿ ಒಲವು ಉಂಟಾಗುತ್ತದೆ. ಅದರ ಸಹಾಯದಿಂದ ಕ್ರಮಕ್ರಮವಾಗಿ ನಿದ್ರೆಯ ವೇಗವು ತಪ್ಪುವದು. ನಿದ್ರೆಯಲ್ಲಿ ತಾನೆ ಕನಸು ಕಾಣುತ್ತಿರುವದು? ಯಾವಾಗ ಈ ಸಂಸಾರದ ನಿದ್ರೆಯು ತೊಲಗುವದೋ ಆಗ ಸಂಸಾರಿಯಾದ ಜೀವನಿಗೆ– ಕನಸನ್ನು ತೊಲಗಿಸಿಕೊಂಡು ಎಚ್ಚತ್ತವನಿಗೆ ಸ್ವಪ್ನಪ್ರಪಂಚವು ಮರೆಯಾಗುವಂತೆ– ಈ ಮಾಯಾದ್ವೈತವು ಮಾಯವಾಗುವದು; ಆ ಅನುಭವವೇ ಅದ್ವೈತಜ್ಞಾನವೆಂಬುದು. ಅದ್ವೈತದರ್ಶನವೆಂಬ ಜ್ಞಾನದಿಂದ ಎಚ್ಚರವಾದಾಗ 'ನನಗೆ ಅಜ್ಞಾನವಿಲ್ಲ, ದ್ವೈತ ಪ್ರಪಂಚದಲ್ಲಿ ನಾನಿಲ್ಲ' ಎಂಬುದು ಮನದಟ್ಟಾಗಿಬಿಡುವದರಿಂದ ಯಾವ ಸಂಶಯಗಳೂ ಉಳಿಯುವದಿಲ್ಲ.

ಹರಿಗುರುಗಳ ಅನುಗ್ರಹದಿಂದ ನಿಮಗೆ ಈ ಅನುಭವಕ್ಕೆ ತಕ್ಕ ಸಾಧನಾನುಷ್ಠಾನವು ಲಭಿಸಲೆಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

## 275. ಪರರ ಗುಣದೋಷಗಳ ವಿಮರ್ಶೆ

**(ಸೆಪ್ಟೆಂಬರ್ 1969)**

*ನಿಮ್ಮ ಪತ್ರವು ತಲುಪಿ ಅಭಿಪ್ರಾಯವಾಗಿರುತ್ತದೆ. ನಮ್ಮಲ್ಲಿರುವ ಗುಣದೋಷಗಳನ್ನು ತಿಳಿದುಕೊಳ್ಳುವದಕ್ಕೆ ಮತ್ತೊಬ್ಬರ ಗುಣದೋಷಗಳನ್ನು ವಿಮರ್ಶಿಸುವದು ಒಂದು ಅಪಾಯಕರವಾದ ಸಾಧನವೆಂದು ನನ್ನ ಭಾವನೆ. ನಮ್ಮ ಕಾಲದಲ್ಲಿ ನಮ್ಮ ಹತ್ತಿರವೇ ಇರುವವರ ಸ್ವಭಾವವನ್ನು ವಿಮರ್ಶಿಸುವದಕ್ಕೆ ಹೋದರೆ, ನಮ್ಮ ತತ್ಕಾಲದ ದೃಷ್ಟಿಯಿಂದ ಸಲ್ಲದ ಭಾವನೆಗಳೂ ಎದ್ದುಕೊಳ್ಳುವ ಸಂಭವವೂ ಇದೆ.*

ನೀವು ಬರೆದಿರುವ ಪತ್ರದಂತೆ ಯಾರೊಬ್ಬರೂ ಈಗ್ಗೆ ನಿರ್ದುಷ್ಟರಾದವರು ಇಲ್ಲವೇ ಇಲ್ಲವೇನೋ–ಎಂಬ ಅಭಿಪ್ರಾಯವುಂಟಾಗುವಂತೆ ಇದೆ. ಲೋಕದಲ್ಲಿ ಸರ್ವಥಾ ನಿರ್ಗುಣವಾದ ಅಥವಾ ನಿರ್ದೋಷವಾದ ಯಾವ ಪದಾರ್ಥವೂ ಇರುವದೇ ಇಲ್ಲ. ಆದ್ದರಿಂದ ನಮ್ಮ ಕಣ್ಣಿಗೆ ಬೀಳುವ ಪದಾರ್ಥಗಳಲ್ಲಿ ಅಥವಾ ಜನರಲ್ಲಿ ಇದ್ದಷ್ಟು ಗುಣಗಳನ್ನು ಕಂಡು ಸಂತೋಷಪಡುವ ಅಭ್ಯಾಸವನ್ನುಮಾಡಬೇಕು. ಸಮಾನರಲ್ಲಿ ಮೈತ್ರಿ, ನಮಗಿಂತ ಮೇಲಿನ ಸ್ಥಿತಿಯವರನ್ನು ನೋಡಿದಾಗ ಸಂತೋಷಪಡುವದು, ಕೆಟ್ಟವರೆಂದು ಕಾಣುವವರಲ್ಲಿ ಉಪೇಕ್ಷೆ–ಇವುಗಳು ದೊಡ್ಡ ಸಾಧನಗಳು.

ನೀವು ಅಧ್ಯಾತ್ಮದೃಷ್ಟಿಯಿಂದ ಹೇಳಬೇಕಾದ ಸೂಚನೆಗಳನ್ನು ಕೇಳಿರುತ್ತೀರಾದ್ದರಿಂದ ಭಾಗವತದಲ್ಲಿ ಉದ್ಧವನಿಗೆ ಶ್ರೀಕೃಷ್ಣಭಗವಂತನು ಹೇಳಿರುವ ಒಂದು ಬುದ್ಧಿವಾದವನ್ನು ಇಲ್ಲಿ ನೆನಪಿಗೆ ತರುವ ಇಚ್ಛೆಯುಂಟಾಗಿದೆ. ಗುಣದೋಷಗಳ ಲಕ್ಷಣದ ಸಂಕ್ಷಿಪ್ತವಾದ ನಿಶ್ಚಯವು ಹೇಗೆಂದರೆ ಗುಣದೋಷಗಳೆಂಬ ವಿಂಗಡದ ದೃಷ್ಟಿಯೇ ಒಂದು ದೋಷ; ಆ ದೃಷ್ಟಿಯನ್ನು ಬಿಟ್ಟು ಸರ್ವತ್ರಸಮದೃಷ್ಟಿಯನ್ನು ಅಳವಡಿಸಿಕೊಳ್ಳುವದೇ ಗುಣವು.

'ಭಗವಂತ, ನನಗೆ ಯಾರೊಬ್ಬರಲ್ಲಿಯೂ ದೋಷವು ತೋರದಂತೆ ಮಾಡು!' ಎಂದು ಮನಃಪೂರ್ವಕವಾಗಿ ಬೇಡಿಕೊಳ್ಳಿರಿ. ಸತ್ಸಂಗದಿಂದ ಆತ್ಮಪರೀಕ್ಷಣದಮರ್ಮವು ಅಳವಡಲಿ! ಎಂದು ಭಗವಂತನನ್ನು ಅನುದಿನವೂ ಪ್ರಾರ್ಥಿಸಿಕೊಳ್ಳುತ್ತಿರಿ. ನಿಮಗೆ ಸನ್ಮಾರ್ಗದಲ್ಲಿ ಪ್ರವೃತ್ತಿಯು ಅವಶ್ಯವಾಗಿ ಆಗುವದು.

## 276. ಅಧ್ಯಾತ್ಮವಿದ್ಯಾಕಾಲಕ್ಷೇಪ

### (ಅಕ್ಟೋಬರ್ 1969)

*ನಿಮ್ಮ ಪತ್ರವು ತಲುಪಿ ವಿಷಯವು ತಿಳಿಯಿತು. ನೀವು ಬರೆದಿರುವ ವಿವರದಿಂದ ನಿಮಗೆ ಅಧ್ಯಾತ್ಮವಿದ್ಯೆಯಲ್ಲಿ ಅಭಿರುಚಿಯಿದೆ ಎಂದು ಗೊತ್ತಾಗುತ್ತದೆ. ಆದರೆ ಈಗ ನೀವು ಮಾಡುತ್ತಿರುವ ಕಾಲಕ್ಷೇಪದ ಕ್ರಮದಿಂದ ನಿಮ್ಮ ಸಾಧನಾನುಷ್ಠಾನಕ್ರಮವು ವ್ಯವಸ್ಥಿತವಾಗಲಾರದು, ಅದರಿಂದ ನಿಮಗೆ ಆಗಬೇಕಾದ ಚಿತ್ತಶುದ್ಧಿಯೂ ದೊರಕಲಾರದು–ಎಂದು ಬರೆಯಲು ನನಗೆ ದುಃಖವಾಗುತ್ತಿದೆ.*

ವ್ಯವಹಾರದಲ್ಲಿ ಒಬ್ಬ ಮನುಷ್ಯನು ನಾಲ್ಕು ದಿನ ಅಂಗಡಿಯ ವ್ಯಾಪಾರ, ನಾಲ್ಕು ದಿನ ತೋಟದ ಕೆಲಸ, ಇನ್ನು ನಾಲ್ಕು ದಿನ ಒಂದು ಕಾರಖಾನೆಯಲ್ಲಿ ಲೆಕ್ಕಬರೆಯುವ ಉದ್ಯೋಗ, ಮತ್ತೆ ಕೆಲವುದಿನ ಒಂದು ಆಟದ ಕಂಪೆನಿಯವರಿಗಾಗಿ ಟಿಕೆಟ್ ಕೊಡುವ ಉದ್ಯೋಗ–ಹೀಗೆ ಮಾಡುತ್ತಿದ್ದರೆ ಅವನ ವ್ಯಾವಹಾರಿಕ ಜೀವನವು ವ್ಯವಸ್ಥಿತವಾಗಿ ನಡೆದೀತೇನು? ಅವನು ತನಗೆ ಒಪ್ಪಾದ ಯಾವದಾದರೂ ಒಂದು ಉದ್ಯೋಗವನ್ನು ಹಿಡಿದು ಸ್ಥಿರಚಿತ್ತದಿಂದ ಕೆಲಸ ಮಾಡಿದರೇ ಅಲ್ಲವೇ, ಅವನಿಗೆ ಅಭ್ಯುದಯವು ದೊರಕೀತು?

ಹೀಗೆಯೇ ನೀವು ಉಪನ್ಯಾಸಗಳನ್ನು ಕೇಳುವದೂ, ಪುರಾಣಶ್ರವಣ, ದೇವತಾರ್ಚನೆ, ತೀರ್ಥಸ್ನಾನ, ಜಪ, ಪಾರಾಯಣ–ಮುಂತಾಗಿ ಒಂದೊಂದು ಸಾಧನವನ್ನು ಅಷ್ಟಿಷ್ಟುಕಾಲ ಮಾಡಿ, ಏತರಿಂದಲೂ ಪ್ರಯೋಜನವು ಕಾಣಿಸುವದಿಲ್ಲ–ಎಂದು ಬರೆದಿರುತ್ತೀರಿ.

ಸಾಧನಾನುಷ್ಠಾನವು ಸಪ್ರಯೋಜನವಾಗಬೇಕಾದರೆ ಸಾಧನವನ್ನು ವಿನೋದಕ್ಕಾಗಿ ಅಥವಾ ಕುತೂಹಲನಿವೃತ್ತಿಗಾಗಿ ಉಪಯೋಗಿಸುವ ಹವ್ಯಾಸವನ್ನು ಬಿಡಿರಿ. ನಿಮಗೆ ಇಷ್ಟವಾದ ಯಾವದಾದರೊಂದು ದೇವತೆಯ ಉಪಾಸನೆಯ ಕ್ರಮವನ್ನು ಬಲ್ಲವರಿಂದ ತಿಳಿದುಕೊಂಡು ಸ್ಥಿರಪ್ರಯತ್ನದಿಂದ ಅನುಷ್ಠಾನವನ್ನು ಪ್ರಾರಂಭಿಸಿರಿ. ಭಗವಂತನು ನಿಮ್ಮ ಪ್ರಯತ್ನವನ್ನು ಸಫಲಗೊಳಿಸುವನು.

ತತ್ತ್ವಜ್ಞಾನವುಂಟಾಗಬೇಕಾದರೆ, ಶಾಸ್ತ್ರಾಚಾರ್ಯವಾಕ್ಯಗಳಲ್ಲಿಯೂ ಅವರು ಹೇಳಿಕೊಡುವ ಸಾಧನಾನುಷ್ಠಾನಗಳಲ್ಲಿಯೂ ಶ್ರದ್ಧೆಯಿರಬೇಕು. ಗುರಿಯನ್ನು ಮುಟ್ಟುವದರಲ್ಲಿ ತಾತ್ಪರ್ಯವು ಎಂದರೆ ಎಡೆಬಿಡದೆ ಮಾಡುವ ಸ್ಥಿರಪ್ರಯತ್ನವೂ ಇರಬೇಕು. ಇಂದ್ರಿಯಗಳು ಬಾಹ್ಯವಿಷಯಗಳಲ್ಲಿ ಹರಿದಾಡದಂತೆ ಅವುಗಳನ್ನು ಬಿಗಿಹಿಡಿಯುವ ಪ್ರಯತ್ನವೂ ಬೇಕು. ಇವು ಮೂರನ್ನೂ ಸಾಧಿಸಿಕೊಳ್ಳುವದಕ್ಕೆ ಮೊದಮೊದಲು ಪ್ರಯತ್ನವನ್ನು ಮಾಡಿರಿ. ನಿಮ್ಮ ಅಧಿಕಾರಕ್ಕೆ ತಕ್ಕ ಸಾಧನವನ್ನೇ

ಮಾಡುತ್ತಾ ಮೆಲ್ಲಮೆಲ್ಲಗೆ ಮೇಲುಮೇಲಿನ ಸಾಧನಗಳಿಗೆ ಏರುವದಕ್ಕೆ ಯತ್ನಿಸಿರಿ. ಆಗ ನಿಮಗೆ ಸಿದ್ಧಿಯು ಲಭಿಸುವದು.

## 277. ರಾಮಕೃಷ್ಣ ಹರಿ

### (ನವೆಂಬರ್1969)

*ನಿಮ್ಮ ಪತ್ರವು ತಲುಪಿ ವಿಷಯವೇನೆಂಬುದು ಮನಸ್ಸಿಗೆ ತಟ್ಟಿರುತ್ತದೆ. ವರ್ಷಕ್ಕೊಮ್ಮೆ ಪಂಢರಿಗೆ ಹೋಗಿಬರುವದು, ಮನೆಯಲ್ಲಿ 'ರಾಮಕೃಷ್ಣ ಹರಿ' ಎಂಬ ಭಜನೆಯನ್ನು ಮಾಡುತ್ತಿರುವದು–ಇವೆರಡನ್ನು ಬಿಟ್ಟರೆ ನಾನು ಮಾಡುವ ಅನುಷ್ಠಾನವು ಮತ್ತೆ ಯಾವದೂ ಹೇಳಿಕೊಳ್ಳುವಂಥದ್ದು ಇಲ್ಲ. ಈ ದ್ವಾರದಿಂದಲೇ ನಮಗೆ ಪರಗತಿಯಾದೀತೆ?–ಎಂದು ಕೇಳಿರುತ್ತೀರಿ.*

ನಿಮಗೆ ಮಿಕ್ಕ ಎಲ್ಲಾ ಸಾಧನಗಳೂ ಕೈಬಿಟ್ಟಿದ್ದರೂ ಅಪೂರ್ವಪುಣ್ಯವಶದಿಂದ ವಿಠ್ಠಲನ ದರ್ಶನಕ್ಕಾಗಿ ಯಾತ್ರೆ ಮತ್ತು ಆತನ ಅತ್ಯುತ್ತಮಪ್ರಾದುರ್ಭವಗಳಾದ ಶ್ರೀರಾಮ, ಶ್ರೀಕೃಷ್ಣ–ಇವರ ನಾಮಸಂಕೀರ್ತನೆ–ಇಷ್ಟು ಅಂಟಿಕೊಂಡಿವೆ ಎಂದು ತಿಳಿದು ನನಗೆ ಅತ್ಯಂತ ಹರ್ಷವಾಗಿದೆ.

ತ್ರೇತಾಯುಗದಲ್ಲಿ ರಾಮಾವತಾರವಾಗಿ ಸತ್ಯಧರ್ಮಗಳ ರಕ್ಷಣೆಯಾಯಿತು. ದ್ವಾಪರದಲ್ಲಿ ಕೃಷ್ಣಾವತಾರವಾಗಿ ಮತ್ತೊಮ್ಮೆ ಧರ್ಮಸಂಸ್ಥಾಪನೆಯಾಯಿತು. ಶ್ರೀಹರಿಯ ಈ ಎರಡು ಅವತಾರಗಳಿಂದಾದ ಭಕ್ತಾನುಗ್ರಹವು ಕಲಿಯುಗದಲ್ಲಿ ಶ್ರೀಪಾಂಡುರಂಗ ವಿಠಲನ ಯಾತ್ರೆಯಿಂದಲೂ ಅವನ ನಾಮಕೀರ್ತನೆಯಿಂದಲೂ ಆಗುವದೆಂಬುದನ್ನು ನೀವು ಭಜಿಸುತ್ತಿರುವ ಈ 'ರಾಮಕೃಷ್ಣ ಹರಿ' ಎಂಬ ಮಂತ್ರವು ನೆನಪಿಗೆ ತಂದು ಕೊಡುತ್ತಿರುವದೆಂದು ನಂಬಿರಿ.

ಭಗವಂತನನ್ನು ಒಲಿಸಿಕೊಳ್ಳುವದಕ್ಕೆ ಕಲಿಯುಗದಲ್ಲಿ ನಾಮಕೀರ್ತನೆಯನ್ನು ಬಿಟ್ಟರೆ ಮತ್ತೆ ಯಾವದೂ ಸಾರ್ವತ್ರಿಕವಾದ ಸಾಧನವೆಂಬುದು ಇಲ್ಲವೇ ಇಲ್ಲ. ಕಾಲದೇಶಗಳ ನಿಯಮವಿಲ್ಲದೇ ಈ ಮಂತ್ರವನ್ನು ಅಖಂಡವಾಗಿ ಜಪಿಸುವದರಿಂದ ಸರ್ವಪಾಪಗಳೂ ನಾಶವಾಗುವವು; ಚಿತ್ತವು ಶುದ್ಧವಾಗುವದು, ಧರ್ಮದಲ್ಲಿ ಶ್ರದ್ಧೆಯು ಉಕ್ಕುವದು, ಭಕ್ತಿರಸದ ರುಚಿಯು ಮನಸ್ಸಿಗೆ ಹತ್ತುವದು. ಗಂಗೆಯ ದಡದಲ್ಲಿದ್ದುಕೊಂಡು ಭಾವಿಯನ್ನು ತೋಡಿಸಲಿಲ್ಲವಲ್ಲ?–ಎಂದು ಶೋಕಿಸುವ ಮೂಢರಂತೆ 'ನಾನೇನೂ ಸಾಧನವನ್ನು ಮಾಡಲಿಲ್ಲವಲ್ಲ!'–ಎಂದು ಯೋಚಿಸದಿರಿ. ಈಗ ನೀವು ಮಾಡುತ್ತಿರುವ ಯಾತ್ರೆ, ಮಂತ್ರಜಪ–ಇವುಗಳೇ ಅವಶ್ಯವಾಗಿ ನಿಮ್ಮನ್ನು ಉದ್ಧರಿಸುವವು.

## 278. ಅಧ್ಯಾತ್ಮವಿದ್ಯೆ

(ಡಿಸೆಂಬರ್ 1969)

*ನಿಮ್ಮ ಪತ್ರವು ತಲುಪಿ ಅಭಿಪ್ರಾಯವಾಯಿತು. ಅಧ್ಯಾತ್ಮವಿದ್ಯೆ ಎಂದರೆ ಓದುವದು, ಬರೆಯುವದು, ಲೆಕ್ಕ, ಇತಿಹಾಸ, ಭೂಗೋಳ, ಶಾರೀರಶಾಸ್ತ್ರ–ಮುಂತಾದವುಗಳಂತೆ ಕಲಿತು ಕೊಂಡು ಮನಸ್ಸಿಗೆ ವಿಕಾಸವನ್ನು ಮಾಡಿಕೊಳ್ಳುವ ತಿಳಿವಳಿಕೆ ಎಂಬ ಭ್ರಾಂತಿಯು ನಿಮಗೆ ಇರುವಂತೆ ಕಾಣುತ್ತದೆ. ಆದ್ದರಿಂದಲೇ ನೀವು ಹೀಗೆ ಪಟ್ಟಿ ಹಾಕಿದಂತೆ ಕೆಲವು ಪ್ರಶ್ನೆಗಳನ್ನು ಕೊಟ್ಟು ಅದಕ್ಕೆ ಉತ್ತರವನ್ನು ಬರೆಯಿರೆಂದು ಕೇಳಿಕೊಂಡಿರುತ್ತೀರಿ.*

ಹಿಂದಿನ ಕಾಲದ ಮಹಾತ್ಮರ ಜೀವನಚರಿತ್ರೆಗಳನ್ನೂ ಉಪದೇಶಗಳನ್ನೂ ಗ್ರಂಥಗಳಲ್ಲಿ ಬರೆದಿಟ್ಟಿರುವದು ನಿಜ. ಅವನ್ನು ಓದಿಕೊಳ್ಳುವದರಿಂದ ಜನರಿಗೆ ಅಧ್ಯಾತ್ಮವಿದ್ಯೆಯ ವಿಷಯಕ್ಕೆ ಕುತೂಹಲವೂ ತಾವೂ ಆ ವಿದ್ಯೆಯಲ್ಲಿ ಮೇಲಿನಂತಸ್ತಿನವರಾಗಬೇಕೆಂಬ ಆಶೇಯೂ ಉಂಟಾಗುವದು ಸ್ವಾಭಾವಿಕವಾಗಿರುತ್ತದೆ. ಆದರೆ ಅಧ್ಯಾತ್ಮವಿದ್ಯೆಯೆಂದರೆ ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಶಿಕ್ಷಣವನ್ನು ಪಡೆದು ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಒಂದೊಂದು ಸ್ಥಾನಕ್ಕೇರುವಂತೆ ಮಾಡುವ ತಿಳಿವಳಿಕೆಯ ಸಾಧನವಲ್ಲ. ಮನುಷ್ಯನು ಬಾಲ್ಯ, ಕೌಮಾರ, ಯೌವನ, ವಾರ್ಧಕ–ಎಂಬ ಅವಸ್ಥೆಗಳನ್ನು ಪಡೆದು ಆಯಾ ಅನುಭವವನ್ನು ಪಡೆದುಕೊಳ್ಳುವಂತೆ ಅಂತಃಕರಣದ ಸಂಸ್ಕಾರದಿಂದ ನಮ್ಮ ಪೂರ್ಣವ್ಯಕ್ತಿತ್ವವನ್ನೇ ರೂಪಾಂತರ ಮಾಡಿಕೊಂಡು ಎಲ್ಲೆಲ್ಲಿಯೂ ಆನಂದಮಯವಾಗಿರುವ ಪರಮಾತ್ಮನಲ್ಲಿ ಬೆರೆತುಕೊಳ್ಳುವ ವಿದ್ಯೆಯದು. ಅದಕ್ಕೆ ನಿಮ್ಮೊಳಗೇ ನೋಡಿಕೊಂಡು ನಿಮ್ಮನ್ನು ನೀವೇ ಮೇಲಿನಂತಸ್ತಿಗೇರಿಸಿಕೊಳ್ಳುವ ಸಾಧನವು ಅವಶ್ಯ. ಹೊರಗಿನ ಪ್ರಪಂಚದಲ್ಲಿ ಕಾಣುವ ಅನಿತ್ಯವಾದ ಭೋಗಗಳಿಗೆ ಮರುಳಾಗದೆ ನಿತ್ಯವಾದ ಆತ್ಮಾನಂದವನ್ನು ಪಡೆಯುವೆನೆಂಬ ಹಿರಿಯಾಸೆಯಿರುವ ಸಾಧನೆಯು ಅದಕ್ಕೆ ಅವಶ್ಯವಾಗಿರುತ್ತದೆ. ಭಗವಂತನ ಲೀಲೆಗಳನ್ನು ಪುರಾಣಾದಿಗಳ ಮೂಲಕ ಶ್ರವಣಮಾಡಿ ಸತ್ಪುರುಷರ ಸಹವಾಸದಿಂದ ವಿಷಯಾಸಕ್ತಿಯನ್ನು ಕಳೆದುಕೊಂಡು ಶ್ರದ್ಧಾಭಕ್ತಿಗಳನ್ನು ಮೊದಲು ಸಂಪಾದಿಸಿಕೊಳ್ಳಬೇಕು. ಆಮೇಲೆ ಅಧ್ಯಾತ್ಮವಿದ್ಯಾಮಂದಿರವನ್ನು ಪ್ರವೇಶಿಸುವ ಅರ್ಹತೆ ಬರುತ್ತದೆ–ಎಂದು ನಿಶ್ಚಯಿಸಿರಿ. ದೇವರು ನಿಮಗೆ ಕಲ್ಯಾಣವನ್ನುಂಟು ಮಾಡಲಿ!

## 279. ಮನಸ್ಸಿಗೆ ಶಾಂತಿ

(ಜನವರಿ 1970)

*ನಿಮ್ಮ ಪತ್ರದಲ್ಲಿದ್ದ ವಿಷಯವು ತಿಳಿಯಿತು. ಊರನ್ನೂ ಬಿಟ್ಟದ್ದಾಯಿತು, ನೌಕರಿಯನ್ನೂ ಬಿಟ್ಟು ಬೇರೆಯ ಉದ್ಯೋಗವನ್ನೂ ಕೈಗೊಂಡದ್ದಾಯಿತು, ತೀರ್ಥಕ್ಷೇತ್ರಗಳನ್ನು ಸೇವಿಸಿದ್ದಾಯಿತು.*

*ಅತ್ಯಂತವಿರಕ್ತವಾದ ಪರ್ವತದ ಗುಹೆಯಲ್ಲಿ ಕೆಲವು ತಿಂಗಳು ತಪಸ್ಸು ಮಾಡಿದ್ದಾಯಿತು. ಆದರೂ ಮನಸ್ಸಿಗೆ ಶಾಂತಿಯಿಲ್ಲ. ನಾನು ಎಲ್ಲಿವಾಸ ಮಾಡಿಕೊಂಡಿದ್ದರೆ, ಯಾವ ವಿಧದಿಂದ ಕಾಲಕ್ಷೇಪವನ್ನು ಮಾಡಿದರೆ ಮನಸ್ಸಿಗೆ ಶಾಂತಿಯು ದೊರಕೀತೋ ತಿಳಿಯದಾಗಿದೆ. ನನ್ನ ಶಕ್ತಿಗೆ ಎಟುಕುವ ಜೀವನಕ್ರಮವನ್ನು ದಯವಿಟ್ಟು ತಿಳಿಸಿಕೊಟ್ಟರೆ ಕೃತಜ್ಞನಾಗಿರುವೆನು ಎಂತ ಬರೆದಿರುತ್ತೀರಿ.*

ಮನಸ್ಸಿನ ಶಾಂತಿಯೆಂಬುದು ಸ್ಥಾನದ ಮಾರ್ಪಾಡಿನಿಂದ ಅಥವಾ ಉದ್ಯೋಗದ ಬದಲಾವಣೆಯಿಂದ ಸಿಕ್ಕುವದಿಲ್ಲ. ಶಾಂತಿಯೆಂಬುದು ಎಲ್ಲಾ ಪ್ರಾಣಿಗಳ ಆತ್ಮನಾಗಿರುವ ಭಗವಂತನ ಸ್ವರೂಪದಲ್ಲಿರುತ್ತದೆ. ಅವನನ್ನಾಶ್ರಯಿಸಿದವರಿಗೆ ಅವಶ್ಯವಾಗಿ ಅದು ಲಭಿಸುತ್ತದೆ. ಮನಸ್ಸಿಗೆ ತಳಮಳವು ನೀವು ಸ್ಥಾನ, ಉದ್ಯೋಗ, ಸಂನಿವೇಶ—ಮುಂತಾದವುಗಳನ್ನು ಬೇಗಬೇಗನೆ ಬದಲಾಯಿಸಿಕೊಳ್ಳುತ್ತಿರುವದರಿಂದಲೇ ಆಗುತ್ತಿರುತ್ತದೆ. ಮನಸ್ಸಿಗೆ ಚಾಂಚಲ್ಯವು ಸ್ವಭಾವವು, ವಾಸಸ್ಥಾನವನ್ನಾಗಲಿ ಜೀವನಕ್ರಮವನ್ನಾಗಲಿ ಬೇರೆಬೇರೆಯಾಗಿ ಆರಿಸಿಕೊಂಡ ಮಾತ್ರಕ್ಕೆ, ಶಾಂತಿಯಿಲ್ಲದೆಡೆಯಲ್ಲಿ ಶಾಂತಿಯು ಹೇಗೆ ದೊರಕೀತು?

ನಿಮ್ಮ ಮನಸ್ಸಿನಲ್ಲಿ ಗಡಿಬಿಡಿಯು ತೋರುತ್ತದೆ ಎಂದು ಏತರಿಂದ ಅರಿತುಕೊಂಡಿರೋ ಆ ಸಾಕ್ಷಿಯೇ ನಿಜವಾದ ಆತ್ಮನಾದ ಭಗವಂತನು. ಭಗವಂತನ ನಾಮಕೀರ್ತನೆ, ಸ್ತೋತ್ರಪಾಠ, ಮಾನಸಪೂಜೆ—ಇಂಥ ಸಾಧನಗಳಲ್ಲಿ ಕೂಡಲೆ ಅವಲಂಬಿಸಿರಿ. ಇದರಿಂದ ಮನಸ್ಸು, ಪರಮಾತ್ಮನ ಸಾಮೀಪ್ಯವನ್ನು ಹೊಂದುವದು. ಬಿಸಿಲುಬೇಗೆಯಿಂದ ಪರಿತಪಿಸುತ್ತಿರುವವರು ತಂಪಿನ ಸ್ಥಲವನ್ನಾಶ್ರಯಿಸಿದರೆ ನೆಮ್ಮದಿಯಾಗುವಂತೆ ಮನಸ್ಸು ಹರಿದಾಡುವದು ಕಡಿಮೆಯಾಗುವದು, ವಿಷಯವಾಸನೆಯ ಕಲ್ಮಷವೂ ಕಡಿಮೆಯಾಗಿ ಅಂತರಂಗವು ತಿಳಿಯಾಗುವದು. ನಿಮಗೆ ಬೇಕಾಗಿರುವದು ಸ್ಥಾನಪಲ್ಲಟವಲ್ಲ, ಜೀವನಕ್ರಮಪಲ್ಲಟವೂ ಅಲ್ಲ; ಇಡಿಯ ಅಂತಃಕರಣವೇ ರೂಪಾಂತರವನ್ನು ಹೊಂದಬೇಕಾಗಿದೆ. ಅದಕ್ಕೆ ನಿಮ್ಮ ಹೃದಯದೊಳಗೆ ಯಾವಾಗಲೂ ಇರುವ ಭಗವಂತನಿಗೆ ಶರಣುಹೋಗುವದೊಂದೇ ಉಪಾಯ. ಭಗವಂತನ ಸ್ಮರಣೆ ನಿಮ್ಮ ಮನಸ್ಸಿಗೆ ಬರಲಿ, ಸರ್ವದುಃಖಗಳಿಂದಲೂ ಕ್ರಮಕ್ರಮವಾಗಿ ಬಿಡುಗಡೆಯನ್ನು ಹೊಂದುವಿರಿ. ಭಗವಂತನ ಪ್ರಸಾದವು ನಿಮಗೆ ದೊರಕುವದು.

## 280. ವೈರಾಗ್ಯದ ಮರ್ಮ

**(ಫೆಬ್ರವರಿ 1970)**

*ನೀವು ಕೇಳಿರುವ ಪ್ರಶ್ನೆಯು ಬಹಳ ಮಹತ್ತ್ವದ್ದಾಗಿದೆ. ಇಹಜೀವನಕ್ಕೆ ಬೇಕಾದ ವಸ್ತುಗಳಲ್ಲಿ ವೈರಾಗ್ಯವಿದ್ದರೆ ಏತಕ್ಕಾಗಿ ಮನುಷ್ಯನು ದುಡಿಯಬೇಕು? ಅವನಿಗೆ ಪರಲೋಕದಲ್ಲಿ*

*ಅಥವಾ ಜನ್ಮಾಂತರದಲ್ಲಿ ಸಿಕ್ಕಬಹುದೆಂಬ ನಿರೀಕ್ಷಣೆಯಿಂದ ಈ ಜನ್ಮದಲ್ಲಿ ದೊರಕಿರುವ ವಸ್ತುಗಳಲ್ಲಿಯೂ ನೆಂಟರಿಷ್ಟರಲ್ಲಿಯೂ ಪ್ರೇಮವನ್ನು ಬಿಡಬೇಕೆಂದು ಮತಾಭಿಮಾನಿಗಳು ಉಪದೇಶಿಸುತ್ತಿರುವದು ಎಷ್ಟರಮಟ್ಟಿಗೆ ಯುಕ್ತಿಯುಕ್ತ?*—ಎಂಬುದೇ ನಿಮ್ಮ ಶಂಕೆ. *'ಕನ್ನಡಿಯೊಳಗಿನ ಗಂಟಿಗಿಂತ ಕೈಯಲ್ಲಿರುವ ದಂಟೇ ಮೇಲು'* ಎಂಬುದು ನಿಮ್ಮ ಆಶಯ.

ಆದರೆ ನೀವು ಉದಾಹರಿಸಿರುವ ಈ ಗಾದೆಯು ಯಾರಿಗೆ ಅನ್ವಯಿಸುತ್ತದೆ? ತನ್ನ ಸುಖಕ್ಕಾಗಿಯೇ ಅಲ್ಲವೆ, ಮನುಷ್ಯನು ಆಸ್ತಿಯನ್ನೂ ಹೆಂಡಿರುಮಕ್ಕಳು, ಹಣಕಾಸು–ಮುಂತಾದವನ್ನೂ ಬಯಸುತ್ತಿರುವದು? ಇದು ನಿಜವಾದರೆ ತನ್ನ ಸ್ವರೂಪವನ್ನೂ ಗತಿಯನ್ನೂ ವಿಚಾರಮಾಡದೆ ತನ್ನವರೆಂದು ಮಾಡಿಕೊಂಡಿರುವ ವಸ್ತುಗಳಿಗಾಗಿಯೇ ಜೀವಿತವನ್ನು ವಿನಿಯೋಗಿಸುವವನು ಕನ್ನಡಿಯೊಳಗಿನ ಗಂಟನ್ನಲ್ಲದೆ ಮತ್ತೇನನ್ನು ನಂಬಿಕೊಂಡಿರುತ್ತಾನೆನ್ನಬೇಕು?

ಭಗವಂತನೇ ಪ್ರತಿಯೊಬ್ಬನ ಆತ್ಮನು, ಅವನನ್ನು ಬಿಟ್ಟು ಬಾಳುವವನು ವಿನಶ್ವರವಾದ ಕನ್ನಡಿಯ ಗಂಟನ್ನು ನಂಬಿದವನಾಗುತ್ತಾನೆ—ಎಂದು ಶಾಸ್ತ್ರಗಳು ಸಾರುತ್ತಿವೆ. ಭಗವಂತನಲ್ಲಿರುವ ಔದಾಸೀನ್ಯವು ತನ್ನ ಪರಮಾರ್ಥಸ್ವರೂಪವಿಷಯಕ್ಕಿರುವ ಔದಾಸೀನ್ಯವೇ ಆಗಿರುತ್ತದೆ. ಬಾಹ್ಯವಿಷಯಗಳಲ್ಲಿರುವ ರಾಗದ್ವೇಷಗಳೇ ಭಗವಂತನಲ್ಲಿರಬೇಕಾದ ಅನುರಾಗಕ್ಕೆ ಅಡ್ಡಿಯಾಗಿರುತ್ತವೆ. ವ್ಯವಹಾರದಲ್ಲಿ ತನ್ನನ್ನಾಗಲಿ ತನ್ನವರನ್ನಾಗಲಿ ದ್ವೇಷಿಸಬೇಕೆಂದು ಯಾವ ಶಾಸ್ತ್ರವೂ ಹೇಳುತ್ತಿಲ್ಲ. ಆದರೆ ಯಾವದರ ಮೇಲೆ ಪ್ರೇಮವಿದ್ದರೂ ಅದು ಭಗವಂತನಲ್ಲಿರಬೇಕಾದ ಪ್ರೇಮಕ್ಕೆ ಅನುಗುಣವಾಗಿರಬೇಕೇ ಹೊರತು ಅದಕ್ಕೆ ಅಡ್ಡಿಯಾಗಿರಬಾರದು. ಭಗವಂತನಲ್ಲಿ ಅನುರಕ್ತಿಯಿಲ್ಲದವನು ತನ್ನ ಪರಮಾರ್ಥಸ್ವರೂಪದಲ್ಲಿಯೇ ಅನುರಾಗವಿಲ್ಲದವನಾಗುವನು. ಎಲ್ಲವೂ ಆತ್ಮಾರ್ಥವಾಗಿ ಪ್ರಿಯವಾಗುತ್ತದೆ—ಎಂಬುದನ್ನು ತಿಳಿಯದವನು ಆತ್ಮಹತ್ಯವನ್ನು ಮಾಡಿಕೊಂಡವ ನಾಗುತ್ತಾನೆ— ಎಂಬುದು ಶಾಸ್ತ್ರೋಪದೇಶದ ತಿರುಳು.

ಮದ್ಯಪಾನದಲ್ಲಿ ಮಿತಿಮೀರಿದ ಅನುರಾಗವಿದ್ದ ಅವಿವೇಕಿಯಾದ ನೇಯ್ಗೆಯವನೊಬ್ಬನು ಅಮಲೇರಿದಾಗ ಹೆಂಡತಿಯ ಕೈಯಿಂದ ಬಲಾತ್ಕಾರವಾಗಿ ಬೀಗದ ಕೈಯನ್ನು ತೆಗೆದುಕೊಂಡು ತಾನೇ ಬಹುಶ್ರಮಪಟ್ಟು ನೇದಿದ್ದ ಒಂದು ರೇಷ್ಮೆಯ ಮಗುಟವನ್ನು ಪೆಟ್ಟಿಗೆಯಿಂದ ಹೊರಕ್ಕೆ ತೆಗೆದು ಅದಕ್ಕೆ ಸೀಮೆಯೆಣ್ಣೆಯನ್ನು ಹಾಕಿ ಬೆಂಕಿ ಹತ್ತಿಸಿ ಕುಣಿಯುವದಕ್ಕೆ ಆರಂಭಿಸಿದ ಘಟನೆಯು ನನಗೆ ನೆನಪಿಗೆ ಬರುತ್ತಿದೆ. ಪಾಪ! ಅವನು, ಅಮಲು ಇಳಿದ ಬಳಿಕೆ ತನ್ನ ದಡ್ಡತನಕ್ಕೆ ತಾನೇ ಪಶ್ಚಾತ್ತಾಪವನ್ನು ಹೊಂದಿ, ಎಷ್ಟೋ ದೀರ್ಘಕಾಲದವರೆಗೂ ದುಃಖಿಸುತ್ತಿದ್ದನು. ಇದೊಂದು ಸತ್ಯವಾದ ಘಟನೆ. ಈ

ದೃಷ್ಟಾಂತದಲ್ಲಿ ಮಧ್ಯಪಾನದಲ್ಲಿದ್ದ ಅನುರಾಗವೇ ಹೇಗೆ ಆ ತಿಳಿಗೇಡಿಯ ಸ್ವಾರ್ಥಕ್ಕೆ ಭಂಗವನ್ನು ತಂದಿತೋ, ಹಾಗೆಯೇ ಪರಮಪುರುಷಾರ್ಥಕ್ಕೆ ವಿಷಯಾಸಕ್ತಿಯು ಒಂದು ಬಲವಾದ ಆತಂಕವಾಗಿರುತ್ತದೆ. ವಿಷಯಾನುರಾಗದ ಅಮಲು ಕಡಿಮೆಯಾದಾಗ ಜೀವನಿಗೆ ನಿಜವಾದ ಆತ್ಮನಾದ ಪರಮಾತ್ಮನಲ್ಲಿ ಪರಾನುರುಕ್ತಿಯುಂಟಾಗುವದು.

ಶಾಸ್ತ್ರದಲ್ಲಿ ಎಲ್ಲರಿಗೂ ವಿಷಯವೈರಾಗ್ಯವನ್ನು ಬೋಧಿಸಿಲ್ಲ. ಪರಲೋಕದಲ್ಲಿ ದೀರ್ಘಕಾಲ ಸುಖವನ್ನು ಹೊಂದಬೇಕೆಂಬ ಆಶೆಯುಳ್ಳವನಿಗೆ ಇಹಲೋಕದಲ್ಲಿ ದೇಹಾದಿಗಳ ಮೇಲಿನ ಮಿತಿಮೀರಿದ ಮೋಹವನ್ನು ಬಿಟ್ಟು ದೇಹಶ್ರಮದಿಂದ ಯಜ್ಞಾದಿಕರ್ಮಗಳನ್ನು ಮಾಡಬೇಕಾಗಿ ಬರುತ್ತದೆ. ಇದರಂತೆ ಅನಂತವಾದ ಶಾಶ್ವತವಾದ ಪರಮಾರ್ಥಸುಖವನ್ನು ಪಡೆಯಬೇಕೆಂದು ಹವಣಿಸುವವನಿಗೆ ಈ ಲೋಕದ ಸುಖದಲ್ಲಿಯೂ ಪರಲೋಕದ ಸುಖದಲ್ಲಿಯೂ ವೈರಾಗ್ಯವುಂಟಾಗುವದು ಸ್ವಾಭಾವಿಕವಾಗಿರುತ್ತದೆಯಲ್ಲವೆ?

ನನ್ನ ಉತ್ತರದಲ್ಲಿರುವ ಸಾರಾಂಶವಿಷ್ಟು: ಇಹಲೋಕದಲ್ಲಿ ನಿರ್ವಿಘ್ನವಾಗಿ ಸುಖವನ್ನು ಪಡೆಯಬೇಕೆನ್ನುವವನು ಸ್ವೇಚ್ಛಾಚಾರದಲ್ಲಿ ವಿರಕ್ತನಾಬೇಕು. ಪರಲೋಕದಲ್ಲಿ ದುಃಖಮಿಶ್ರಿತವಲ್ಲದ ಸುಖವನ್ನು ಪಡೆಯಲಿಚ್ಛಿಸುವವನು ಇಹಲೋಕದ ಸುಖದಲ್ಲಿ ಅಷ್ಟುಮಟ್ಟಿಗೆ ವಿರಕ್ತನಾಗಬೇಕಾಗುವದು. ಹೀಗೆಯೇ ಇಹಪರಗಳೆರಡಕ್ಕಿಂತಲೂ ವಿಲಕ್ಷಣವಾದ ಪರಮಪುರುಷಾರ್ಥವನ್ನು ಪಡೆಯಬೇಕೆನ್ನುವವನು ಈ ಎರಡು ವಿಷಯಸುಖಗಳಲ್ಲಿಯೂ ವಿರಕ್ತನಾಗಬೇಕಾಗುವದು. ಈ ಅಭಿಪ್ರಾಯದ ಯುಕ್ತಾಯುಕ್ತತೆಯನ್ನು ನೀವೇ ಆಲೋಚಿಸಿನೋಡಿ, ನಿಮ್ಮ ತೀರ್ಮಾನಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

## 281. ಯೋಗಸಿದ್ಧಿ

### (ಮಾರ್ಚಿ 1970)

*ನಿಮ್ಮ ಪತ್ರವು ತಲುಪಿ ವಿಷಯವೆಲ್ಲ ತಿಳಿಯಿತು. ನಿಮಗೆ ಯಾರೋ ಯೋಗಾಚಾರ್ಯರ ಸಾಂನಿಧ್ಯವು ದೊರಕಿರುವದರಿಂದ ಪ್ರಾಣಾಯಾಮಾದಿಗಳ ಮರ್ಮವು ಮನವರಿಕೆಯಾಗುತ್ತಿರುವದನ್ನು ಕೇಳಿ ನನಗೆ ಸಂತೋಷವೇ ಆಯಿತು. ಏಕೆಂದರೆ ಸ್ಥಿರಸುಖವಾದ ಆಸನವನ್ನೂ ಪ್ರಾಣಾಯಾಮಕ್ರಮವನ್ನೂ ಅಳವಡಿಸಿಕೊಳ್ಳುವದು ಮನಸ್ಸಿನ ಸ್ಥೈರ್ಯಕ್ಕೆ ಸಾಧನವೇ ಆಗಿರುತ್ತದೆ. ಅದರಿಂದ ನಿಮಗೆ ಪರಮಾತ್ಮತತ್ತ್ವವನ್ನು ತಿಳಿದುಕೊಳ್ಳುವದಕ್ಕೆ ಸಹಾಯವೂ ಆದೀತು.*

ಆದರೆ, 'ನನಗೆ ಸಮಾಧಿಯು ಕೈವಶವಾಗುವ ಪೂರ್ವಚಿಹ್ನೆಗಳು ಕಾಣಬರುತ್ತಿವೆ; ಕೆಲವು ವಿಲಕ್ಷಣವಾದ ಅಲೌಕಿಕಧ್ವನಿಗಳು ಕೇಳುಬರುತ್ತಿವೆ, ಈಚೆಗೆ ಆಸನವನ್ನು ಇಟ್ಟುಕೊಂಡಿರುವಂತೆಯೇ ಶರೀರವು ಹಗುರವಾಗಿ ಮೇಲಕ್ಕೇಳುವ ಸಿದ್ಧಿಯಾಗುವ ಚಿಹ್ನೆಗಳೂ ಕಾಣಬರುತ್ತಿವೆ' ಎಂದು ನೀವು ಬರೆದಿರುವದನ್ನು ಕೇಳಿ ನನಗೆ ಆಶ್ಚರ್ಯವೂ ಅನುತಾಪವೂ ಆಯಿತು. ನಿಮಗೆ ವೇದಾಂತೋಕ್ತವಾದ ಆತ್ಮದರ್ಶನದ ತತ್ತ್ವವಾಗಲಿ, ಧ್ಯಾನಯೋಗಫಲದ ತತ್ತ್ವವಾಗಲಿ ಸ್ವಲ್ಪವೂ ಮನಸ್ಸಿನೊಳಗೆ ಹೊಳೆಯದಿರುವದು ಬಹಳ ಶೋಚನೀಯವಾಗಿದೆ. ಆತ್ಮಜ್ಞಾನವಾಗುವ ಮುಂಚೆ ಕೆಲವು ನಾದಗಳು ಕೇಳಬರುವದು ಅವಶ್ಯವೆಂಬ ಅಥವಾ ಕೆಲವು 'ಬೆಳಕುಗಳು' ಕಾಣಬರಬೇಕೆಂಬ, ಭ್ರಮೆಯನ್ನು ನೀವು ಪೂರ್ಣವಾಗಿ ತೊಲಗಿಸಿಕೊಳ್ಳಬೇಕೆಂದು ನಿಮಗೆ ಸೌಹಾರ್ದದಿಂದ ತಿಳಿಯಿಸಬಯಸುತ್ತೇನೆ. ಯೋಗಕ್ರಮ ವಿಶೇಷಗಳಲ್ಲಿ ಹೀಗೆ ನಾದವಿಶೇಷಾದಿಗಳ ಅನುಭವವಾಗುವದೆಂದು ಹೇಳುವದು ಸುಳ್ಳಲ್ಲ; ಆದರೆ ಅದು ಆತ್ಮದರ್ಶನಕ್ಕೆ ಸ್ವಲ್ಪವೂ ಅವಶ್ಯವಲ್ಲ. ಕೆಲವರಿಗೆ ಕಿವಿಯ ದೌರ್ಬಲ್ಯದಿಂದ ಎಷ್ಟೋ ಬಗೆಯ ಧ್ವನಿಗಳು ಕೇಳಬರುತ್ತಿರವವು ಆದರೆ ಅದೊಂದು ಅನಾರೋಗ್ಯದ ಚಿಹ್ನೆಮಾತ್ರವೇ ಅಲ್ಲವೆ? ಯೋಗವಿಶೇಷದ ಮಹಿಮೆಯಿಂದ ನಿಮಗೆ ಅಂತರಿಕ್ಷದಲ್ಲಿ ಯಾವದೊಂದರ ಆಶ್ರಮವೂ ಇಲ್ಲದೆ ಇರುವ ಸಿದ್ಧಿಯೂ ಆಗಬಹುದು. ಆದರೆ ಅಂತರಿಕ್ಷದಲ್ಲಿ ಸ್ವಭಾವದಿಂದ ಹಾರಾಡುತ್ತಿರುವ ಪಕ್ಷಿಗಳಿಗೆ ಆತ್ಮಜ್ಞಾನಕ್ಕೆ ಬೇಕಾದ ಯೋಗಸಿದ್ಧಿಯು ದೊರಕಿರುವದೆಂದು ಯಾರಾದರೂ ಕಲ್ಪಿಸಿದರೆ ನಗೆಗೀಡಾಗರೆ?–ಇದನ್ನು ಯೋಚಿಸಿರಿ.

ವೇದಾಂತೋಕ್ತವಾದ ಅಧ್ಯಾತ್ಮವಿದ್ಯೆಯ ಪ್ರಕಾರ ಆಗಬೇಕಾಗಿರುವ ಆತ್ಮವಿಜ್ಞಾನ ವೆಂದರೆ ಸರ್ವಪ್ರಾಣಿಗಳಲ್ಲಿಯೂ ಒಬ್ಬನೇ ಪರಮಾತ್ಮನು ಇರುತ್ತಾನೆ; ಆತನೇ ನನ್ನ ಪರಮಾರ್ಥಾತ್ಮನು ಎಂಬ ಅನುಭವವು. **ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನುಪಶ್ಯತಿ। ಸರ್ವಭೂತೇಷು ಚ ಆತ್ಮಾನಂ ತತೋ ನ ವಿಜುಗುಪ್ಸತೇ ॥** (ಈ.6) ಎಂಬ ಉಪನಿಷದ್ವಾಕ್ಯದಲ್ಲಿರುವಂತೆ ಸರ್ವಭೂತಗಳೂ ಆತ್ಮನಲ್ಲಿವೆ, ಸರ್ವಭೂತಗಳಲ್ಲಿಯೂ ಆತ್ಮನಿದಾನೆ–ಎಂಬ ತತ್ತ್ವವನ್ನೇ '**ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ। ಈಕ್ಷತೇ ಯೋಗ ಯುಕ್ತಾತ್ಮಾ ಸರ್ವತ್ರ ಸಮದರ್ಶನಃ॥**' (ಗೀ. 6–29) ಎಂಬ ಗೀತಾಶ್ಲೋಕದಲ್ಲಿ ಸಂಗ್ರಹಿಸಿರುತ್ತದೆ. ಗೀತೋಪದೇಶಕ್ಕೂ ಉಪನಿಷದುಕ್ತಿಗೂ ಸರ್ವಾನುಮತವಾದ ಅನುಭವವೇ ಆಧಾರ.

ಇತರ ಯೋಗಪ್ರಕಾರಗಳಿಗೆ ಆಗುವ ಸಿದ್ಧಿಗಳು ಸಾಮಾನ್ಯರಿಗೆ ಎಷ್ಟೇ ಅದ್ಭುತವಾಗಿ ಕಾಣಲಿ, ಅಧ್ಯಾತ್ಮ ಯೋಗದಿಂದ ಆಗಬೇಕಾಗಿರುವ ಸಿದ್ಧಿಯು **ಆತ್ಮೈಕತ್ವಸಿದ್ಧಿಯೇ,**

ಎಲ್ಲಕ್ಕಿಂತಲೂ ಅದ್ಭುತವಾದ ಈ ಸಿದ್ಧಿಯ ಮುಂದೆ ಉಳಿಯವದಕ್ಕೆ ಏನೂ ಬೆಲೆಯು ಇರುವದಿಲ್ಲ. ಆದ್ದರಿಂದಲೇ ಶ್ರೀಕೃಷ್ಣಭಗವಂತನು:

**ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ।**
**ತತ್ ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿನ್ದತಿ ॥ ಗೀ. 4–38**

ಜ್ಞಾನಕ್ಕೆ ಸಮಾನವಾದ ಶುದ್ಧಿಸಾಧನವು ಮತ್ತೊಂದಿಲ್ಲ; ಅದರಿಂದ ಸಾಧಕನು ಅತ್ಯಂತಪಾವನನಾಗುತ್ತಾನೆ. ಆ ಜ್ಞಾನವನ್ನು ಕಾಲಾನುಕಾಲಕ್ಕೆ ಯೋಗದಿಂದ ಸಂಸಿದ್ಧನಾದವನು ತನ್ನಲ್ಲಿಯೇ ತಾನು ಕಂಡುಕೊಳ್ಳುತ್ತಾನೆ– ಎಂದು ಹೇಳಿರುತ್ತಾನೆ.

ಅಂತೂ ಹೀಗೆ ಧ್ಯಾನಯೋಗವೆಂದರೆ ಆತ್ಮಾನುಭವವನ್ನು ತಂದುಕೊಡುವ ಪರಮಸಾಧನ; ಸಾಂಖ್ಯಯೋಗವೆಂದರೆ ನಿತ್ಯನಿರ್ವಿಕಾರನಾಗಿ ಸರ್ವಗತನಾಗಿರುವ ಪರಮಾತ್ಮನ ತತ್ತ್ವದ ಅನುಭವ– ಎಂಬುದೇ ಇಲ್ಲಿ ಗ್ರಹಿಸಬೇಕಾದದ್ದು. ಈ ಶಬ್ದಗಳಿಗೆ ಮತ್ತೆ ಯಾವ ಅರ್ಥವನ್ನೂ ಗ್ರಹಿಸದೆ ಪರಮಪುರುಷಾರ್ಥವನ್ನು ಪಡೆಯುವಂತೆ ನಿಮಗೆ ಭಗವಂತನ ಅನುಗ್ರಹವಾಗಲಿ! ಎಂದು ಹಾರೈಸುತ್ತೇನೆ.

ಇನ್ನೊಂದು ಮಾತು: ಯೋಗಕ್ಕೆ ವಿಷಯವು ಭಗವಂತನೇ, ಭಗವಂತನನ್ನು ಭಕ್ತಿಯಿಂದ ಸ್ತುತಿನಮಸ್ಕಾರಗಳಿಂದ ಭಜಿಸುತ್ತಿರುವವರಿಗೆ ಯೋಗದ ಫಲವಾಗಿ ಭಗವಂತನ ಸ್ವರೂಪದ ಅನುಭವವು ಸುಲಭವಾಗಿ ದೊರಕುವದು. ಭಗವಂತನಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಂಡು ಆತನನ್ನೇ ಆಶ್ರಯಿಸಿಕೊಂಡಿದ್ದರೆ ಆತನ ಅನುಗ್ರಹದಿಂದ ಸಕಲ ಸಾಧನಗಳೂ ಫಲಪರ್ಯಂತವಾಗಿ ಅಳವಡುವವೆಂದು ನಂಬಿರಿ. ನಿಮಗೆ ಶ್ರೇಯಸ್ಸಾಗುವದು.

## 282. ಮನಃಶಾಂತಿಗೆ ಸಾಧನ

(ಏಪ್ರಿಲ್ 1970)

*ನಿಮ್ಮ ಪತ್ರವನ್ನು ಓದಿನೋಡಿಕೊಂಡೆನು. ನೈಮಿಷಾರಣ್ಯದ ಬಳಿಯಲ್ಲಿ ಒಬ್ಬರು ಗೆಳೆಯರಿದ್ದಾರೆಂದೂ ಅವರ ನೆರವಿನಿಂದ ತಪಸ್ಸು ಮಾಡಿಕೊಂಡು ಸತ್ಕಾಲಕ್ಷೇಪವನ್ನು ಮಾಡಿಕೊಂಡಿರಬೇಕೆಂಬ ಸಂಕಲ್ಪವಿದೆಯೆಂದೂ ಅದಕ್ಕೆ ಬೇಕಾದ ಸಿದ್ಧತೆಗಳೇನಾದರೂ ಇದ್ದರೆ ತಿಳಿಯಿಸಬೇಕೆಂದೂ ಬರೆದಿರುತ್ತೀರಿ. ಚಂಚಲವಾಗಿರುವ ಮನಸ್ಸಿನ ಶಾಂತಿಗೆ ವಿವಿಕ್ತದೇಶದಲ್ಲಿರುವದು ಸಹಾಯಕವೆಂಬ ನಂಬಿಕೆಯಿಂದ ಈ ಸಂಕಲ್ಪವನ್ನು ಮಾಡಿರುವದಾಗಿ*

*ನೀವು ಬರೆದಿರುವದು ಯುಕ್ತವೇ ಆಗಿರುತ್ತದೆ. ಈ ವಿಷಯದಲ್ಲಿ ನನ್ನ ಸೂಚನೆಗಳನ್ನು ಕೇಳಿರುವದರಿಂದ ನನಗೆ ತಿಳಿದದ್ದನ್ನು ಇಲ್ಲಿ ಬರೆದಿರುತ್ತೇನೆ. ನಿಮಗೆ ಒಪ್ಪಾಗಿರುವಷ್ಟು ಮಟ್ಟಿಗೆ ಈ ಪತ್ರದ ಅಭಿಪ್ರಾಯವನ್ನು ಉಪಯೋಗಿಸಿಕೊಳ್ಳಬಹುದು.*

ತತ್ತ್ವಜ್ಞಾನಕ್ಕೆ ಬೇಕಾದ ಸಾಧನಗಳ ಪಟ್ಟಿಯಲ್ಲಿ ಶ್ರೀಕೃಷ್ಣಭಗವಂತನು ಅರ್ಜುನನಿಗೆ ಹೇಳಿರುವ ಉಪಾಯಗಳಲ್ಲಿ 'ವಿವಿಕ್ತದೇಶಸೇವಿತ್ವಮ್' ಎಂಬುದೂ ಒಂದು ಇರುವದು ನಿಜ. ಮನಸ್ಸು ಏಕಾಂತಪ್ರದೇಶಕ್ಕೆ ಹೋದಾಗ ಸ್ವಭಾವದಿಂದಲೇ ಶಾಂತವಾಗುತ್ತದೆ. ಜ್ಞಾನಯೋಗಕ್ಕಾಗಿ ಮಾಡಬೇಕಾದ ಧ್ಯಾನಯೋಗದ ಸಾಧನಗಳನ್ನು ಹೇಳುವ ಉದ್ದೇಶದಿಂದ ಭಗವಂತನು ಈ ಸಾಧನವನ್ನು ವರ್ಣಿಸಿರುತ್ತಾನೆ. ಆದರೆ ಯೋಗಾರೂಢನಾಗುವ ಮುಂಚೆ ಮಾಡಬೇಕಾದ ಕರ್ಮಾಚರಣೆಯಿಲ್ಲದವರಿಗೆ ಏಕಾಂತವಾಸವು ತಕ್ಕದ್ದಲ್ಲ. ಯಾರಿಗೆ ಕರ್ಮಾನುಷ್ಠಾನದಿಂದ ಚಿತ್ತದ ಮಲವು ಹೋಗಿರುವದೋ ಅವರು ಏಕಾಗ್ರತೆಯಿಂದ ತತ್ತ್ವವನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಏಕಾಂತಶೀಲತೆಯನ್ನು ಸಂಪಾದಿಸಿಕೊಳ್ಳುವದು ಒಳ್ಳೆಯದು. ಭಗವದ್ಗೀತೆಯಲ್ಲಿ ಈ ಸಾಧನವನ್ನು ಹೇಳುವದಕ್ಕಿಂತ ಮುಂಚೆ ಹೇಳಿರುವ ಕೆಲವು ಸಾಧನಗಳ ವಿಷಯವಾಗಿ ನೀವು ಎಂದಾದರೂ ಮನಸ್ಸಿನಲ್ಲಿ ವಿಚಾರವನ್ನು ಹಾಯಿಸಿರುವಿರಾ?

**ಅಸಕ್ತಿರನಭಿಷ್ವಙ್ಗಃ ಪುತ್ರದಾರಗೃಹಾದಿಷು।**
**ನಿತ್ಯಂ ಚ ಸಮಚಿತ್ತತ್ವಮಿಷ್ಟಾನಿಷ್ಟೋಪಪತ್ತಿಷು ॥ ಗೀ. 13–9**

ಈ ಶ್ಲೋಕದಲ್ಲಿ ಹೇಳಿರುವದನ್ನು ಮನಸ್ಸಿಗೆ ಹತ್ತಿಸಿಕೊಂಡಿರುವಿರಾ? 'ಅಸಕ್ತಿ' ಎಂದರೆ ವಿಷಯದಲ್ಲಿ ಮನಸ್ಸು ರಾಗದ್ವೇಷಗಳಿಂದ ಅಂಟಿಕೊಂಡಿರುವ ಸ್ವಭಾವವನ್ನು ತಪ್ಪಿಸಿಕೊಂಡು ಉದಾಸೀನವಾಗಿರುವದು. 'ಅನಭಿಷ್ವಂಗ' ಎಂದರೆ ಮಗ, ಹೆಂಡತಿ, ಮನೆ, ಮಠ, ಹೊಲಗದ್ದೆಗಳು, ಹಣಕಾಸು–ಮುಂತದವುಗಳಲ್ಲಿ ಮನಸ್ಸು 'ಅವೇ ನಾನು', 'ನಾನೇ ಅವು' ಎಂಬ ಭಾವವಿಲ್ಲದಿರುವದು. ನನಗೆ ಇಂತಿಷ್ಟು ಆಸ್ತಿಯಿದೆ, ಇಂಥಿಂಥವರು ನೆಂಟರಿಷ್ಟರು, ಗೆಳೆಯರು ಮುಂತಾದವರು ಇದಾರೆ–ಎಂಬ ಭಾವನೆಯು ನಾವು ಬೇಡವೆಂದರೂ ಮನಸ್ಸಿಗೆ ಆಗಾಗ್ಗೆ ಬರುತ್ತಲೇ ಇರುವಂತೆ ಮನೋವಾಸನೆಯಿದ್ದು ಬಿಟ್ಟಿರುವದು–ಎಂಬುದಿಲ್ಲದಿರುವಿಕೆ; ಇವುಗಳು ನಿಮಗೆ ಅಳವಟ್ಟಿವೆಯೆ? ಶತ್ರು, ಮಿತ್ರ, ಉದಾಸೀನ, ಮಧ್ಯಸ್ಥ, ದ್ವೇಷಕ್ಕೆಪಾತ್ರ, ನೆಂಟರಿಷ್ಟರು–ಎಂಬ ಭೇದಭಾವವು ನಿಮಗೆ ಸ್ವಲ್ಪವೂ ಮನಸ್ಸಿನಲ್ಲಿ ಬಾರದೇಇದೆಯೆ? ನಿಮಗೆ ಇಷ್ಟವಾದದ್ದು ಬಂದೊದಗಿದರೂ ಅನಿಷ್ಟವಾದದ್ದು ಬಂದೊದಗಿದರೂ ಮನಸ್ಸು ಸ್ವಲ್ಪವೂ ಏರುಪೇರಿಲ್ಲದೆ ಇದೆಯೆ? ನಿಮ್ಮ

ಮನಸ್ಸನ್ನು ನೀವೇ ನೋಡಿಕೊಂಡು ಪರೀಕ್ಷಿಸಿಕೊಳ್ಳಿರಿ. ಇವುಗಳನ್ನು ನೀವು ಸಾಧಿಸದೆ ಇರುವಾಗ ನೀವು ಒಬ್ಬರೇ ಇದ್ದರೆ ನಿಮ್ಮ ಮನಸ್ಸಿನಲ್ಲಿ ವಾಸನಾಪ್ರಾಬಲ್ಯದಿಂದ ಇವುಗಳ ಯೋಚನೆಯು ಹೊಳೆಯದೆ ಇರುವದೇ ಇಲ್ಲ; ಅಷ್ಟೇ ಅಲ್ಲ, ಒಬ್ಬರೇ ಇರುವಾಗ ಅವುಗಳು ಹಾಳುಮನೆಯಲ್ಲಿ ನೆಲೆನಿಲ್ಲುವ ದೆವ್ವಗಳಂತೆ ನಿಮ್ಮಲ್ಲಿಯೇ ನಿಂತು ನಿಮ್ಮನ್ನು ಕಾಡುವದು ಕಡುಖಂಡಿತ.

'ವಿವಿಕ್ತದೇಶಸೇವಿತ್ವ'ವನ್ನು ಹೇಳಿರುವ ಶ್ಲೋಕದಲ್ಲಿ ಈ ಸಾಧನಗಳಿವೆ:

**ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ ।**
**ವಿವಿಕ್ತದೇಶಸೇವಿತ್ವಮರತಿರ್ಜನಸಂಸದಿ ॥ ಗೀ. 13–10**

ಇವುಗಳಲ್ಲಿ ಮೊದಲನೆಯದು ಭಗವದ್ಭಕ್ತಿ. 'ವಾಸುದೇವಭಗವಂತನಿಗಿಂತ ಹೆಚ್ಚಿನ ಶರಣು ನನಗೆ ಮತ್ತೆ ಯಾರೊಬ್ಬರೂ ಇಲ್ಲ; ಅವನೇ ನನಗೆ ಗತಿ!' ಎಂಬ ಅನನ್ಯಯೋಗವು ನಿಮಗೆ ಇದೆಯೆ? ಇನ್ನು ಯಾವದೊಂದೂ ನನಗೆ ಬೇಡ; ಜನಬಲ, ಧನಬಲ, ಸ್ನೇಹಿತರ ಬಲ, ಮಂತ್ರಬಲ, ಔಷಧಿ ಬಲ, ತಪೋಬಲ, ಯೋಗಬಲ—ಇವು ಯಾವದೂ ನನಗೆ ಬೇಡ, ಆ ಭಗವಂತನೇ ನನಗೆ ಸರ್ವಸ್ವವು—ಎಂಬ ಗಟ್ಟಿಯಾದ ಶ್ರದ್ಧೆಯು ನಿಮಗೆ ಉಂಟಾಗಿದೆಯೆ? ಹಾಗಿದ್ದರೆ, ಏಕಾಂತವಾಸದಿಂದ ನಿಮಗೆ ಲಾಭವುಂಟು.

'ಅರತಿರ್ಜನಸಂಸದಿ' ಎಂದರೆ ಯಾವ ಸಂಸ್ಕಾರವೂ ಇಲ್ಲದ ವಿನಯಾದಿಗಳಿಲ್ಲದ ಪ್ರಾಕೃತಜನರ ಸಹವಾಸದಲ್ಲಿ ಹವ್ಯಾಸವಿಲ್ಲದಿರುವದು. ಯಾರಿಗೆ ವೃತ್ತಾಂತಪತ್ರಿಕೆಗಳು, ರಾಜಕೀಯಸುದ್ದಿಗಳು, ಕೋರ್ಟುಕಛೇರಿಯ ವ್ಯವಹಾರ, ನೆರೆಮನೆಯವರ ಹುಳುಕಿನ ಸುದ್ದಿ—ಇವುಗಳ ಪ್ರಸಂಗವೇ ಜೀವನದಲ್ಲಿ ಹಾಸು ಹೊಕ್ಕಾಗಿರುವದೋ ಅವರೇ ಪ್ರಾಕೃತರು. ಅಂಥವರ ಸಂಗವು ಸಾಧಕನನ್ನು ಹಾಳು ಮಾಡುವದು. ಧ್ಯಾನಯೋಗಾಭ್ಯಾಸವನ್ನು ಮಾಡುವವರಿಗೆ ಅಶುದ್ಧವಾಗಿಲ್ಲದ, ಸರ್ಪವ್ಯಾಘ್ರಾದಿದುಷ್ಟ ಜಂತುಗಳ ಕಾಟವಿಲ್ಲದೆ ಕಾಡು, ನದಿಯ ಮಳಲೊಟ್ಟಿಲು, ಯಾರೂ ಇಲ್ಲದ ದೇವಾಲಯ—ಇವೇ ಮುಂತಾದ ಸ್ಥಲಗಳಲ್ಲಿ ಮನಸ್ಸು ಪ್ರಸನ್ನವಾಗುತ್ತದೆ—ಎಂಬುದು ನಿಜ. ಆದರೆ ಕರ್ಮಾಚರಣೆ, ಭಗವದರ್ಚನೆ, ಸತ್ಸಂಗ, ಶಾಂತ್ಯಾದಿಗಳ ಅಭ್ಯಾಸ—ಈ ಬಗೆಯ ಸಾಧನವಿಲ್ಲದವರಿಗೆ ಏಕಾಂತವಾಸವು ಮನಸ್ಸಿನ ದುರ್ವಾಸನೆಗಳನ್ನು ಬಡಿದೆಬ್ಬಿಸುವದಕ್ಕೆ ಕಾರಣವಾಗಿರುತ್ತದೆ. ಇದನ್ನು ಮನಸ್ಸಿನಲ್ಲಿ ಹೊರಳಾಡಿಸಿ ನಿಮ್ಮ ಮನೋನಿಶ್ಚಯವನ್ನು ಮಾಡಿಕೊಳ್ಳಿರಿ— ಎಂಬುದೇ ನನ್ನ ಸವಿನಯ ಸೂಚನೆ.

## 283. ಮರಣಕಾಲದಲ್ಲಿ ಭಗವಂತನ ಸ್ಮರಣೆ

(ಮೇ 1970)

*ನಿಮ್ಮ ಪತ್ರವು ತಲುಪಿರುತ್ತದೆ. ಗೀತೆಯ 8ನೆಯ ಅಧ್ಯಾಯದ 5–6ನೆಯ ಶ್ಲೋಕಗಳಲ್ಲಿ 'ಸ್ಮರನ್ ತ್ಯಜತ್ಯನ್ತೇ ಕಲೇವರಮ್' ಎಂಬುದರಿಂದಲೇ ಮರಣ ಕಾಲವು ತೋರುತ್ತಿತ್ತು, 'ಅನ್ತಕಾಲೇ' ಎಂದು ಮತ್ತೆ ಹೇಳಿರುವದರಿಂದ ಏನು ಪ್ರಯೋಜನ?–ಎಂತ ಕೇಳಿರುತ್ತೀರಿ.*

ಇದಕ್ಕೆ ಶ್ರೀಶಂಕರಭಗವತ್ಪಾದರವರು ಇದೇ ಅಧ್ಯಾಯದಲ್ಲಿ (13ನೆಯ ಶ್ಲೋಕದ ಭಾಷ್ಯದಲ್ಲಿ) ಬರೆದಿರುವದನ್ನು ನೋಡಿದರೆ ಪ್ರಶ್ನೆಗೆ ಉತ್ತರವು ಅಲ್ಲಿಯೇ ಇದೆ ಎಂದು ತಿಳಿದುಕೊಳ್ಳಬಹುದಾಗಿದೆ.

**'ತ್ಯಜನ್ ದೇಹಮ್ ಇತಿ ಪ್ರಯಾಣವಿಶೇಷಣಾರ್ಥಮ್; ದೇಹತ್ಯಾಗೇನ ಪ್ರಯಾಣಮಾತ್ಮನೋ ನ ಸ್ವರೂಪನಾಶೇನ–ಇತ್ಯರ್ಥಃ'** (ದೇಹವನ್ನು ಬಿಡುತ್ತಾ ಎಂಬುದು ಮರಣಕ್ಕೆ ವಿಶೇಷವಾಗಿ ಕೊಟ್ಟಿದೆ. ದೇಹತ್ಯಾಗದಿಂದ ಆತ್ಮನಿಗೆ ಮರಣವೇ ಹೊರತು ಸ್ವರೂಪನಾಶವಾಗುವದರಿಂದ ಮರಣವಲ್ಲ–ಎಂದರ್ಥ) ಎಂದು ಭಾಷ್ಯದಲ್ಲಿ ಸಿದ್ಧಾಂತದ ಸಾರವನ್ನೇ ಕೊಟ್ಟಿರುತ್ತದೆ. 'ಆತ್ಮನು ಹುಟ್ಟುವದೂ ಇಲ್ಲ, ಸಾಯುವದೂ ಇಲ್ಲ' ಎಂದು ಎರಡನೆಯ ಅಧ್ಯಾಯದಲ್ಲಿ 20ನೆಯ ಶ್ಲೋಕದಲ್ಲಿ ಹೇಳಿರುವದನ್ನೂ ಇದರ ಜೊತೆಗೆ ಓದಿಕೊಳ್ಳಿರಿ.

ಸರ್ವಗತನಾಗಿರುವ ಆತ್ಮನು ನಿಜವಾಗಿ ಪರಮಪುರುಷನೇ ಆಗಿರುತ್ತಿದ್ದರೂ ಅವನ ಸ್ಮರಣೆಯಿಲ್ಲದ್ದರಿಂದ ಗುಣಸಂಗನಿಮಿತ್ತವಾಗಿ (13–21) ಜೀವನಾಗಿ ಬಗೆಬಗೆಯ ದೇಹಗಳನ್ನು ಆತ್ಮನು ಧರಿಸುತ್ತಿರುವನು; ಗುಣತ್ರಯಾತೀತನಾದ ಪರಮಾತ್ಮನ ಸ್ಮರಣೆಯಿಂದ ತನಗೂ ಮರಣಾದಿಗಳಿಲ್ಲವೆಂಬ ಅರಿವಾಗುವದಕ್ಕೆ ಅವಕಾಶವು ಲಭಿಸುತ್ತದೆ–ಎಂಬ ಭಾವದಿಂದ 'ಅನ್ತಕಾಲೇ ಸ್ಮರನ್ ದೇಹಂ ತ್ಯಜತಿ' ಎಂದು ಭಗವಂತನು ಹೇಳಿದಾನೆಂದು ನಾವು ತಿಳಿಯಬೇಕಾಗಿರುತ್ತದೆ.

## 284. ಅಧ್ಯಾತ್ಮವಿದ್ಯಾಪ್ರಸಾರ

(ಜೂನ್ 1970)

*ನಿಮ್ಮ ಕಾಗದವು ತಲುಪಿರುತ್ತದೆ. ಈಗಿನ ಕಾಲಕ್ಕೆ ಅಧ್ಯಾತ್ಮವಿದ್ಯೆಯು ಅತ್ಯಂತ ಅವಶ್ಯವಾಗಿರುತ್ತದೆ. ಆದ್ದರಿಂದ ನಾನು ನನ್ನ ಜೀವನವನ್ನು ಆ ವಿದ್ಯೆಯ ಪ್ರಸಾರಕ್ಕೆ ಮೀಸಲಾಗಿಟ್ಟು*

*ಕೊಳ್ಳಬೇಕೆಂದು ಮಾಡಿರುತ್ತೇನೆ. ಈ ಕಾರ್ಯಕ್ಕೆ ಉಪಕಾರಕವಾದ ಯಾವದಾದರೂ ಸೂಚನೆಗಳನ್ನು ದಯವಿಟ್ಟು ಬರೆಯಿಸಿದರೆ ಉಪಕೃತನಾಗುತ್ತೇನೆ–ಎಂದು ಬರೆದಿರುತ್ತೀರಿ.*

ಅಧ್ಯಾತ್ಮವಿದ್ಯೆಯ ಪ್ರಚಾರಕ್ಕೇ ಜೀವನವನ್ನು ಮೀಸಲಾಗಿಟ್ಟುಕೊಳ್ಳುವ ಸಂಕಲ್ಪವು ಬಹಳ ಶ್ಲಾಘ್ಯವಾದದ್ದು. ಈ ವಿಷಯಕ್ಕೆ ನನಗೆ ತಿಳಿಯುವ ಕೆಲವು ವಿಷಯಗಳನ್ನು ಇಲ್ಲಿ ಬರೆದಿರುತ್ತೇನೆ. ನಿಮಗೆ ಅವುಗಳಿಂದ ಸ್ವಲ್ಪವಾದರೂ ದಿಗ್ದರ್ಶನವಾದರೆ ನನಗೆ ಬಹಳ ಸಂತೋಷವಾಗುವದು.

ವಿದ್ಯೆ ಎಂದರೆ ಶಬ್ದಗಳ ಆಡಂಬರದ ಅಥವಾ ಉತ್ತಮವಿಚಾರಗಳ ರಾಶಿ ಎಂದು ತಿಳಿಯಬಾರದು. ವಾಕ್ಕಿಗೂ ಬುದ್ಧಿಗೂ ಗೋಚರವಾಗಿರುವ ಹೊರಗಿನ ವಿಷಯಗಳಿಗೆ ಶಬ್ದಗಳ ಸೌಷ್ಠವವೂ ವಿಚಾರಗಳ ಜೋಡಣೆಯೂ ಬೇಕು. ಹೀಗೆಯೇ ಅಧ್ಯಾತ್ಮವಿದ್ಯೆಗೂ ಈ ಸಾಧನಗಳು ಬೇಕಾಗಿರುವೆಯೆಂಬುದು ನಿಜವಾದರೂ ಇಂದ್ರಿಯಾತೀತವಾಗಿ ಮನೋಬುದ್ಧಿಗಳನ್ನು ಮೀರಿರುವ ಅಧ್ಯಾತ್ಮತತ್ತ್ವವನ್ನು ಬರಿಯ ಉಪನ್ಯಾಸಗಳು, ಗ್ರಂಥರಚನೆ, ಪಾಠಪ್ರವಚನ–ಮುಂತಾದ ರೀತಿಗಳಿಂದ ಪ್ರಚುರಪಡಿಸುವದು ಆಗಲಾರದು. ಈಗ ಬಹು ಕಡೆಗಳಲ್ಲಿ ಹರಡಿಕೊಂಡಿರುವ 'ಅಧ್ಯಾತ್ಮವಿಚಾರ' ವೆಂಬುದು ಆ ಹೆಸರಿಗೆ ತಕ್ಕದ್ದಾಗಿರುವದಿಲ್ಲ; ಏಕೆಂದರೆ ಅದು ಬೇರೆಬೇರೆಯ ಪುಸ್ತಕಗಳಲ್ಲಿ ಬರೆದಿರುವದನ್ನೇ ಶಬ್ದಾಂತರದಿಂದ ತಿಳಿಯಪಡಿಸುವ ಕ್ರಮವನ್ನು ಅನುಸರಿಸಿರುತ್ತದೆ. ಸುಖ, ದುಃಖ, ಭಯ, ಆಶ್ಚರ್ಯ, ಕುತೂಹಲ–ಮುಂತಾದ ವಿಷಯಗಳು ಹೊರಗಿನ ವಿಷಯಗಳ ನಿಮಿತ್ತದಿಂದ ಆಗುವವಾಗಿದ್ದರೂ, ಅವುಗಳನ್ನು ಅನುಭವಿಸುವವರಿಗೆ ಮಾತ್ರವೇ ಅಲ್ಲವೆ, ಅವು ಗೊತ್ತಾಗಿ ತಿಳಿಯಬಂದಿರುತ್ತವೆ? ಆದರೆ ಈ ಭಾವಗಳೆಲ್ಲವನ್ನೂ ಅನುಭವಿಸುತ್ತಿರುವ ಜೀವಾತ್ಮನ ಪರಮಾರ್ಥವನ್ನು ಯಾವ ಮಹಾನುಭಾವನು ಅನುಭವದಿಂದ ತಿಳಿದುಕೊಂಡಿರವನೋ ಅವನು ಮಾತ್ರ ಅಧ್ಯಾತ್ಮವಿದ್ಯೆಯ ಆಳವನ್ನು ತಲಸ್ಪರ್ಶಿಯಾದ ಜ್ಞಾನದಿಂದ ಕಂಡುಕೊಂಡಿರುತ್ತಾನೆ. ಆದ್ದರಿಂದ ನೀವು ಯಾವ ತತ್ತ್ವದ ಪ್ರಚಾರವನ್ನು ಮಾಡಬೇಕೆಂದಿರುವಿರೋ ಅದನ್ನು ಮೊಟ್ಟಮೊದಲು ಅನುಭವಕ್ಕೆ ತಂದುಕೊಳ್ಳುವದಕ್ಕೆ ಪ್ರಯತ್ನಿಸಿರಿ. ಅದನ್ನು ಅನುಭವಿಸಿರುವ ತತ್ತ್ವದರ್ಶಿಗಳ ಸಹವಾಸವನ್ನು ಮಾಡಿಕೊಳ್ಳಿರಿ. ಆ ಬಳಿಕ ನೀವು ಮಾಡಿದ ಉಪದೇಶವು ಹುಸಿಮದ್ದಿನ ತುಬಾಕಿಯಂತೆ ನಿಷ್ಫಲವಾಗದೆ ಸಫಲಕ್ರಿಯಾಕಾರಿಯಾಗುವದು.

## 285. ಆಶ್ರಮವಾಸ

### ( ಜುಲೈ 1970)

*ನಿಮ್ಮ ಪತ್ರವನ್ನು ಓದಿಕೊಂಡೆ. ಯಾವದಾದರೊಂದು ಆಶ್ರಮದಲ್ಲಿದ್ದುಕೊಂಡು ಸಾಧನವನ್ನು ಮುಂದುವರಿಸಬೇಕೆಂದಿದೇನೆ–ಎಂದು ನೀವು ಬರೆದಿರುವದನ್ನು ನೋಡಿ ನನಗೆ ಸಂತೋಷವೇ ಆಯಿತು. ನೀವು ಕೇಳಿರುವ ಪ್ರಶ್ನೆಗೆ ಈಗ ನಾನು ಬರೆಯುವ ಸೂಚನೆಗಳು ಎಷ್ಟರಮಟ್ಟಿಗೆ ಉಪಯೋಗಕ್ಕೆ ಬರಬಹುದೇನೋ ನೀವೇ ಗೊತ್ತುಮಾಡಿಕೊಳ್ಳಬೇಕಾಗಿದೆ.*

'ಆಶ್ರಮವಾಸ' ಎಂಬ ಶಬ್ದವನ್ನು ನೀವು ಪತ್ರದಲ್ಲಿ ಉಪಯೋಗಿಸಿರುತ್ತೀರಿ. ಅದಕ್ಕೆ ನೀವು ಕೊಟ್ಟಿರುವ ಅರ್ಥವು ರೂಢಿಯಲ್ಲಿದ್ದರೂ 'ವರ್ಣಾಶ್ರಮ' ಎಂಬ ಶಬ್ದದಲ್ಲಿ ಆಶ್ರಮಶಬ್ದಕ್ಕೆ ಮತ್ತೊಂದು ಪ್ರಸಿದ್ಧಾರ್ಥವೂ ಇದೆ; ಆದ್ದರಿಂದ ಆ ಅರ್ಥವನ್ನು ಇಲ್ಲಿ ಸೇರಿಸಿಕೊಂಡೇ ಉತ್ತರವನ್ನು ಬರೆದಿರುತ್ತೇನೆ.

ಶಾಸ್ತ್ರದಂತೆ ನೋಡಿದರೆ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಪಾರಿವ್ರಾಜ್ಯ–ಎಂಬ ನಾಲ್ಕು ಆಶ್ರಮಗಳಿರುವವು. ದ್ವಿಜನಾದವನು ಗುರುಗಳಲ್ಲಿ ವೇದಾಧ್ಯಯನವನ್ನು ಮಾಡಿದ ಮೇಲೆ ಅವರ ಅಪ್ಪಣೆಯನ್ನು ಪಡೆದುಕೊಂಡು ಈ ನಾಲ್ಕರಲ್ಲಿ ಯಾವದು ತನಗೆ ರುಚಿಸುವದೋ ಆ ಆಶ್ರಮದಲ್ಲಿದ್ದುಕೊಂಡಿರಬೇಕು (ಯಮಿಚ್ಛೇತ್ತಮಾವಸೇತ್) ಎಂದು ಆಪಸ್ತಂಬವಚನ. ಗುರುಗಳಲ್ಲಿ ವೇದಾಧ್ಯಯನವನ್ನು ಮಾಡುತ್ತಿರುವಾಗ ಬ್ರಹ್ಮಚಾರಿಯಾಗಿಯೇ ಇರಬೇಕಷ್ಟೆ? ಆ ಬ್ರಹ್ಮಚಾರಿಯು 'ಉಪಕುರ್ವಾಣ' ಬ್ರಹ್ಮಚಾರಿಯು. ಆದರೆ ಇಲ್ಲಿ ಹೇಳಿರುವ ನಾಲ್ಕು ಆಶ್ರಮಗಳಲ್ಲಿ ಸೇರಿರುವ ಬ್ರಹ್ಮಚರ್ಯವು ನೈಷ್ಠಿಕಬ್ರಹ್ಮಚರ್ಯವೆನಿಸುವದು. ಗುರುಗಳ ಸೇವೆಯನ್ನೇ ಮಾಡಿಕೊಂಡಿದ್ದು ಉಳಿದ ಕಾಲದಲ್ಲಿ ವೇದಶಾಸ್ತ್ರಾದಿಗಳ ಅಧ್ಯಯನವನ್ನು ಮಾಡುತ್ತಿರುವದು ನೈಷ್ಠಿಕಬ್ರಹ್ಮಚರ್ಯವು. ಇದೊಂದು ದೊಡ್ಡವ್ರತವಾಗಿರುತ್ತದೆ. ಇದನ್ನು ಅನುಸರಿಸುವವರಿಗೆ ದೇವಯಾನಮಾರ್ಗದಿಂದ ಬ್ರಹ್ಮಲೋಕವನ್ನು ಪಡೆಯುವದಕ್ಕೆ ಸಾಧಕವಾದ ಪುಣ್ಯವು ಲಭಿಸುವದಂತೆ. ಆದರೆ ಈಗ್ಗೆ ಈ ಕಠಿಣವ್ರತವನ್ನು ಕೈಗೊಂಡ ಬ್ರಹ್ಮಚಾರಿಗಳು ಎಲ್ಲಿ ಸಿಕ್ಕುತ್ತಾರೆ? ಗುರುಗಳ ಮೂಲಕ ಆದಷ್ಟು ವೇದಶಾಸ್ತ್ರಾಧ್ಯಯನವನ್ನು ಮಾಡಿ ಮುಗಿಸಿಕೊಂಡಬಳಿಕ ವಿವಾಹಿತನಾಗಿ ಗಾರ್ಹಸ್ಥ್ಯವನ್ನು ಸ್ವೀಕರಿಸುವದು ಎರಡನೆಯ ಆಶ್ರಮ. ಅಗ್ನಿಹೋತ್ರ, ದೇವತಾರ್ಚನ, ಅತಿಥಿಸತ್ಕಾರ–ಮುಂತಾದ ಧರ್ಮಗಳನ್ನು ಕಾಪಾಡಿಕೊಂಡು ಋತುಕಾಲದಲ್ಲಿ ಮಾತ್ರ ಪತ್ನೀಸಂಯೋಗವನ್ನು ಮಾಡಿ ಸತ್ಸಂತಾನವನ್ನು ಪಡೆಯುವ ಸದ್ಗೃಹಸ್ಥರೂ ಈಗಿನ ಕಾಲಕ್ಕೆ ಬಹು ವಿರಳ. ಮೂರನೆಯ ಅಶ್ರಮವು ಕಾಯಕ್ಲೇಶಪ್ರಧಾನವಾಗಿರುವ ತಪಸ್ಸನ್ನು ಮಾಡುವ ವಾನಪ್ರಸ್ಥ. ಇಂಥವರಂತೂ ಈ ಕಾಲದಲ್ಲಿ

ಸಿಕ್ಕುತ್ತಲೇ ಇಲ್ಲ. ಇನ್ನು ವೈರಾಗ್ಯವು ಉತ್ಕಟವಾಗಿದ್ದರೆ ಬ್ರಹ್ಮಚರ್ಯಾಶ್ರಮ, ಗಾರ್ಹಸ್ಥ್ಯ, ಅಥವಾ ವಾನಪ್ರಸ್ಥ–ಈ ಯಾವ ಆಶ್ರಮದಲ್ಲಿದ್ದರೂ ಕೂಡಲೆ ಸರ್ವವನ್ನೂ ಬಿಟ್ಟು ನಾಲ್ಕನೆಯದಾದ ಪಾರಿವ್ರಾಜ್ಯವನ್ನು ಕೈಕೊಳ್ಳಬೇಕು. ಈಗ 'ಸಂನ್ಯಾಸಿ'ಗಳೆಂಬ ಹೆಸರಿನಿಂದ ಕಾವಿಯನ್ನುಟ್ಟವರು ಎಷ್ಟೋ ಮಂದಿ ಅಲ್ಲಲ್ಲಿ ಕಣ್ಣಿಗೆ ಬೀಳುತ್ತಿದ್ದಾರೆ. ಆದರೆ ಅವರಲ್ಲಿ ಬಹು ಜನರಿಗೆ ಕ್ರಮವಾದ ಕರ್ಮಸಂನ್ಯಾಸವೂ ಇಲ್ಲ, ಶಮದಮಾದಿಗಳೂ ಇಲ್ಲ. ಕೆಲವರು ಧೂರ್ತರೂ ಅವರೊಳಗೆ ಇರುವದುಂಟು! ಇನ್ನು ಕೆಲವರು ಸಂನ್ಯಾಸಿಗಳೂ ಸಾಧುಗಳೂ ಆಗಿರುವ ಮಹಾಪುರುಷರು ಸಾಧಕರಾದವರಿಗೆ ಉತ್ತಮವಾದ ಸಂನಿವೇಶಗಳನ್ನು ಕಲ್ಪಿಸುವದಕ್ಕೆಂದು 'ಆಶ್ರಮ'ಗಳೆಂಬ ಹೆಸರಿನ ಸಂಸ್ಥೆಗಳನ್ನು ಏರ್ಪಡಿಸಿರುವದು ಈಗ ಅಲ್ಲಲ್ಲಿ ಕಾಣಬರುತ್ತಿದೆ. ಅವುಗಳಲ್ಲಿ ಎಷ್ಟೋ ಮಂದಿ 'ಸಾಧಕರು' ಎಂಬವರು ಸೇರಿಕೊಂಡಿರುತ್ತಾರೆ. ಹೆಚ್ಚಾಗಿ ಅಲ್ಲಿ ಸೇರಿದ ಜನಗಳಿಗೆ ಊಟವಸತಿಗಳನ್ನು ಕಲ್ಪಿಸುವದೇ ಕಷ್ಟವಾಗಿರುತ್ತದೆ. ಶ್ರೀಮಂತರು ಮಾಡಿದ ಸಹಾಯವು ದೊರೆತಿರುವ ಕಡೆಗಳಲ್ಲಿ ಭೂರಿಭೋಜನವೇನೋ ದೊರೆಯುತ್ತಿರಬಹುದು. ಆದರೆ ಅಲ್ಲಿ 'ಸ್ವಾರ್ಥಸಾಧಕರೇ' ಹೆಚ್ಚಾಗಿ ಸೇರಿಕೊಂಡಿರುತ್ತಾರೆ. ತೋರುಗಾಣಿಕೆಯ ವೈರಾಗ್ಯದ ವೇಷಧಾರಿಗಳೂ ಇರುತ್ತಾರೆ. ಅಂತಃಕರಣಶುದ್ಧಿಯಿಂದ ಅಧ್ಯಾತ್ಮಸಾಧನಗಳನ್ನು ಮಾಡುವವರಾಗಲಿ, ಅಲ್ಲಿ ಸೇರಿದವರಿಗೆ ಆದರ್ಶವಾದ ನಡೆನುಡಿಗಳಿಂದ ಕೂಡಿರುವ ಸತ್ಪುರುಷರಾಗಲಿ ಸಿಕ್ಕುವ ಆಶ್ರಮಗಳು ಬಹಳ ಕಡಿಮೆ. ಕಾಮ, ಕ್ರೋಧ, ಲೋಭಗಳೆಂಬ ಆಸುರಸಂಪತ್ತನ್ನು ಹೆಚ್ಚಿಸಿಕೊಳ್ಳುತ್ತಾ ನಿಜವಾದ ಸಾಧಕರಿಗೆ ಉತ್ಸಾಹವನ್ನು ಕುಗ್ಗಿಸುವ ದಾಂಭಿಕರು ಅಲ್ಲಿ ಸೇರಿಕೊಂಡಿರುವದರಿಂದ ಅಲ್ಲಿರುವದು ವೃಥಾಕಾಲಕ್ಷೇಪವೊ, ವೃಥಾಶ್ರಮವೊ, ಆಗಿ ಬಿಡುತ್ತದೆ. 'ಆ–ಶ್ರಮ'ವು ಯಾರಿಗೆ ಬೇಕು?

ಆದ್ದರಿಂದ ನೀವು ಮಾಡುವ ಸಾಧನದಿಂದ ನಿಮಗೆ ನಿಜವಾದ ಫಲವು ದೊರಕಬೇಕೆಂಬ ಆಶೆಯಿದ್ದರೆ, ಮೊದಲು 'ಆರ್ಜವ' ಋಜುಭಾವವನ್ನು–ಅಂದರೆ ಮನಸ್ಸು, ವಾಕ್ಕು, ಕರ್ಮ ಮೂರರಲ್ಲಿಯೂ ಒಂದೇ ಬಗೆಯಾಗಿರುವದೆಂಬ ಸಾಧನ ವನ್ನು–ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಿಸಿರಿ.

ನೀವು ಮಾಡುತ್ತಿರುವ ಸಾಧನದಲ್ಲಿ ನಿಮಗೆ ಶ್ರದ್ಧೆಯಿದೆಯೆ? ನಿಮಗೆ ನಿಜವಾದ ಮುಮುಕ್ಷತೆ–ಭಗವದ್ಭಕ್ತಿಯಿಂದ ಈಶ್ವರಪ್ರೀತಿಯನ್ನು ಸಂಪಾದಿಸಿಕೊಂಡು ಭಗವದನುಗ್ರಹದಿಂದ ಪಾರಾಗಬೇಕೆಂಬ ಇಚ್ಛೆ–ನಿಜವಾಗಿದೆಯೆ? ನೋಡಿಕೊಳ್ಳಿರಿ. ಇಲ್ಲದಿದ್ದರೆ 'ಶ್ರಮಸ್ತಸ್ಯ ಶ್ರಮಫಲಃ' ಎಂಬಂತೆ ನೀವು ಮಾಡುವ ಸಾಧನಕ್ಕೆ ಶ್ರಮವೊಂದೇ ಫಲವಾಗುವದು.

ಆಶ್ರಮದಲ್ಲಿರುವ ಮಾರ್ಗದರ್ಶಿಗಳಾದ ಮಹಾನುಭಾವರು ನಿಜವಾಗಿ ಕೃತಕೃತ್ಯರೂ ಸಾಧಕರಿಗೆ ಮಾರ್ಗದರ್ಶಿಗಳೂ ಆಗಬಹುದು. ಆದರೆ ಅವರಲ್ಲಿ ಗುರುಭಾವನೆಯಿಲ್ಲದಿದ್ದರೆ ಆಶ್ರಮವಾಸದಿಂದ ತಕ್ಕ ಫಲವು ದೊರೆಯಲಾರದು. ಮಹಾಪುರುಷರ ಕೀರ್ತಿಯು ಎಲ್ಲೆಲ್ಲಿಯೂ ಹರಡಿರುವದೆಂಬ ಕಾರಣದಿಂದ ಅವರ ಬಳಿಗೆ ಹೋದಬಳಿಕ, ಅವರು ಆಶ್ರಮಕಾರ್ಯವಿಶೇಷಗಳಲ್ಲಿ ತೊಡಗಿದ್ದರೆ 'ಅವರೂ ಲೌಕಿಕರೇ, ನಮ್ಮಂತೆ ಕಾರ್ಯಸಾಧನೆಗಾಗಿ ಶ್ರಮಿಸುತ್ತಿರುವವರೇ' ಎಂಬ ಬುದ್ಧಿಯು ಅಂಕುರಿಸಿ ಅವರ ವಿಷಯಕ್ಕೆ ಅಸಡ್ಡೆಯುಂಟಾಗಿಬಿಡಬಹುದು. ಆಮೇಲೆ ನೀವು ಆಶ್ರಮದಲ್ಲಿರುವದರಿಂದ ಸತ್ಫಲವಾಗುವದಂತಿರಲಿ, ಗುರುತಿರಸ್ಕಾರದಿಂದ ದುಷ್ಫಲವೇ ಆಗಿಬಿಡಬಹುದು. ಆದ್ದರಿಂದ ಗುರುಗಳೆನಿಸಿಕೊಂಡಿರುವವರ ಆಚಾರ, ವಿಚಾರ, ಅನುಷ್ಠಾನ, ಅಧ್ಯಾತ್ಮವಿದ್ಯಾಸಕ್ತಿ, ಸಾಧನಾನುಷ್ಠಾನದ ಮರ್ಮವನ್ನು ತಿಳಿಸಿಕೊಡುವ ಸಾಮರ್ಥ್ಯ—ಮುಂತಾದವುಗಳನ್ನು ಪರಿಗಣಿಸಿ ಭಕ್ತಿಯನ್ನು ಸಂಪಾದನೆಮಾಡಿಕೊಳ್ಳಿರಿ. ಆಶ್ರಮದಲ್ಲಿರುವವರಲ್ಲಿ ಗುಣಗ್ರಹಣವನ್ನು ಮಾಡುತ್ತಾ ಯಾವ ದೋಷವನ್ನೂ ಮನಸ್ಸಿಗೆ ತಂದುಕೊಳ್ಳದೆ ಸಾಧನೆಯಲ್ಲಿಯೇ ನಿರತರಾಗಿ ಭಗವದ್ಭಕ್ತಿಯನ್ನು ಬೆಳೆಯಿಸಿಕೊಳ್ಳುವದಕ್ಕೆ ಯತ್ನಿಸುತ್ತಿರಿ. ನಿಮಗೆ ಶ್ರೇಯಸ್ಸಾಗುವದು.

## ಗುರುಶಿಷ್ಯಸಂಬಂಧ

ಶಿಷ್ಯನಾದವನು ಗುರುವಿನಲ್ಲಿ ಭಗವಂತನನ್ನೇ ಕಾಣುತ್ತಿರಬೇಕು. ಬ್ರಹ್ಮನಂತೆ ಉತ್ತಮಜ್ಞಾನವನ್ನು ಸೃಷ್ಟಿಸಿ, ವಿಷ್ಣುವಿನಂತೆ ಶಿಷ್ಯನ ಅಧ್ಯಾತ್ಮಪ್ರವಣತೆಯನ್ನು ಕಾಪಾಡಿ, ರುದ್ರನಂತೆ ಅವನ ಪಾಪವಾಸನೆಗಳನ್ನೆಲ್ಲ ಲಯಗೊಳಿಸುವ ಗುರುವು ಪರಬ್ರಹ್ಮಸ್ವರೂಪನೇ ಸರಿ.

ಗುರುವಾದವನು ತನ್ನ ಬಳಿಗೆ ಬಂದ ಯೋಗ್ಯನಾದ ಶಿಷ್ಯನನ್ನು ಕೃಪೆಯಿಂದ ಪಾರುಗೊಳಿಸುವನು. ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆಗಿರುವ ಗುರುವಿಗೆ ತಾನು ಗುರುವೆಂಬ ಹೆಮ್ಮೆಯು ಎಂದಿಗೂ ಇರಲಾರದು. ಬ್ರಹ್ಮಾದಿಸ್ತಂಬಪರ್ಯಂತವಾಗಿರುವ ಪ್ರಾಣಿಗಳಲ್ಲಿ ಎಲ್ಲೆಲ್ಲಿಯೂ ಭಗವಂತನೇ ಸಮನಾಗಿ ಆತ್ಮನಾಗಿರುವನೆಂಬ ನಿರ್ದುಷ್ಟ ಭಾವನೆಯಿರುವ ಮಹಾತ್ಮನಿಗೆ ತಾನು ಮತ್ತೊಬ್ಬರಿಗಿಂತ ಹೆಚ್ಚಿನವನೆಂಬ ಭಾವನೆಯೇ ಇರುವಂತಿಲ್ಲ.

## 286. ಮನೆಯಲ್ಲಿ ಅಧ್ಯಾತ್ಮವಿದ್ಯಾಭ್ಯಾಸ

(ಆಗಸ್ಟ್ 1970)

*ನಿಮ್ಮ ಪತ್ರವು ತಲುಪಿದೆ. ಸ್ಕೂಲುಗಳಲ್ಲಿ ನೀತಿಮತಗಳ ಶಿಕ್ಷಣವು ಇಲ್ಲದಿರುವದರಿಂದ ಹುಡುಗರ ಮನಸ್ಸು ಕಶ್ಮಲವಾಗುತ್ತಾ ಬರುತ್ತಿದೆ. ಈ ರೋಗಕ್ಕೇನಾದರೂ ಔಷಧವುಂಟೆ?–ಎಂತ ಕೇಳಿರುತ್ತೀರಿ. ಇದು ಕಾಲೋಚಿತವಾದ ಪ್ರಶ್ನೆಯೇ ಸರಿ.*

ಪ್ರಜೆಗಳಿಗೆ ಧಾರ್ಮಿಕಶಿಕ್ಷಣವನ್ನು ಕೊಡಿಸದೆ ಇದ್ದರೆ ರಾಷ್ಟ್ರದ ಆಡಳಿತಕ್ಕೆ ಕೂಡ ಆತಂಕವಾಗುಷ್ಟು ಪ್ರಕ್ಷುಬ್ಧಸ್ಥಿತಿಯು ಒದಗುವದೆಂದು–ರಾಷ್ಟ್ರದ ಮುಖ್ಯಾಧಿಕಾರಿಗಳಿಗೆ ಮನದಟ್ಟಾಗುವವರೆಗೆ ನಾವು ವಿದ್ಯಾಶಾಲೆಗಳಿಂದ ಏನನ್ನೂ ನಿರೀಕ್ಷಿಸುವದಕ್ಕೆ ಬರುವಂತಿಲ್ಲ. ಆದ್ದರಿಂದ ಈ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಗೃಹಗಳಲ್ಲಿಯೇ ಈ ಶಿಕ್ಷಣವು ಅತ್ಯಂತ ಅವಶ್ಯವಾಗಿರುತ್ತದೆಯೆಂಬ ಮಾತಿಗೆ ಎರಡಿಲ್ಲ. ತಂದೆತಾಯಿಗಳು ಮಕ್ಕಳಿಗೆ ಅನ್ನವಸ್ತ್ರಗಳ ಏರ್ಪಾಡುಮಾಡಿ, ವಿದ್ಯಾಲಯಗಳಿಗೆ ಕಳುಹಿಸಿಕೊಟ್ಟರೆ ತಮ್ಮ ಕೆಲಸವು ಮುಗಿಯಿತೆಂಬ ಭಾವನೆಯನ್ನು ಕೂಡಲೆ ಬಿಟ್ಟುಬಿಡಬೇಕು.

ಭಗವಂತನೊಬ್ಬನು ಇದಾನೆಂದೂ ಭಗವದ್ಭಕ್ತಿಯಿಂದ ಇಹಪರಪುರುಷಾರ್ಥಗಳು ದೊರಕುವವೆಂದೂ ಎಲ್ಲಾ ಮತಗಳವರೂ ನಂಬುತ್ತಾರೆ. ಆದ್ದರಿಂದ ಆಯಾ ಮತದವರು ತಮ್ಮತಮ್ಮ ಮತದ ಮೂಲತತ್ತ್ವಗಳನ್ನು ಹುಡುಗರಿಗೆ ಬೋಧಿಸುವದೂ ವಿನಯಾಧಾನಕ್ಕೆ ತಕ್ಕ ನೀತಿಯನ್ನು ಮಕ್ಕಳಲ್ಲಿ ಆಚಾರಕ್ಕೆ ತರುವದೂ ಯುಕ್ತವಾಗಿದೆ. ಆದರೂ ಅಧ್ಯಾತ್ಮಶಿಕ್ಷಣವು ಬರಿಯ ಮತಾಚಾರ್ಯರ ಬೋಧೆಯಿಂದಲೇ ಪೂರ್ಣವಾಗಲಾರದು. ಮನೆಯಲ್ಲಿ ತಂದೆತಾಯಿಗಳು ತಮ್ಮತಮ್ಮ ಆಚರಣೆಯಿಂದಲೂ ಹುಡುಗರಿಗೆ ತಿಳಿವಳಿಕೆಯನ್ನು ಕೊಡುವದು ಅವಶ್ಯ. ಕಾಲಕಾಲಕ್ಕೆ ಏಳುವದು, ಅವರವರ ವಯಸ್ಸು, ಅವಸ್ಥೆ–ಮುಂತಾದ ಯೋಗ್ಯತೆಗೆ ತಕ್ಕಂತೆ ದೇವರ ಪ್ರಾರ್ಥನೆ, ಸ್ತೋತ್ರ, ಜಪ, ನಮಸ್ಕಾರ–ಮುಂತಾದವುಗಳನ್ನೂ ಗುರುಹಿರಿಯರಲ್ಲಿ ನಡೆದುಕೊಳ್ಳಬೇಕಾದ ರೀತಿಯನ್ನೂ ಕಲಿಯಿಸುವದಕ್ಕೆ ಪ್ರಯತ್ನಿಸಬೇಕು. ಸನಾತನಧರ್ಮದವರು ತಿಳಿದಿರಬೇಕಾದ ವಿಷಯಗಳನ್ನು ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ 'ಅನುಭವಗಮ್ಯವೇದಾಂತ'ವೆಂಬ ಗ್ರಂಥದ ಅವಲೋಕನದಿಂದ ನೀವು ತಿಳಿದುಕೊಳ್ಳಬಹುದು.

ಹೆಚ್ಚಿಗೆಯ ವಿವರವೇನಾದರೂ ಬೇಕಾದರೆ ಬರೆದರೆ ಮತ್ತೊಂದುಬಾರಿ ಉತ್ತರವನ್ನು ಬರೆಯುವೆನು. ನಿಮ್ಮ ಪ್ರಯತ್ನವು ಸುಪಥದಲ್ಲಿ ಸಾಗಲಿ!–ಎಂದು ಹಾರೈಸುತ್ತೇನೆ.

# 287. ತತ್ತ್ವವಿಚಾರ–ಸಾಧನಾನುಷ್ಠಾನ

## ( ಸೆಪ್ಟೆಂಬರ್ 1970)

*ನಿಮ್ಮ ಪತ್ರವು ತಲುಪಿದೆ. ತತ್ತ್ವವನ್ನು ಅರಿತುಕೊಳ್ಳಬಲ್ಲವರಿಗೆ ಸಾಧನಗಳು ಅವಶ್ಯವೆ? ಅಧ್ಯಾತ್ಮಗ್ರಂಥಗಳಲ್ಲಿ ಹೇಳಿರುವ ತತ್ತ್ವವು ಯಾವನಿಗೆ ಯಾವ ಅಡ್ಡಿಯೂ ಇಲ್ಲದೆ ತಿಳಿಯುತ್ತದೆಯೋ ಅವನು ಯಾವ ಸಾಧನವನ್ನಾದರೂ ಏತಕ್ಕೆ ಮಾಡಬೇಕು? ತತ್ತ್ವವಿಚಾರದಲ್ಲಿಯೇ ಮುಳುಗಿರುವವರಿಗೆ ಸಾಧನಾನುಷ್ಠಾನವೆಂಬುದೊಂದು ಅನವಶ್ಯವಾದ ಹೊರೆಯಲ್ಲವೆ?–ಎಂದು ಕೇಳಿರುತ್ತೀರಿ.*

ನಿಮ್ಮ ಪ್ರಶ್ನೆಯು ಅರ್ಥಗರ್ಭಿತವಾಗಿದೆ; ಏಕೆಂದರೆ ಭಗವಂತನು ಅರ್ಜುನನಿಗೆ ಕರ್ಮವನ್ನು ಅವಶ್ಯವಾಗಿ ಮಾಡುತ್ತಿರಬೇಕೆಂದು ಬೋಧಿಸುವಾಗಲೂ

**ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ।**
**ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ॥**
**ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ ।**
**ನ ಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ ॥ ಗೀ.3–17, 18**

ಎಂದಿರುತ್ತಾನೆ. ಆತ್ಮಜ್ಞಾನನಿಷ್ಠನಾದವನು ಆತ್ಮಚಿಂತನದಲ್ಲಿಯೇ ನಿರತನಾಗಿರುತ್ತಾನೆ; ಆತ್ಮಾನಂದರಸವನ್ನನುಭವಿಸುವದರಿಂದಲೇ ತೃಪ್ತನಾಗಿರುತ್ತಾನೆ. ಅವನು ಯಾವ ಸಾಧನವನ್ನೂ ಮಾಡಬೇಕಾಗಿರುವದಿಲ್ಲ; ಏಕೆಂದರೆ ಸಾಧನದಿಂದ ಅವನು ಯಾವ ಪ್ರಯೋಜನವನ್ನೂ ಬಯಸುತ್ತಿರುವದಿಲ್ಲ. ಯಾವ ಸಾಧನವನ್ನಾದರೂ ಮಾಡದೆ ಇದ್ದದ್ದರಿಂದ ಇಂಥ ಅನಿಷ್ಟವು ಬಂದೊದಗೀತು ಎಂಬ ಅಂಜಿಕೆಯೂ ಅವನಿಗೆ ಇರುವದಿಲ್ಲ. ಅವನು ಯಾವ ದೇವತೆಯನ್ನಾದರೂ ಆರಾಧನೆಮಾಡಿ ಪಡೆದುಕೊಳ್ಳಬೇಕಾಗಿರುವ ಅಭೀಷ್ಟವೂ ಇರುವದಿಲ್ಲ; ಏಕೆಂದರೆ ಜ್ಞಾನತೃಪ್ತನಾದವನಿಗೆ ಎಲ್ಲವೂ ಆತ್ಮನೇ ಆಗಿಬಿಟ್ಟಿರುತ್ತದೆ.

ಇಷ್ಟೇ ಅಲ್ಲ, ಪೂರ್ಣವೈರಾಗ್ಯವು ಬಂದಿರುವ ಮುಮುಕ್ಷುವು ಕೂಡ ಮತ್ತೇನನ್ನೂ ಮಾಡಬೇಕಾದ್ದಿರುವದಿಲ್ಲ; ವೈರಾಗ್ಯವುಂಟಾದ ದಿನವೇ ಸರ್ವಕರ್ಮಗಳನ್ನೂ ಸಂನ್ಯಾಸ ಮಾಡಿ ಪರಮಾತ್ಮಪ್ರಾಪ್ತಿಗಾಗಿಯೇ ಹವಣಿಸುತ್ತಾ ಗುರುವಿನ ಸೇವೆಯಲ್ಲಿ ನಿರತನಾಗಿ ತತ್ತ್ವವಿಚಾರವನ್ನು ಮಾಡುತ್ತಿರಬೇಕು–ಎಂದು ಶಾಸ್ತ್ರವೂ ಇದೆ.

ಆದರೆ ಒಂದು ಎಚ್ಚರಿಕೆಯ ಮಾತನ್ನು ಇಲ್ಲಿ ಆಡಲೇ ಬೇಕಾಗಿರುತ್ತದೆ. ನನಗೆ ತೀವ್ರವಾದ ವಿರಕ್ತಿಯುಂಟಾಗಿದೆಯೆ, ಇಲ್ಲವೆ?–ಎಂಬುದನ್ನು ಮತ್ತೊಬ್ಬರು ನಿರ್ಣಯಿಸುವ

ಹಾಗಿಲ್ಲ; ತಾನೇ ನಿಶ್ಚಯಿಸಿಕೊಳ್ಳಬೇಕಾಗಿರುತ್ತದೆ. ಮಾಡಬಾರದ ಕರ್ಮಗಳನ್ನು ಮಾಡಿಯಾದರೂ ಇಂದ್ರಿಯಗಳಿಗೆ ತೃಪ್ತಿಯನ್ನು ಮಾಡಿಕೊಳ್ಳಬೇಕು– ಎಂಬ ಹವಣಿಕೆಯು ಯಾವಾಗಲಾದರೂ ನನ್ನ ಮನಸ್ಸಿನಲ್ಲಿ ಅಂಕುರಿಸುತ್ತಿದೆಯೆ?–ಎಂಬುದನ್ನು ಸಾಧಕನಾದವನು ತಾನೇ ತನ್ನಲ್ಲಿ ನೋಡಿಕೊಳ್ಳಬೇಕು. ಇಂದ್ರಿಯಗಳು–ತಮಗೆ ಬೇಕಾದ ಭೋಗ್ಯವಸ್ತುಗಳು ಸಿಕ್ಕುವಹಾಗಿದ್ದರೆ–ಸುಮ್ಮನಿರುವದಿಲ್ಲವೇ ಇಲ್ಲ. ಬಲಾತ್ಕಾರದಿಂದ ವಿಷಯಗಳತ್ತ ಮನಸ್ಸನ್ನು ಜಗ್ಗುತ್ತಲೇ ಇರುತ್ತವೆ. ಆದ್ದರಿಂದ ಅವನ್ನು ವಶದಲ್ಲಿಟ್ಟು ಕೊಳ್ಳುವದಕ್ಕೆ ಸಾಧನವು ಅವಶ್ಯವಾಗಿರುತ್ತದೆ.

ಮನಸ್ಸು ತಳಮಳವಿಲ್ಲದೆ ಇದೆಯೆ? ಯಾವದಾದರೂ ಪರಮಾರ್ಥವನ್ನು ಚಿಂತನೆಮಾಡುವದಕ್ಕೆ ಹೊರಟಾಗ ಅತ್ತಿತ್ತ ಹರಿದಾಡುವದಿಲ್ಲವೆ?–ಎಂಬುದನ್ನು ವಿಚಾರಿಸಿಕೊಳ್ಳುತ್ತಿರಬೇಕು. ಮನಸ್ಸು ವಿಷಯಗಳನ್ನು ವಿಕಲ್ಪಿಸುತ್ತಿದ್ದರೆ, ಅಥವಾ ಧ್ಯಾನಕ್ಕೆ ಕುಳಿತಾಗ ಅತ್ತಿತ್ತ ವಿಷಯಚಿಂತನೆಯಿಂದ ಹರಿದಾಡುತ್ತಲೇ ಇದ್ದರೆ ಸಾಧನವು ಅವಶ್ಯವಾಗಿ ಬೇಕು. ಅಧ್ಯಾತ್ಮಗ್ರಂಥಗಳನ್ನು ಓದುವಾಗ, ಅಥವಾ ಅಧ್ಯಾತ್ಮೋಪದೇಶದ ಮಾತುಗಳನ್ನು ಕೇಳಿದಾಗ ಮನಸ್ಸು ವಿಚಾರದ ವಿಷಯದಲ್ಲಿ ಬಹುಕಾಲ ನಿಲ್ಲದೆ ಅತ್ತಿತ್ತ ಸರಿಯುತ್ತಿದೆಯೆ? ಅಥವಾ ಆಲಸ್ಯದಿಂದ ತೂಕಡಿಕೆಗೆ ಅವಕಾಶವನ್ನು ಕಲ್ಪಿಸಿ ಕೊಡುತ್ತಿದೆಯೆ? ಇದನ್ನು ಪರೀಕ್ಷಿಸಿಕೊಳ್ಳಬೇಕು. ಹಾಗಿದ್ದರೆ ಅವಶ್ಯವಾಗಿ ಸಾಧನವು ಬೇಕು.

ಏಕಾಂತವಾಸಕ್ಕೆಂದು ದೂರಕ್ಕೆ ಹೋದಾಗ, ಆಗಾಗ್ಗೆ ಮನೆಯವರ, ಅಥವಾ ಆಪ್ತೇಷ್ಟರ ಚಿಂತೆಯು ಸುಳಿದಾಡುತ್ತಿರುವದೇನು? ಅಥವಾ ಏಕಾಂತಸ್ಥಲದಲ್ಲಿಯೇ ಯಾವದಾದರೂ ನೋಟವನ್ನು ಕಂಡು ಹಿಗ್ಗುತ್ತಾ ಅತ್ತ ಹರಿಯುತ್ತದೆಯೇನು? ಹಾಗಿದ್ದರೂ ಸಾಧನವು ಬೇಕು. ತಕ್ಕ ಸಾಧನವನ್ನು ಅವಶ್ಯವಾಗಿ ಆಶ್ರಯಿಸಬೇಕು.

ಸಾಧನವೆಂದರೇನು? ಶರೀರದ, ಇಂದ್ರಿಯಗಳ ಅಥವಾ ಮನಸ್ಸಿನ ನೆಮ್ಮದಿಗೆಂದು ಏನಾದರೂ ಮಾಡಿಕೊಳ್ಳುವ ಚಟವಿರುವವರಿಗೆ ತಮ್ಮೊಳಗಿರುವ ಪರಮಾರ್ಥಾತ್ಮದತ್ತ ತಿರುಗುವದಕ್ಕೆ ಇರುವ ಅಡ್ಡಿಯನ್ನು ಕಳೆದುಕೊಳ್ಳುವದಕ್ಕೆ ಮಾಡಬೇಕಾದ ಪ್ರಯತ್ನ. ಬುದ್ಧಿಪ್ರಭಾವದಿಂದ ವಿಷಯವನ್ನು ಗ್ರಹಿಸುವ ಯೋಗ್ಯತೆಯುಂಟಾಗಿದ್ದಮಾತ್ರಕ್ಕೆ ವಿಚಾರಕ್ಕೆ ತಕ್ಕ ಅರ್ಹತೆ ಬಂದಿತೆಂದು ನಂಬುವದಕ್ಕಾಗುವದಿಲ್ಲ. ಇಂದ್ರಿಯಗಳ, ಮನಸ್ಸಿನ, ಮತ್ತು ಬುದ್ಧಿಯ ದೋಷಗಳನ್ನು ತಡೆದುಕೊಂಡು ಸ್ವರೂಪವನ್ನೇ ನಿರೂಪಿಸುವ ಯೋಗ್ಯತೆಯು ಬೇಕಾದರೆ ಪ್ರಯತ್ನವು ಬೇಕಾಗುತ್ತದೆ. ಅದಕ್ಕೆ ಶಾಸ್ತ್ರೋಕ್ತವಾದ ಸಾಧನವು ಬೇಕು.

# 288. ವಾಸನೆ ಅಥವಾ ಸಂಸ್ಕಾರ

## ( ಅಕ್ಟೋಬರ್ 1970)

ನಿಮ್ಮ ಪತ್ರವನ್ನು ಓದಿದೆನು. *ನೀವು ಎಷ್ಟೋ ದೂರದಲ್ಲಿದ್ದರೂ ನಿಮ್ಮ ಇಷ್ಟ ಮಿತ್ರರ ಸ್ಮರಣೆಯು ನಿಮಗೆ ಬರುತ್ತಿರುವದಕ್ಕೆ ಆಗಾಗ್ಗೆ ಅವರಿಂದ ದೊರಕುತ್ತಿದ್ದ ಪ್ರಿಯವಸ್ತುಗಳ ಲಾಭದಿಂದ ನಿಮಗೆ ಆಗುತ್ತಿದ್ದ ಅನುಭವದ ಸಂಸ್ಕಾರವೇ ಕಾರಣವಾಗಿರುತ್ತದೆ.*

ಮನಸ್ಸೆಂಬುದು ನಿಮ್ಮೊಳಗೇ ಇರುವ ಕರಣವಾದರೂ ಅದು ನಿಮ್ಮನ್ನೂ ನಿಮ್ಮ ಸಂನಿವೇಶವನ್ನೂ ದಾಟಿ ತನಗೆ ತೋಚಿದಷ್ಟು ದೂರಕ್ಕೆ ಹೋಗಬಲ್ಲದಾಗಿರುವದರಿಂದ, ಅದು 'ನಿಮ್ಮ ಕರಣ'–ಎನ್ನುವದಕ್ಕಿಂತ ಈಗಿನ ಸ್ಥಿತಿಯಲ್ಲಿ ಅದಕ್ಕೇ ನೀವು ಉಪಕರಣ ವಾಗಿರುತ್ತೀರಾ–ಎನ್ನಬಹುದಾಗಿದೆ.

ಮನಸ್ಸು ವಿಷಯಭೋಗಗಳನ್ನು ಅನುಭವಿಸುತ್ತಿರುವಾಗ ವಿಷಯಗಳಿಗೂ ಇಂದ್ರಿಯಗಳಿಗೂ ಗಂಟಾಗಿರುತ್ತದೆ. ವಿಷಯಗಳು ನಿಮ್ಮೊಳಗೇ ಆಯಾ ಸುಖದುಃಖಗಳನ್ನು ಉಂಟುಮಾಡುತ್ತಾ ಇರುವವು. ಅನುಭವವು ನಿಮ್ಮ ಒಳಗೇ ಇರುತ್ತದೆ. ನಿಮಗೆ ಇಷ್ಟವಾದ ಭೋಗವನ್ನು ಪಡೆದುಕೊಳ್ಳುವದಕ್ಕೂ ಅನಿಷ್ಟವಾದದ್ದನ್ನು ತಪ್ಪಿಸಿಕೊಳ್ಳುವದಕ್ಕೂ ನಿಮಗೆ ಆಗುತ್ತಿರುವದರಿಂದ ಆಗ್ಗೆ ಅದು ನಿಮ್ಮ 'ಕರಣ'ವಾಗಿರುತ್ತದೆ.

ಅದರೆ ಭೋಗಗಳು ಕ್ಷಣಿಕವಾದರೂ ಅವುಗಳ ವಾಸನೆಯು ಅಥವಾ ಸಂಸ್ಕಾರವು ಮನಸ್ಸಿನಲ್ಲಿ ನಿಂತುಕೊಂಡುಬಿಟ್ಟಿರುತ್ತದೆ. ಆ ವಾಸನೆಯು ಯಾವದಾದರೊಂದು ನಿಮಿತ್ತದಿಂದ ಎದ್ದುಕೊಂಡಾಗ ಮನಸ್ಸು ನಿಮ್ಮ ಮಾತನ್ನು ಕೇಳದೆ ಎಷ್ಟೋ ಹಿಂದೆ ಆಗಿದ್ದ ಭೋಗವನ್ನೋ ಎಷ್ಟೋ ದೂರದಲ್ಲಿರುವ ಭೋಗ್ಯವಸ್ತುವನ್ನೋ ಸ್ಮರಿಸಿಕೊಂಡು ಅತ್ತ ಹಾರಿಹೋಗಿಬಿಡುತ್ತದೆ. ಆಗ ನೀವು ಅವುಗಳ ಬೆನ್ನು ಹತ್ತಿ ಮನಸ್ಸಿನ ಅಡಿಯಾಳಾಗಿ ಹಿಂಬಾಲಿಸುತ್ತಿರುತ್ತೀರಿ!

ವಿಷಯಭೋಗಕ್ಕಿಂತಲೂ ಹೆಚ್ಚಾಗಿ ಭೋಗದ ಸಂಸ್ಕಾರವೂ ಸ್ಮರಣೆಯೂ ನಿಮ್ಮನ್ನು ಗೋಳುಗುಟ್ಟಿಸುತ್ತಿದೆ–ಎಂಬುದು ಸ್ಪಷ್ಟ. ಮನಸ್ಸಿನಲ್ಲಿ ಯಾವದಾದರೊಂದು ವಸ್ತುವಿನ ಅಥವಾ ಯಾರಾದರೊಬ್ಬನ ಸ್ಮರಣೆಯು ಬಾರದಂತೆ ನೋಡಿಕೊಳ್ಳಬೇಕು. ವಿಷಯವಾಸನೆಗಳನ್ನು ತಪ್ಪಿಸಿಕೊಳ್ಳುವದಕ್ಕೆ ಆಗುವದೆ?–ಎಂದರೆ ಆಗುತ್ತದೆ. ಆಗ ನೀವು ಮನಸ್ಸಿನ ಹಿಡಿತದಿಂದ ತಪ್ಪಿಸಿಕೊಳ್ಳುವದಕ್ಕೆ ಆಗುತ್ತದೆ. ಇದು ಹೇಗೆಂಬುದನ್ನು ಇನ್ನೊಂದು ಪತ್ರದಲ್ಲಿ ತಿಳಿಯಿಸುವೆನು.

## 289. ಭಕ್ತಿಯೂ ಜ್ಞಾನವೂ

**( ನವೆಂಬರ್ 1970)**

*ಭಕ್ತನು ಈಶ್ವರನಿಗಿಂತ ಬೇರೆಯಾಗಿರುತ್ತಾನೆ; ಜ್ಞಾನಿಯು 'ಅಹಂ ಬ್ರಹ್ಮಾಸ್ಮಿ' ನಾನೇ ಬ್ರಹ್ಮವು ಎಂಬ ಅನುಭವವನ್ನು ಸಂಪಾದಿಸಿಕೊಂಡಿರುತ್ತಾನೆ. ಹೀಗಿರುವದರಿಂದ ಭಕ್ತಿಯು ಜ್ಞಾನಕ್ಕಿಂತ ಕೀಳಲ್ಲವೆ?–ಎಂದು ನೀವು ಕೇಳಿ ಬರೆದ ಪತ್ರವನ್ನು ಓದಿಕೊಂಡೆನು. ಭಕ್ತಿ ಜ್ಞಾನ–ಎಂಬ ಶಬ್ದಗಳಿಗೆ ಇರುವ ಎರಡೆರಡು ಅರ್ಥಗಳನ್ನು ನೀವು ಮನಸ್ಸಿಗೆ ತಂದುಕೊಳ್ಳದೆ ಇರುವದೇ ಈ ಪ್ರಶ್ನೆಗೆ ಕಾರಣವಾಗಿದೆ.*

ಭಕ್ತಿಯು ಗೌಣಭಕ್ತಿಯೆಂದೂ, ಮುಖ್ಯ (ಪರ) ಭಕ್ತಿಯೆಂದೂ ಎರಡುವಿಧ. ಜ್ಞಾನವೂ ಹಾಗೆಯೇ; ವ್ಯಾವಹಾರಿಕವಾಗಿರುವ ಜ್ಞಾನವೊಂದು, ಪಾರಮಾರ್ಥಿಕವಾಗಿರುವ ಜ್ಞಾನವೊಂದು. ಪರಭಕ್ತಿಯೂ ಪರಜ್ಞಾನವೂ ಒಂದೇ ಪದಾರ್ಥಕ್ಕೆ ಬೇರೆಬೇರೆಯ ದೃಷ್ಟಿಯಿಂದ ಕೊಟ್ಟಿರುವ ಹೆಸರುಗಳು.

**ಚತುರ್ವಿಧಾ ಭಜನ್ತೇ ಮಾಂ ಜನಾಃ ಸುಕೃತಿನೋಽರ್ಜುನ ।**
**ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ॥**
**ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ।**
**ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ ॥**
**ಉದಾರಾಃ ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಮ್ ।**
**ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಮ್ ॥**

**ಗೀ. 7–16–,17,18.**

ಈ ಶ್ಲೋಕಗಳಿಗೆ ಶಾಂಕರಭಾಷ್ಯವನ್ನು ನೋಡಿರಿ. ಆಗ ನಿಮ್ಮ ಸಂಶಯವು ತೊಲಗುವದು. ಜ್ಞಾನಿಯೇ ನಿಜವಾದ ಭಕ್ತನು; ಏಕೆಂದರೆ ಸರ್ವಭೂತಗಳಲ್ಲಿಯೂ ಇರುವ ಪರಮಾತ್ಮನು ಒಬ್ಬನೇ, ಅವನೇ ನನ್ನ ಆತ್ಮನು–ಎಂಬುದನ್ನು ತಿಳಿದು ಅವನು ಜ್ಞಾನನಿಷ್ಠನಾಗಿರುತ್ತಾನೆ.

ಯಾವನು ಪರಬ್ರಹ್ಮಾನುಭವವನ್ನು ಪಡೆದುಕೊಂಡಿರುತ್ತಾನೋ ಅವನಿಗೇ 'ಮದ್ಭಕ್ತಿಂ ಲಭತೇ ಪರಾಮ್' (18–54) ಎಂಬಲ್ಲಿರುವ ಪರಭಕ್ತಿಯಿರುತ್ತದೆ. ಪರಭಕ್ತಿಯುಳ್ಳಾತನಿಗೇ ಪರಮಾತ್ಮನ ವಿಭೂತಿಯೂ ಪರಮಾತ್ಮತತ್ತ್ವದ ನಿಜವೂ ಅನುಭವಕ್ಕೆ ಬಂದಿರುತ್ತದೆ.

# 290. ಈಶ್ವರನ ವಿಷಯಕ್ಕೆ ಶಂಕೆಗಳ ಸುರಿಮಳೆ

( ಡಿಸೆಂಬರ್ 1970)

*ಇಂಗ್ಲಿಷಿನಲ್ಲಿ ಟೈಪು ಮಾಡಿರುವ ಪ್ರಶ್ನಾವಳಿಯ ನಿಮ್ಮ ಪತ್ರವು ಬಂದು ತಲುಪಿರುತ್ತದೆ. ನಿರ್ಗುಣರೂಪದ ಈಶ್ವರನನ್ನು ನಿತ್ಯವೂ ಧ್ಯಾನ ಮಾಡುತ್ತಿರುವದರಿಂದ ಮನಸ್ಸಿಗೆ ಶಾಂತಿಯು ದೊರಕಿದೆಯೆಂದೂ ಸರ್ವೇಶ್ವರನ ವಿಷಯಕ್ಕೆ ಮಾತ್ರ ನಿಮಗೆ ದಿಗ್ಭ್ರಮೆಯಾದಂತೆ ಆಗಿದೆಯೆಂದೂ ನಿಮ್ಮ ಪತ್ರದಲ್ಲಿ ಬರೆದಿರುತ್ತೀರಿ. ನಿಮ್ಮ ಪ್ರಶ್ನೆಗಳ ಮಾಲಿಕೆಯಲ್ಲಿ 1. ಈಶ್ವರನ ಸ್ವರೂಪ ಮತ್ತು ಕೃತ್ಯ, 2. ಈಶ್ವರನು ಈಗ ಏನು ಮಾಡುತ್ತಿದಾನೆ?, 3. ಈಶ್ವರನ ಸರ್ವಗತತ್ವ–ಮುಂತಾದವುಗಳ ಬಗೆಗೆ ಪ್ರಶ್ನೆಗಳನ್ನು ಹಾಕಿ 'ಪಂಡಿತರೂ ಜಿಜ್ಞಾಸುಗಳ ಬೋಧಕರೂ' ಇದಕ್ಕೆ ಉತ್ತರವನ್ನು ಕೊಡಬೇಕೆಂದು ಕೇಳಿರುತ್ತೀರಿ.*

ವೇದಾಂತಪ್ರತಿಪಾದ್ಯನಾದ ಈಶ್ವರನು–ತಟಸ್ಥೇಶ್ವರವಾದಿಗಳು ತಮ್ಮತಮ್ಮ ಧರ್ಮಗ್ರಂಥಗಳ ಆಧಾರದಮೇಲೆ ತರ್ಕಬದ್ಧರಾಗಿ ಕಲ್ಪಿಸಿರುವ–ಈಶ್ವರನಂತೆ ಯಾವ ತರ್ಕದಿಂದಲೂ ಸಿದ್ಧಮಾಡಬೇಕಾದ ಈಶ್ವರನಲ್ಲ. ಪರಮಾರ್ಥವಾಗಿ ಎಲ್ಲದರ ಆತ್ಮನಾಗಿರುವ ಪರಮಾರ್ಥತತ್ವವಾದ ನಿರ್ಗುಣಬ್ರಹ್ಮವೇ ಅವಿದ್ಯಾಕಲ್ಪಿತನಾಮರೂಪ ರಚಿತವಾದ ದೇಹೇಂದ್ರಿಯಸಂಘಾತಗಳ ಅಭಿಮಾನಿಗಳಾದ ಜೀವರುಗಳ ಅಪೇಕ್ಷೆಯಿಂದ ಈಶ್ವರನೆನಿಸಿರುತ್ತಾನೆ. ಘಟಾಕಾಶಗಳಿಗೂ ಮಹಾಕಾಶಕ್ಕೂ ಇರುವ ಸಂಬಂಧವೇ ಜೀವರುಗಳಿಗೂ ಈಶ್ವರನಿಗೂ ಇದೆ. (ಶಂಕರಾಚಾರ್ಯಕೃತ ಸೂತ್ರಭಾಷ್ಯ 2–1–14, ನಿರ್ಣಯಸಾಗರಮುದ್ರಣ ಪು. 201ನ್ನು ನೋಡಿ). ಆ ಈಶ್ವರನ ವಿಷಯಕ್ಕೆ ಏಳಬಹುದಾದ ಶಂಕೆಗಳಿಗೆ ಬ್ರಹ್ಮಸೂತ್ರ2–1–4ರಿಂದ ಮುಂದಕ್ಕೆ (ಪುಟ 184 ರಿಂದ 219ನೆಯ ಪುಟದವರೆಗಿನ ಭಾಗದಲ್ಲಿ) ವಿಸ್ತಾರವಾಗಿ ಪರಿಹಾರವನ್ನು ಭಾಷ್ಯಕಾರರು ಹೇಳಿರುತ್ತಾರೆ.

ಇನ್ನು ಸಗುಣೇಶ್ವರನೆಂದರೆ ಪರಬ್ರಹ್ಮನನ್ನೇ ಇಂಥಿಂಥ ಗುಣಗಳಿಂದ ಕೂಡಿರುತ್ತಾನೆಂದು ಉಪಾಸನೆ ಮಾಡಬೇಕಾದದ್ದೆಂದು ಉಪನಿಷತ್ತುಗಳಲ್ಲಿ ಹೇಳಿರುವ ರೂಪವು. ಆ ಉಪಾಸನೆಗೂ ಅದರ ಫಲಕ್ಕೂ ಶ್ರದ್ಧೆಯೇ ಮುಖ್ಯ. ಸಗುಣೇಶ್ವರನ ಉಪಾಸನೆಯ ವಿಷಯವನ್ನು ವಿಸ್ತಾರವಾಗಿ ಶಂಕರಾಚಾರ್ಯರ ಭಾಷ್ಯದಲ್ಲಿ ಸಮನ್ವಯಾಧ್ಯಾಯದಲ್ಲಿ ನಿರೂಪಿಸಲಾಗಿದೆ. ಆದರೆ ಈಶ್ವರನೆಂಬ ಶಬ್ದವಿರುವಾಗಲೆಲ್ಲ ಸಗುಣೇಶ್ವರನೇ ವಿವಕ್ಷಿತನಾಗಿರುತ್ತಾನೆಂದು ತಿಳಿಯುವದು ಮಾತ್ರ ಸರಿಯಲ್ಲ.

ನಿಮಗೆ ಕನ್ನಡಭಾಷೆಯ ಪರಿಚಯವಿದೆಯೆ? ಹಾಗಿದ್ದರೆ ಕಾರ್ಯಾಲಯದಲ್ಲಿ ಪ್ರಕಟಿತವಾಗಿರುವ ಭಾಷ್ಯಪ್ರಕರಣಾದಿಗ್ರಂಥಗಳನ್ನು ಓದಿರಿ; ಆಗ ಈಶ್ವರನ ವಿಷಯಕ್ಕೆ ಅದ್ವೈತಿಗಳ ಅಭಿಪ್ರಾಯವೇನೆಂಬುದು ಸ್ಪಷ್ಟವಾಗುವದು.

ಇನ್ನು ನಿಮಗೆ ಸಂಸ್ಕೃತ ಭಾಷೆಯ ಪರಿಚಯವಿದ್ದರೆ 'ಬ್ರಹ್ಮವಿದ್ಯಾರಹಸ್ಯ ವಿವೃತಿಃ' ಎಂಬ ಗ್ರಂಥವನ್ನು ಓದಬಹುದು. ಅದರಲ್ಲಿ ಸಗುಣಬ್ರಹ್ಮೋಪಾಸನೆಯ ಮತ್ತು ನಿರ್ಗುಣಬ್ರಹ್ಮಜ್ಞಾನದ ಬಗೆಗೆ ಬರಬಹುದಾದ ಸಂಶಯಗಳು ಪರಿಹಾರವಾಗುವಂತೆ ಸಾಧಾರಣವಾಗಿ ಬರೆದಿರುತ್ತದೆ. ಆ ಗ್ರಂಥವೂ ಕಾರ್ಯಾಲಯದಲ್ಲಿ ಪ್ರಕಟಿತವಾಗಿರುತ್ತದೆ.

ಈಶ್ವರನ ಅವತಾರಾದಿಗಳ ವಿಷಯಕ್ಕೆ ನಿಮಗೆ ಬಂದೊದಗಿರುವ ಸಂಶಯಗಳಿಗೆ ಯಥಾವಕಾಶವಾಗಿ ಉತ್ತರವನ್ನು ಪತ್ರಿಕೆಯಲ್ಲಿ ಕಾಣಬಹುದು. ಪರಮೇಶ್ವರನ ಅನುಗ್ರಹದಿಂದ ಶ್ರದ್ಧಾಭಕ್ತಿಧ್ಯಾನಗಳ ಫಲವಾಗಿ ಸರ್ವಸಂಶಯಗಳ ಛೇದವೂ ದೊರಕಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

## 291. ಪರಮಾರ್ಥಸಾಧನೆಯಲ್ಲಿ ಅಹಂಕಾರವು ಸಲ್ಲದು

### ( ಜನವರಿ 1971)

*ಪರಮಾರ್ಥಜ್ಞಾನವು ಆದಷ್ಟು ಬೇಗನೆ ಉಂಟಾಗುವದಕ್ಕೆ ಸಾಧನವು ಯಾವದೆಂದು ಕೇಳಿ ನೀವು ಬರೆದಿರುವ ಪತ್ರವನ್ನು ಓದಿಕೊಂಡೆನು. 'ಜನ ಸಂಮರ್ದವು ಹೆಚ್ಚಾಗಿರುವ ನಗರಗಳೇ ಈಗಿನ ನಾಗರಿಕತೆಯಲ್ಲಿರುವ ದೋಷವೆಂದು ಮನಗಂಡು ಒಂದು ಏಕಾಂತಸ್ಥಲವನ್ನು ಹುಡುಕುತ್ತಿದ್ದೇನೆ. ಈಗ ನನಗೆ ದೊರಕಬಹುದೆಂದು ಕಂಡು ಬಂದಿರುವ ಸ್ಥಲವು ಜನರ ಗದ್ದಲವಿಲ್ಲದೆ ಇರುವದರಿಂದ ಸಾಧನವು ಯಾವ ಆತಂಕವೂ ಇಲ್ಲದೆ ಸಾಗಬಹುದೆಂಬ ನಿರೀಕ್ಷೆಯಿದೆ. ಮನಸ್ಸಿನ ನೆಮ್ಮದಿಗೆ ಭಂಗವು ಬಾರದಂತೆ ನಾನು ಅನುಸರಿಸಬೇಕಾದ ನಿಯಮಗಳೇನಾದರೂ ಇದ್ದರೆ ದಯವಿಟ್ಟು ತಿಳಿಸೋಣವಾಗಲಿ'—ಎಂದು ಬರೆದಿರುತ್ತೀರಿ.*

ಜ್ಞಾನಕ್ಕೆ ಸಾಧನಗಳು ಯಾವಯಾವವು ಇರಬೇಕೆಂಬುದಕ್ಕೆ ಶ್ರೀಕೃಷ್ಣ ಭಗವಂತನು ಹೇಳಿರುವ 'ಅಮಾನಿತ್ವಮದಮ್ಭಿತ್ವಮ್' (ಗೀ. 13–7 ರಿಂದ 11) ಎಂದು ಮುಂತಾಗಿ ವಿವರಿಸಿರುವ ಸಾಧನಗಳನ್ನು ಭಾಷ್ಯಸಮೇತವಾಗಿ ಓದಿ ಮನದಟ್ಟು ಮಾಡಿಕೊಳ್ಳಿರಿ. ಅಲ್ಲಿ ಹೇಳಿರುವದಕ್ಕೆ ವಿರುದ್ಧವಾಗಿರುವ ನಡತೆಗಳು ಜ್ಞಾನಪ್ರಾಪ್ತಿಗೆ ಅಡ್ಡಿಯಾಗಿರುತ್ತವೆ.

ಅರಣ್ಯ, ನದಿಯ ಮರಳುಪ್ರದೇಶ, ದೇವಾಲಯ—ಮುಂತಾದ ಪರಿಶುದ್ಧವಾದ ಏಕಾಂತ ಸ್ಥಲಗಳಲ್ಲಿ ಚಿತ್ತವು ಪ್ರಸನ್ನವಾಗುವದರಿಂದ ಅವು ವಿವಿಕ್ತದೇಶವೆನಿಸುವವು. ಅಲ್ಲಿ ಆತ್ಮಭಾವನೆಯು ನಿರಾತಂಕವಾಗಿ ಉಂಟಾಗುತ್ತದೆ. ಸಂಸ್ಕಾರವಿಲ್ಲದ ಅವಿನೀತರ ಸಂಗವು ಅಡ್ಡಿಯಾಗುತ್ತದೆಯಾದ್ದರಿಂದ ಅಂಥವರು ಒಬ್ಬರಿಬ್ಬರು ಜೊತೆಯಲ್ಲಿದ್ದರೂ ಅದೇ

ಜನಸಮ್ಮರ್ದವಿರುವ ನಗರವಾಗಿಬಿಡುತ್ತದೆ. ಅಂಥ ಜನರ ಗುಂಪಿನಲ್ಲಿ ಸೇರುವದು ಸರಿಯಲ್ಲವೆಂದೇ ಭಗವಂತನು ಹೇಳಿರುತ್ತಾನೆ. "ಅರತಿರ್ಜನಸಂಸದಿ" ಎಂಬುದಕ್ಕೆ ಇದೇ ಅರ್ಥ.

ಎಲ್ಲಕ್ಕೂ ಮಿಗಿಲಾಗಿ ನಾನು ಹೆಚ್ಚಿನ ಸಾಧನವನ್ನು ಮಾಡುತ್ತಿದ್ದೇನೆ; ಈ ವಿಷಯದಲ್ಲಿ ನನಗೆ ಸರಿ ಯಾರೂ ಇಲ್ಲ ಎಂಬ ಅಹಂಭಾವವನ್ನು ಬಿಟ್ಟುಬಿಡಬೇಕು. ಇದು ಆಸುರಸಂಪತ್ತು. ಈ ಪತ್ರದಲ್ಲಿ ನಾನು ಬರೆದಿರುವ ಮೂರು ವಿಷಯಗಳನ್ನು ಮನದಂದು ಭಗವಂತನ ಸ್ಮರಣೆಯನ್ನು ಮಾಡುತ್ತಿರಿ. ಜ್ಞಾನವು ಅವಶ್ಯವಾಗಿ ಆತನ ಅನುಗ್ರಹದಿಂದ ಲಭಿಸುವದು.

## 292. ಬ್ರಾಹ್ಮಣ್ಯ

### ( ಫೆಬ್ರವರಿ 1971)

*ನಿಮ್ಮ ಪತ್ರವನ್ನು ಓದಿ ನೋಡಿಕೊಂಡೆನು. ಈಗಿನ ಕಾಲಕ್ಕೆ ಬ್ರಾಹ್ಮಣರಿಗೆ ಸ್ಥಾನವಿಲ್ಲ. ಸರಕಾರದಲ್ಲಿ ಹಿಂದೂಮತಕ್ಕೇ ಕೊಡಲಿಪೆಟ್ಟು ಬೀಳುತ್ತಿದೆ. 'ಜಾತೀಯತೆ', 'ಮಡಿವಂತಿಕೆ'– ಮುಂತಾದ ಹೆಸರುಗಳನ್ನಿಟ್ಟುಕೊಂಡು ಬ್ರಾಹ್ಮಣ್ಯವನ್ನು ನಾಶಮಾಡುವದಕ್ಕೆಂದೇ ಭಾಷಣಾದಿಗಳ ಮೂಲಕ ಜನನಾಯಕರು ಸ್ಥಿರಪ್ರಯತ್ನವನ್ನು ಮಾಡುತ್ತಿದ್ದಾರೆ. ಹಾಗಾದರೆ–ಬ್ರಾಹ್ಮಣ್ಯಕ್ಕೆ ಉಳಿಗಾಲವು ಯಾವಾಗ, ಹೇಗೆ ಬರಬೇಕು? ಮಿಕ್ಕವರೆಲ್ಲರೂ ಸಂಘಗಳನ್ನು ಏರ್ಪಡಿಸಿ ಕೊಂಡಿರುತ್ತಾರೆ; ಆದರೆ ಬ್ರಾಹ್ಮಣರಲ್ಲಿ ಅಸಂಘಾತವೇ ಅಸಾಧಾರಣ ಧರ್ಮವೆಂಬಂತೆ ಆಗಿರುತ್ತದೆ. ಬ್ರಾಹ್ಮಣ್ಯವು ಉದ್ಧಾರವಾಗಬೇಕಾದರೆ ಈಗ ಒಂದು ಹೊಸ ಅವತಾರವೇ ಆಗಬೇಕೇನೊ!–ಎನ್ನಿಸುತ್ತಿದೆ. ಈ ಸ್ಥಿತಿಯಲ್ಲಿ ಬ್ರಾಹ್ಮಣರು ಏನು ಮಾಡಬೇಕು? ಈ ವಿಷಯದಲ್ಲಿ ನಿಮ್ಮ ಸೂಚನೆಯೇನು? ಪತ್ರಿಕೆಯ ಮುಖದಿಂದ ಪ್ರಕಟಿಸಿದರೆ ಸರಿಯಾದೀತು!– ಎಂದು ಬಹಳ ಉದ್ವೇಗಪೂರ್ವಕವಾಗಿ ಬರೆದಿರುತ್ತೀರಿ.*

ಬ್ರಾಹ್ಮಣ್ಯವು ಖಿಲವಾಗುತ್ತಿದೆ–ಎಂಬುದಕ್ಕೆ ಸಂಶಯವೇನೂ ಇಲ್ಲ. ಆದರೆ ಈ ಅನರ್ಥಕ್ಕೆ ಕಾರಣವು ಸರಕಾರವಲ್ಲ, ಜನನಾಯಕರಲ್ಲ, ಬ್ರಾಹ್ಮಣೇತರರೂ ಅಲ್ಲ; 'ನಾವು ಬ್ರಾಹ್ಮಣರು, ವರ್ಣಗಳಲ್ಲಿ ಶ್ರೇಷ್ಠವಾದ ವರ್ಣಕ್ಕೆ ಸೇರಿದವರು!' ಎಂದು ಮುಂತಾಗಿ ಹೇಳುತ್ತಾ ಬ್ರಾಹ್ಮಣ್ಯವನ್ನು ತಿರಸ್ಕರಿಸುತ್ತಿರುವ ಬ್ರಾಹ್ಮಣಬ್ರುವರು. ಬ್ರಾಹ್ಮಣ್ಯವೆಂದರೆ ಏನು? ಅದೊಂದು ಪಂಗಡದವರ ಸಂಕೇತನಾಮ ಎಂಬುದಾದರೆ ಬ್ರಾಹ್ಮಣರು ಇದ್ದಾರೆ. ಆದರೆ ಬ್ರಾಹ್ಮಣ್ಯಶಬ್ದದ ಯೋಗರೂಢಾರ್ಥವನ್ನು ತೆಗೆದುಕೊಂಡರೆ ಬ್ರಾಹ್ಮಣ್ಯರೇ ಈಗಿನ ಕಾಲದಲ್ಲಿಲ್ಲ–ಎಂದರು ಸಲ್ಲುವಂಥ ಶೋಚನೀಯ ಅವಸ್ಥೆಯಲ್ಲಿದೆ, ಬ್ರಾಹ್ಮಣ್ಯ.

ಒಂದರ್ಥದಲ್ಲಿ ಬ್ರಹ್ಮ ಎಂದರೆ ವೇದ. ವೇದವನ್ನು ಸಾರ್ಥವಾಗಿ ರಕ್ಷಿಸಕೊಂಡು ಬರುವವರು ಬ್ರಾಹ್ಮಣ್ಯರು. ಬ್ರಾಹ್ಮಣ್ಯವನ್ನು ರಕ್ಷಿಸುವದೆಂದರೆ ಆ ದೃಷ್ಟಿಯಿಂದ ವೇದಾಧ್ಯಯನಪದ್ಧತಿಯನ್ನೂ ವೇದೋಕ್ತಕರ್ಮಗಳನ್ನೂ ಅನುಷ್ಠಾನ ಮಾಡುವ ಪದ್ಧತಿಯನ್ನು ಕಾಪಾಡುವದೆಂದರ್ಥ. ಇದನ್ನು ಜನರು ಅವಶ್ಯವಾಗಿ ಮಾಡಬೇಕು; ಬ್ರಾಹ್ಮಣ್ಯವನ್ನು ಕಾಪಾಡುವದರಿಂದ ಇಹಪರಶ್ರೇಯಸ್ಸುಗಳಿಗೆ ಕಾರಣವಾದ ಪ್ರವೃತ್ತಿ ಧರ್ಮವನ್ನು ಕಾಪಾಡಿದ ಪುಣ್ಯವು ಬರುವದೆಂಬುದು ಸ್ಪಷ್ಟ.

ಇನ್ನೊಂದರ್ಥದಲ್ಲಿ 'ಬ್ರಹ್ಮ' ಎಂದರೆ ಇಡಿಯ ಜಗತ್ತಿಗೂ ಎಲ್ಲಾ ಜೀವರುಗಳಿಗೂ ಆತ್ಮನಾಗಿರುವ **ಅದ್ವಿತೀಯಾತ್ಮನು.** ಆ ಬ್ರಹ್ಮವನ್ನು ತನ್ನ ಆತ್ಮನೆಂದು ಅನುಭವದಿಂದ ಕಂಡುಕೊಂಡವರು ಬ್ರಾಹ್ಮಣರು. **'ಅಮೌನಂ ಚ ಮೌನಂ ಚ ನಿರ್ವಿಧ್ಯಾಽಥ ಬಾಹ್ಮಣಃ'** (ಬೃ. 3–5–1) ಪಾಂಡಿತ್ಯ (ಶಾಸ್ತ್ರಾರ್ಥಜ್ಞಾನ), ಬಾಲ್ಯ (ತನ್ನ ಧಾರ್ಮಿಕತ್ವಾದಿಗಳನ್ನು ತೋರಿಸಿಕೊಳ್ಳದೆ ಬಾಲಕನಂತೆ ವಿನಯದಿಂದ ಇರುವದು)– ಎಂಬ ಅಮೌನಗಳು, ತತ್ತ್ವವನ್ನೇ ಮನನ ಮಾಡುತ್ತಿರುವ ಮೌನ–ಇವುಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಂಡವನು 'ಬ್ರಾಹ್ಮಣ' ಎಂದು ಶ್ರುತಿಯು ಹೇಳುತ್ತಿದೆ. ಈ ಅರ್ಥದಲ್ಲಿ ಜ್ಞಾನ ವೈರಾಗ್ಯಗಳೆಂಬ ನಿವೃತ್ತಿಧರ್ಮದ ಕೊನೆಯ ಹಂತವೇ ಬ್ರಾಹ್ಮಣ್ಯವೆಂದಾಗುವದು. ಇಂಥ ಬ್ರಾಹ್ಮಣ್ಯವನ್ನು ಕಾಪಾಡುವದಕ್ಕೆ ಭಗವಂತನೇ ಅವತರಿಸಿ ಈ ಲೋಕದಲ್ಲಿ ಕಾಣಿಸಿಕೊಳ್ಳಬೇಕೆಂಬುದು ಸ್ಪಷ್ಟ. ಏಕೆಂದರೆ ಭಗವಂತನು ಸೃಷ್ಟಿಯ ಆದಿಯಲ್ಲಿ ಬೋಧಿಸಿದ್ದ ಈ ಧರ್ಮವು ನಷ್ಟವಾದರೆ ಮತ್ತೆ ಅದನ್ನು ಕಾಪಾಡಲು ಭಗವಂತನಲ್ಲದೆ ಮತ್ತೆ ಯಾರು ಸಮರ್ಥರು?

ಈಗ ಬ್ರಾಹ್ಮಣ್ಯವು ಖಿಲವಾಗಿದೆ; ತಮ್ಮನ್ನು ಬ್ರಾಹ್ಮಣರೆಂದು ಕರೆದುಕೊಳ್ಳುವವರೇ ಅದಕ್ಕೆ ಕಾರಣವಾಗಿರುತ್ತಾರೆ. ಬ್ರಾಹ್ಮಣರೆಂಬವರಿಗೆ ಬ್ರಾಹ್ಮಣ್ಯವೇ ಬೇಡವೇನೊ!– ಎಂಬ ಶಂಕೆಯುಂಟಾಗುತ್ತಿದೆ. ಈಗ ಯಜನ, ಯಾಜನ; ಅಧ್ಯಯನ, ಅಧ್ಯಾಪನ; ದಾನ, ಪ್ರತಿಗ್ರಹ–ಎಂಬ ಪ್ರವೃತ್ತಿಧರ್ಮವನ್ನಾಗಲಿ **''ಶಮೋ ದಮಸ್ತಪಃ ಶೌಚಂ ಕ್ಷಾನ್ತಿರಾರ್ಜವಮೇವ ಚ। ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಮ್॥''** (ಗೀ. 18–42) ಎಂದು ಭಗವಂತನು ಹೇಳಿರುವಂತೆ ಶಮದಮಾದಿರೂಪವಾದ ನಿವೃತ್ತಿಧರ್ಮವನ್ನಾಗಲಿ ಕಾಣುವದು ಕಡುಕಷ್ಟವಾಗಿರುತ್ತದೆ. ಬ್ರಾಹ್ಮಣರೆಂದು ಕೊಳ್ಳುತ್ತಿರುವವರನೇಕರು ಸಂಸ್ಕೃತವನ್ನು ಕಡೆಗಣಿಸಿ ಆಂಗ್ಲಭಾಷೆಯನ್ನು ಅಭ್ಯಾಸಮಾಡಿ ಕೋಟ್, ಷರ್ಟ್, ಬನ್ಯನ್, ಟ್ರೌಸರ್ಸ್, ಹ್ಯಾಟ್, ಬೂಟ್–ಮುಂತಾದ ವೇಷವನ್ನೂ ಕ್ಯಾಟ್, ರ್ಯಾಟ್, ಬ್ಯಾಟ್–ಮುಂತಾದ ಪದಗಳಿಂದ ಭರಿತವಾಗಿರುವ ಭಾಷೆಯನ್ನೂ

ರೈಲ್ವೆ, ಸೈಕಲ್, ಮೋಟಾರ್, ರೇಲ್ವೆಟ್ರೇನ್, ಏರೋಪ್ಲೇನ್–ಮುಂತಾದ ಯಾನಗಳನ್ನೂ ಪಾಶ್ಚಾತ್ತ್ಯರು ಮೆಚ್ಚುವ ಆಚಾರವಿಚಾರಗಳನ್ನೂ ಬಳಕೆಗೆ ತಂದುಕೊಂಡಿರುವದರಿಂದ ಹಿಂದಿನ ತಲೆಮಾರಿನ ವೈದಿಕರು ಯಾರಾದರೂ ಇಲ್ಲಿಗೆ ಇಳಿದುಬರುವದಾದರೆ ಅವರು ಭೂಮಿಯ ಮೇಲೆ ಬ್ರಾಹ್ಮಣರೇ ಇಲ್ಲವೆಂದು ಬರೆಯುವರೆಂಬುದಕ್ಕೆ ಸಂಶಯವಿಲ್ಲ.

ಇದಕ್ಕೆಲ್ಲ ಏನು ಕಾರಣ? ಕಾಮದ ಅಭಿವೃದ್ಧಿ, ಭೋಗಲಾಲಸೆ, ಅಜಿತೇಂದ್ರಿಯತ್ವ. ಸದ್ಯಕ್ಕೆ ಮತ್ತೆ ಏನನ್ನೂ ಮಾಡುವದಕ್ಕೆ ಆಗದಿದ್ದರೂ **''ಕಲೌಕಲ್ಮಷಚಿತ್ತಾನಾಂ ಪಾಪದ್ರವ್ಯೋಪಜೀವಿನಾಮ್ । ವಿಧಿಕ್ರಿಯಾವಿಹೀನಾನಾಂ ಗತಿರ್ಗೋವಿನ್ದ ಕೀರ್ತನಮ್''** ಎಂಬ ಶ್ಲೋಕದ ಅರ್ಥವನ್ನಾದರೂ ಬ್ರಾಹ್ಮಣರು ಅರ್ಥಾನುಸಂಧಾನ ಪೂರ್ವಕವಾಗಿ ನಿತ್ಯಪಾಠಕ್ಕೆ ಇಟ್ಟುಕೊಂಡರೆ ಇವರಿಗೆ ಯಾವದಾದರೂ ಗತಿಗೆ ಮಾರ್ಗವಾದೀತು!

## 293. ಉಪನಯನ

### (ಮಾರ್ಚ್1971)

*'ಬ್ರಾಹ್ಮಣ್ಯಕ್ಕೆ ವೇದವೇ ಗುರುತು–ಎಂದು ತಾವು ಆಗಾಗ್ಗೆ ಪತ್ರಿಕೆಯಲ್ಲಿ ಬರೆಯುತ್ತಿರುವದನ್ನು ಓದುತ್ತಿದೇನೆ. ಆದರೆ ಈಗಿನ ಕಾಲದಲ್ಲಿ ಜೀವನಕ್ಕಾಗಿ ಲೌಕಿಕವಿದ್ಯೆಯನ್ನು ಸಂಪಾದಿಸಿಕೊಳ್ಳುವ ಯತ್ನವು ಅತ್ಯವಶ್ಯವಾಗಿದೆ. ಹೀಗಿರುವಾಗ ವೇದಾಧ್ಯಯನಕ್ಕೆ ಅವಕಾಶವೆಲ್ಲಿರುತ್ತದೆ? ವೇದವನ್ನು ಕುರಿತು ಇತರರಿಗೂ ಹೇಳಿಕೊಡಬಲ್ಲ ವೈದಿಕರು ಬಹಳ ಕಡಿಮೆಯಾಗುತ್ತಿದಾರೆ. ಇದಲ್ಲದೆ ವೇದದಿಂದ ಈಗಿನ ಜೀವನಕ್ರಮಕ್ಕೆ ಆಗುವ ಪ್ರಯೋಜನವಾದರು ಏನು?–ಎಂದು ಕೇಳುವವರೇ ಹೆಚ್ಚಾಗಿರುತ್ತಾರೆ. ಬ್ರಾಹ್ಮಣರಿಗೆ ಮುಂಜಿ, ಮದುವೆ–ಇವುಗಳನ್ನು ನೆರವೇರಿಸಿಕೊಳ್ಳುವದೂ ಬಹಳ ಕಷ್ಟವಾಗಿ ಪರಿಣಮಿಸುತ್ತಿದೆ. ಎಷ್ಟೋ ಜನರು ಈಗ ಮದುವೆಗೆ ಕಾಲವು ಒದಗುವ ಸಮಯಕ್ಕೆ ಉಪನಯನದ ಶಾಸ್ತ್ರವನ್ನು ಮಾಡುವ ಪದ್ಧತಿಗೆ ಒಲಿಯುತ್ತಿದಾರೆ. ಬ್ರಾಹ್ಮಣ್ಯವನ್ನು ಕಾಪಾಡಿಕೊಳ್ಳುವದಕ್ಕೆ ಇಂಥ ಬಿಕ್ಕಟ್ಟಿನ ಕಾಲದಲ್ಲಿ ಯಾವದಾದರೊಂದು ಸುಲಭೋಪಾಯವಿದೆಯೆ?' ಎಂದು ಒಬ್ಬರು ಪ್ರಶ್ನೆ ಹಾಕಿ ಬರೆದಿರುತ್ತಾರೆ. ಅವರಿಗೆ ನನ್ನ ಉತ್ತರವಿದು:*

ನಿಮ್ಮ ಪತ್ರವನ್ನು ಓದಿದರೆ ಬ್ರಾಹ್ಮಣ್ಯದ ಅಭಿಮಾನವುಳ್ಳವರಿಗೆ ಯಾರಿಗಾದರೂ ಕಣ್ಣೀರಿಡುವಂತೆ ಆದರೆ ಆಶ್ಚರ್ಯವಲ್ಲ. ಕಲಿಯುಗದಲ್ಲಿ ಐದು ಸಾವಿರ ವರ್ಷಗಳಾದ ಮೇಲೆ ವರ್ಣಸಂಕರವಾಗುವದು–ಎಂದು ಹಿರಿಯರು ಹೇಳಿಕೊಳ್ಳುತ್ತಿದ್ದರು. ಆದರೆ ವರ್ಣಸಂಕರವು ಈಗಲೇ ನಮ್ಮ ಕಣ್ಣುಮುಂದೆಯೇ ಕಾಣುತ್ತಿದೆಯೆಂದು ಹೇಳಬಹುದು.

ಈಗ್ಗೆ ಬ್ರಾಹ್ಮಣರಿಗೆ ಬ್ರಾಹ್ಮಣ್ಯವು ಬೇಕಿಲ್ಲವೆಂಬುದಕ್ಕೆ ನೀವು ಉದಾಹರಿಸಿರುವ ಉಪನಯನದ ದೃಷ್ಟಾಂತಗಳೇ ಸಾಕ್ಷಿ. ಉಪನಯನವಾದಮೇಲೆ ಮದುವೆಯಾಗುವದಕ್ಕೇ ಜನರು ಸಜ್ಜಾಗುತ್ತಿರುವರೆಂಬುದೇ ನಿಜ. ಆದರೆ ಉಪನಯನವೆಂದರೇನು? **'ಅಷ್ಟವರ್ಷಂ ಬ್ರಾಹ್ಮಣಮುಪನಯೀತ ತಮಧ್ಯಾಪಯೇತ್'** ಎಂಬ ವಾಕ್ಯ ಪ್ರಮಾಣದಿಂದ ಆಚಾರ್ಯನ ಬಳಿಗೆ ಕರೆತಂದು ಅಧ್ಯಯನಮಾಡಿಸಬೇಕು ಎಂಬ ವಿಧಿಗೆ ಅನುಸಾರವಾಗಿ ವೇದಾಧ್ಯಯನವನ್ನು ಮಾಡುವದಕ್ಕೆ ಬೇಕಾದ ಸಂಸ್ಕಾರವದು. ವಧುವಿನ ಬಳಿಗೆ ಹೋಗುವವನು ತಾನು ಬ್ರಾಹ್ಮಣನೆಂದು ತೋರಿಸಿಕೊಳ್ಳುವದಕ್ಕೆ ಹೆಗಲ ಮೇಲೆ ಮೂರೆಳೆಯ ಪತಾಕೆಯನ್ನು ಏರಿಸಿಕೊಳ್ಳುವ ನಾಟಕವೆಂದೇನೂ ಅರ್ಥವಲ್ಲ!

ಕೆಲವರು ತಮಗೆ ಇಹಸಂಪತ್ತಿನ ಸಾಮಗ್ರಿಗಳು ತಕ್ಕಮಟ್ಟಿಗೆ ಇದ್ದರೆ, 'ನನ್ನ ಮಗ ಇಂಥವನಿಗೆ ಇಂಥ ದಿನ ಬ್ರಹ್ಮೋಪದೇಶವಾಗಬೇಕೆಂದು ಗುರುಹಿರಿಯರು ನಿಶ್ಚಯಿಸಿರುವದರಿಂದ ತಾವು ಆ ಕಾಲಕ್ಕೆ ದಯಮಾಡಿ ವಟುವಿಗೆ ಆಶೀರ್ವದಿಸಬೇಕು' ಎಂಬರ್ಥದ ಒಕ್ಕಣೆಯ ಪತ್ರವನ್ನು ಮಿರುಗುವ ಕಾಗದದ ಮೇಲೆ ಬಣ್ಣಬಣ್ಣದ ಅಕ್ಷರಗಳಿಂದ ಅಚ್ಚುಮಾಡಿಸಿ ಇಷ್ಟಮಿತ್ರರಲ್ಲಿ ಹಂಚುವದು, ಓಲಗವಾದ್ಯ–ಮುಂತಾದವುಗಳಿಂದ ಮುಹೂರ್ತಕ್ಕೆ ಮಿರುಗು ಬರುವಂತೆ ಏರ್ಪಡಿಸುವದು, ತಮಗೆ ಬೇಕಾದವರಿಗೆ ಭೋಜನಸಮಾರಾಧನೆಮಾಡಿಸುವದು, ಉಂಡೆ, ಚಕ್ಕುಲಿ ಮುಂತಾದವುಗಳನ್ನು ಉತ್ಸವದಲ್ಲಿ ವಿಜೃಂಭಣೆಯಿಂದ ಹಂಚುವದು–ಇಂಥ ಪರಿಕರಗಳನ್ನು ಉಪಯೋಗಿಸುವದುಂಟು. ಬಡವರಾದವರಿಗೆ ಧರ್ಮೋಪನಯನವೆಂದು ಹೆಸರಿಸಿರುವ ಗುಂಪುಗುಂಪಾಗಿ ಬ್ರಾಹ್ಮಣಜಾತಿಯ ಹುಡುಗರಿಗೆ ಜನಿವಾರವನ್ನು ಹಾಕಿಸಿ ಉತ್ಸವವನ್ನು ಏರ್ಪಡಿಸುವದೂ ಉಂಟು. ಆದರೆ ಈ ಸಂಸ್ಕಾರಕ್ಕೆ ಮುಖ್ಯವಾದ ಗಾಯತ್ರಿಯ ಪುರಶ್ಚರಣಕ್ಕೆ ಏರ್ಪಡಿಸುವ ಕಷ್ಟವನ್ನಾಗಲಿ, ಉಪನೀತನಾದ ವಟುವಿಗೆ ಮುಂದಕ್ಕೆ ದಿನಕ್ಕೆ ಒಂದೆರಡು ಘಂಟೆಯಕಾಲ ವೇದಾಧ್ಯಯನಕ್ಕೆ ಏರ್ಪಡಿಸುವ ಶ್ರಮವನ್ನಾಗಲಿ ಯಾರೂ ವಹಿಸುವದಕ್ಕೆ ಸಿದ್ಧರಾಗಿಲ್ಲ!

ಜ್ಞಾನಕರ್ಮಗಳನ್ನು ಆಚಾರದಲ್ಲಿ ಸ್ಥಾಪನೆಮಾಡುವದಕ್ಕೆಂದೇ ಸ್ಥಾಪಿತವಾಗಿರುವ ಮಠಗಳ ಅಧಿಪತಿಗಳು ತಮ್ಮ ನೇತೃತ್ವದಲ್ಲಿ ಆಚಾರವಂತರೂ ಕರ್ಮದಲ್ಲಿ ಶ್ರದ್ಧೆಯುಳ್ಳವರೂ ಆದ ಕೆಲವರು ಬ್ರಾಹ್ಮಣವಿದ್ಯಾರ್ಥಿಗಳಿಗಾದರೂ ವೇದಾಧ್ಯಯನಕ್ಕೂ ವೇದಾರ್ಥವಿಚಾರಕ್ಕೂ ತಕ್ಕ ವಿದ್ಯಾಸ್ಥಾನಗಳನ್ನು ಏರ್ಪಡಿಸಬೇಕು. ಬ್ರಾಹ್ಮಣ್ಯದಲ್ಲಿ ಅಭಿಮಾನವಿರುವ ಶ್ರೀಮಂತರು, ಆಸ್ಥಾನಗಳು ಸ್ಥಾಯಿಯಾಗಿ ಕಾರ್ಯಕಾರಿಯಾಗುವಂತೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ವಿದ್ಯಾದಾನದ ಪುಣ್ಯವನ್ನೂ ಪುರುಷಾರ್ಥವನ್ನೂ ಸಂಪಾದಿಸಿಕೊಳ್ಳುವ ಏರ್ಪಾಡನ್ನು ಮಾಡಬೇಕು. ಬ್ರಾಹ್ಮಣ

ರೆಂಬವರು ನಿಜವಾದ ಬ್ರಾಹ್ಮಣ್ಯವನ್ನು ಉಳಿಸಿಕೊಳ್ಳುವದಕ್ಕೆಂದು ನಿತ್ಯಾಹ್ನಿಕಕ್ಕೆ ಅತ್ಯವಶ್ಯವಾದಷ್ಟು ಮಂತ್ರಗಳನ್ನು ಸಸ್ವರವಾಗಿ ಸಾರ್ಥವಾಗಿ ತಾವೂ ಅಭ್ಯಾಸಮಾಡಿ ವಿದ್ಯಾರ್ಥಿಗಳಿಗೂ ಅತ್ಯವಶ್ಯವಾದಷ್ಟು ಮಂತ್ರಗಳನ್ನು ಕಲಿಸುವದಕ್ಕೆ ಬೇಕಾಗುವಂತೆ ಸಾರ್ಥವೈದಿಕಮಂತ್ರಗಳ ಪುಸ್ತಕಗಳನ್ನು ಅಚ್ಚುಮಾಡಿಸಿ ಬ್ರಹ್ಮಚಾರಿಗಳಿಗೆ ಹಂಚುವದು, ಅಧ್ಯಾಪಕರಿಗೆ ದಕ್ಷಿಣಾದಿಗಳನ್ನು ಕೊಡುವದರ ಮೂಲಕ ಪ್ರೋತ್ಸಾಹವನ್ನು ಕೊಡುವದು–ಹೀಗೆ ಮಾಡಿದರೆ 'ಉಪನಯನ' ಶಬ್ದವು ಅರ್ಥವತ್ತಾಗುವದು. ಅಧ್ಯಾಪಕರಾದವರು ಇಂತಿಷ್ಟು ಬ್ರಹ್ಮಚಾರಿಗಳಿಗೆ ಮಂತ್ರಗಳನ್ನು ಹೇಳಿಕೊಟ್ಟು ಪುಣ್ಯವನ್ನು ಸಂಪಾದಿಸಿಕೊಳ್ಳುವೆನು–ಎಂದು ಸಂಕಲ್ಪಮಾಡಿಕೊಂಡರೆ ಬ್ರಾಹ್ಮಣ್ಯದ ರಕ್ಷಣೆಯನ್ನು ಮಾಡುವ ಪುಣ್ಯವು ಅವರಿಗೆ ಲಭಿಸೀತು.

ಗಾಯತ್ರೀಪ್ರತಿಪಾದ್ಯನಾದ ಭಗವಂತನು ಅನ್ವರ್ಥಬ್ರಾಹ್ಮಣರಿಗೂ ಬ್ರಾಹ್ಮಣ್ಯಾಭಿಮಾನಿಗಳಿಗೂ ಹೀಗೆ ಒಳ್ಳೆಯ ಬುದ್ಧಿವೃತ್ತಿಗಳನ್ನು ಪ್ರೇರಿಸಲಿ! ಎಂದು ನಾವೆಲ್ಲರೂ ಭಕ್ತಿಪೂರ್ವಕವಾಗಿ ಪ್ರಾರ್ಥಿಸೋಣ!

## 294. ಬ್ರಹ್ಮಚರ್ಯ

( ಏಪ್ರಿಲ್ 1971)

*ನಿಮ್ಮ ಪತ್ರವನ್ನು ಓದಿದೆನು. ಬ್ರಹ್ಮಚರ್ಯವೆಂದರೆ ಏನು?–ಎಂಬ ಪ್ರಶ್ನೆಯು ಆಗಾಗ್ಗೆ ಎದ್ದುಕೊಳ್ಳುತ್ತಿದೆ. ಬ್ರಹ್ಮಚಾರಿಯಾದವನು ಹೇಗಿರಬೇಕು? ಆ ಆಶ್ರಮವು ಕೇವಲ ವಿದ್ಯಾಭ್ಯಾಸಕ್ಕಾಗಿ ಏರ್ಪಟ್ಟಿದ್ದೊ, ಅಥವಾ ಅದಕ್ಕೂ ಸ್ವತಂತ್ರವಾದ ಫಲವುಂಟೊ? ಎಂದು ನೀವು ಕೇಳಿರುತ್ತೀರಿ. ಧರ್ಮಶಾಸ್ತ್ರಗಳನ್ನು ಅಭ್ಯಾಸಮಾಡುವ ಆ ಕಾಲವು ಗತಿಸಿಹೋಯಿತು–ಎನ್ನುವಷ್ಟು ಕ್ಷೀಣವಾಗಿರುವದರಿಂದ ಪ್ರಶ್ನೆಗೆ ಉತ್ತರವನ್ನು ಕಂಡುಕೊಂಡರೆ ಆಸ್ತಿಕರಿಗೆ ಅಷ್ಟರಿಂದಲೇ ಲಾಭವುಂಟು.*

ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಪಾರಿವ್ರಾಜ್ಯ–ಎಂಬ ನಾಲ್ಕು ಆಶ್ರಮಗಳೂ ಧರ್ಮಪ್ರಧಾನವಾಗಿರುತ್ತವೆ. ಧರ್ಮವನ್ನು ಆಚರಿಸಬೇಕೆನ್ನುವವರು ಮೊಟ್ಟಮೊದಲು ವೇದವನ್ನು ಅಭ್ಯಾಸಮಾಡಬೇಕಾಗುವದು; ಏಕೆಂದರೆ ವೇದದಲ್ಲಿವಿಧಿಸಿರುವದೇ ಧರ್ಮವು. ವೇದವು ಕರ್ಮಕಾಂಡವೆಂದೂ ಜ್ಞಾನಕಾಂಡವೆಂದೂ ಎರಡು ವಿಧವಾಗಿರುತ್ತದೆ. ಗುರುಕುಲದಲ್ಲಿದ್ದು ಗುರುಶುಶ್ರೂಷಾಪೂರ್ವಕವಾಗಿ ವೇದವನ್ನು ಅಧ್ಯಯನಮಾಡಬೇಕು. ಪುಸ್ತಕಪಾಠದಿಂದ ಮಾಡಿದ ಅಧ್ಯಯನವಾಗಲಿ ಧರ್ಮಜಿಜ್ಞಾಸೆಯಾಗಲಿ ಕಾರ್ಯಕಾರಿಯಾಗಲಾರದು. ಆದ್ದರಿಂದ ಗುರುಕುಲದಲ್ಲಿ

ವೇದಾಧ್ಯಯನವನ್ನು ಮಾಡಿ ಅರ್ಥವನ್ನು ಅರಿತುಕೊಂಡು ಮುಂದೆ ತನಗೆ ಇಷ್ಟವಾದ ಆಶ್ರಮದಲ್ಲಿದ್ದುಕೊಂಡು ಪುರುಷಾರ್ಥವನ್ನು ಸಂಪಾದಿಸಿಕೊಳ್ಳಬೇಕು—ಎಂದು ಆಪಸ್ತಂಬಾದಿಧರ್ಮಸೂತ್ರಕಾರರು ಹೇಳಿರುತ್ತಾರೆ.

ಈ ವಿಷಯಕ್ಕೆ ಉಪನಿಷತ್ತಿನಲ್ಲಿರುವ ಎರಡು ಪ್ರಮಾಣವಚನಗಳನ್ನು ಇಲ್ಲಿ ಉದಾಹರಿಸುವೆನು: (1)**ಆಚಾರ್ಯಕುಲಾದ್ ವೇದಮಧೀತ್ಯ ಯಥಾವಿಧಾನಂ ಗುರೋಃ ಕರ್ಮಾತಿ ಶೇಷಾಣಾऽಭಿಸಮಾವೃತ್ಯ ಕುಟುಮ್ಬೇ ಶುಚೌ ದೇಶೇ ಸ್ವಾಧ್ಯಾಯಮಧೀಯಾ ನೋ ಧಾರ್ಮಿಕಾನ್ ವಿದಧತು॥** (ಛಾಂ 8—15—1) ಎಂಬುದು ಛಾಂದೋಗ್ಯೋಪನಿಷತ್ತಿನಲ್ಲಿರುವ ಒಂದು ವಾಕ್ಯ. ಈ ವಾಕ್ಯದಲ್ಲಿ ಆಚಾರ್ಯಕುಲದಲ್ಲಿವೇದವನ್ನು ಅಧ್ಯಯನಮಾಡಿ ಗುರುವಿನ ವಿಷಯದಲ್ಲಿಕರ್ಮವನ್ನು ಮಾಡಿ ಉಳಿದ ಕಾಲದಲ್ಲಿ ಅಧ್ಯಯನವನ್ನು ಮಾಡಿ—ಅಲ್ಲಿಂದ ಅವರ ಅನುಜ್ಞೆಯನ್ನು ಪಡೆದು ಹಿಂತೆರಳಿ ಕುಟುಂಬದಲ್ಲಿದ್ದುಕೊಂಡು ಶುಚಿಯಾದ ಸ್ಥಲದಲ್ಲಿ ನಿತ್ಯಕರ್ಮಕ್ಕೆ ಬೇಕಾದದ್ದಕ್ಕಿಂತಲೂ ಹೆಚ್ಚಿನ ವೇದಾಧ್ಯಯನವನ್ನು ಯಥಾಶಕ್ತಿಯಾಗಿ ಮಾಡುತ್ತಾ ಮಕ್ಕಳನ್ನೂ ಶಿಷ್ಯರನ್ನೂ ಧರ್ಮಮಾರ್ಗದಲ್ಲಿರುವಂತೆ ಮಾಡಬೇಕು—ಎಂಬುದು ಈ ವಾಕ್ಯದ ಅರ್ಥ. ಗುರುಕುಲದಲ್ಲಿ ಗುರುಶುಶ್ರೂಷೆಯನ್ನೂ ವೇದಾರ್ಥಜಿಜ್ಞಾಸೆಯನ್ನೂ ಮಾಡಿ ಅವರ ಅಪ್ಪಣೆಯನ್ನು ಪಡೆದುಕೊಂಡು ಗಾರ್ಹಸ್ಥ್ಯಕ್ಕೆ ಬರುವವನು **'ಉಪಕುರ್ವಾಣ ಬ್ರಹ್ಮಚಾರಿ'** ಎನಿಸುವನು. ಅದನ್ನೊಂದು ಸ್ವತಂತ್ರವಾದ ಆಶ್ರಮವೆಂದು ಕರೆಯುವದಕ್ಕಿಲ್ಲ; ಏಕೆಂದರೆ ಮುಂದೆ ಧಾರ್ಮಿಕನಾಗಿದ್ದುಕೊಂಡು ಶ್ರೇಯಸ್ಸನ್ನು ಪಡೆಯುವದಕ್ಕೆಂದೇ ಮಾಡುವ ಬ್ರಹ್ಮಚರ್ಯವದು. ಇನ್ನು ವೇದಾಧ್ಯಯವನ್ನು ಮಾಡುತ್ತಾ ಗುರುಕುಲದಲ್ಲಿಯೇ ಕೊನೆಯವರೆಗೂ ಇರುವ ಬ್ರಹ್ಮಚರ್ಯವೂ ಒಂದುಂಟು. ಅದನ್ನು ಪರಾಮರ್ಶಿಸುವ ವಾಕ್ಯವು ಛಾಂದೋಗ್ಯೋಪನಿಷತ್ತಿನಲ್ಲಿಯೇ ಇದೆ. ಹೇಗೆಂದರೆ:

**ತ್ರಯೋ ಧರ್ಮಸ್ಕನ್ಧಾ ಯಜ್ಞೋऽಧ್ಯಯನಂ ದಾನಮಿತಿ ಪ್ರಥಮಸ್ತಪ ಏವ ದ್ವಿತೀಯೋ ಬ್ರಹ್ಮಚಾರ್ಯಾಚಾರ್ಯಕುಲವಾಸೀ ತೃತೀಯೋऽತ್ಯನ್ತಮಾತ್ಮಾನ ಮಾಚಾರ್ಯಕುಲೇऽವಸಾದಯನ್, ಸರ್ವ ಏತೇ ಪುಣ್ಯಲೋಕಾಭವನ್ತಿ**

ಛಾಂ. 2—23—1

''ಧರ್ಮದ ವಿಭಾಗಗಳು ಮೂರುಃ— ಯಜ್ಞ, ಅಧ್ಯಯನ, ದಾನ—ಎಂಬ ಮೂರನ್ನು ಮಾಡುತ್ತಿರುವದು ಒಂದನೆಯದು. ತಪಸ್ಸೆಂಬುದೇ ಎರಡನೆಯದು; ಆಚಾರ್ಯಕುಲದಲ್ಲಿಯೇ ವಾಸವಾಗಿರುವ ಬ್ರಹ್ಮಚಾರಿಯು ಮೂರನೆಯವನು; ಇವನು

ಗುರುಕುಲದಲ್ಲಿಯೇ ತನ್ನನ್ನು ಅತ್ಯಂತವಾಗಿ ಸವೆಯಿಸುತ್ತಿರುವವನು. ಇವರೆಲ್ಲರಿಗೂ ಪುಣ್ಯಲೋಕಗಳು ಲಭಿಸುವವು—ಎಂಬುದು ವಾಕ್ಯಾರ್ಥ.

ಹಿಂದೆ ಹೇಳಿರುವ ಉಪಕುರ್ವಾಣಬ್ರಹ್ಮಚರ್ಯಕ್ಕಿಂತ ಇಲ್ಲಿರುವ ವಿಶೇಷವೇನೆಂದರೆ: ಧರ್ಮವಿಚಾರವನ್ನು ಮಾಡುವದಾಗಲಿ, ಅಧ್ಯಯನವನ್ನು ಮಾಡುವದಾಗಲಿ ಇಲ್ಲಿ ಪ್ರಧಾನವಲ್ಲ; ಅಧ್ಯಯನಾದಿಗಳನ್ನು ಇವನು ಮಾಡುತ್ತಿರಬಹುದು, ಆದರೆ ಆಚಾರ್ಯನನ್ನೇ ಪರದೈವತವೆಂದು ಬಗೆದು ಆತನ ಶುಶ್ರೂಷೆಯಲ್ಲಿಯೇ ತನ್ನ ಶರೀರವನ್ನು ಸವೆಯಿಸುವದೇ ತಪಸ್ಸೆಂದು ಭಾವಿಸಿ ಜೀವನವನ್ನೆಲ್ಲ ಅದಕ್ಕೇ ಮೀಸಲಾಗಿಟ್ಟುಕೊಳ್ಳುವದು ಇಲ್ಲಿ ಮುಖ್ಯ. ಗುರುವಿನ ಸೇವೆಯು ಎಷ್ಟೇ ಕಠಿಣವಾಗಿರಲಿ, ಅದಕ್ಕಾಗಿ ತನ್ನ ದೇಹವನ್ನು ಸಂತೋಷದಿಂದ ತೇಯುವದರಿಂದ ತಾನು ಧನ್ಯನಾಗುವೆನು—ಎಂದು ಬಗೆಯುವವರಿಗೆ ನೈಷ್ಠಿಕಬ್ರಹ್ಮಚಾರಿಗಳೆಂದು ಹೆಸರು. ಅತ್ಯಂತ ಹೆಚ್ಚಿನ ಶ್ರದ್ಧಾಭಕ್ತಿಗಳಿಂದ ಗುರುವನ್ನೂ ಗುರುಪತ್ನಿಯನ್ನೂ ಗುರುಪುತ್ರನನ್ನೂ ಸೇವೆ ಮಾಡುವದರಿಂದ ಶ್ರೇಯೋಭಾಗಿಗಳಾದ ಬ್ರಹ್ಮಚಾರಿಗಳ ಚರಿತ್ರೆಯನ್ನು ವಿಸ್ತಾರವಾಗಿ ಇತಿಹಾಸಪುರಾಣಗಳಲ್ಲಿ ವರ್ಣಿಸಿರುತ್ತದೆ. ವೇದದಲ್ಲಿಯೂ ಇದರ ಪರಾಮರ್ಶವಿದೆ. ನೈಷ್ಠಿಕಬ್ರಹ್ಮಚರ್ಯನಿರತರಾದವರಿಗೆ ಉತ್ತರಮಾರ್ಗದಿಂದ ಬ್ರಹ್ಮಲೋಕಪ್ರಾಪ್ತಿಯೇ ಆಗುವದೆಂದು ಶ್ರುತಿವಚನವುಂಟು.

ಇಲ್ಲಿ ಮುಖ್ಯವಾಗಿ ತಿಳಿಯತಕ್ಕದ್ದೇನೆಂದರೆ: ಇಂದ್ರಿಯನಿಗ್ರಹ, ಮನಸ್ಸಿನ ಏಕಾಗ್ರತೆಯಿಂದ ಅಧ್ಯಯನವೇ ಮುಂತಾದ ಧರ್ಮಗಳನ್ನೂ ಮಾಡುವದೇ ನಿಜವಾದ ಬ್ರಹ್ಮಚರ್ಯವು. ಇದು ಉಪಕುರ್ವಾಣಬ್ರಹ್ಮಚಾರಿಗೂ ಸ್ವಲ್ಪಮಟ್ಟಿಗೆ ಗೃಹಸ್ಥನಿಗೂ ವಾನಪ್ರಸ್ಥನಿಗೂ ಇದ್ದೇ ಇರುವದಾದರೂ ಆಚಾರ್ಯನ ಶುಶ್ರೂಷೆಯನ್ನೇ ಪರಮಧ್ಯೇಯವಾಗಿಟ್ಟುಕೊಂಡ ಮಹಾನುಭಾವರು ನೈಷ್ಠಿಕಬ್ರಹ್ಮಚಾರಿಗಳು. ಯಾವ ಆಶ್ರಮದಲ್ಲಿದ್ದರೂ ಸ್ವೇಚ್ಛಾಪ್ರವೃತ್ತಿಯಿಲ್ಲದೆ ಧರ್ಮರತನಾಗಿಯೇ ಇರಬೇಕೆಂಬುದು ಸರ್ವಸಮಾನವಾಗಿರುತ್ತದೆ. ಆದರೆ ಆಚಾರ್ಯನನ್ನೇ ಪರದೇವತೆಯೆಂದು ಭಾವಿಸಿ, ಆತನ ಶುಶ್ರೂಷೆಯೇ ತನ್ನ ಭಾಗ್ಯವೆಂದು ಭಾವಿಸಿಕೊಂಡು ವಿಷಯವಾಸನೆಯ ಗಂಧವೂ ಇಲ್ಲದೆ ಶುಶ್ರೂಷಾರತನಾಗಿರುವದೆಂಬ ಧರ್ಮವು ನೈಷ್ಠಿಕಬ್ರಹ್ಮಚಾರಿಗೇ ಮೀಸಲಾಗಿರುತ್ತದೆ.

ಬ್ರಹ್ಮಚರ್ಯವು ಕೇವಲ ಕರ್ಮಮಾರ್ಗವನನ್ನನುಸರಿಸಿಕೊಂಡಿರುವವರಿಗೆ ಮಾತ್ರ ಹೇಳಿರುವ ನಿಯಮವೆಂದು ತಿಳಿಯಬಾರದು. ಸುಕೇಶ, ಸತ್ಯಕಾಮ, ಗಾರ್ಗ್ಯ, ಕೌಸಲ್ಯ, ಭಾರ್ಗವ, ಕಬಂಧ—ಎಂಬ ಆರು ಜನರು 'ತೇ ಹೃತೇ ಬ್ರಹ್ಮಪರಾ ಬ್ರಹ್ಮನಿಷ್ಠಾಃ

ಪರಂ ಬ್ರಹ್ಮಾನ್ವೇಷಮಾಣಾ ಏಷ ಹ ವೈ ತತ್ಸರ್ವಂ ವಕ್ಷ್ಯತೀತಿ ತೇಹ ಸಮಿತ್ಪಾಣಯೋ ಭಗವನ್ತಂ ಪಿಪ್ಪಲಾದಮುಪಸನ್ನಾಃ' (ಪ್ರ.1–1) ಅಪರಬ್ರಹ್ಮ ನಿಷ್ಠರಾಗಿದ್ದುಕೊಂಡು ಪರಬ್ರಹ್ಮಜ್ಞಾನಕ್ಕಾಗಿ ಪಿಪ್ಪಲಾದರೆಂಬ ಆಚಾರ್ಯನ ಬಳಿಗೆ ಹೋದರು ಎಂದು ಪ್ರಶ್ನೋಪನಿಷತ್ತು ಹೇಳುತ್ತದೆ. ಆಗ ಆಚಾರ್ಯನು 'ಭೂಯ ಏವ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ಸಂವತ್ಸರಂ ಸಂವತ್ಸ್ಯಥ' ಇನ್ನೂ ಒಂದುವರ್ಷ ಮತ್ತೆ ತಪಸ್ಸು, ಬ್ರಹ್ಮಚರ್ಯ ಶ್ರದ್ಧೆ–ಇವುಗಳಿಂದೊಡಗೂಡಿದವರಾಗಿ ಇಲ್ಲಿದ್ದುಕೊಂಡಿರಿ–ಎಂದು ಹೇಳಿದನೆಂದು ಅದರಲ್ಲಿಯೇ ಹೇಳಿದೆ.

ಹೀಗಿರುವದರಿಂದ ಬ್ರಹ್ಮಚರ್ಯವೆಂದರೆ ಒಂದಾನೊಂದು ಮಹಾನಿಯಮವು. ಅದು ಗುರುಶುಶ್ರೂಷೆಯಿಂದ ಧರ್ಮದ ಅಥವಾ ಬ್ರಹ್ಮತತ್ತ್ವದ ನಿಜವನ್ನು ಅರಿತುಕೊಳುವದಕ್ಕಾಗಿ ಅವಶ್ಯವಾಗಿ ಮಾಡತಕ್ಕ ತಪೋವಿಶೇಷವು–ಎಂದು ನಿಶ್ಚಿತವಾಗಿದೆ. ಇಂದ್ರಿಯಕಾಮರಾಗಿ ಮೃಷ್ಟಾನ್ನಭೋಜನವಿಹಾರಾದಿಗಳಿಂದ ಲೌಕಿಕ ವಿದ್ಯೆಯನ್ನು ಕಲಿಯುವ ಸಕಲವಿದ್ಯಾನಿಲಯಗಳ ವಿದ್ಯಾರ್ಥಿಗಳ ಜೀವನಕ್ಕೂ ಅದಕ್ಕೂ ಯಾವ ಹೋಲಿಕೆಯೂ ಇರುವದಿಲ್ಲವೆಂಬುದನ್ನು ಮೊದಲು ಮನವರಿಕೆ ಮಾಡಿ ಕೊಳ್ಳಬೇಕು.

ಶರೀರೇಂದ್ರಿಯಮನೋಬುದ್ಧಿಗಳನ್ನು ನಿಯಮದಲ್ಲಿಟ್ಟುಕೊಂಡು ವಿನಯದಿಂದ ಯೋಗ್ಯನಾದ ಗುರುವಿನ ಬಳಿಯಲ್ಲಿ ಮನಮುಟ್ಟಿ ಧರ್ಮವಿಚಾರವನ್ನು ಅಥವಾ ಬ್ರಹ್ಮವಿಚಾರವನ್ನು ಮಾಡುವದಕ್ಕೆ ತಕ್ಕ ಅಂತರ್ಮುಖತ್ವವನ್ನು ಸಂಪಾದಿಸಿಕೊಂಡಲ್ಲದೆ ಬರಿಯ ಗ್ರಂಥಪಾಠದಿಂದ ಅತೀಂದ್ರಿಯವಾದ ಧರ್ಮದ ಅಥವಾ ಬ್ರಹ್ಮತತ್ವದ ನಿಜವನ್ನು ಬುದ್ಧಿಕೌಶಲದಿಂದ ನಿಶ್ಚಯಿಸಿಕೊಳ್ಳುವೆವು ಎಂದು ತಿಳಿದರೆ ಆತ್ಮವಂಚಕರಾಗುವೆವು–ಎಂಬುದನ್ನು ಜಿಜ್ಞಾಸುಗಳು ನಿಶ್ಚಯಿಸಿಕೊಂಡೇ ತತ್ತ್ವಜಿಜ್ಞಾಸೆಯಲ್ಲಿ ತೊಡಗಬೇಕು. ಅಂಥವರಿಗೇ ವೇದಾರ್ಥದ ಯಥಾರ್ಥ ಜ್ಞಾನವು ದಕ್ಕೀತು.

## 295. ಸಂನ್ಯಾಸಾಶ್ರಮ

### ( ಏಪ್ರಿಲ್ 1971)

*ನಿಮ್ಮ ಪತ್ರವನ್ನು ಓದಿಕೊಂಡೆನು. 'ವಾನಪ್ರಸ್ಥಾಶ್ರಮವೆಂಬುದು ಈಗ ಎಲ್ಲಿಯೂ ಆಚರಣೆಯಲ್ಲಿರುವದು ಕಾಣಲಿಲ್ಲ. ಸಂನ್ಯಾಸಾಶ್ರಮಕ್ಕೆ ಕಾಷಾಯ ದಂಡಕಮಂಡಲುಗಳ ಧಾರಣೆಯು ಅವಶ್ಯವಲ್ಲವೆ? ಸಂನ್ಯಾಸಿಯೂ ಯಜ್ಞೋಪವೀತವನ್ನು ಧರಿಸಿರಬೇಕೆಂದು ಕೆಲವರು ಹೇಳುತ್ತಾರೆ; ಈ ವಿಷಯದಲ್ಲಿ ನಿಮ್ಮ ನಿರ್ಣಯವೇನು? ಸಂನ್ಯಾಸಿಯಾದವನು ಯಾವ ಧರ್ಮವನ್ನು ಅವಶ್ಯವಾಗಿ ಪಾಲಿಸಬೇಕು? ನನಗೆ ಈಗ ವಯಸ್ಸೂ ಆಗಿದೆ; ಮನೆಯಲ್ಲಿ ನನ್ನನ್ನು*

*ನೋಡಿಕೊಳ್ಳುವದಕ್ಕೆ ಯಾರೂ ಇಲ್ಲ. ಈ ಸಂದರ್ಭದಲ್ಲಿ ನಾನು ಮದುವೆಯಾಗುವದಕ್ಕೆ ಪ್ರಯತ್ನಿಸಬೇಕೆ, ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕೆ?–ಎಂಬ ಯೋಚನೆಯು ನನ್ನ ತಲೆಯನ್ನು ಕೆಡಿಸುತ್ತಾ ಇದೆ. ವೇದಾಂತವಿಚಾರವನ್ನು ಮಾಡುವ ಕುತೂಹಲವೂ ಇದೆ. ಈ ಸಂದರ್ಭದಲ್ಲಿ ನಾನು ಯಾವ ಹಾದಿಯನ್ನು ಅನುಸರಿಸುವದು ಒಳ್ಳೆಯದೋ ದಯವಿಟ್ಟು ತಿಳಿಯಿಸಬೇಕು'–ಎಂತ ಬರೆದಿದ್ದೀರಿ.*

ನಿಮ್ಮ ಪ್ರಶ್ನೆಗೆ ಯಾವ ಉತ್ತರವನ್ನು ಕೊಡಬೇಕೆಂಬುದು ನನಗೆ ನಿಶ್ಚಿತವಾಗಿ ಇನ್ನೂ ಹೊಳೆದಿಲ್ಲ. ಇದಕ್ಕೆ ನಿಮ್ಮ ಮನಸ್ಸಿನ ಸ್ಥಿತಿಯನ್ನು ತಿಳಿದುಕೊಳ್ಳದೆ ಇರುವದೇ ಕಾರಣ. ಮೊಟ್ಟಮೊದಲು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ; ಬಳಿಕ ನನಗೆ ಯುಕ್ತವೆಂದು ತೋರುವ ಸೂಚನೆಗಳನ್ನು ಇನ್ನೊಂದು ಪತ್ರದ ಮೂಲಕ ಕೊಡುವದಕ್ಕೆ ಯತ್ನಿಸುವೆನು. (299ನೆಯ ಲೇಖನವನ್ನು ನೋಡಿ)

ನಿಮಗೆ ಈಗ ಮಕ್ಕಳು ಇದಾರೆಯೆ? ಅವರಿಗೆ ಲೌಕಿಕ ವ್ಯವಹಾರಕ್ಕೆ ಬೇಕಾದ ವಿದ್ಯಾಭ್ಯಾಸ, ವಿವಾಹ–ಮುಂತಾದ ಏರ್ಪಾಡುಗಳನ್ನು ಮಾಡಿದ್ದೀರಷ್ಟೆ? ನೀವು ಬ್ರಾಹ್ಮಣರೋ? ಸಂಸ್ಕೃತ ಬರುತ್ತದೆಯೆ? ನಿಮ್ಮ ವರ್ಣಕ್ಕೆ ವಿಹಿತವಾಗಿರುವ ಸಂಧ್ಯಾದಿಕರ್ಮಗಳನ್ನು ಯಥಾಶಕ್ತಿಯಾಗಿ ಮಾಡುತ್ತಿದೀರಾ? ಯಾವದಾದರೂ ಭಗವನ್ನಾಮವನ್ನು ಜಪಿಸುತ್ತಿದೀರಾ? ಸಂಸಾರದಲ್ಲಿ ವಿರಕ್ತರಾಗಿರುವದರಿಂದ ನೀವು ವಾನಪ್ರಸ್ಥಾಶ್ರಮವನ್ನೋ ಸಂನ್ಯಾಸಾಶ್ರಮವನ್ನೋ ಅವಲಂಬಿಸಬೇಕೆಂದು ಮಾಡಿದ್ದೀರೊ, ಅಥವಾ ಮನೆಯಲ್ಲಿ ನಿಮ್ಮ ರಕ್ಷಣೆಯನ್ನು ಮಾಡುವವರು ಯಾರಾದರೂ ಇಲ್ಲವೆಂದೊ? ಕರ್ಮದ ದೃಷ್ಟಿಯಿಂದ ಯಾವದಾದರೊಂದು ಆಶ್ರಮವು ನಿಮಗೆ ಬೇಕಾಗಿದೆಯೊ, ಅಥವಾ ತತ್ತ್ವಜ್ಞಾನವನ್ನು ಪಡೆಯಬೇಕೆಂಬ ಇಚ್ಛೆಯು ಬಲವಾಗಿದೆಯೊ?

ನಿಮ್ಮ ಪ್ರಶ್ನೆಗಳಿಗೆ ಪ್ರತಿಯಾಗಿ ಮತ್ತೆ ಬೇರೆಯ ಕೆಲವು ಪ್ರಶ್ನೆಗಳನ್ನು ಹಾಕಿರುತ್ತೇನೆಂದು ಬೇಸರಮಾಡಿಕೊಳ್ಳಬೇಡಿರಿ. ಮನುಷ್ಯನಿಗೆ ವರ್ಣಾಶ್ರಮಧರ್ಮವನ್ನು ಕಾಪಾಡಿಕೊಳ್ಳುವದು ಎರಡು ದೃಷ್ಟಿಗಳಿಂದಲೂ ಅವಶ್ಯ. ಈಗ್ಗೆ ವರ್ಣಾಶ್ರಮಧರ್ಮಗಳು ಖಿಲವಾಗುತ್ತಿವೆಯಾದ್ದರಿಂದ ಯುಗಾನುಸಾರವಾಗಿ ಯಥಾಶಕ್ತಿಧರ್ಮವನ್ನು ಕಾಪಾಡಿಕೊಳ್ಳಬೇಕು. ಸತ್ಯ, ಶೌಚ, ಆಚಾರ–ಇವುಗಳನ್ನಂತೂ ಅವಶ್ಯವಾಗಿ ಕಾಪಾಡಿಕೊಳ್ಳಬೇಕು. ಇಲ್ಲದಿದ್ದರೆ ಆಸುರಸಂಪತ್ತು ಗಂಟು ಬೀಳುತ್ತದೆ; ಅಧೋಗತಿಯೇ ಕಟ್ಟಿಟ್ಟಬುತ್ತಿಯಾಗುತ್ತದೆ.

ಸದ್ಯಕ್ಕೆ ಇಷ್ಟುಮಾತ್ರ ಸಾಮಾನ್ಯವಾಗಿ ಹೇಳಿಟ್ಟಿರುತ್ತೇನೆ:– ಕೆಲವರು ತಮಗೆ ವಯಸ್ಸಾದಮೇಲೆ ಮನೆಯಲ್ಲಿ ಯಾವ ಉದ್ಯೋಗವೂ ಇಲ್ಲದೆ ಸುಮ್ಮನೆ ಕುಳಿತಿರುವದನ್ನು

'ವಾನಪ್ರಸ್ಥ'ವೆಂದು ಕರೆಯುತ್ತಾರೆ. ಅದಕ್ಕೆ ಯಾವ ಆಧಾರವೂ ಇಲ್ಲ. ವಿಧುರರಿಗೆ ಯಾವ ಆಶ್ರಮವೂ ಇಲ್ಲದ್ದರಿಂದ ಅವರು ಬ್ರಹ್ಮವಿದ್ಯೆಗಾಗಿ ವಿಚಾರಮಾಡಬಾರದು–ಎಂದು ಕೆಲವರು ಹೇಳುತ್ತಾರೆ. ಇದಕ್ಕೂ ಯಾವ ಶಾಸ್ತ್ರಾಧಾರವೂ ಇಲ್ಲ. ರೈಕ್ವನೆಂಬ ಬ್ರಹ್ಮಚಾರಿಯು ಅನಾಶ್ರಮಿಯಾಗಿದ್ದರೂ ಸಂವರ್ಗವಿದ್ಯೆಯಲ್ಲಿ ನಿಷ್ಣಾತನಾಗಿದ್ದನು; ವಾಚಕ್ನವಿ ಎಂಬಾಕೆಯು ಕರ್ಮರಹಿತಳಾದ ಸ್ತ್ರೀಯಾಗಿದ್ದರೂ ಪರಬ್ರಹ್ಮವಿದ್ಯೆಯಲ್ಲಿ ನಿಷ್ಠಳಾಗಿದ್ದಳು. ಸಂನ್ಯಾಸವು ವಿರಕ್ತರಾಗಿರುವವರಿಗೆ ಉಪಾಸನೆಯಿಂದ ಬ್ರಹ್ಮಲೋಕ ಪ್ರಾಪ್ತಿಗಾಗಿಯೋ, ತತ್ತ್ವಜ್ಞಾನದಿಂದ ಸದ್ಯೋಮುಕ್ತಿಗೋ ಉಪಕಾರಕವಾಗುತ್ತದೆ. ಹೀಗಲ್ಲದೆ ಬರಿಯ ವೇಷಕ್ಕಾಗಿ ಸಂನ್ಯಾಸಿಗಳೆಂದು ಕಾಷಾಯದಂಡಕಮಂಡಲು ಧಾರಣೆಯನ್ನು ಮಾಡುವವರು ಇಹಪರಗತಿಯಿಂದ ವಂಚಿತರಾಗುತ್ತಾರೆ. ಹೇಗೇ ಆಗಲಿ, ಯಾವ ಆಶ್ರಮವನ್ನು ಸ್ವೀಕರಿಸಿದರೂ ಅದಕ್ಕೆ ತಕ್ಕ ಧರ್ಮಗಳನ್ನು ಅನುಷ್ಠಾನಮಾಡುವದು ಅತ್ಯವಶ್ಯ.

ಧರ್ಮವೆಂಬುದು ಶಾಸ್ತ್ರದಿಂದ ವಿಹಿತವಾಗಬೇಕೇ ಹೊರತು ಮನುಷ್ಯನ ಇಚ್ಛೆಗೆ ಬಂದಂತೆ ಆಗಿನ ಐಹಿಕವಾದ ಅನುಕೂಲ್ಯಕ್ಕಾಗಿ ಹಾಕಿಕೊಳ್ಳುವ ವೇಷಕ್ಕೆ ತಕ್ಕಂತೆ ಮಾಡುವ ಕೆಲವು ಚೇಷ್ಟೆಗಳಲ್ಲ. ವೇದಾಂತ ವಿಚಾರವನ್ನು ಮಾಡುವ ಕುತೂಹಲವಿದ್ದ ಮಾತ್ರದಿಂದ ತತ್ತ್ವಜ್ಞಾನಕ್ಕಾಗಲಿ ಬ್ರಹ್ಮಜಿಜ್ಞಾಸೆಗಾಗಲಿ ಯಾರೂ ಅಧಿಕಾರಿಗಳಾಗುವದಿಲ್ಲ. ಈ ಲೋಕದ ಕಾಮೋಪಭೋಗಕ್ಕಾಗಿ ಮಾಡುವ ಯಾವ ಕರ್ಮಗಳನ್ನೂ ಶಾಸ್ತ್ರದಲ್ಲಿ ವಿಧಿಸಿರುವದಿಲ್ಲ. ಧರ್ಮಾವಿರುದ್ಧವಾದ ಕಾಮವೆಂಬ ಪುರುಷಾರ್ಥಕ್ಕೂ ವಿರಕ್ತನಾಗಿ ಸಾಧನಚತುಷ್ಟಯವುಳ್ಳದ್ವಿಜನಿಗೆ ಮೋಕ್ಷಕ್ಕೂ ಸಾಧನವನ್ನು ಹೇಳಿಕೊಡುವದಕ್ಕೆಂದೇ ಶಾಸ್ತ್ರವು ಹೊರಟಿರುತ್ತದೆ.

## 296. ಗುರುಸೇವೆ

### (ಜೂನ್ 1971)

*ನಿಮ್ಮ ಪತ್ರವು ತಲುಪಿದೆ. ಗುರುವಿನ ಸೇವೆಗೆ ನಿಂತಾಗ ಆತನ ನಡತೆಯ ವಿಷಯಕ್ಕೆ ಸಂಶಯವುಂಟಾದರೆ ಏನು ಮಾಡಬೇಕು? ಈಶ್ವರನಲ್ಲಿ ಹೇಗೋ ಹಾಗೆಯೇ ಗುರುವಿನಲ್ಲಿಯೂ ನಿಸ್ಸಂಶಯ ಭಕ್ತಿಯಿರಬೇಕೆಂದು ಶಾಸ್ತ್ರವು ಹೇಳುತ್ತದೆ. ಆದರೆ ಗುರುವಿನ ಸಮೀಪದಲ್ಲಿಯೇ ಇರುವಾಗ ಅವನಲ್ಲಿ ಕೆಲವು ನ್ಯೂನತೆಗಳೂ ಅತಿರೇಕಗಳೂ ಕಾಣಬರಬಹುದು. ಆಗ ಆತನಲ್ಲಿ ನಿಷ್ಕಲಂಕಭಕ್ತಿಯು ಹೇಗೆ ಉಂಟಾದೀತು? ಶಿಷ್ಯನು ಇನ್ನೂ ಜಿಜ್ಞಾಸುವಾಗಿರುವದರಿಂದ ಅವನಿಗೆ ಗುರುವು ಮಿಕ್ಕವರಂತೆ ಮನುಷ್ಯನೆಂದೇ ಅಲ್ಲವೆ, ಭಾವನೆಯುಂಟಾಗಿರುತ್ತದೆ? ಈ ಸಂಶಯವನ್ನು ಕತ್ತರಿಸುವ ಉಪಾಯವನ್ನು ನನಗೆ ಬರೆದು ಅನುಗ್ರಹಿಸಿರಿ–ಎಂದು ಕೇಳಿಕೊಂಡಿರುತ್ತೀರಿ.*

ಯಾರನ್ನಾದರೂ ಗುರುವೆಂದು ಸ್ವೀಕರಿಸುವ ಮುಂಚೆ ಆತನನ್ನು ಕೆಲವು ಕಾಲ ಪರೀಕ್ಷಿಸಬೇಕಾಗುತ್ತದೆ. ಈತನು ಶಾಸ್ತ್ರವನ್ನೂ ಶಿಷ್ಟಾಚಾರವನ್ನೂ ಗೌರವಿಸುತ್ತಾನೆಯೆ? ಶಾಸ್ತ್ರದಲ್ಲಿ ವರ್ಣಿಸಿರುವಂತೆ ಕೃತಕೃತ್ಯರ ಲಕ್ಷಣಗಳು ಈತನಲ್ಲಿ ಕಾಣುತ್ತಿವೆಯೆ? ಸಂಶಯಗಳನ್ನು ಪರಿಹರಿಸುತ್ತಾನೆಯೆ?–ಎಂಬುದನ್ನು ಆತನ ವರ್ತನೆಯಿಂದಲೂ ಬೋಧೆಯಿಂದಲೂ ತನ್ನ ಮನಸ್ಸಿನ ಮೇಲೆ ಆಗುವ ಪರಿಣಾಮದಿಂದಲೂ ಗೊತ್ತುಮಾಡಿಕೊಂಡ ಬಳಿಕವೇ ಯಾವಾತನನ್ನಾದರೂ ಗುರುವೆಂದು ಸ್ವೀಕರಿಸಬೇಕೇ ಹೊರತು, ಆತನ ವಾಗ್ವೈಖರಿಯಿಂದಲಾಗಲಿ, ಖ್ಯಾತಿಯಿಂದಲಾಗಲಿ ಮತ್ತೇನಾದರೂ ಸಂಶಯವುಂಟಾದರೆ ಉಳಿದಿರುವದು ಎರಡೇ ಮಾರ್ಗಗಳು. ನಿಮಗೆ ದೈನಂದಿನವರ್ತನೆಯಲ್ಲಿ ಉಂಟಾಗಬಹುದಾದ ಸಂಶಯವನ್ನು ವಿನಯಪೂರ್ವಕವಾಗಿ ಬಿನ್ನವಿಸಿಕೊಂಡು ಬಗೆಹರಿಸಿಕೊಳ್ಳುವದು; ಅಥವಾ ನಿಸ್ಸಂಶಯವಾಗಿ ಆತನ ನಡತೆಯು ಲೋಕವಿರುದ್ಧವೆಂದು ನಿಮಗೆ ಗೊತ್ತಾದರೆ ಆತನ ಸಹವಾಸವನ್ನು ಬಿಟ್ಟುಬಿಡುವದು. ಹೀಗಲ್ಲದೆ ಸುಮ್ಮನೆ ನೀವು ಕಲ್ಪಿಸಿಕೊಂಡಿರುವ ದುರಾಚಾರಮಾತ್ರದಿಂದ ಆತನಲ್ಲಿ ಆರೋಪಿಸಿಕೊಂಡಿರುವ ದೋಷಗಳನ್ನು ಮೆಲುಕುಹಾಕುತ್ತಿದ್ದರೆ ನಿಮಗೆ ಗುರುದ್ರೋಹದ ಪಾಪವೇ ಗಂಟುಬೀಳುವದು. ಆತನ ಉಪದೇಶದಿಂದ ನಿಮಗೆ ಯಾವ ಪ್ರಯೋಜನವೂ ಉಂಟಾಗಲಾರದು, ಗುರೂಪಾಸನೆಯಲ್ಲಿಯೂ ಜ್ಞಾನಸಾಧನದ ಅನುಷ್ಠಾನದಲ್ಲಿಯೂ ತತ್ಪರತೆಯು ಇದ್ದವನಿಗೆ ಮಾತ್ರವೇ ಜ್ಞಾನದ ಪ್ರಾಪ್ತಿಯಾದೀತೇ ಹೊರತು ಅಸಡ್ಡೆಯಿಂದ ಮಾಡಿದ ಗ್ರಂಥದ ಪಾಠಮಾತ್ರದಿಂದ ಎಂದಿಗೂ ನಿಜವಾದ ಜ್ಞಾನವು ಲಭಿಸಲಾರದು.

## 297. ಭಾವನೆಯ ಆವಶ್ಯಕತೆ

### (ಜುಲೈ 1971)

*ನಿಮ್ಮ ಪತ್ರವು ತಲುಪಿದೆ. ಅಧ್ಯಾತ್ಮವಿದ್ಯೆಗಾಗಿ ಸಾಧನಗಳನ್ನು ಮಾಡುವಾಗ ಯಾವ ಸಾಧನವನ್ನು ಯಾವ ರೀತಿಯಲ್ಲಿ ಮಾಡಬೇಕೆಂಬುದನ್ನು ನಿಶ್ಚಯಿಸಿಕೊಳ್ಳುವದು ಹೇಗೆ?–ಎಂದು ಕೇಳಿರುತ್ತೀರಿ. ಈ ಪ್ರಶ್ನೆಯು ವೇದಾಂತಜಿಜ್ಞಾಸುಗಳಿಗೆಲ್ಲ ಅವಶ್ಯವಾಗಿ ಬೇಕಾಗಿರುವ ವಿಷಯವನ್ನು ಕುರಿತದ್ದಾದ್ದರಿಂದ ಸ್ವಲ್ಪ ಮಟ್ಟಿಗೆ ವಿವರವಾಗಿಯೇ ನನ್ನ ಅಭಿಪ್ರಾಯವನ್ನು ತಿಳಿಯಿಸಬೇಕೆಂದು ಇಲ್ಲಿ ಪ್ರಯತ್ನಿಸಿರುವೆನು.*

ಭಗವಂತನಿಗೆ ಕರ್ಮವನ್ನು ಅರ್ಪಿಸುವದು, ಅರ್ಚನೆ, ಜಪ, ಸ್ತೋತ್ರ, ಧ್ಯಾನ–ಮುಂತಾದ ವಿವಿಧ ಸಾಧನಗಳನ್ನು ಶಾಸ್ತ್ರದಲ್ಲಿ ಸಾಧಕರಿಗೆ ಉಪದೇಶಿಸಿರುತ್ತದೆ. ಮುಮುಕ್ಷುಗಳಾದವರು ತಮ್ಮ ಶಕ್ತಿಗೆ ಅಳವಡುವ ಸಾಧನವನ್ನೇ ಕೈಕೊಳ್ಳಬೇಕು. ಎಲ್ಲಾ

ಸಾಧನಗಳೂ ಎಲ್ಲರಿಗೂ ಹೇಳಿರುವವುಗಳಲ್ಲವಾದ್ದರಿಂದ ತನಗೆ ರುಚಿಸುವ ಸಾಧನವನ್ನು ಮತ್ತು ತಾನು ಮಾಡಬಹುದಾದ ಸಾಧನವನ್ನು ಕುರಿತು ತನಗಿರುವ ಸಂಶಯಗಳನ್ನು ಸದ್ಗುರುವಿನ ಉಪದೇಶಕ್ಕನುಗುಣವಾಗಿ ಪರಿಹರಿಸಿಕೊಂಡು ತನ್ನ ಅಧಿಕಾರಕ್ಕೆ ತಕ್ಕ ಸಾಧನವನ್ನು–ಆರಿಸಿಕೊಂಡು ಸ್ಥಿರಪ್ರಯತ್ನದಿಂದ ಅದರ ಅನುಷ್ಠಾನಕ್ಕೆ ಮನಸ್ಸನ್ನು ಮೀಸಲಾಗಿರಿಸಿಕೊಳ್ಳಬೇಕು.

ಆದರೆ ಯಾವ ಸಾಧನವನ್ನೇ ಆರಿಸಲಿ, ಗುರುಶಾಸ್ತ್ರವಚನದಲ್ಲಿ ಶ್ರದ್ಧೆಯಿಂದ ಸಾಧನದ ಮರ್ಮವನ್ನು ಅರಿತುಕೊಳ್ಳಬೇಕಲ್ಲದೆ ಸಾಧನವನ್ನು ಮಾಡುವಾಗ ಆದರ ಪೂರ್ವಕವಾಗಿ ಅನುಷ್ಠಾನಮಾಡಬೇಕೆಂಬದನ್ನು ಮರೆಯಬಾರದು. **'ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ'** (ಗೀ. 17–3) ಎಂದು ಭಗವಂತನು ಹೇಳಿರುತ್ತಾನೆ. ಇಲ್ಲಿ ಶ್ರದ್ಧೆ ಎಂದರೆ 'ಹೀಗಿರಬೇಕು' ಎಂಬ ಬರಿಯ ನಂಬಿಕೆಯಿಂದ ತಿಳಿಯಬಾರದು. ಗುರುಶಾಸ್ತ್ರ ವಾಕ್ಯದಲ್ಲಿ ನಂಬಿಕೆಯಿರಬೇಕೆಂಬುದೇನೋ ನಿಜ. ಏಕೆಂದರೆ ಯಾವನಿಗೆ ಶಾಸ್ತ್ರದಲ್ಲಿ ಹೇಳಿರುವದೇ ಸರಿ–ಎಂಬ ದೃಢವಾದ ನಂಬಿಕೆಯಿರುವದಿಲ್ಲವೋ ಅವನು ಸ್ವೇಚ್ಛೆಯಿಂದ ತನ್ನ ಮನಬಂದಂತೆ ನಡೆಯುತ್ತಾನಾದ್ದರಿಂದ ಅವನಿಗೆ ಸಾಧನಾನುಷ್ಠಾನವಾಗಲಿ, ಅನುಷ್ಠಾನದಿಂದ ದೊರಕಬೇಕಾದ ಪುರುಷಾರ್ಥಪ್ರಾಪ್ತಿಯೋಗ್ಯತೆಯಾಗಲಿ ದಕ್ಕಲಾರದು. **'ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಮ್'** (ಗೀ. 16–23) ಅವನಿಗೆ ಸಾಧನವನ್ನು ಮಾಡಿ ಪುರುಷಾರ್ಥವನ್ನು ಪಡೆದುಕೊಳ್ಳುವದಕ್ಕೆ ಅವಶ್ಯವಾದ ಯೋಗ್ಯತೆ ಯಾಗಲಿ, ಇಹದಲ್ಲಿ ಸುಖವಾಗಲಿ ಪರದಲ್ಲಿ ಗತಿಯಾಗಲಿ ದಕ್ಕಲಾರದು–ಎಂದು ಭಗವಂತನೇ ಹೇಳಿರುತ್ತಾನೆ.

ಸಾಧನಗಳನ್ನು ಮಾಡುವಾಗ ಭಾವನೆಯು ಇರಬೇಕಾದದ್ದು ಅತ್ಯವಶ್ಯ ವೆಂಬುದನ್ನು ನಮ್ಮ ನಿತ್ಯಜೀವನದಲ್ಲಿ ಕಾಣಬರುವ ದೃಷ್ಟಾಂತಗಳಿಂದಲೂ ಮನಗಾಣಬಹುದಾಗಿದೆ. 'ನಮಸ್ಕಾರ!' ಎಂದು ಕೂಗಿಕೊಂಡು ಕೈಮುಗಿಯುವವನಿಗೂ ಶ್ರದ್ಧಾಗೌರವಪೂರ್ವಕವಾಗಿ ಕೈಮುಗಿಯುವವನಿಗೂ ಇರುವ ಹೆಚ್ಚುಕಡಿಮೆಯು ನಮ್ಮೆಲ್ಲರಿಗೂ ಗೊತ್ತೇ ಇದೆ. ನಮ್ಮ ಪ್ರೀತಿಗೆ ಪಾತ್ರರಾಗಿರುವ ತಂದೆ, ತಾಯಿ, ಮಗ, ಗೆಳೆಯ–ಮುಂತಾದವರಲ್ಲಿರುವ ಹೃದಯದ ಭಾವವು ಮಿಕ್ಕವರಲ್ಲಿ ನಮಗೆ ಇರುವದಿಲ್ಲ. ಮಿಕ್ಕವರನ್ನು ಕಂಡಾಗ 'ತಾವು ಬಂದದ್ದರಿಂದ ನಮಗೆ ಬಹಳ ಸಂತೋಷವಾಯಿತು!' ಎಂದು ಎಷ್ಟು ಬಲವಾಗಿ ಹೇಳಿಕೊಂಡರೂ ಹೃದಯವು ಅಷ್ಟೇ ಆರ್ದ್ರವಾಗಿರುವದೆಂದು ಹೇಳುವದಕ್ಕೆ ಬರುವದಿಲ್ಲವಲ್ಲವೆ? ಹೀಗೆಯೇ ತೀರ್ಥ, ದೇವಾಲಯ, ದೇವತೆ, ಗುರು,

ಮಂತ್ರ–ಮುಂತಾದವುಗಳಲ್ಲಿನಮಗೆ ಎಂಥ ಭಾವನೆಯಿರುವದೋ ಅದಕ್ಕೆ ತಕ್ಕಂತೆಯೇ ಮನಸ್ಸಿನ ಮೇಲೆ ಪರಿಣಾಮವಾಗುವದೆಂಬುದು ಯುಕ್ತವಾಗಿದೆ.

ಮಂತ್ರವನ್ನು ಜಪಿಸುವೆನೆಂದು 'ಶಬ್ದೋಚ್ಚಾರಣೆಮಾಡಿದಮಾತ್ರದಿಂದ, ಸ್ತೋತ್ರಗಳನ್ನು ಓದಿದಮಾತ್ರದಿಂದ, ಗೀತೆ, ರಾಮಾಯಣ–ಮುಂತಾದ ಧರ್ಮ ಗ್ರಂಥಗಳನ್ನು ಪಾರಾಯಣ ಮಾಡುತ್ತೇನೆ' ಎಂದು ಓದಿದಮಾತ್ರದಿಂದ, ತಂದೆತಾಯಿಗಳ 'ಶ್ರಾದ್ಧವನ್ನು ಮಾಡುತ್ತೇನೆ' ಎಂದು ಬ್ರಾಹ್ಮಣರಿಗೆ ಊಟವನ್ನು ಹಾಕಿದ ಮಾತ್ರದಿಂದ, ಜಪ, ಸ್ತೋತ್ರಪಾಠ, ಪಾರಾಯಣ, ಶ್ರಾದ್ಧ–ಈ ಕರ್ಮಗಳಿಂದಾಗಬೇಕಿದ್ದ ಫಲವು ದಕ್ಕಲಾರದು. 'ಏಕಾಂತವಾಸವನ್ನು ಮಾಡುತ್ತೇನೆ' ಎಂದು ಬೆಟ್ಟದಮೇಲೆ ಅಥವಾ ಗುಹೆಯಲ್ಲಿ ವಾಸಮಾಡಿಕೊಂಡಿದ್ದ ಮಾತ್ರದಿಂದ ಧ್ಯಾನದ ಅಥವಾ ತಪಸ್ಸಿನ ಫಲವು ಲಭಿಸಲಾರದು. 'ವೇದಾಂತವಿಚಾರವನ್ನು ಮಾಡುತ್ತೇನೆ' ಎಂದು ಮೀಮಾಂಸಾನ್ಯಾಯಗಳನ್ನು ಅಥವಾ ತರ್ಕದ ಪಾರಿಭಾಷಿಕಶಬ್ದಗಳ ಬಳಕೆಯನ್ನು ಮಾಡಿದ ವಾಗಾಡಂಬರಮಾತ್ರದಿಂದ ಆತ್ಮಜ್ಞಾನವು ಲಭಿಸಲಾರದು. ಇವುಗಳಲ್ಲೆಲ್ಲಾ ಶ್ರದ್ಧಾದರಗಳಿಂದ ಕೂಡಿದ ಭಾವನೆಯು ಒಂದೇಸಮನೆ ಹರಿಯುತ್ತಾ ಮನಸ್ಸಿನಲ್ಲಿ ಊಡಿಕೊಂಡಿರಬೇಕು.

ನೀವು ಆರಿಸಿಕೊಂಡ ಸಾಧನವಿಶೇಷದ ಮೇಲಿನಿಂದ ನಿಮಗೆ ಪುರುಷಾರ್ಥವು ದೊರಕುವದೆಂದು ಕಲ್ಪಿಸುವದಕ್ಕಾಗಲಾರದು. ಶ್ರದ್ಧಾಭಕ್ತಿಪೂರ್ವಕವಾದ ನಿರಂತರ ಭಾವನೆಯೇ ಸಾಧನೆಗೆ ವೀರ್ಯವನ್ನು ಕೊಡುವ ಹೂರಣವೆಂಬುದನ್ನು ಮನಸ್ಸಿಗೆ ಹತ್ತುವಂತೆ ಭಗವಂತನು ನಿಮಗೆ ಅನುಗ್ರಹಿಸಲೆಂದು ಹಾರೈಸುತ್ತೇನೆ.

## 298. ಭೋಗ, ಭಯ, ಕ್ರೋಧ

(ಆಗಸ್ಟ್ 1971)

*ನಿಮ್ಮ ಪತ್ರವು ತಲುಪಿದೆ. 'ವಿಷಯಗಳ ಆಶೆಯನ್ನು ಬಿಟ್ಟರೆ ಮನುಷ್ಯನಿಗೆ ಪರಮ ಪುರುಷಾರ್ಥವು ದೊರಕಿದಂತೆ–ಎಂದು ನನ್ನ ಮಿತ್ರರು ಕೆಲವರು ಬೋಧಿಸುತ್ತಿದ್ದಾರೆ. ಆದರೆ ಅವರಿಗೇನೂ ಆಶೆಯು ಕಡಿಮೆಯಾಗಿಲ್ಲ; ಆಶೆಯನ್ನು ಬಿಟ್ಟವನು ಯಾರಿಗೂ ಆಳಲ್ಲ–ಎಂದು ಉಪನ್ಯಾಸವನ್ನು ದೀರ್ಘಕಾಲದವರೆಗೆ ಮಾಡಿ ಒಬ್ಬನು ಸಾವಿರಾರುರೂಪಾಯಿಗಳ ಸಂಗ್ರಹವನ್ನು ಮಾಡಿಕೊಂಡು ಹೋದದ್ದನ್ನು ನಾನು ಕಂಡಿದೇನೆ. ಆತನು ಇಬ್ಬರು ಹೆಂಡಿರು, ಮಕ್ಕಳು, ಮನೆ, ಆಳುಕಾಳು–ಎಲ್ಲವನ್ನೂ ಇಟ್ಟುಕೊಂಡಿದಾನೆ. ಆದರೆ 'ಆಶೆಯನ್ನು ಬಿಡಬೇಕು' ಎಂದು ಬೋಧಿಸುವದರಿಂದ ಧನಸಂಪಾದನೆಯನ್ನು ಮಾಡುವ ಆಶೆಯನ್ನು ಮಾತ್ರ ಬಲವಾಗಿಟ್ಟುಕೊಂಡಿರುತ್ತಾನೆ. ಆದ್ದರಿಂದ ನಾನು 'ಅನ್ಯಾಯದಿಂದ ವಿತ್ತಸಂಗ್ರಹವನ್ನು ಮಾಡುವ ದಿಶೆಯನ್ನು ಬಿಟ್ಟರೆ ಸಾಕು' ಎಂಬ*

*ತೀರ್ಮಾನಕ್ಕೆ ಬಂದಿರುತ್ತೇನೆ. ಆದರೆ ನನಗೆ ವಿಷಯಗಳ ಭೋಗವು ಮತ್ತೆಮತ್ತೆ ಬೇಕೆನಿಸುತ್ತದೆ. ನನ್ನ ಸ್ವತ್ತುಗಳು ಎಲ್ಲಿ ನಾಶವಾಗುವವೊ, ಯಾರು ಎಲ್ಲಿ ಅದನ್ನು ಅಪಹರಿಸಿಬಿಟ್ಟಾರೊ! ಎಂಬ ಭಯವೂ ಬೆನ್ನುಹತ್ತಿದೆ. ನನ್ನನ್ನು ವಿಷಯಲೋಲುಪನೆಂದು ಯಾರಾದರೂ ಅಂದಾಗ, ಅಥವಾ ನನ್ನ ಭೋಗಕ್ಕೆ ಯಾವಾಗಲಾದರೂ ಯಾರಿಂದಲಾದರೂ ಅಡ್ಡಿಬಂದಾಗ ಬಹಳ ಸಿಟ್ಟು ಬರುತ್ತದೆ. ಆದ್ದರಿಂದ ಈ ಭಯಕ್ರೋಧಗಳನ್ನು ಗೆದ್ದುಕೊಳ್ಳುವದಕ್ಕೆ ಏನಾದರೂ ಉಪಾಯವಿದೆಯೆ?–ಎಂಬುದನ್ನು ತಿಳಿಯಿಸಿಕೊಟ್ಟರೆ ಉಪಕಾರವಾದೀತು' ಎಂದು ಬರೆದಿರುತ್ತೀರಿ.*

ನಿಮ್ಮ ಪ್ರಶ್ನೆಯು ಯುಕ್ತವಾಗಿಯೇ ಇದೆ. ಏಕೆಂದರೆ ಬರಿಯ ಉಪನ್ಯಾಸಕರ ಉಪದೇಶವು ಯಾವ ಕೆಲಸಕ್ಕೂ ಬಾರದು. ಈಗಿನ ಕಾಲದಲ್ಲಿ ಉಪನ್ಯಾಸದಿಂದ ಉಪಜೀವನವನ್ನು ಮಾಡುತ್ತಿರುವವರು ಸಾಮಾಜಿಕ, ವಿದ್ಯಾಭ್ಯಾಸ ಮತ್ತು ರಾಜಕಾರಣ– ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಕಂಡು ಬರುತ್ತಿದ್ದಾರೆ. ಆದ್ದರಿಂದ ಭೋಗಗಳ ಆಶೆಯನ್ನು ಬಿಡಬೇಕೆಂದು ಉಪದೇಶಿಸುವವರ ಮಾತನ್ನು ಉಪೇಕ್ಷಿಸುವದೇ ಯುಕ್ತ, ನೀವು ಬರೆದಿರುವಂತೆ ನ್ಯಾಯವಾದ ನಡತೆಯಿಂದ ಭೋಗವನ್ನು ಸಂಪಾದಿಸಿಕೊಳ್ಳಬೇಕೆಂಬ ನಿಮ್ಮ ತೀರ್ಮಾನವು ಸರಿಯೇ ಆಗಿದೆ. ಆದರೆ ಶಾಸ್ತ್ರದಲ್ಲಿ ವಿಧಿಸಿರುವಂತೆ ಅನುಷ್ಠಾನವನ್ನು ಮಾಡಿದ ಧರ್ಮದಿಂದ ಸಂಪಾದಿಸಿಕೊಳ್ಳುವ ಸುಖವು ಇನ್ನೂ ಉತ್ತಮ; ಏಕೆಂದರೆ ಯಾವದು ನ್ಯಾಯ, ಯಾವದು ಅನ್ಯಾಯ–ಎಂಬುದನ್ನು ಭೋಗಾಸಕ್ತರಾದ ಜನರು ತಾವು ತಾವೇ ನಿರ್ಣಯಿಸುವದು ಈಗಿನ ಕಾಲಕ್ಕೆ ಕಷ್ಟಸಾಧ್ಯ.

ಆದರೆ ಹೇಗೇ ಭೋಗವನ್ನು ಸಂಪಾದಿಸಿಕೊಂಡರೂ ಭೋಗಗಳು ನಿಲ್ಲುವ ಹಾಗಿಲ್ಲ **'ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ।'** (ಗೀ. 5–22) ಎಂದು ಭಗವಂತನು ಹೇಳಿರುವಂತೆ ಇಂದ್ರಿಯಗಳಿಂದ ವಿಷಯಗಳನ್ನು ಉಪಭೋಗಿಸುವದು ಯಾವದಾದರೊಂದು ದುಃಖಕ್ಕೆ ಕಾರಣವಾಗದೆ ಇರುವದೇ ಇಲ್ಲ. 'ವಿಷಯವನ್ನು ಭೋಗಿಸಬೇಕು, ಭೋಗವು ಕ್ಷಯವಾಗಬಾರದು'–ಎಂಬುದು ಆಗದ ಮಾತು. ಧನಸಂಗ್ರಹದ ಹಿಂದೆ ಭಯವು ಬೆನ್ನಟ್ಟಿಯೇ ಬರುತ್ತಿರುವದೆಂಬುದನ್ನು ನೀವು ಚೆನ್ನಾಗಿ ಕಂಡುಕೊಂಡಿರುತ್ತೀರಿ. ಆದ್ದರಿಂದ ಧನಸಂಗ್ರಹಕ್ಕಿಂತಲೂ ಧನದಿಂದ ಧರ್ಮ, ಧರ್ಮದಿಂದ ಸುಖ–ಎಂಬ ನೀತಿಯೇ ಸುಖಜೀವನಕ್ಕೆ ಯುಕ್ತವಾಗಿರುತ್ತದೆ.

ಇಂದ್ರಿಯಗಳಿಗೆ ಕೆಲವು ವಿಷಯಗಳಲ್ಲಿ ಸಹಜವಾಗಿ ರಾಗವಿರುತ್ತದೆ; ಮತ್ತೆ ಕೆಲವು ವಿಷಯಗಳಲ್ಲಿ ಸಹಜವಾಗಿಯೇ ದ್ವೇಷವಿರುತ್ತದೆ. ಆದ್ದರಿಂದ ಇಂದ್ರಿಯಗಳ ರಾಗದ್ವೇಷಗಳಿಗೆ ವಶವಾಗುವದಕ್ಕಿಂತಲೂ ಜೀವನವು ನಿರಾಯಾಸದಿಂದ ಸಾಗುವಷ್ಟು ಅವಶ್ಯವಾದಷ್ಟು ಹಿತಮಿತವಾಗಿ ನಿಷಿದ್ಧವಲ್ಲದ ಭೋಗಗಳನ್ನು ಮಾತ್ರ ಅನುಭವಿಸುತ್ತಾ ಹೋಗುವದೇ ಜಾಣತನ. ಅದರಿಂದ ಮನಸ್ಸಿಗೆ ಪ್ರಸನ್ನತೆಯೂ ಸಿಕ್ಕುವದೆಂದು ಭಗವಂತನು ಹೇಳಿರುತ್ತಾನೆ.

ಇನ್ನು ಭಯಕ್ರೋಧಗಳ ವಿಷಯವು: ಮನುಷ್ಯನಿಗೆ ಒಂದಲ್ಲದಿದ್ದರೆ ಒಂದರ ಭಯವೂ ತನ್ನ ಅಭಿಲಾಷೆಯು ಪೂರ್ತಿಯಾಗದೆ ಇದ್ದರೆ ಕ್ರೋಧವೂ ಉಂಟಾಗುತ್ತಿರುವದು ಸ್ವಾಭಾವಿಕವಾಗಿರುತ್ತದೆ. ಯಾವದಾದರೊಂದು ಹರ್ಷನಿಮಿತ್ತವೂ ಯಾವದಾದರೊಂದು ಭಯನಿಮಿತ್ತವೂ ಜನರಿಗೆ ದಿನದಿನವೂ ಉಂಟಾಗುತ್ತಲೇ ಇರುತ್ತದೆ. ವಿವೇಕಿಯಾದವನು ತನ್ನ ಮನಸನ್ಸನ್ನು ಹಿಡಿತದಲ್ಲಿಟ್ಟುಕೊಂಡು ದೇಹಯಾತ್ರೆಯನ್ನು ಸಾಗಿಸುತ್ತಿರಬೇಕು. ಇನ್ನು ಪರಮಪುರುಷಾರ್ಥವನ್ನೇ ಸಂಪಾದಿಸಿ ಕೊಳ್ಳಬೇಕೆಂಬ ಮುಮುಕ್ಷುಗಳಿಗೆ ಭಗವಂತನು ಒಂದು ಉಪದೇಶವನ್ನು ಮಾಡಿರುತ್ತಾನೆ;

**ವೀತರಾಗಭಯಕ್ರೋಧಾ ಮನ್ಮಯಾ ಮಾಮುಪಾಶ್ರಿತಾಃ ।**
**ಬಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ ॥ ಗೀ. 4–10**

ಯಾರು ಭಗವಂತನ ಭಕ್ತಿಯಿಂದ ತನ್ಮಯರಾಗುವರೋ ಅವರಿಗೆ ರಾಗಭಯಕ್ರೋಧಗಳು ತೊಲಗುವವು; ಭಗವಂತನನ್ನೇ ಆಶ್ರಯಿಸಿಕೊಂಡಿರುವ ಅವರಿಗೆ ತತ್ತ್ವಜ್ಞಾನವೆಂಬ ಪಾವನವಾದ ತಪಸ್ಸು ದೊರಕುವದು. ಅದರಿಂದ ಅವರು ಭಗವತ್ಸ್ವರೂಪರೇ ಆಗಿಬಿಡುವರು. ಆದ್ದರಿಂದ ನಮ್ಮ ಅಧಿಕಾರಕ್ಕೆ ತಕ್ಕಂತೆ ಸಾಧನವನ್ನು ಅಳವಡಿಸಿಕೊಂಡು ಸಂಸಾರಭಯದಿಂದ ಮುಕ್ತರಾಗುವ ಉಪಾಯವನ್ನು ನಾವು ಅವಲಂಬಿಸಬೇಕಾಗಿದೆ.

## 299. ಸಂನ್ಯಾಸಾಶ್ರಮ

(ಸೆಪ್ಟೆಂಬರ್ 1971)

*ನಿಮ್ಮ ಪತ್ರವು ತಲುಪಿತು. 'ಸಂನ್ಯಾಸಾಶ್ರಮವನ್ನು ಹೇಗೆ ಪಾಲಿಸಿಕೊಳ್ಳಬೇಕು? ಆಚಾರವು ಬೇರೆಬೇರೆಯ ವಿಧವಾಗಿ ಕಾಣಬರುತ್ತಿದೆ. ಶಾಸ್ತ್ರದಲ್ಲಿ ವರ್ಣಿಸಿರುವ ಬಗೆಗಳೂ ವಿವಿಧವಾಗಿವೆ. ನನಗೆ ಸಂನ್ಯಾಸಸ್ವೀಕಾರವನ್ನು ಮಾಡಬೇಕೆಂಬ ಆಶೆಯಿದೆ; ಆದರೆ ನನ್ನ ಆಪ್ತರಿಷ್ಟರು ಕೆಲವರು ಇದು ಕೂಡದೆಂದು ಅಡ್ಡಿ ಮಾಡುತ್ತಿದಾರೆ. ನಾನು ಈಗ ವಿಧುರನಾಗಿದೇನೆ; ಮದುವೆಯಾಗ ಬೇಕೆಂಬ ಇಚ್ಛೆಯೂ ಇಲ್ಲ. ನಾನು ನಾಲ್ಕನೆಯ ಆಶ್ರಮವನ್ನು ಸ್ವೀಕರಿಸುವದರಲ್ಲಿ ಬಾಧಕ ವೇನಾದರೂ ಉಂಟೆ? ತಿಳಿಸಬೇಕು'–ಎಂದು ಬರೆದಿರುತ್ತೀರಿ.*

ಸಂನ್ಯಾಸ, ತ್ಯಾಗ–ಈ ಎರಡು ಶಬ್ದಗಳಿಗೂ 'ಬಿಡುವದು' ಎಂದೇ ಅರ್ಥ. ಆದರೂ ಸಂನ್ಯಾಸವನ್ನು ನಾಲ್ಕನೆಯ ಆಶ್ರಮವೆಂದು ಕರೆಯುವದು ರೂಢಿಯಲ್ಲಿದೆ. ಇದಕ್ಕೆ ಕಾರಣವೇನೆಂದರೆ, ಪರಮಾರ್ಥದೃಷ್ಟಿಯಿಂದ ನೋಡಿದಾಗ ನಮ್ಮ ಆತ್ಮನು ಪರಮಾತ್ಮನೇ, ಅವನು ಕೂಟಸ್ಥನಿತ್ಯನಾದ–ಎಂದರೆ ಯಾವ ವಿಕಾರವಾಗಲಿ

ಚಾಲನೆಯಾಗಲಿ ಇಲ್ಲದ ಅವನು ಸಮಸ್ತಭೂತಗಳಿಗೂ ಆತ್ಮನಾಗಿರುವ– ಪರಮಾರ್ಥ ತತ್ತ್ವವು ಎಂದು ಶ್ರುತಿಸ್ಮೃತಿಗಳಲ್ಲಿ ಹೇಳಿರುತ್ತದೆ. ಆದ್ದರಿಂದ ಈ ಜ್ಞಾನವನ್ನು ಪಡೆದುಕೊಂಡಿರುವಾತನು ಹೊರಗೆ ಯಾವ ವೇಷದಲ್ಲಿಯೇ ಇರಲಿ, ಅವನು ಸಂನ್ಯಾಸಿಯೆಂದೇ ತಿಳಿಯಬೇಕು. ಭಗವದ್ಗೀತೆಯಲ್ಲಿ ಪರಮಾರ್ಥ ಸಂನ್ಯಾಸವನ್ನು ಹೀಗೆ ವರ್ಣಿಸಿರುತ್ತದೆ:

> ನೈವ ಕಿಞ್ಚಿತ್ ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್ ।
> ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ ಅಶ್ನನ್ ಗಚ್ಛನ್ ಸ್ವಪನ್ ಶ್ವಸನ್॥
> ಪ್ರಲಪನ್ ವಿಸೃಜನ್ ಗೃಹ್ಣನ್ ಉನ್ಮಿಷನ್ ನಿಮಿಷನ್ನಪಿ।
> ಇನ್ದ್ರಿಯಾಣೀನ್ದ್ರಿಯಾರ್ಥೇಷು ವರ್ತನ್ತ ಇತಿ ಧಾರಯನ್ ॥ 5–8,9

ತತ್ತ್ವವನ್ನರಿತವನು ನೋಡುತ್ತಿದ್ದರೂ, ಕೇಳುತ್ತಿದ್ದರೂ, ಮುಟ್ಟುತ್ತಿದ್ದರೂ, ಮೂಸುತ್ತಿದ್ದರೂ, ತಿನ್ನುತ್ತಿದ್ದರೂ, ನಡೆಯುತ್ತಿದ್ದರೂ, ನಿದ್ರಿಸುತ್ತಿದ್ದರೂ, ಉಸಿರಾಡುತ್ತಿದ್ದರೂ, ಮಾತಾಡುತ್ತಿದ್ದರೂ, ಮಲಮೂತ್ರಗಳನ್ನು ಬಿಡುತ್ತಿದ್ದರೂ, ವಸ್ತುಗಳನ್ನು ತೆಗೆದು ಕೊಳ್ಳುತ್ತಿದ್ದರೂ, ಕಣ್ಣುರೆಪ್ಪೆಗಳನ್ನು ಎತ್ತುತ್ತಿದ್ದರೂ, ಮುಚ್ಚುತ್ತಿದ್ದರೂ–'ಇಂದ್ರಿಯಗಳು ಇಂದ್ರಿಯಾರ್ಥಗಳಾದ ವಿಷಯಗಳಲ್ಲಿ ವ್ಯಾಪಾರ ಮಾಡುತ್ತಿವೆ, ನನಗೆ ಈ ವ್ಯಾಪಾರಗಳ ಸಂಬಂಧವೇ ಇಲ್ಲ' ಎಂದು ಅರಿತಿರುವನು. ಈ ಜ್ಞಾನವು ಯಾವನಿಗೆ ಇದೆಯೋ, ಅವನು ಯಾವ ವೇಷದಲ್ಲಿದ್ದರೂ ಪರಮಾರ್ಥವಾಗಿ ಸಂನ್ಯಾಸಿಯೇ.

> ಸರ್ವಕರ್ಮಾಣಿ ಮನಸಾ ಸಂನ್ಯಸ್ಯಾಸ್ತೇ ಸುಖಂ ವಶೀ।
> ನವದ್ವಾರೇ ಪುರೇ ದೇಹೀ ನೈವ ಕುರ್ವನ್ನ ಕಾರಯನ್ ॥ಗೀ.5–13

'ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡಿರುವಾತನು ಎಲ್ಲಾ ಅನಾತ್ಮದ ಕರ್ಮಗಳನ್ನೂ ಮನಸ್ಸಿನಲ್ಲಿ ಪೂರ್ಣವಾಗಿ ಸಂನ್ಯಾಸ ಮಾಡಿರುವದರಿಂದ ದೇಹದಲ್ಲಿರುತ್ತಿರುವಾಗಲೂ ಏನೂ ಮಾಡುವದಿಲ್ಲ; ಮತ್ತೊಬ್ಬರಿಂದ ಏನನ್ನೂ ಮಾಡಿಸುವದಿಲ್ಲ.' ನಿಮಗೆ ಯಾವ ಕಾಮಕ್ರೋಧಲೋಭಾದಿಗಳ ಹಂಗೂ ಇಲ್ಲವೆ? ಅನಾತ್ಮನಾದ ದೇಹದ ಯಾತ್ರೆಗೆ ಬೇಕಾದದ್ದು ಯಾವದೂ ಬೇಕಿಲ್ಲವೆಂದು ನಿಶ್ಚಯವಾಗಿ ಬಿಟ್ಟಿದೆಯೆ? ಹಾಗಾದರೆ ನೀವು ಈಗಲೇ ಸಂನ್ಯಾಸಿಗಳು. ಇದು ವಿದ್ವತ್ಸಂನ್ಯಾಸವೆನಿಸುತ್ತದೆ. ಇಂಥವನು ಅನವಶ್ಯಕವಾಗಿ ಯಾವ ವೈದಿಕಕರ್ಮಗಳನ್ನೂ ಯಾವದಾದರೂ ಫಲದ ಪ್ರಾಪ್ತಿಗೆಂದು ಮಾಡುವದೇ ಇಲ್ಲವಾದ್ದರಿಂದ ಅವನು ಆಶ್ರಮತ್ಯಾಗರೂಪವಾದ ಸಂನ್ಯಾಸದ ಗುರುತನ್ನು ವಿಧಿವತ್ತಾಗಿ ಸ್ವೀಕರಿಸುವದಕ್ಕೆ ಅರ್ಹನು.

ಇನ್ನು ನಿಮಗೆ ಮಕ್ಕಳುಮರಿ, ಧನದಆಶೆ, ಲೋಕಾಂತರದಲ್ಲಿಪುಣ್ಯದ ಫಲವನ್ನು ಪಡೆಯಬೇಕೆಂಬ ಹವಣಿಕೆ–ಇವು ಯಾವವೂ ಇಲ್ಲವೆ? ಹಾಗಾದರೆ ಆತ್ಮತತ್ತ್ವವನ್ನು ಅರಿತುಕೊಳ್ಳುವದಕ್ಕೆಂದು ಶಾಸ್ತ್ರೀಯಕರ್ಮಗಳನ್ನು ಬಿಟ್ಟು ಸಂನ್ಯಾಸಿಗಳಾಗಿ ಗುರುವಿನಲ್ಲಿ ತತ್ತ್ವಜಿಜ್ಞಾಸೆಯನ್ನು ಮಾಡುತ್ತಾ ಅವರು ಹೇಳುವಂತೆ ಜ್ಞಾನಸಾಧನವನ್ನು ಆಚರಿಸಿರಿ. ಇದು **ವಿವಿದಿಷಾಸಂನ್ಯಾಸ.**

ನಾನು ಸಂನ್ಯಾಸಿಯ ವೇಷವನ್ನು ಧರಿಸಿ 'ಪರಮಹಂಸಪರಿವ್ರಾಜಕ' ನೆಂಬ ಬಿರುದನ್ನು ಸಂಪಾದಿಸಿಕೊಂಡು ಎಲ್ಲರ ಗೌರವಕ್ಕೂ ಪಾತ್ರನಾಗಬೇಕು, ಜನಗಳು ನನಗೆ ಪೂಜಾದಿಸತ್ಕಾರಗಳಿಂದ ಗೌರವವನ್ನು ಮಾಡಬೇಕು–ಎಂಬ ಹಂಬಲು ನಿಮಗೆ ಇದೆಯೆ? ಹಾಗಾದರೆ ನೀವು ಸಂನ್ಯಾಸಕ್ಕೆ ಅರ್ಹರಲ್ಲ. ಏಕೆಂದರೆ ಏಷಣಾತ್ರಯವನ್ನು ಬಿಟ್ಟು ಶ್ರವಣಮನನಾದಿಗಳನ್ನು ಸಾಧನಮಾಡುತ್ತಿರುವ ಆಶ್ರಮವೇ ನಿಜವಾದ ಸಂನ್ಯಾಸ.

ಸಂನ್ಯಾಸದಲ್ಲಿ ಯಜ್ಞೋಪವೀತಾದಿಧಾರಣೆಯನ್ನು ಮಾಡಿಕೊಂಡಿರುವ ಆಶ್ರಮವೂ ಒಂದುಂಟು. ಅದರ ವಿಷಯವನ್ನು ಇನ್ನೊಮ್ಮೆ ನಿಮಗೆ ತಿಳಿಯಿಸುವೆನು. ಸದ್ಯಕ್ಕೆ ನಿಮಗೆ ಈ ಲೋಕದ ಯಾವ ವಿಷಯಸುಖವೂ ಬೇಡವೆನಿಸಿದೆಯೆ? ನಿಮ್ಮ ಮನಸ್ಸನ್ನು ನೀವೇ ಪರೀಕ್ಷಿಸಿಕೊಂಡು ಬರೆಯಿರಿ. ದೇವರು ನಿಮಗೆ ವರ್ಣಾಶ್ರಮಧರ್ಮದ ಅನುಷ್ಠಾನದ ವಿಷಯದಲ್ಲಿ ಶ್ರದ್ಧೆಯನ್ನು ಅನುಗ್ರಹಿಸಲಿ!

## 300. ಸಾಧನಗಳ ಸ್ಥಾನ

### (ಅಕ್ಟೋಬರ್ 1971)

*ನಿಮ್ಮ ಪತ್ರವು ತಲುಪಿದೆ. ಅಧ್ಯಾತ್ಮಕ್ಷೇತ್ರದಲ್ಲಿ ಸಾಧನಗಳನ್ನು ಶಾಸ್ತ್ರದಲ್ಲಿ ಹೇಳಿರುವದೇಕೆಂಬ ವಿಷಯಕ್ಕೆ ನಿಮಗೆ ಒಂದು ವಿಪರೀತ ಭಾವನೆಯು ಎದ್ದುಕೊಂಡಿದೆ ಎಂದು ನನಗೆ ತೋರುತ್ತಿದೆ. ಎಷ್ಟೋ ಜನ ಮಹಾತ್ಮರು ಯಾವ ಶಾಸ್ತ್ರದ ಅಭ್ಯಾಸವೂ ಇಲ್ಲದೆಯೇ ಸಾಧನಬಲದಿಂದಲೇ ಹೆಚ್ಚಿನ ಮಟ್ಟಕ್ಕೆ ಏರಿರುವದು ಇತಿಹಾಸದಲ್ಲಿ ಕಂಡುಬರುವದರಿಂದ ಶಬ್ದಗಳ ಆಡಂಬರವೂ ಶಾಸ್ತ್ರವ್ಯಾಖ್ಯಾನ ಕೌಶಲವೂ ಬುದ್ಧಿಯು ಚುರುಕಾಗುವದಕ್ಕೆ ಕಾರಣವಾದೀತೇ ಹೊರತು ಶಾಸ್ತ್ರವಿಚಾರವನ್ನು ಮಾಡಿದರೇ ಜ್ಞಾನವಾಗುತ್ತದೆ–ಎಂಬ ನಿಯಮವು ಸರಿಯಲ್ಲವೆಂದು ಕಾಣುತ್ತಿದೆ ಎಂದು ಬರೆದಿರುತ್ತೀರಿ.*

ಸಂಪ್ರದಾಯ ರೀತಿಯಿಂದ ತತ್ತ್ವವಿಚಾರವನ್ನು ಮಾಡಿ ಪರಮಾರ್ಥತತ್ತ್ವವನ್ನು ಮನಗಾಣುವದೇ ಇಲ್ಲಿ ಹೆಗ್ಗುರಿ ಎಂಬ ಮಾತಿಗೆ ಎರಡಿಲ್ಲ. ಶಾಸ್ತ್ರವಿಚಾರವೆಂದರೆ ಆಯಾ ದರ್ಶನದ ಪಾರಿಭಾಷಿಕಶಬ್ದಗಳು, ಆಯಾ ದರ್ಶನದ ಸಿದ್ಧಾಂತಪ್ರಕ್ರಿಯೆಗಳ ವಿವರವನ್ನು

ಮೂಲಗ್ರಂಥಗಳ ಅವಲೋಕನದಿಂದ ಅರಿತುಕೊಳ್ಳುವದು–ಎಂದು ನಿಮ್ಮ ಅಭಿಪ್ರಾಯವಾದರೆ ಅಂಥ ಶಾಸ್ತ್ರಪರಿಚಯವು ಮುಮುಕ್ಷುಗಳಿಗೆಲ್ಲ ಬೇಕೆಂಬ ನಿಯಮವೇನೂ ಇಲ್ಲ–ಎಂಬುದು ನಿಶ್ಚಯ. ಆದರೆ ಅಂತಃಕರಣವನ್ನು ಹೊರಗಿನ ವಿಷಯಗಳಿಂದ ಹಿಮ್ಮೆಟ್ಟಿಸಿ ಆತ್ಮಸ್ವರೂಪವನ್ನು ಇದ್ದದ್ದು ಇದ್ದಂತೆ ನಿಶ್ಚಯಿಸಿಕೊಳ್ಳುವದಕ್ಕೆ ಅವಶ್ಯವಾದಷ್ಟು ವಿಚಾರವು ಸಾಧಕರಿಗೆ ಬೇಕೇಬೇಕಾಗುವದು. ಅಂತಃಕರಣವು ವಿಷಯವಾಸನೆಯಿಲ್ಲದೆಯೂ ಹರಿದಾಟವಿಲ್ಲದೆಯೂ ಜ್ಞಾನಕ್ಕೆ ಬೇಕಾದ ಯೋಗ್ಯತೆಯನ್ನು ಪಡೆದುಕೊಳ್ಳುವದಕ್ಕೇ ಸಾಧನವನ್ನು ಮಾಡಬೇಕಾಗುವದು–ಎಂಬುದನ್ನು ಮಾತ್ರ ಅಲ್ಲಗಳೆಯುವದಕ್ಕಿಲ್ಲ.

ಮಂತ್ರಜಪ, ಯೋಗಸಾಧನ, ಲಯಚಿಂತನೆ–ಮುಂತಾದ ಸಾಧನಗಳ ಬೆಲೆಯನ್ನೇನೂ ಇಲ್ಲಿ ನಾನು ಅಲ್ಲಗಳೆಯುತ್ತಿಲ್ಲ. ಅವುಗಳಿಂದಾಗುವ ಚಿತ್ತಶುದ್ಧಿಯಿಲ್ಲದೆ ಯಾರೂ ಅಧ್ಯಾತ್ಮಮಾರ್ಗದಲ್ಲಿ ಮುಂದುವರಿಯಲಾರರು. ಆದರೆ ಮಹಾವಾಕ್ಯದ ಜಪ, ಶರೀರವನ್ನು ದಂಡಿಸುವ ತಪಸ್ಸು–ಮುಂತಾದವುಗಳು ನೇರಾಗಿ ಪರಮಪುರುಷಾರ್ಥಕ್ಕೆ ಸಾಧನವಾಗಬಹುದೆಂಬ ನಿಮ್ಮ ನಂಬಿಕೆಯು ಮಾತ್ರ ನಿರಾಧಾರವಾದದ್ದೆಂದು ತಿಳಿಯಬೇಕು. ನೀವು ಮಾಡುವ ಸಾಧನಗಳ ತತ್ತ್ವವನ್ನು ವಿಚಾರಪೂರ್ವಕವಾಗಿ ಅರಿತು ಅಭ್ಯಾಸಮಾಡಿದಾಗಲೇ ಅವುಗಳಿಂದ ಧ್ಯೇಯವು ಕೈಗೂಡೀತೆಂಬುದನ್ನು ಇನ್ನೊಮ್ಮೆ ನಿಮ್ಮ ಲಕ್ಷ್ಯದಲ್ಲಿಟ್ಟುಕೊಳ್ಳಬೇಕೆಂಬುದು ನನ್ನ ಅಭಿಪ್ರಾಯ. ಈ ವಿಷಯದಲ್ಲಿ ಇನ್ನೇನಾದರೂ ಸಂಶಯವಿದ್ದರೆ ಬರೆಯಿರಿ.

## 301. ತಪಸ್ಸಿನಲ್ಲಿ ಮಿತಿ

### (ನವೆಂಬರ್ 1971)

*ನಿಮ್ಮ ಪತ್ರವನ್ನು ಓದಿ ನನಗೆ ನಗೆಯೇ ಬಂದಿತು; ಆಶ್ಚರ್ಯವೂ ಖೇದವೂ ಆದವು. ತಪಸ್ಸೆಂದರೆ ದೇಹವನ್ನು ತಾಪಕ್ಕೆ ಈಡುಮಾಡುವದು–ಎಂಬ ಅಸತ್ಕಲ್ಪನೆಯು ನಿಮಗೆ ಹೇಗೆ ಉಂಟಾಯಿತೋ ಕಾಣೆ. "ಆಹಾರವು ಶುದ್ಧವಾದರೆ ಸತ್ತ್ವಶುದ್ಧಿ, ಸತ್ತ್ವಶುದ್ಧಿಯುಂಟಾದರೆ ವಿಚ್ಛೇದವಿಲ್ಲದ ಆತ್ಮಸ್ಮೃತಿಯು ನೆಲೆನಿಲ್ಲುವದು, ಸ್ಮೃತಿಯು ಲಭಿಸಿದಾಗ ಅವಿದ್ಯಾಕೃತವಾದ ಗ್ರಂಥಿಗಳೆಲ್ಲ ಬಿಚ್ಚಿಕೊಳ್ಳುವವು"(ಛಾಂ. 7–26–2)* ಎಂದು ಶ್ರುತಿಯಲ್ಲಿ ಹೇಳಿರುವದು ನಿಜ. *ಅಲ್ಲಿ ಆಹಾರಶುದ್ಧಿಯೆಂದರೆ ರಾಗದ್ವೇಷಮೋಹಗಳಿಲ್ಲದೆ ಇಂದ್ರಿಯಾರ್ಥಗಳನ್ನು ಸೇವಿಸುವದು–ಎಂದರ್ಥವೇ ಹೊರತು ಕಟ್ಟುನಿಟ್ಟಾಗಿ ಆಹಾರವನ್ನು ಬಿಟ್ಟು ದೇಹವನ್ನು ಸೊರಗಿಸುವದು–ಎಂದೇನೂ ಅರ್ಥವಲ್ಲ.*

**ಅಶಾಸ್ತ್ರವಿಹಿತಂ ಘೋರಂ ತಪ್ಯನ್ತೇ ಯೇ ತಪೋ ಜನಾಃ ।**
**ದಮ್ಭಾಹಙ್ಕಾರಸಂಯುಕ್ತಾಃ ಕಾಮರಾಗಬಲಾನ್ವಿತಾಃ॥**

ಕರ್ಶಯನ್ತಃ ಶರೀರಸ್ಥಂ ಭೂತಗ್ರಾಮಮಚೇತಸಃ ।
ಮಾಂ ಚೈವಾನ್ತಃಶರೀರಸ್ಥಃ ತಾನ್ ವಿದ್ಧ್ಯಾಸುರನಿಶ್ಚಯಾನ್॥ ಗೀ. 17–5,6

''ಶಾಸ್ತ್ರವಿಹಿತವಾಗಿರುವದಕ್ಕೆ ವಿರುದ್ಧವಾಗಿ ಘೋರವಾದ ತಪಸ್ಸನ್ನು ಮಾಡುತ್ತಾ ದಂಭ, ಅಹಂಕಾರ–ಇವುಗಳಿಂದ 'ನಾನು ತಪಸ್ವಿ' ಎಂದು ತೋರಿಕೊಳ್ಳುತ್ತಾ ಕಾಮರಾಗಗಳಿಂದಾದ ಬಲದಿಂದ ಕರಣಗಳನ್ನೆಲ್ಲ ಕೃಶಗೊಳಿಸುತ್ತಾ, ಅದರೊಳಗೇ ಸಾಕ್ಷಿಯಾಗಿರುವ ನನ್ನನ್ನು ಲೆಕ್ಕಿಸದೆ ಇರುವ ಬುದ್ಧಿಹೀನರುಗಳನ್ನು ಆಸುರ ಪ್ರಕೃತಿಯವರೆಂದು ತಿಳಿ'' ಎಂದು ಭಗವಂತನು ಕಂಠೋಕ್ತವಾಗಿ ಹೇಳಿರುತ್ತಾನೆ. ಧ್ಯಾನಕ್ಕೆ ಇಂಥ ಉಪವಾಸಾದಿಗಳು ಬೇಕೆಂಬ ನಿಮ್ಮ ಗ್ರಹಿಕೆಯು ಭ್ರಾಂತಿಜನ್ಯವಾಗಿರುತ್ತದೆ.

ನಾತ್ಯಶ್ನತಸ್ತು ಯೋಗೋಽಸ್ತಿ ನ ಚೈಕಾನ್ತಮನಶ್ನತಃ ।
ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ ॥ ಗೀ. 6–13

''ಅತಿಯಾಗಿ ಆಹಾರವನ್ನು ಸೇವಿಸುತ್ತಿರುವವನಿಗಾಗಲಿ, ಒಂದೇ ಸಮನೆ, ಆಹಾರವೇ ಇಲ್ಲದೆ ಇರುವವನಿಗಾಗಲಿ ಯೋಗವು ದಕ್ಕಲಾರದು. ಯಾವಾಗಲೂ ನಿದ್ರೆ ಮಾಡುತ್ತಿರುವವನಿಗಾಗಲಿ, ನಿದ್ರೆಯನ್ನೇ ಬಿಟ್ಟು ಜಾಗರಣದಲ್ಲಿರುವವನಿಗಾಗಲಿ ಯೋಗವು ದಕ್ಕದು'' ಎಂದು ಆ ಭಗವಂತನೇ ಹೇಳಿ ''ಆಹಾರವಿಹಾರಗಳಲ್ಲಿಯೂ ಕರ್ಮಗಳಲ್ಲಿಯೂ ನಿದ್ರಾಜಾಗರಣಗಳಲ್ಲಿಯೂ ಮಿತವಾಗಿರುವ ಆಚಾರವನ್ನಿಟ್ಟುಕೊಂಡಿರುವವನಿಗೆ ನಿರಾಯಾಸವಾಗಿ ಯೋಗಸಾಧನದ ಸಿದ್ಧಿಯಾಗುವದು'' ಎಂದೂ ಹೇಳಿರುತ್ತಾನೆ.

ಮಾನವನ ಬುದ್ಧಿಯು ಸ್ವಭಾವದಿಂದಲೇ ವಿಷಯಪ್ರವಣವಾಗಿ–ಹೊರಗಿನ ವಿಷಯಗಳ ಕಡೆಗೇ ಜೋಲುವ ಸ್ವಭಾವವುಳ್ಳದ್ದಾಗಿ–ಇರುವದೆಂಬುದು ನಿಶ್ಚಯ. ಆದರೆ ಬೆಟ್ಟದಮೇಲೆ ಬಿದ್ದ ಮಳೆಯನೀರು ಬೆಟ್ಟದ ಯಾವ ಕಡೆಯಲ್ಲಿ ಬೀಳುವದೋ ಆ ಕಡೆಗೇ ಹರಿದುಬರುವಂತೆ, ಆತ್ಮನ ಕಡೆಗೆ ಬುದ್ಧಿಯನ್ನು ತಿರುಗಿಸಿದಾಗ ಅದು ಆ ಕಡೆಗೇ ಹರಿಯುವದೆಂಬುದನ್ನು ಮರೆಯದೆ ಇರಬೇಕು. ಶರೀರೇಂದ್ರಿಯಗಳನ್ನು ಮಿತವಾದ ಆಹಾರವಿಹಾರಗಳಿಂದ ಸ್ವಾಧೀನಕ್ಕೆ ತಂದುಕೊಂಡು ಬಲ್ಲವರ ಉಪದೇಶದಿಂದ ಬುದ್ಧಿಯನ್ನು ಆತ್ಮನ ಕಡೆಗೆ ಹಿಂಜಗ್ಗಿಸಿದರೆ, ಆಬಳಿಕ ನೀವು ಒಲ್ಲೆನೆಂದರೂ ಅದು ಅತ್ತ ಕಡೆಗೇ ಹರಿಯುವದಕ್ಕೆ ಆರಂಭಿಸುವದು.

ಯೋಗವೆಂದರೆ ಯಮನಿಯಮಾಸನಪ್ರಾಣಾಯಾಮಗಳೆಂಬ ಸಾಧನಗಳೇ ಅಲ್ಲದೆ ಪ್ರತ್ಯಾಹಾರ; ಧಾರಣ, ಧ್ಯಾನ, ಸಮಾಧಿಗಳೆಂಬ ಅಂತರಂಗ ಸಾಧನಗಳನ್ನು

ಅಳವಡಿಸಿಕೊಳ್ಳುವದೂ ಆಗಿದೆ. ಪರಮಾತ್ಮನು ನಮ್ಮೆಲ್ಲರ ಹೃದಯದಲ್ಲಿಯೂ ವಾಸಮಾಡಿಕೊಂಡಿರುತ್ತಾನೆ. ನಿರಂತರ ಸ್ಮರಣೆಯಿಂದ ತನ್ನನ್ನೇ ಭಜಿಸುತ್ತಿರುವವರ ಬುದ್ಧಿಯನ್ನು ವಿಷಯಸಂಬಂಧದಿಂದ ತಪ್ಪಿಸಿ ತನ್ನಕಡೆಗೇ ಸೆಳೆದುಕೊಳ್ಳುವದಕ್ಕೆ ಯಾವಾಗಲೂ ಅವನು ಸಿದ್ಧನಾಗಿರುತ್ತಾನೆ.

ಹಠಯೋಗದಲ್ಲಿ ಹೇಳಿರುವ ಆಸನಗಳ ಅಭ್ಯಾಸಮಾತ್ರದಿಂದಲೇ ಮನಸ್ಸನ್ನು ಪರಮಾತ್ಮನ ಕಡೆಗೆ ತಿರುಗಿಸಿಕೊಳ್ಳಬಹುದೆಂಬ ಭ್ರಮೆಯನ್ನು ಬಿಡಿರಿ, ಪರಮಾತ್ಮನು ಅವ್ಯಕ್ತನು—ಎಂದರೆ ಅತೀಂದ್ರಿಯನು—ಎಂದು ಶ್ರುತಿಸ್ಮೃತಿಗಳಲ್ಲಿ ಹೇಳಿರುತ್ತದೆ. ಆತನನ್ನು ಅಧ್ಯಾತ್ಮಯೋಗಾದಿಸಾಧನಗಳಿಂದಲೇ ಕಾಣಬೇಕೆಂದೂ ಹೇಳಿರುತ್ತದೆ; ಆದರೂ ಆತನು ಉಪಾಸಕರ ಅನುಗ್ರಹಕ್ಕಾಗಿ ಸಗುಣನೂ ಸಾಕಾರನೂ ಆಗಿ ತನ್ನ ಸಾಕ್ಷಾತ್ಕಾರವನ್ನು ಕೊಡುತ್ತಾನೆಂದು ನಿರ್ವಿಶೇಷಬ್ರಹ್ಮಾತ್ಮವಾದಿಗಳಾದ ಶಂಕರಾಚಾರ್ಯರೇ ಮೊದಲಾದವರೂ ಹೇಳಿರುತ್ತಾರೆ. ಆದ್ದರಿಂದ ನಿಮ್ಮ ಮನಸ್ಸು ಸಗುಣತತ್ತ್ವದಲ್ಲಿ ಹೆಚ್ಚಿನ ಶಾಂತಿಯನ್ನು ಹೊಂದೀತೊ, ನಿರ್ಗುಣತತ್ತ್ವದಲ್ಲಿ ಹೆಚ್ಚಿನ ಶಾಂತಿಯನ್ನು ಹೊಂದೀತೊ?— ಎಂಬಿದನ್ನು ನಿಮ್ಮ ಮನಸ್ಸಿನ ಒಲವಿನಿಂದಲೂ ಮಾರ್ಗನಿರ್ದೇಶಕರಾದ ಗುರುಗಳ ಉಪದೇಶದಿಂದಲೂ ನಿಶ್ಚಯಿಸಿಕೊಂಡು ಯುಕ್ತವಾದ ಯಮನಿಯಮಾದಿಗಳನ್ನು ಸಾಧಿಸಿ ಕೃತಾರ್ಥರಾಗಿರಿ. ಕಾಷ್ಠತಪಸ್ಸನ್ನು ಸರ್ವಪ್ರಕಾರದಿಂದಲೂ ಬಿಟ್ಟುಬಿಡಿರಿ—ಎಂಬಿದೇ ನನ್ನ ಕಟ್ಟ ಕಡೆಯ ಹಿತವಚನ. ಏನ್ಮೇ ಆಗಲಿ, ಅಧ್ಯಾತ್ಮಸಾಧನಮಾರ್ಗವು ಕೇವಲ ಪತ್ರ ವ್ಯವಹಾರದಿಂದಲೇ ಗ್ರಹಿಸತಕ್ಕದ್ದಲ್ಲವಷ್ಟೆ?

## 302. ವೇಷ, ಭಾಷೆ

### (ಡಿಸೆಂಬರ್ 1971)

*ನಿಮ್ಮ ಪತ್ರವನ್ನು ಓದಿ ಅಭಿಪ್ರಾಯಮಾಡಿಕೊಂಡೆನು. ನಮ್ಮ ದೇಶದಲ್ಲಿರುವ ಜನರು ಬೇರೆಬೇರೆಯ ಭಾಷೆಗಳನ್ನು ಆಡುತ್ತಿರುವದು, ಬೇರೆಬೇರೆಯ ದೇಶಾಚಾರಗಳನ್ನೂ ಬೇರೆ ಬೇರೆಯ ಬಗೆಯ ಆಹಾರವಿಹಾರಗಳನ್ನೂ ಅನುಸರಿಸುತ್ತಿರುವದು. ಇವುಗಳಿಂದ —ಈ ಜನರೆಲ್ಲ ಭಾರತದ ಒಕ್ಕೂಟಕ್ಕೆ ಸೇರಿರುವ ಒಂದು ಜನಾಂಗವೇ' ಎಂದು ರಾಷ್ಟ್ರಶಾಸನದ ದೃಷ್ಟಿಯಿಂದ ಮಾತ್ರವೇ ಕರೆಯಬಹುದೇ ಹೊರತು ಮತ್ತೆ ಯಾವ ದೃಷ್ಟಿಯಿಂದಲೂ ಇವರಿಗೆ ಏಕತ್ವವನ್ನು ಕಲ್ಪಿಸುವದಕ್ಕೆ ಬರುವಂತಿಲ್ಲ. ಮತಗಳ ದೃಷ್ಟಿಯಿಂದ ನೋಡಿದರೆ ಹಿಂದು, ಮುಸಲ್ಮಾನ್ ಎಂಬ ಎರಡು ಮತಗಳ ಹೆಸರನ್ನು ಹೇಳಿಕೊಳ್ಳುವ ಎರಡು ಪಂಗಡಗಳಿರುವದು ನಿಜ; ಆದರೆ ಈ ಎರಡು ತಂಡದವರೂ ಒಬ್ಬರೊಡನೊಬ್ಬರು ಕಲಹವನ್ನು ಎಬ್ಬಿಸುವದರಲ್ಲಿ ಒಂದಾಗಿರುತ್ತಾರೆಂದು ಮಾತ್ರ*

*ಹೇಳಬಹುದು. ಈಗಿನ ನಮ್ಮ ದೇಶದ ಸ್ಥಿತಿಯಲ್ಲಿ ಹಳೆಯ ಕಂದಾಚಾರದ ಮತಗ್ರಂಥಗಳನ್ನಾಗಲಿ ಮತಪ್ರವರ್ತಕರನ್ನಾಗಲಿ ನಮ್ಮ ಸಂಸ್ಕೃತಿಯ ನಾಯಕರನ್ನಾಗಿ ಹಿಡಿಯುವದು ಮೂರ್ಖತನವೆಂದೇ ಕಾಣುತ್ತಿದೆ. ಬುದ್ಧಿಜೀವಿಗಳಾದವರಿಗೆ ಇಂಗ್ಲಿಷುಭಾಷೆಯ ಅಭ್ಯಾಸದಿಂದ ಆಗಿರುವ ಒಗ್ಗಟ್ಟನ್ನು ಉಳಿಸಿಕೊಂಡು ಒಂದೇ ರಾಷ್ಟ್ರದವರೆಂಬ ಅಭಿಮಾನವನ್ನು ಹಿಗ್ಗಿಸಿಕೊಂಡರೆ ಸಾಕಲ್ಲವೆ? ವೇಷಭಾಷೆಗಳ ಗಡಿಬಿಡಿಗಿಂತ ಹೃದಯದ ಐಕ್ಯವೇ ಮುಖ್ಯವೆಂದು ನನಗೆ ತೋರುತ್ತಿದೆ. ಈ ನನ್ನ ಅಭಿಪ್ರಾಯದಲ್ಲಿ ತಮಗೆ ಕಾಣುವ ನ್ಯೂನಾರಿಕ್ತಗಳನ್ನು ತಿಳಿಯಿಸಿಕೊಡಬೇಕು—ಎಂದು ಬರೆದಿರುತ್ತೀರಿ.*

ಒಂದು ದೃಷ್ಟಿಯಿಂದ ನೋಡಿದರೆ ನಿಮ್ಮ ಅಭಿಪ್ರಾಯದಲ್ಲಿ ತಥ್ಯಾಂಶವೇ ಇರುವಂತೆ ಕಾಣುತ್ತಿದೆ. ಆದರೆ ಈಗಿನವರು ಇಂಗ್ಲಿಷು ವಿದ್ಯಾಭ್ಯಾಸದಿಂದ ಪಡೆದಿರುವ ಐಕ್ಯವೆಂಬುದು ಜೀವನಕ್ಕೆ ಯಾವದಾದರೂ ಉದ್ಯೋಗವನ್ನು ಒದಗಿಸುವ ಮಟ್ಟಿಗೆ ಸಾರ್ಥಕವೆಂಬ ನಂಬಿಕೆಯು ಈವರೆಗೂ ಇದ್ದದ್ದು ಅದೂ ಇತ್ತೀಚೆಗೆ ಸಡಿಲವಾಗುತ್ತಾ ಬಂದಿದೆ. ದೇಶಭಾಷೆಗಳ ಅಭಿಮಾನದಿಂದ ದೇಶವನ್ನು ಹಲವು ಪ್ರಾಂತಗಳಾಗಿ ಹಂಚಿಕೊಂಡು ಆಯಾ ದೇಶಭಾಷೆಯನ್ನೇ ಆಯಾ ಪ್ರಾಂತದ ಸರ್ಕಾರದ ಭಾಷೆಯಾಗಿ ಅಂಗೀಕರಿಸಬೇಕೆಂಬ ಕೋಲಾಹಲವನ್ನು ಎಬ್ಬಿಸಿಕೊಂಡಿರುವದು ನಿಜ. ಇದು ದೇಶವನ್ನು ಹಿಂದೆ ಅಂಗವಂಗಕಳಿಂಗಕಾಶ್ಮೀರ—ಎಂದು ಮುಂತಾಗಿ ಐವತ್ತಾರು ದೇಶಗಳಾಗಿ ವಿಂಗಡಿಸಿದ್ದ ಪರಿಸ್ಥಿತಿಗೆ ತರುವದರಲ್ಲಿ ಯಶಸ್ವಿಯಾಗುವದೋ, ಪ್ರಾಂತಭಾಷೆಯ ಅಭಿಮಾನವು 'ಅನ್ತವನ್ತ ಇಮೇಪ್ರಾನ್ತಾಃ' ಎಂಬ ತೀರ್ಪಿಗೆ ತಂದಿಡುವದೋ ಈಗಲೇ ಹೇಳುವದಕ್ಕಿಲ್ಲವಾಗಿದೆ.

ನಮ್ಮ ದೇಶದ ವಿಚಾರೈಕ್ಯದ ವಿಷಯಕ್ಕೂ ಹಲವು ಸಂಶಯಗಳು ತಲೆಯೆತ್ತಿ ಕೊಳ್ಳುತ್ತಿವೆ. ನಮ್ಮ ಭಾರತದೇಶವು ಭೂಮಂಡಲದ ಇತರ ದೇಶಗಳ ಸಂಪರ್ಕವನ್ನು ಹೊಂದಿದಂದಿನಿಂದ ತನ್ನದೇ ಆದ ಸಂಸ್ಕೃತಿಯನ್ನೇ ಆಗಲಿ, ವಿಚಾರಧಾರೆಯ ಐಕ್ಯವನ್ನಾಗಲಿ ಇಟ್ಟುಕೊಳ್ಳುವದಕ್ಕೆ ಬದಲು ವಿಚಾರ ಸ್ವಾತಂತ್ರ್ಯವೆಂಬ ಹೆಸರಿನಿಂದ ಎಲ್ಲರೂ ಪಾಶ್ಚಾತ್ಯರ ಅನುಕರಣದಿಂದ ತಮ್ಮತಮ್ಮ ಮತದ ಉಪದೇಶಗಳ ಬಗೆಗಾಗಲಿ, ಸಂಸ್ಕೃತಿಯ ಬಗೆಗಾಗಲಿ ಐಕ್ಯವನ್ನು ಪಡೆಯಡೆ ಇರುತ್ತಾರೆ. ಆದ್ದರಿಂದ ಪಾಶ್ಚಾತ್ಯರ ಭಾಷಾವೇಷಗಳ ಅನುಕರಣೆಯು ನಮ್ಮ ಸಂಸ್ಕೃತಿಯ ನೆನಪನ್ನು ತಪ್ಪಿಸುವದಕ್ಕೆ ಕಾರಣವಾಗಬಹುದೆಂಬ ಅಪಾಯವಿರುವದರಿಂದ ನಾವುಗಳೆಲ್ಲರೂ ನಮ್ಮನಮ್ಮ ವೇಷಗಳನ್ನು ಆಚರಣೆಯಲ್ಲಿಟ್ಟುಕೊಳ್ಳುವದರಲ್ಲಿಯೇ ಕ್ಷೇಮವಿದೆ ಎಂದು ನನ್ನ ಅಭಿಪ್ರಾಯ.

ಭಾಷೆಯ ವಿಚಾರವಾಗಿಯೂ ಇಲ್ಲಿ ಹೇಳತಕ್ಕದ್ದು ಸ್ವಲ್ಪ ಇರುತ್ತದೆ. ದೇಶಾಭಿಮಾನವೆಂಬ ಹೆಸರಿನಂದ ಈಚೆಗೆ ನಾವು ಪ್ರಾಂತಾಭಿಮಾನದ ಮಟ್ಟಕ್ಕೆ ಇಳಿಯುತ್ತಾ ಬಂದಿದೇವೆ. ಕನ್ನಡ, ತಮಿಳು, ತೆಲುಗು, ಮರಾಠಿ–ಈ ಭಾಷೆಗಳೆಲ್ಲವೂ ಭಾರತದೇಶದ ಪ್ರಾಂತಭಾಷೆಗಳೇ ಆಗಿದ್ದರೂ ಅದೇಕೊ, ನಮಗೆ ಒಬ್ಬರೊಬ್ಬರ ಭಾಷೆಯ ಮತ್ತು ಪ್ರಾಂತಗಳ ವಿಷಯಕ್ಕೆ ದಾಯಾದಮತ್ಸರವು ಉಕ್ಕುತ್ತಬರುತ್ತಿದೆ. ಈ ದುರಭಿನಿವೇಶವು ಹೆಚ್ಚುತ್ತಾಹೋದರೆ ಇನ್ನೂ ಹಲವು ಪ್ರಾಂತಭಾಷೆಗಳ ಅಭಿಮಾನಿಗಳು ತಮಗೂ ತಮ್ಮತಮ್ಮ ಭಾಷೆಯ ಪ್ರಾಂತವು ಬೇರೆಯಾಗಿಯೇ ಇರಬೇಕೆಂದು ದೇಶವನ್ನು ಇನ್ನೂ ತುಂಡುಮಾಡುವ ಪ್ರಯತ್ನದಲ್ಲಿ ಕೈಹಾಕುವದಕ್ಕೆ ಅವಕಾಶವಿದೆಯಲ್ಲವೆ? ಇನ್ನೊಂದು ವಿಷಯ. ಪ್ರಾಂತಭಾಷೆಗಳಿಗೆ ಸಂಸ್ಕೃತವು ಜನನಿಯೋ, ಸಾಕುತಾಯಿಯೋ ಆಗಿ ಭಾಷಾಭಂಡಾಗಾರವನ್ನು ಬೆಳೆಯಿಸುವದಕ್ಕೆ ಸಹಾಯಕವೆಂಬುದನ್ನು ತಿಳಿದೂ ತಿಳಿದೂ ನಾವುಗಳು ಆ ಅಮರವಾಣಿಯನ್ನು ತುಚ್ಛವಾಗಿ ಕಾಣುತ್ತಾ 'ಅದು ಮೃತಭಾಷೆ' ಎಂದು ಕಡೆಗಣಿಸುತ್ತಿರುವದೊಂದು ದುರ್ದೈವ. ಯಾವದೋ ಕಾರಣದಿಂದ ಹಿಂದೀಭಾಷೆಯು ರಾಷ್ಟ್ರಭಾಷೆಯಾಗಿರಬೇಕೆಂಬ ಚಳುವಳಿಯು ಪ್ರಬಲವಾದಂದಿನಿಂದಲೂ ಸಂಸ್ಕೃತಭಾಷೆ ಇನ್ನಷ್ಟು ಮೂಲೆ ಗುಂಪಾಗುತ್ತಿದೆ! ಹಿಂದೀಭಾಷೆಯ ಜನರು ಸಂಸ್ಕೃತಗ್ರಂಥಗಳನ್ನು ಅನುವಾದಮಾಡಿಕೊಳ್ಳುವದು, ದ್ವಿತೀಯಭಾಷೆಯಾಗಿ ಕಡ್ಡಾಯವಾಗಿ ಅದನ್ನು ಕಲಿಯುತ್ತಿರುವದು–ಮುಂತಾದದ್ದನ್ನು ಕಂಡೂ ನಾವೂ ಈ ವಿಷಯಕ್ಕೆ ಕಣ್ಣುಮುಚ್ಚಿಕೊಂಡು ಕುಳಿತಿರುವದು ಎಂಥ ದುರ್ದೈವ!

ವೇಷಭಾಷೆಗಳ ವಿಷಯಕ್ಕೆ ಇಷ್ಟು ಸಾಕು. ಸಂಸ್ಕೃತಭಾಷೆಯ ವಿಷಯಕ್ಕೆ ಮತ್ತೊಮ್ಮೆ ನಿಮಗೆ ಬರೆಯಬೇಕೆಂದಿರುವೆನು. ಈಗ ನಾನು ಬರೆದಿರುವ ಉತ್ತರವು ನಿಮ್ಮ ಮನಸ್ಸಿಗೆ ಎಷ್ಟು ಮಟ್ಟಿಗೆ ಒಗ್ಗುತ್ತದೆಯೋ ವಿಚಾರಮಾಡಿ ನೋಡಿಕೊಳ್ಳಿ.

## 303. ಯಜ್ಞದಾನತಪಸ್ಸುಗಳು

### (ಜನವರಿ 1972)

*ನಿಮ್ಮ ಪತ್ರವನ್ನು ಓದಿ ನೋಡಿಕೊಂಡೆನು. ಯಜ್ಞದಾನತಪಸ್ಸುಗಳನ್ನು ಮಾಡಲೇಬೇಕು, ಬಿಡಬಾರದು–ಎಂದು ಗೀತೆಯಲ್ಲಿ ಭಗವಂತನು ಉಪದೇಶಿಸಿದ್ದರೂ ಈಗ ಅವು ಎಲ್ಲಿಯೂ ಕಾಣುತ್ತಿಲ್ಲವಲ್ಲ! ಅವುಗಳೇ ಇಲ್ಲವಾದ ಮೇಲೆ ಚಿತ್ತಶುದ್ಧಿಯಾಗಲಿ ವೇದಾಂತಶಾಸ್ತ್ರದ ವಿಚಾರಕ್ಕೆ ಅರ್ಹತೆಯಾಗಲಿ ಹೇಗೆ ಬರಬೇಕು?–ಎಂದು ಕೇಳಿರುತ್ತೀರಿ. ನಿಜ. ಕಾಲಮಹಿಮೆಯಿಂದ*

*ವರ್ಣಾಶ್ರಮಧರ್ಮಗಳು ಈಗ ಬಲುಮಟ್ಟಿಗೆ ಲುಪ್ತವಾಗಿಬಿಟ್ಟಿವೆ. ಅಗ್ನಿಹೋತ್ರವನ್ನು ಬದುಕಿರುವವರೆಗೂ ಕಾಪಾಡಿಕೊಂಡು ಬರಬೇಕೆಂಬುದೇ ಶಾಸ್ತ್ರದ ವಿಧಿಯಾದರೂ ಎಲ್ಲಿಯೋ ಒಬ್ಬೊಬ್ಬರು ಶ್ರೌತಾಗ್ನಿಯನ್ನಿಟ್ಟುಕೊಂಡಿದೇವೆಂದು ಹೇಳಿಕೊಳ್ಳುತ್ತಿರುತ್ತಾರೆ. ವೇದಾಧ್ಯಯನವೇ ಕಲಿಮಹಿಮೆಯಿಂದ ಅಸ್ತವಾಗುತ್ತಿದೆ; ಇನ್ನು ಅಗ್ನಿಹೋತ್ರಾದಿಗಳು ಹೇಗೆ ಉಳಿಯಬೇಕು? ಗೃಹಸ್ಥರು ವೃದ್ಧರಾದಬಳಿಕ ಮಕ್ಕಳಿಗೆ ಕುಟುಂಬಧರ್ಮವನ್ನು ವಹಿಸಿಕೊಟ್ಟು ವಾನಪ್ರಸ್ಥರಾಗುತ್ತಿದ್ದದ್ದು ಪುರಾಣಗಳಿಂದ ತಿಳಿಯತಕ್ಕ ಕಥೆಯಾಗಿ ಉಳಿದುಕೊಂಡಿದೆ; ಕಾಯಕ್ಲೇಶಪ್ರಧಾನವಾದ ತಪಸ್ಸು ಎಲ್ಲಿ ಕಾಣಬಂದೀತು? ಮಹಾಭಾರತದಲ್ಲಿ 'ದಾನಮೇಕಂ ಕಲೌ ಯುಗೇ' (ಕಲಿಯುಗದಲ್ಲಿ ದಾನವೊಂದೇ ಜನರಿಗೆ ಲಭ್ಯವಾಗಿರುವ ಧರ್ಮ) ಎಂದು ಮತ್ತೆ ಮತ್ತೆ ಹೇಳಿರುತ್ತದೆ. ಉದಾರಭಾವದಿಂದ ಶಕ್ತ್ಯನುಸಾರವಾಗಿ ದೇಶಕಾಲಪಾತ್ರವನ್ನರಿತು ದಾನಮಾಡುವವರೂ ಈಗ ವಿರಳರಾಗಿರುತ್ತಾರೆ!*

**'ವೇದೇಷು ಯಜ್ಞೇಷು ತಪಃಸು ಚೈವ । ದಾನೇಷು ಯತ್ಪುಣ್ಯ ಫಲಂ ಪ್ರದಿಷ್ಟಮ್। ಅತ್ಯೇತಿ ತತ್ಸರ್ವಮಿದಂ ವಿದಿತ್ವಾ' (8–28), 'ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ । ಶಕ್ಯ ಏವಂ–ವಿಧೋ ದ್ರಷ್ಟುಮ್' (11–53), 'ಭೋಕ್ತಾರಂ ಯಜ್ಞತಪಸಾಮ್' (5–29) 'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ' (9–24)**–ಎಂಬಿವೇ ಮುಂತಾದ ಸ್ಥಲಗಳಲ್ಲಿ ಯಜ್ಞದಾನತಪಸ್ಸುಗಳನ್ನು ಗೀತೆಯಲ್ಲಿ ಮತ್ತೆಮತ್ತೆ ಹೊಗಳಿದೆಯಾದರೂ ಅವಕ್ಕಿಂತಲೂ ಶ್ರದ್ಧಾಭಕ್ತಿಗಳೂ ಯೋಗವೂ ಹೆಚ್ಚಿನ ಸಾಧನಗಳೆಂದು ಅಲ್ಲಲ್ಲಿ ವರ್ಣಿಸಿರುತ್ತದೆ ಎಂಬುದನ್ನು ಲಕ್ಷಿಸಬೇಕು. **'ನಾಯಂ ಲೋಕೋಽಸ್ತ್ಯಯಜ್ಞಸ್ಯ ಕುತೋಽನ್ಯಃ ಕುರು ಸತ್ತಮ'** (4–31) ಎಂದು ಯಾವದೊಂದು ಯಜ್ಞವೂ ಇಲ್ಲದವನಿಗೆ ಈ ಲೋಕದ ಸೌಖ್ಯವೂ ನಿಜವಾಗಿ ದೊರಕಲಾರದು–ಎಂದು ಹೇಳಿರುವದನ್ನೂ ಲಕ್ಷಿಸಬೇಕು.

ಈ ಕಾರಣದಿಂದ ನಾವು ಮುಖ್ಯ ಯಜ್ಞವು ನಮ್ಮೆಲ್ಲರಿಗೂ ಈಗ ಲಭ್ಯವಿಲ್ಲದಿದ್ದರೂ ಅಲ್ಲಿ ಹೇಳಿರುವ ಗೌಣಯಜ್ಞಗಳಲ್ಲಿ ನಮಗೆ ಅಳವಡುವ ಯಜ್ಞಗಳನ್ನು ಮಾಡುವದಕ್ಕೆ ಪ್ರಯತ್ನಿಸಬೇಕು. ನಮ್ಮನಮ್ಮ ವರ್ಣಾಶ್ರಮಕ್ಕೆ ತಕ್ಕಂತೆ ಶಾಸ್ತ್ರೋಕ್ತವಾಗಿ ಉಳಿದುಕೊಂಡಿರುವಷ್ಟು ಕರ್ಮವನ್ನು ಯಥಾಶಕ್ತಿಯಾಗಿ ಮಾಡಬೇಕು. ಇಂದ್ರಿಯಸಂಯಮರೂಪವಾದ ಯಜ್ಞ, ಶ್ರೋತ್ರಾದಿಗಳಲ್ಲಿ ಅವಿರುದ್ಧವಾದ ವಿಷಯಗಳನ್ನು ಹೋಮಬುದ್ಧಿಯಿಂದ ಮಾಡುವದು (4–26), ಇಂದ್ರಿಯಕರ್ಮಗಳು, ಪ್ರಾಣವ್ಯಾಪಾರ–ಇವುಗಳನ್ನು ಆತ್ಮನಲ್ಲಿ ಹೋಮಬುದ್ಧಿಯಿಂದ ಪ್ರವಿಲಯಮಾಡಿಕೊಳ್ಳುವದು (4–27), ವೇದಾಧ್ಯಯನವನ್ನು ಮಾಡುವ ಸ್ವಾಧ್ಯಾಯಯಜ್ಞ,

ಶಾಸ್ತ್ರಾರ್ಥವನ್ನು ವಿಚಾರಪೂರ್ವಕವಾಗಿ ಅರಿತುಕೊಳ್ಳುವ ಜ್ಞಾನಯಜ್ಞ (4–28), ರೇಚಕ, ಪೂರಕ, ಕುಂಭಕ–ಎಂಬ ಪ್ರಾಣಾಯಾಮಗಳನ್ನು ಅಭ್ಯಾಸ ಮಾಡುವ ಪ್ರಾಣಾಯಾಮಯಜ್ಞ (4–29), ಉಳಿದ ಪ್ರಾಣಗಳನ್ನೇ ಆಯಾ ಪ್ರಾಣದಲ್ಲಿ ಹೋಮ ಮಾಡುವ ಪ್ರಾಣಯಜ್ಞ (4–30)–ಇವುಗಳಲ್ಲಿ ಗುರೂಪದೇಶಕ್ರಮದಿಂದ ಲಭ್ಯವಾದಷ್ಟು ಯಜ್ಞಗಳನ್ನು ಅವಲಂಬಿಸಬೇಕು.

ಭಗವದ್ಗೀತಾಶಾಸ್ತ್ರದಲ್ಲಿ ಯಜ್ಞದಾನತಪಸ್ಸುಗಳೆಲ್ಲಕ್ಕಿಂತಲೂ ಭಗವದ್ಭಕ್ತಿಗೆ ಹೆಚ್ಚಿನ ಸ್ಥಾನವನ್ನು ಕೊಟ್ಟಿರುತ್ತದೆ. 'ಯಜ್ಞತಪಸ್ಸುಗಳೆಲ್ಲ ಸರ್ವಸಾಕ್ಷಿಯಾಗಿರುವ ಭಗವಂತನಿಗೆ ಅರ್ಪಿತವಾಗುತ್ತವೆಂದು ಭಕ್ತಿಯಿಂದ ಅರಿತುಕೊಳ್ಳುವದು' (5–29), 'ಶ್ರದ್ಧೆಯಿಂದ ಭಗವಂತನನ್ನೇ ಧ್ಯಾನಿಸುತ್ತಾ ಆತನನ್ನೇ ಭಜಿಸುವದು' (6–47), 'ಭಗವಂತನನ್ನೇ ಶರಣುಹೊಕ್ಕವರು ಮಾಯೆಯನ್ನು ದಾಟುತ್ತಾರೆಂದು ನೆರೆನಂಬುವದು' (7–14), ಭಗವಂತನನ್ನು ಯಾವ ನಿಮಿತ್ತದಿಂದ ಭಜಿಸುವದಕ್ಕೂ ಪುಣ್ಯಕರ್ಮವೇ ಕಾರಣವೆಂದು ನಂಬುವದು; (7–16), ಭಗವಂತನನ್ನು ಅನನ್ಯಮನಸ್ಕರಾಗಿ ಭಜಿಸುವವರು ಮಹಾತ್ಮರೆಂದೂ (9–13), ನಾವು ಮಾಡುವ ಕರ್ಮಗಳನ್ನೂ ಆಹಾರವಿಹಾರಾದಿಗಳನ್ನೂ ಭಗವಂತನಿಗೇ ಅರ್ಪಿಸುವದು ಉತ್ತಮಸಾಧನವೆಂದೂ (9–27), ಎಂಥ ಪಾಪಿಗಳಾದರೂ ಭಗವಂತನನ್ನು ಭಜಿಸುವವರಾದರೆ ಅವರಿಗೂ ಪರಗತಿಯಾಗುವದೆಂದೂ (9–32) ಮತ್ತೆಮತ್ತೆ ಹೇಳಿರುವದನ್ನು ಮನಸ್ಸಿನಲ್ಲಿಟ್ಟು ಭಗವದ್ಭಕ್ತಿಪರಾಯಣರಾಗಿರಬೇಕು. ಇದಕ್ಕಿಂತ ಹೆಚ್ಚಿನ ಯಜ್ಞವಾಗಲಿ ದಾನವಾಗಲಿ ತಪಸ್ಸಾಗಲಿ ಇರುವದಿಲ್ಲ–ಎಂದು ದೃಢವಾಗಿ ನಂಬಬೇಕು.

ಕಲಿಯುಗದಲ್ಲಿ ಶಾಸ್ತ್ರೀಯಕರ್ಮಗಳು ಯಾವವೂ ಅಳವಡುವದಿಲ್ಲವೆಂದು ಹೇಳಿಕೊಳ್ಳುತ್ತಾ ಸ್ವೇಚ್ಛಾಪ್ರವೃತ್ತಿಯಲ್ಲಿರುವ ಮೂರ್ಖರು ಒಂದು ಪಂಗಡ; ಯಾವ ಯುಗವೇ ಆಗಲಿ ಎಂಥ ಮ್ಲೇಚ್ಛದೇಶವೇ ಆಗಲಿ ನಮ್ಮ ಶಕ್ತಿಗೆ ಅಳವಡುವಷ್ಟು ರೀತಿಯಿಂದ ಶುಚಿಯಾಗಿದ್ದುಕೊಂಡು ಸರ್ವವ್ಯಾಪಿಯಾಗಿ, ನಮ್ಮಗಳೆಲ್ಲರ ಆತ್ಮನೇ ಆಗಿರುವ ಭಗವಂತನು ಇಲ್ಲದ ಸ್ಥಲವಿಲ್ಲ, ಭಕ್ತರಿಗೆ ಅನುಗ್ರಹವನ್ನು ಮಾಡದ ಕಾಲವಿಲ್ಲ–ಎಂದು ನೆರೆನಂಬಿ ಶಿಷ್ಟಾಚಾರವನ್ನೂ ಮನಸ್ಸಾಕ್ಷಿಯನ್ನೂ ಆಶ್ರಯಿಸಿಕೊಂಡು ಭಗವಂತನೇ ಗತಿ ಎಂದು ಗಟ್ಟಿಯಾಗಿ ನಂಬಿರುವ ಶ್ರದ್ಧಾವಂತರು ಇನ್ನೊಂದು ಪಂಗಡ–ಹೀಗೆ ಎರಡು ಪಂಗಡದ ಜನರು ಯಾವಾಗಲೂ ಇದ್ದೇಇರುತ್ತಾರೆ. ಶ್ರದ್ಧಾಭಕ್ತಿಗಳಿಗೆ ಎಂದೆಂದಿಗೂ ಪುರುಷಾರ್ಥವು ಕಟ್ಟಿಟ್ಟಬುತ್ತಿಎಂಬುದನ್ನು ನಾವೆಲ್ಲರೂ ನಿರಾತಂಕವಾಗಿ ನಂಬಬಹುದು.

# 304. ಭಗವದ್ಭಕ್ತಿ

## (ಫೆಬ್ರವರಿ 1972)

*ನಿಮ್ಮ ಪತ್ರವನ್ನು ಓದಿದ ಮೇಲೆ ನನಗೊಂದು ಅಭಿಪ್ರಾಯವು ಮನಸ್ಸಿನಲ್ಲಿ ಮೂಡಿಬಂದಿತು. 'ದೇಶಭಕ್ತಿಯು ಜನರಲ್ಲಿ ಸರಿಯಾಗಿ ಕಾಣಿಸಿಕೊಂಡಿಲ್ಲದ್ದರಿಂದ ನಮ್ಮ ದೇಶಕ್ಕೆ ಸ್ವಾತಂತ್ರ್ಯವು ಬಂದ ಮೇಲೂ ಜನರು ದೇಶದ ಅಭ್ಯುದಯಕ್ಕಾಗಿ ದುಡಿಯದೆ ಒಬ್ಬರಲ್ಲೊಬ್ಬರು ರಾಗದ್ವೇಷಗಳನ್ನು ಮಾಡಿಕೊಂಡು ಬಗೆಬಗೆಯ ಪಂಗಡಗಳಾಗಿ ಹರಿದು ಹಂಚಿಹೋಗಿರುತ್ತಾರೆ. ಈಗ ದೇಶಭಕ್ತಿಯು ಉಕ್ಕೇರುವದಕ್ಕೆ ಯಾವ ಉಪಾಯವನ್ನು ಮಾಡಬೇಕು? ಈ ವಿಷಯದಲ್ಲಿ ನಿಮ್ಮ ಸೂಚನೆಗಳೇನು?'–ಎಂದು ಕೇಳಿ ಬರೆದಿರುತ್ತೀರಿ.*

ಈ ಪ್ರಶ್ನೆಯು ನಿಮ್ಮ ಮನಸ್ಸಿನಲ್ಲಿ ಎದ್ದುಕೊಂಡಿರುವದಕ್ಕೆ ಈಗ ಎಲ್ಲೆಲ್ಲಿಯೂ ರಾಷ್ಟ್ರವಿಚಾರದ ದೃಷ್ಟಿಯ ಹವೆಯೇ ಹಬ್ಬಿಕೊಂಡಿರುವದು ಕಾರಣವೆಂದು ನನಗೆ ತೋರುತ್ತಿದೆ. ಪರದೇಶದ ಆಳ್ವಿಕೆಗೆ ಸಿಕ್ಕಿದಾಗ 'ಅಸಹಕಾರ'ದಿಂದ ಅವರ ದಬ್ಬಾಳಿಕೆಯನ್ನು ತಪ್ಪಿಸುವದು ಹೇಗೆ?'–ಎಂಬ ಪ್ರಶ್ನೆಯೇ ಎಲ್ಲರ ಬಾಯಲ್ಲಿಯೂ ಬರುತ್ತಿತ್ತು. ಆಗ ಮಹಾತ್ಮಗಾಂಧಿಯವರು ಅಹಿಂಸಾಸತ್ಯಾಗ್ರಹಗಳ ಮೂಲಕವೇ ಪರದಾಸ್ಯದಿಂದ ಬಿಡುಗಡೆಯಾದೀತೆಂದು ಉಪದೇಶಿಸಿದ ಮಹಾಮಂತ್ರವನ್ನು ಬಹುಜನರು ಜಪಿಸುತ್ತಿದ್ದರು. ಈಗ ಆ ಶಬ್ದಗಳ ಉಚ್ಚಾರಣೆಯು ಎಲ್ಲಿಯೋ ಒಂದೊಂದು ಮೂಲೆಯಲ್ಲಿ ಕೇಳಿಬರುತ್ತಿದೆ. ಈಗ 'ದೇಶದ ಜನರಲ್ಲಿ ಒಗ್ಗಟ್ಟು ಹೇಗಾದೀತು? ದೇಶಭಕ್ತಿಯು ಬಲಿತುಕೊಳ್ಳುವದು ಹೇಗೆ?'–ಎಂಬ ಪ್ರಶ್ನೆಗಳನ್ನು ಜನರು ಹಾಕುತ್ತಿದಾರೆ. ಇದು ಹೊರಗಿನ ವಿಚಾರದ ಹವೆಯ ಪರಿಣಾಮವೇ ಎಂಬುದು ನನ್ನ ಅಭಿಪ್ರಾಯ.

'ಭಕ್ತಿ' ಎಂದರೆ ನಮಗಿಂತ ಮೇಲಿನ ಹಂತದಲ್ಲಿರುವವರ, ಮತ್ತು ನಮ್ಮ ಗೌರವಕ್ಕೆ ಆಸ್ಪದವಾಗಿರುವವರ ವಿಷಯದಲ್ಲಿರುವ ಪ್ರೇಮ. ಭಾಷಾಪ್ರೇಮ, ದೇಶಪ್ರೇಮ. ಸಂಸ್ಕೃತಿ ಪ್ರೇಮ–ಮುಂತಾದ ಪ್ರೇಮಗಳು ಭಕ್ತಿಶಬ್ದಕ್ಕೆ ವಿಷಯವಾಗಿರುವದಕ್ಕೆ ಇದೇ ಕಾರಣ.

ಆದರೆ ಭಗವಂತನಲ್ಲಿರುವ ಪ್ರೇಮವೇ ನಿಜವಾದ ಭಕ್ತಿ; ಏಕೆಂದರೆ ಭಗವಂತನು ಎಲ್ಲಾ ಜೀವರುಗಳಿಗೂ ಆತ್ಮನಾಗಿರುತ್ತಾನೆ. ಆತ್ಮನೆಂದರೆ ಸ್ವರೂಪವು. ಎಲ್ಲರಿಗೂ ತಮ್ಮ ತಮ್ಮಲ್ಲಿ ಪ್ರೇಮವಿರುವದು ಸ್ವಾಭಾವಿಕವಾಗಿದ್ದರೂ ತಮ್ಮ ನಿಜವಾದ ಸ್ವರೂಪವು ಯಾವದೆಂಬುದನ್ನು ಗೊತ್ತುಮಾಡಿಕೊಳ್ಳದೆ ಇರುವದರಿಂದ ತಮ್ಮ ಹೆಂಡಿರುಮಕ್ಕಳು–ಮುಂತಾದವರಲ್ಲಿಯೂ ಶರೀರೇಂದ್ರಿಯಗಳೇ ಮುಂತಾದವುಗಳಲ್ಲಿಯೂ ಆತ್ಮಬುದ್ಧಿಯಿರುವದರಿಂದಲೇ ಶರೀರಾದಿಗಳಿಗೋಸ್ಕರವಾಗಿ ವಿಷಯಗಳ ಕಾಮವಿರುತ್ತದೆ. ಆದರೆ ಭಗವಂತನೇ ನಮ್ಮ ನಿಜವಾದ ಆತ್ಮನು, ಅವನೇ ಪರಮಾರ್ಥ–ಎಂಬ

ಜ್ಞಾನವು ಯಾವನಿಗೆ ಉಂಟಾಗಿರುವದೋ ಅವನಿಗೆ ಅನಾತ್ಮವಿಷಯಗಳಲ್ಲಿ ಎಂದಿಗೂ ಕಾಮವುಂಟಾಗಲಾರದು. ಆದ್ದರಿಂದ ಭಗವಂತನಲ್ಲಿರುವ ಪರಮಪ್ರೇಮವೇ ಭಕ್ತಿ; ಮಿಕ್ಕ ವಿಷಯಗಳಲ್ಲಿರುವ ಪ್ರೇಮವು ಕಾಮ ಪ್ರಯುಕ್ತವಾದದ್ದೇ ಎಂದು ಏರ್ಪಡುತ್ತದೆ.

ಹಾಗಾದರೆ, 'ದೇಶಭಕ್ತಿ', 'ಪಿತೃಭಕ್ತಿ', 'ಗುರುಭಕ್ತಿ'–ಮುಂತಾದ ಪ್ರಯೋಗಗಳಲ್ಲಿ ಭಕ್ತಿಶಬ್ದವನ್ನು ಪ್ರಯೋಗಿಸುವದು ತಪ್ಪೆ?–ಎಂದು ನೀವು ಕೇಳಬಹುದು, ಹಾಗೇನೂ ಇಲ್ಲ. ಯಾವಯಾವದು ನಮ್ಮ ಗೌರವಕ್ಕೆ ಅರ್ಹವಾಗಿರುತ್ತದೆಯೋ ಅದರಲ್ಲೆಲ್ಲ ಭಕ್ತಿಯನ್ನು ಮಾಡಬೇಕಾದದ್ದು ನ್ಯಾಯಪ್ರಾಪ್ತವಾಗಿರುತ್ತದೆ. ವ್ಯವಹಾರದೃಷ್ಟಿಯಿಂದ ಅವೂ ಮುಖ್ಯಭಕ್ತಿಯೇ ಆಗಿರುತ್ತವೆ. ಆದರೆ ಭಗವದ್ಭಕ್ತಿಗೆ ಹೋಲಿಸಿದಾಗ ಅವುಗಳು ಗೌಣಭಕ್ತಿಯೇ ಹೊರತು ಮುಖ್ಯ ಭಕ್ತಿಯಲ್ಲ. ಇಷ್ಟೇ ಅಲ್ಲ, ಯಾವದಾದರೊಂದು ಫಲದ ಪ್ರಾಪ್ತಿಗಾಗಿ ಭಗವಂತನಲ್ಲಿ ಭಕ್ತಿಯನ್ನು ಮಾಡಿದರೆ, ಅದೂ ನಿರುಪಾಧಿಕವಾದ ಭಗವದ್ಭಕ್ತಿಯ ದೃಷ್ಟಿಯಿಂದ ಗೌಣಭಕ್ತಿಯೇ ಆಗಿರುತ್ತದೆ. ಆದ್ದರಿಂದಲೇ ಭಗವಂತನು

**ಚತುರ್ವಿಧಾ ಭಜನ್ತೇ ಮಾಂ ಜನಾಃ ಸುಕೃತಿನೋಽರ್ಜುನ ।**
**ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥**
**ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ॥ 9–16, 17**

ಎಂದು ತನ್ನ ಭಕ್ತರನ್ನುಕೂಡ ನಾಲ್ಕು ಪಂಗಡಗಳಾಗಿ ವಿಂಗಡಿಸಿ, 'ಸಂಕಟ ಪರಿಹಾರಕ್ಕಾಗಿ, ಯಾವದಾದರೂ ಇಷ್ಟಾರ್ಥಪ್ರಾಪ್ತಿಗಾಗಿ, ಅಥವಾ ಆತ್ಮಜ್ಞಾನಕ್ಕಾಗಿ ಕೂಡ, ಭಗವಂತನಲ್ಲಿ ಭಕ್ತಿಯನ್ನು ಮಾಡುವವರು ಎಷ್ಟೇ ಹೆಚ್ಚಿನ ಅಂತಸ್ತಿನವರಾಗಿದ್ದರೂ ಅವರಿಗಿಂತ ಭಗವಂತನಲ್ಲಿ ಅಪಾರಪ್ರೇಮದಿಂದ ಆತನಲ್ಲಿಯೇ ಚಿತ್ತಸಮಾಧನವನ್ನು ಪಡೆದುಕೊಂಡಿರುವ ಜ್ಞಾನಿಭಕ್ತನೇ ವಿಶಿಷ್ಟಭಕ್ತನು ಎಂದು ನಿರ್ಣಯಿಸಿರುತ್ತಾನೆ.

ಹೀಗಿರುವದರಿಂದ ನೀವು ಬರೆದಿರುವ ದೇಶಭಕ್ತಿಯನ್ನು ಕೂಡ ಭಗವದ್ಭಕ್ತಿಗೆ ಅಂಗವಾಗಿ ಮಾಡುವ ಮಹಾತ್ಮರು ನಿಜವಾದ ಅರ್ಥದಲ್ಲಿ ದೇಶಭಕ್ತರೆಂದು ತಿಳಿಯಬೇಕು. ಭಗವದ್ಭಕ್ತಿಯಲ್ಲಿ ಆದರವನ್ನುಂಟುಮಾಡುವ ಸಂಸ್ಕೃತಿಯನ್ನು ಅನಾದಿಕಾಲದಿಂದಲೂ ಬೆಳೆಯಿಸಿಕೊಂಡು ಬಂದಿರುವವರು ಪುಣ್ಯಭೂಮಿಯಾದ ಈ ಭಾರತಕ್ಷೇತ್ರದಲ್ಲಿಯೇ ವಾಸವಾಗಿರುತ್ತಾರೆ. ಅಂಥವರಿಂದಲೇ ನದ್ಯಾದಿಗಳು 'ತೀರ್ಥ' ವೆನಿಸಿರುತ್ತವೆ; ಅವರು ಭಗವಂತನ ಅನುಸಂಧಾನವನ್ನು ಮಾಡುವ ದೇವಾಲಯಗಳೇ ಮುಂತಾದವುಗಳಿರುವ ಸ್ಥಾನಗಳು ಪುಣ್ಯಕ್ಷೇತ್ರಗಳೆನಿಸಿರುತ್ತವೆ. ಅವರು ತಿಳಿಯಿಸಿಕೊಟ್ಟಿರುವ ಉತ್ತಮಸಂಸ್ಕೃತಿಯ ಸ್ವರೂಪವನ್ನು ಜನರಿಗೆ ಮೆಲ್ಲಮೆಲ್ಲಗೆ ತಿಳಿಯಿಸುತ್ತಾ ಬಂದರೆ ನಿಜವಾದ ದೇಶಭಕ್ತಿಯನ್ನು

ರೂಢಮೂಲವಾಗಿ ಮಾಡಿದಂತೆ ಆಗುತ್ತದೆ. ಆ ಭಕ್ತಿಗೆ ಸಾಧನವಾಗಿರುವ ಭಗವನ್ನಾಮಸ್ಮರಣೆಯೇ ಮುಂತಾದವುಗಳಲ್ಲಿ ಜನರಿಗೆ ಆದರವುಂಟಾಗುವಂತೆ ಮಾಡುವ ಪ್ರಯತ್ನವುಕೂಡ ಉತ್ತಮಭಕ್ತಿಯೇ ಆಗಿರುತ್ತದೆ ಎಂದು ನನ್ನ ಅಭಿಮತ.

## 305. ಸಂನ್ಯಾಸಾಶ್ರಮ

### (ಮಾರ್ಚ್ 1972)

*ನಿಮ್ಮ ಪತ್ರವನ್ನು ಓದಿಸಿಕೊಂಡೆನು. ಸಾಯುವದರೊಳಗೆ ಒಂದು ದಿನ ಸಂನ್ಯಾಸವನ್ನು ಸ್ವೀಕರಿಸಬೇಕೆನಿಸುತ್ತಿದೆ–ಎಂದು ಬರೆಯುತ್ತಿದ್ದೀರಿ. 'ಒಂದು ದಿನ ಚಿರೋಟಿಯನ್ನು ತಿನ್ನಬೇಕು' ಎನ್ನುವಂತೆ ಅದೇನೊ ಒಂದು ಭಕ್ಷ್ಯದ ಸವಿಯನ್ನು ರುಚಿನೋಡುವ ಘಟನೆ–ಎಂದು ನಿಮ್ಮ ಮನಸ್ಸಿನಲ್ಲಿ ಅನ್ನಿಸಿರುವದಕ್ಕೂ ಸಾಕು–ಎಂದು ತೋರುತ್ತಿದೆ. ಇದೇಕೆ ಈ ವಿಪರೀತಬುದ್ಧಿಯು ನಿಮ್ಮ ತಲೆಯಲ್ಲಿ ತೋರಿಕೊಂಡಿತೋ ನಾನರಿಯೆನು.*

ಸಂನ್ಯಾಸವೆಂಬ ಶಬ್ದದ ಅರ್ಥವೇನೆಂಬುದು ಎಂದಾದರೂ ನಿಮಗೆ ಮನಸ್ಸಿನಲ್ಲಿ ಮಿಂಚಿದೆಯೆ? ಸಂನ್ಯಾಸವೆಂದರೆ ಬಿಡುವದು. ಹೀಗಿರುವಲ್ಲಿ ಸಂನ್ಯಾಸವನ್ನು ಸ್ವೀಕರಿಸುವದೆಂದರೇನರ್ಥ?– 'ಬ್ರಹ್ಮಚರ್ಯ' ಎಂದರೆ ವೇದವನ್ನು ಗುರುವಿನಿಂದ ಸ್ವೀಕರಿಸುವ ಆಶ್ರಮ; ಗಾರ್ಹಸ್ಥ್ಯವೆಂದರೆ ಅಗ್ನಿಯನ್ನು ಪೂಜಿಸುವದಕ್ಕೆಂದೂ ಪ್ರಜಾಸಂತಾನದ ಲಾಭಕ್ಕಾಗಿಯೂ ಧರ್ಮಪತ್ನಿಯೊಬ್ಬಳನ್ನು ಸ್ವೀಕರಿಸುವ ಆಶ್ರಮ; ವಾನಪ್ರಸ್ಥವೆಂದರೆ ಮುದುಕನಾದಬಳಿಕ ಕಾಡಿಗೆಹೋಗಿ ಶರೀರವನ್ನು ತಪಸ್ಸಿನಿಂದ ಸವೆಯಿಸಿಕೊಳ್ಳುವ ಆಶ್ರಮ; ಆದರೆ ಸಂನ್ಯಾಸವೆಂದರೆ, ಹೀಗೆ ಯಾವದಾದರೂ ಧರ್ಮವನ್ನು ಸ್ವೀಕರಿಸುವದಲ್ಲ; ಎಲ್ಲಾ ಆಶ್ರಮಕರ್ಮಗಳನ್ನೂ ಬಿಡುವದು. ಅಷ್ಟೆ!

ಹಿಂದಿನಕಾಲದಲ್ಲಿ ಆಶ್ರಮಸಂನ್ಯಾಸವೂ ಒಂದು ಇತ್ತು. ಮಿಕ್ಕ ಆಶ್ರಮಗಳ ಕರ್ಮಗಳನ್ನು ಬಿಟ್ಟು, ಪರಮಾತ್ಮನನ್ನು ಎಡೆಬಿಡದೆ ಉಪಾಸನೆಮಾಡಿದರೆ ಬ್ರಹ್ಮಲೋಕಪ್ರಾಪ್ತಿ–ಎಂದು ಆ ಯತ್ಯಾಶ್ರಮವನ್ನು ಸ್ಮೃತಿಯಲ್ಲಿ ವಿಧಿಸಿದೆ–ಎಂದು ಬೃಹದಾರಣ್ಯಕಭಾಷ್ಯದಲ್ಲಿ ಬರೆದಿದೆ. ಆದರೆ ಶಂಕರಾಚಾರ್ಯರ ಅನುಯಾಯಿಗಳು ಆ ಬಗೆಯ ಆಶ್ರಮವನ್ನು ಸ್ವೀಕರಿಸುವ ವಾಡಿಕೆಯು ಈಗ ಅಳಿದು ಹೋಗಿದೆ. ಈಗ ಸಂನ್ಯಾಸ ಎಂದರೆ ಉಳಿದ ಆಶ್ರಮಗಳ ಕರ್ಮಗಳನ್ನು ಬಿಟ್ಟು ಗುರುವಿನ ಬಳಿಯಲ್ಲಿ ಆತ್ಮವಿಷಯಕವಾದ ಶ್ರವಣಮನನಾದಿಗಳನ್ನು ಆಚರಿಸುವದು– ಎಂಬ ಅರ್ಥವು ಮಾತ್ರ ಉಳಿದುಕೊಂಡಿದೆ. ಇದನ್ನು ಪರಮಹಂಸಪಾರಿವ್ರಾಜ್ಯ ಎನ್ನುತ್ತಾರೆ.

ಆದರೆ ಒಂದು ವಿಷಯವನ್ನು ಮರೆಯದೆ ಇರಬೇಕು. ಪರಮಹಂಸರಿಗೆ ಮಿಕ್ಕ ಯಾವ ಕರ್ಮವೂ ಕರ್ತವ್ಯವಾಗಿ ಉಳಿದಿರುವದಿಲ್ಲವಾದರೂ ಶಮದಮಾದಿರೂಪವಾದ ಮಾನಸಕರ್ಮವನ್ನು ಅವಶ್ಯವಾಗಿ ಮಾಡುತ್ತಿರಬೇಕು. ವೇದಾಂತಶ್ರವಣಾದಿಗಳನ್ನು ಮಾಡುವದಕ್ಕೆಂದು ಪಾರಿವ್ರಾಜ್ಯವನ್ನು ಆಶ್ರಯಿಸಿದವನು ಶಮ(ಮನೋನಿಗ್ರಹ), ದಮ (ಇಂದ್ರಿಯ ನಿಗ್ರಹ), ಉಪರತಿ (ಬಾಹ್ಯಕರ್ಮಗಳನ್ನು ಬಿಟ್ಟಿರುವದು), ತಿತಿಕ್ಷೆ (ಶೀತೋಷ್ಣಸುಖದುಃಖಗಳನ್ನು ಮನಸ್ಸಿನಲ್ಲಿ ವಿಕಾರವಿಲ್ಲದೆ ತಡೆದುಕೊಳ್ಳುವದು), ಶ್ರದ್ಧೆ (ಶಾಸ್ತ್ರಾಚಾರ್ಯವಾಕ್ಯದಲ್ಲಿ ಆಸ್ತಿಕ್ಯ), ಸಮಾಧಾನ (ಮನಸ್ಸನ್ನು ಏರುಪೇರಿಲ್ಲದಂತೆ ಸಮಸ್ಥಿತಿಯಲ್ಲಿಟ್ಟುಕೊಳ್ಳುವದು)–ಇವುಗಳನ್ನು ತಪ್ಪದೆ ಅನುಷ್ಠಾನದಲ್ಲಿಟ್ಟುಕೊಂಡಿರಬೇಕು. ಕೃತಕೃತ್ಯನಾದ ಜ್ಞಾನಿಗೆ ಇವು ಸ್ವಭಾವದಿಂದಲೇ ಇರುವವು; ಸಾಧಕನಾದವನು ಅವಶ್ಯವಾಗಿ ಪ್ರಯತ್ನಪೂರ್ವಕವಾಗಿ ಇವನ್ನು ಇಟ್ಟುಕೊಂಡಿರಬೇಕು; ಇದನ್ನೇ ನಿಜವಾದ ಸಂನ್ಯಾಸವೆಂದು ತಿಳಿಯಬೇಕು.

ಯಾವನು ಕರ್ಮೇಂದ್ರಿಯಗಳನ್ನು ಬಲಾತ್ಕಾರದಿಂದ ಬಿಗಿಹಿಡಿದುಕೊಂಡಿರುವನೋ, ಅವನು ತನ್ನ ಸ್ವಭಾವಕ್ಕೆ ಒಳಗಾಗಿ ಒಂದಲ್ಲ ಒಂದುಕಾಲದಲ್ಲಿ ಆ ಕರ್ಮವನ್ನು ಮಾಡಿಯೇ ತೀರುವನು. ಅದನ್ನು ಮಾಡದೆ ಇರುವಾಗಲೂ ಮನಸ್ಸಿನಲ್ಲಿಯಾದರೂ ಅದನ್ನು ಸ್ಮರಿಸುತ್ತಿರುವನು. ಹೀಗಿರುವ ಮಿಥ್ಯಾಚಾರಿಯಾದ ವೇಷದ ಸಂನ್ಯಾಸಿಗಿಂತಲೂ ಇಂದ್ರಿಯಗಳನ್ನು ಬಿಗಿಹಿಡಿಯುವದನ್ನು ಅಭ್ಯಾಸಮಾಡುತ್ತಾ ಶಾಸ್ತ್ರೋಕ್ತವಾದ ನಿತ್ಯಕರ್ಮವನ್ನಾದರೂ ಮಾಡುತ್ತಿರುವದು ಹೆಚ್ಚು ಶ್ರೇಯಸ್ಕರವಾಗಿರುತ್ತದೆ.

ಇನ್ನೊಂದು ಮಾತು: ವಿಹಿತವಾದ ಕರ್ಮವನ್ನು ಮಾಡದೆ ಇದ್ದರೂ ಚಿಂತೆಯಿಲ್ಲ. ಪಾರಿವ್ರಾಜ್ಯವನ್ನು ವಹಿಸುವವನು ಯಾವ ಸಾಧನವನ್ನೂ ಮಾಡದೆ ನಿಷಿದ್ಧವಾದದ್ದನ್ನು ಮಾಡಿದರೆ ಅವನಿಗೆ ಪ್ರತ್ಯವಾಯವು ಗಂಟುಬೀಳುವದು ನಿಶ್ಚಿತವಷ್ಟೆ? ಆದ್ದರಿಂದ ಸಾಧ್ಯವಾದಷ್ಟು ಮಟ್ಟಿಗೂ ಶಮಾದಿಗಳನ್ನು ಅನುಸರಿಸುವದಕ್ಕೆ ಪ್ರಯತ್ನಪಡುವದರ ಜೊತೆಗೆ ಸ್ತ್ರೀಧನನಾಸ್ತಿಕರ ಸಂಗವನ್ನು ಸರ್ವಥಾ ತಪ್ಪದೆ ಬಿಟ್ಟುಬಿಡುವದಕ್ಕೆ ಪ್ರಯತ್ನಿಸಬೇಕು; ಸ್ತ್ರೀಯರೇ ಮುಂತಾದವರ ಸಂಗವು ಹಾಗಿರಲಿ, ಅವರ ಸಂಗಿಗಳ ಸಂಗವನ್ನಾಗಲಿ, ಅಂಥವರ ನಡತೆಯ ವಿಚಾರವನ್ನಾಗಲಿ ಸಂಪೂರ್ಣವಾಗಿ ಬಿಟ್ಟುಬಿಡಬೇಕು.

ಜ್ಞಾನಿಗಳ ಪರಮಾರ್ಥಸಂನ್ಯಾಸತತ್ತ್ವವನ್ನು ಇನ್ನೊಮ್ಮೆ ನಿಮಗೆ ವಿವರವಾಗಿ ತಿಳಿಯಿಸುವೆನು. ಸದ್ಯಕ್ಕೆ ಈ ನನ್ನ ಉತ್ತರದಿಂದ ಒಂದಿಷ್ಟಾದರೂ ನಿಮಗೆ ಪ್ರಯೋಜನವಾಗುವದೆಂದು ನಂಬಿರುತ್ತೇನೆ.

# 306. ಭಜನೆ

## (ಏಪ್ರಿಲ್ 1972)

*ನಿಮ್ಮ ಪತ್ರವು ಬಂದು ತಲುಪಿದೆ. ಭಜನೆಗೆ ಸಂಗೀತದ ಜ್ಞಾನವು ಅತ್ಯವಶ್ಯವು? ನಮ್ಮಂಥವರಿಗೆ ಭಗವಂತನನ್ನು ಭಜಿಸುವದು ಆಗಲಾರದೆಂದೇ ಕಾಣುತ್ತಿದೆಯಲ್ಲ!–ಎಂಬ ನಿಮ್ಮ ಪ್ರಶ್ನೆಗೆ 'ಭಜನೆ' ಎಂಬ ಶಬ್ದದ ಅರ್ಥವನ್ನು ತಿಳಿಯದಿರುವದೇ ಅಲ್ಲದೆ, ದಾಸರ ಪದಗಳನ್ನೂ ದೇವರನಾಮಗಳನ್ನೂ ರಾಗಪೂರ್ವಕವಾಗಿ ಹಾಡುವದನ್ನೇ 'ಭಜನೆ' ಎಂದು ಕರೆಯುತ್ತಿರುವ ಈಗಿನ ಲೋಕರೂಢಿಯೂ ಕಾರಣವೆಂಬುದು ಸ್ಪಷ್ಟ.*

ಭಜನೆ ಎಂದರೆ ಸೇವಿಸುವದು. ಗುರುಹಿರಿಯರನ್ನೂ ಜಗತ್ತಿಗೆಲ್ಲ ಕಾರಣನಾಗಿರುವ ಭಗವಂತನನ್ನೂ ನಿರಹಂಕಾರನಾಗಿ ಸೇವಿಸುವದೇ ಭಜನೆಯು. ಭಗವಂತನೇ ಹೇಳಿರುವದೇನೆಂದರೆ:

**ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ ಪ್ರಕೃತಿಮಾಶ್ರಿತಾಃ ।**
**ಭಜನ್ತ್ಯನನ್ಯ ಮನಸೋ ಜ್ಞಾತ್ವಾ ಭೂತಾದಿಮವ್ಯಯಮ್॥ 9–13**

ಸ್ವಾರ್ಥಬುದ್ಧಿಯುಳ್ಳ ಆಸುರಪ್ರಕೃತಿಯವರು ತಮ್ಮ ಭೋಗಕ್ಕಾಗಿ ಎಲ್ಲವನ್ನೂ ಬಯಸುತ್ತಾ ಜಗತ್ತಿನಲ್ಲಿರುವದೆಲ್ಲವೂ ತಮಗಾಗಿಯೇ ಸೃಷ್ಟವಾಗಿರುವದೋ ಎಂಬಂತೆ ಇರುವರು. ಅವರು ಶಾಸ್ತ್ರೋಕ್ತಕರ್ಮಗಳನ್ನು ಮಾಡುವದೂ ದಂಭದಿಂದಲೇ ಹೊರತು ಭಗವಂತನ ತತ್ತ್ವವನ್ನು ಅರಿತದ್ದರ ಫಲವಾಗಿರುವದಿಲ್ಲ. ಆದರೆ ಉದಾರಹೃದಯರಾಗಿ ದೈವಸಂಪತ್ತಿನ ಗುಣಗಳಿಂದ ಕೂಡಿರುವ ಮಹಾತ್ಮರು ಹಾಗಲ್ಲ; ಭಗವಂತನು ಆಕಾಶಾದಿ ಜಗತ್ತಿಗೆಲ್ಲ ಮೂಲಕಾರಣನು, ಬ್ರಹ್ಮಾದಿಸ್ತಂಬಪರ್ಯಂತವಾಗಿರುವ ಪ್ರಾಣಿಗಳಿಗೂ ಆತನೇ ಕಾರಣನು, ಆತನೇ ಆತ್ಮನಾಗಿರುತ್ತಾನೆ–ಎಂದು ಅರಿತಿರುವದರಿಂದ ಭಗವಂತನ ಮಹಿಮೆಯನ್ನು ಕೀರ್ತನ ಮಾಡುವದು, ಇಂದ್ರಿಯನಿಗ್ರಹಶಮದಮದಯಾಹಿಂಸಾದಿ ಗಳನ್ನು ಪ್ರಯತ್ನ ಪೂರ್ವಕವಾಗಿ ಮಾಡುತ್ತಾ, ಭಗವಂತನನ್ನು ಸ್ಮರಿಸುತ್ತಿರುವದನ್ನೇ ವ್ರತವಾಗಿಟ್ಟುಕೊಂಡು, ಕಾಣುವ ಜಗತ್ತೆಲ್ಲವೂ ಆತನ ವಿಭೂತಿಯೇ ಎಂಬ ಭಾವನೆಯಿಂದ ಆತನನ್ನು ನಮಸ್ಕರಿಸುತ್ತಾ ತಮ್ಮ ಚಿತ್ತವನ್ನು ಆತನಲ್ಲಿಯೇ ನೆಲೆನಿಲ್ಲಿಸಿಕೊಂಡು ಆತನನ್ನೇ ಉಪಾಸನೆಮಾಡುತ್ತಿರುವರು. ಇಂಥ ಜ್ಞಾನಿಭಕ್ತರನ್ನು ಅನುಕರಿಸುವದು ಕಾಮಕ್ರೋಧಾದಿ ಗಳ ಉಪಟಳವನ್ನು ತಪ್ಪಿಸಿಕೊಂಡು ಮನಸ್ಸಿಗೆ ಭಗವದ್ಭಾವವನ್ನು ತಂದುಕೊಳ್ಳುವದಕ್ಕೆ ಒಂದು ಉಪಾಯವಾಗಿರುತ್ತದೆ.

ಗೋಂದಾವಳಿಯ ಬ್ರಹ್ಮಚೈತನ್ಯಮಹಾರಾಜರ ಶಿಷ್ಯರಾಗಿದ್ದ 'ಮಹಾಭಾಗವತರೆಂಬ' ಹೆಸರಿನಿಂದ ಪ್ರಖ್ಯಾತರಾಗಿ ಕೊನೆಯಲ್ಲಿ ಕರವೀರಪೀಠದ ಅಧಿಪತಿಗಳಾಗಿದ್ದು ಬ್ರಹ್ಮೀಭೂತರಾದ ಒಬ್ಬ ಮಹಾತ್ಮರು ಹಾಡಿರುವ ಒಂದು ಅಭಂಗದಲ್ಲಿ ಹೀಗಿದೆ:

**"ತಾಳಸ್ವರ ಹ್ಯಾಗೇ ಇರಲಿ। ರಾಮನಾಮ ಬಾಯಿಗೆ ಬರಲಿ।**
**ಲಕ್ಷ್ಯಬೇಡ ರಾಗದ ಕಡೆಗೆ। ಪ್ರೇಮ ತುಂಬಲಿ ಹೃದಯದೊಳಗೆ॥"**

ಭಜನೆಗೆಂದು ರಾಮನಾಮವನ್ನು ಕೀರ್ತನೆ ಮಾಡುತ್ತಾ ಹಾಡುತ್ತಿರುವಾಗ ತಾಳವಾಗಲಿ ಸ್ವರವಾಗಲಿ ತಪ್ಪೀತೊ ಏನೊ!–ಎಂಬ ಅಂಜಿಕೆಯಿರಬೇಕಾದದ್ದಿಲ್ಲ. ರಾಮನಾಮವನ್ನು ಹಾಡುತ್ತಿದ್ದೇನೆ– ಎಂಬ ಭಾವನೆಯು ಮಾತ್ರ ಎಂದಿಗೂ ತಪ್ಪಿಹೋಗಬಾರದು. ಆಗ ರಾಗದ ಆಲಾಪನೆಯು ಮುಖ್ಯವಲ್ಲ, ಭಗವಂತನ ಪ್ರೇಮವು ಹೃದಯದೊಳಗೆ ತುಂಬಿ ತುಳುಕುವದು ಅವಶ್ಯ. ರಾಗತಾಳಗಳನ್ನು ತಿರಸ್ಕರಿಸ ಬೇಕೆಂದೇನೂ ಇಲ್ಲಿ ಹೇಳಿಲ್ಲ; ವಿಷಯದ ರಾಗವು ಹೋಗಿ ಭಗವಂತನ ಮಹಿಮೆಯಲ್ಲಿ ಅನುರಾಗವುಂಟಾಗುವದು ಅತ್ಯವಶ್ಯ.

ಭಗವಂತನ ನಾಮವನ್ನು ರಾಗದಿಂದ ಹಾಡುತ್ತಾ ಆತನ ಗುಣಕರ್ಮಲೀಲೆಗಳನ್ನು ಮನದಂದುಕೊಂಡು ಜಗತ್ತೆಲ್ಲವೂ ಆ ಮಹಾಮಹಿಮನ ವೇಷವೇ ಎಂದುಕೊಂಡು ನಲಿಯುವ, ಅದರಲ್ಲಿಯೇ ಮೈಮರೆಯುವ ಭಾವಸಮಾಧಿಯನ್ನು ತಂದುಕೊಳ್ಳುವದೇ ಭಜನೆಗೆ ಗುರಿ. ವೃತ್ತಾಂತಪತ್ರಿಕೆಗಳನ್ನು ಓದಿ ಹಿಂದೂ ಮುಸಲ್ಮಾನರ ಪರಸ್ಪರ ವಿದ್ವೇಷವನ್ನಾಗಲಿ ರಷ್ಯ, ಚೀನ, ಅಮೆರಿಕ–ಮುಂತಾದ ದೇಶಗಳ ಜನಾಂಗಗಳ ಸ್ಪರ್ಧೆಯನ್ನಾಗಲಿ ಭೂಮಂಡಲದ ಯುದ್ಧಗಳ ಭೀಕರ ವಿವರವನ್ನಾಗಲಿ ಮನಸ್ಸಿನಲ್ಲಿ ಹೊರಳಾಡಿಸುವ, ಒಬ್ಬರೊಡನೊಬ್ಬರು ಅದಕ್ಕೆ ಸಂಬಂಧಪಟ್ಟ ಬೀಳುಮಾತಿನ ಸಂಭಾಷಣೆಯಲ್ಲಿಯೇ ಕಾಲವನ್ನು ಹಾಕಿ ಅಂತಃಕರಣವನ್ನು ಕಲುಷಗೊಳಿಸುವ ಚಾಳಿಯನ್ನು ಬಿಟ್ಟು "ಮಚ್ಚಿತ್ತಾ ಮದ್ಗತ ಪ್ರಾಣಾ ಬೋಧಯನ್ತಃ ಪರಸ್ಪರಮ್। ಕಥಯನ್ತಶ್ಚ ಮಾಂ ನಿತ್ಯಂ ತುಷ್ಯನ್ತಿ ಚ ರಮನ್ತಿ ಚ" (ಗೀ. 10–9) ಎಂದಿರುವಂತೆ ಭಗವಂತನ ಕಡೆಗೇ ಚಿತ್ತವನ್ನು ತಿರುಗಿಸಿ ಆತನ ಗುಣಗಾನದಿಂದ ನಲಿಯುವ ಪರಸ್ಪರಸಂಭಾಷಣೆಯ ಸುಖವನ್ನು ಸಂಪಾದಿಸಿಕೊಳ್ಳುವದಕ್ಕೆ ಯತ್ನಿಸಿರಿ. ಅದೇ ನಿಜವಾದ ಭಜನೆ. ನಾಮಕೀರ್ತನವನ್ನು ಮಾಡುವದಕ್ಕೆ ರೂಢಿಯಲ್ಲಿರುವ ಭಜನೆಯೂ ಒಂದು ಉಪಾಯಮಾತ್ರವೇ– ಎಂಬುದನ್ನು ಲಕ್ಷ್ಯದಲ್ಲಿಡಿರಿ.

# 307. ಗೀತಾರ್ಥಪ್ರಚಾರ

## (ಮೇ 1972)

*ನಿಮ್ಮ ಪತ್ರವನ್ನು ಓದಿನೋಡಿರುತ್ತೇನೆ. 'ಗೀತಾ ಸುಗೀತಾ ಕರ್ತವ್ಯಾ ಕಿಮನ್ಯೈಃ ಶಾಸ್ತ್ರವಿಸ್ತರೈಃ (ಗೀತೆಯನ್ನು ಚೆನ್ನಾಗಿ ಗಾನಮಾಡಬೇಕು, ಮಿಕ್ಕವಿಸ್ತೃತವಾದ ಶಾಸ್ತ್ರಗಳಿಂದೇನು?) ಎಂಬ ಸೂಕ್ತಿಯನ್ನು ಮನಸ್ಸಿನಲ್ಲಿ ಹೊರಳಾಡಿಸಿದಾಗಲೆಲ್ಲ ಭಗವದ್ಗೀತೆಯ ಅಭಿಪ್ರಾಯವನ್ನು ಜನರಲ್ಲಿ ಪ್ರಚಾರ ಮಾಡಿದರೆ ಸಕಲವೇದಾಂತಾರ್ಥಬೀಜವನ್ನೇ ಜನರ ಹೃದಯದಲ್ಲಿ ಬಿತ್ತಿದಂತೆ ಆಗುವದು–ಎನಿಸುತ್ತದೆ. ಇನ್ನು ಮೇಲೆ ಭಗವದ್ಗೀತೆಯೊಂದನ್ನೇ ಜನಸಾಮಾನ್ಯಕ್ಕೆ ಮೆಚ್ಚುಗುವಂತೆ ಬೋಧಿಸುವ ಕಾರ್ಯವನ್ನು ಕೈಗೊಳ್ಳಬೇಕೆಂದು ಸಂಕಲ್ಪಿಸಿರುತ್ತೇನೆ. ಸಾಮಾನ್ಯ ಜನರಿಗೆ ಗೀತೆಯ ಯಾವ ಉಪದೇಶವನ್ನು ಪ್ರಧಾನವಾಗಿ ಬೋಧಿಸುವದು ಒಳ್ಳೆಯದು? ದಯವಿಟ್ಟು ಬೋಧನಕ್ರಮಕ್ಕೆ ಕೆಲವು ಸೂಚನೆಗಳನ್ನು ಕೊಡೋಣವಾಗಬೇಕು' ಎಂದು ಬರೆದಿರುತ್ತೀರಿ.*

ನನ್ನ ದೃಢವಿಶ್ವಾಸವನ್ನು ನಿಮಗೆ ಒಂದೇ ಮಾತಿನಲ್ಲಿ ಹೇಳಬೇಕಾದರೆ ಅದನ್ನು ಒಂದು ವಾಕ್ಯದಲ್ಲಿ ಅಡಗಿಸಬಹುದು. ಗೀತೆಯನ್ನು ಬೋಧಿಸುವದೆಂದರೆ: ಗೀತಾರ್ಥವನ್ನು ಆಚರಣೆಗೆ ತರುವದೇ ಹೊರತು ಬಾಯಿಮಾತಿನಿಂದ ಭಾಷಣ ಮಾಡುವದಲ್ಲ. ಭಗವಂತನಲ್ಲಿ ಸ್ವಭಾವದಿಂದಲೇ ಭಕ್ತಿಯಿಟ್ಟು ಜೀವಿಸುತ್ತಿರುವವರು ಮಾತ್ರ ಗೀತಾರ್ಥ ಶ್ರವಣಕ್ಕೆ ಮುಖ್ಯಾಧಿಕಾರಿಗಳು. ಪರಮಾತ್ಮತತ್ತ್ವದ ಜ್ಞಾನವನ್ನು ಅಳವಡಿಸಿಕೊಂಡ ಹೃದಯವುಳ್ಳಾತನೇ ಪರಭಕ್ತನು. ಆತನ ನಡೆಯಿಂದಲೇ ಶ್ರೋತೃಗಳಿಗೆ ಗೀತಾರ್ಥಬೋಧೆಯು ಮನಸ್ಸಿನಲ್ಲಿ ಬೇರೂರಿ ಮೊಳೆತು ಚಿಗುರಿ ಬೆಳೆದುಕೊಳ್ಳುವದು.

ಭಗವದ್ಗೀತೆಯಲ್ಲಿ ಹೇಳಿರುವ 'ಸ್ಥಿತಪ್ರಜ್ಞ', 'ಯುಕ್ತ', 'ಭಕ್ತ', 'ತ್ರಿಗುಣಾತೀತ'– ಎಂಬ ಹೆಸರಿನಿಂದ ಬಣ್ಣಿಸಿರುವ ಲಕ್ಷಣಗಳುಳ್ಳಾತನೇ ನಿಜವಾದ ಭಗವದ್ಭಕ್ತನು. ಅಂಥ ಏಕಾಂತಭಕ್ತನಲ್ಲಿ ಹೊರಹೊಮ್ಮುವ ಗುಣಗಳನ್ನು ಅನುಕರಿಸುತ್ತಿರುವದೇ ಸಾಧನವು. ಆ ಸಾಧನವು ಬಲಿತುಕೊಂಡಂತೆಲ್ಲ, ಸಾಧಕನ ದಿನಚರ್ಯೆಯು ಮುಮುಕ್ಷುಗಳಿಗೆ ಒಂದು ಅಮೋಘವಾದ ಅವಚನದ ಉಪದೇಶವಾಗಿರುತ್ತದೆ.

ಭಗವಂತನು ಸರ್ವರ ಸ್ವರೂಪನು, ಸರ್ವರ ಆತ್ಮನು–ಎಂಬುದನ್ನು ಅರಿತುಕೊಂಡಾಗ ಸಾಧಕನು ಭಗವಂತನಲ್ಲಿ ಒಂದಾಗಿಬಿಡುವನು. ಆಗ ಅಂಥ ಪರಭಕ್ತನಿಗೂ ಪರಮಾತ್ಮನಿಗೂ ಯಾವ ವೈಲಕ್ಷಣ್ಯವೂ ಇರುವದೇ ಇಲ್ಲ. ಭಗವಂತನ ಯಾಥಾತ್ಮ್ಯವು ಹೃದಯದಲ್ಲಿ ಅತ್ಯಂತವಾಗಿ ಮೂಡಿಕೊಳ್ಳಬೇಕು. ಆಗ ಅದು ತಾನಾಗಿಯೇ ನುಡಿಯಲ್ಲಿಯೂ ನಡೆಯಲ್ಲಿಯೂ ಒಡೆದುಮೂಡಿಕೊಳ್ಳುವದು.

## 308. ಸರ್ವತ್ರ ಭಗವದ್ಭಾವನೆ

### (ಜೂನ್ 1972)

*ನಿಮ್ಮ ಪತ್ರವು ತಲುಪಿರುತ್ತದೆ. 'ಒಳ್ಳೆಯದು, ಕೆಟ್ಟದ್ದು ಉದಾಸೀನವಾಗಿರುವದು–ಎಂಬ ಮೂರು ತೆರನಾಗಿ ಕಾಣುವ ಪ್ರಪಂಚವೆಲ್ಲವೂ ತನ್ನಲ್ಲಿ ಯಾವ ವೈಚಿತ್ರ್ಯವೂ ಇಲ್ಲದ ಏಕರೂಪನಾದ ಭಗವಂತನಿಂದ ಉತ್ಪತ್ತಿಯಾಗಿದೆಯೆಂದೂ, ಅವುಗಳ ಉತ್ಪತ್ತಿಗೂ ವಿವಿಧವ್ಯಾಪಾರಗಳಿಗೂ ಆತನೇ ನಿಮಿತ್ತವೆಂದೂ ಭಾವಿಸಿಕೊಳ್ಳುವದು ಹೇಗೆ?'–ಎಂದು ಆಗಾಗ್ಗೆ ನನ್ನ ಮನಸ್ಸಿನಲ್ಲಿ ಒಂದು ಆಶಂಕೆಯು ಹುಟ್ಟುತ್ತಿರುತ್ತದೆ. ಕಾರ್ಯಕ್ಕೆ ಅನುಗುಣವಾಗಿ ಕಾರಣವು ಇರಬೇಡವೆ? ಹಾಗಿಲ್ಲದಿದ್ದರೆ ನೀರಿನಿಂದ ಮೊಸರನ್ನು ಮಳಲಿನಿಂದ ಎಣ್ಣೆಯನ್ನೂ ಏಕೆ ಹುಟ್ಟಿಸುವದಕ್ಕಾಗದೆ ಇದೆ? ಕಾರಣದಲ್ಲಿ ಆಯಾ ಕಾರ್ಯವುಂಟಾಗುವದಕ್ಕೆ ಅನುಕೂಲವಾದ ಶಕ್ತಿಯು ಯಾವದೋ ಒಂದು ಇರಬೇಕು ಎಂದೇ ತರ್ಕವು ಹೇಳುತ್ತಿದೆ. ಹೀಗಿರುವಲ್ಲಿ ಒಬ್ಬನೂ ಏಕರೂಪನೂ ಆದ ಪರಮಾತ್ಮನಿಂದ ಇಷ್ಟು ವಿಚಿತ್ರತರವಾದ ಜಗತ್ತು ಆಗಿದೆ–ಎಂದು ಹೇಗೆ ನಂಬೋಣ? ಇದರ ಜೊತೆಗೆ ಸರ್ವಪ್ರಾಣಿಗಳಲ್ಲಿಯೂ ಒಬ್ಬನೇ ಭಗವಂತನಿರುತ್ತಾನೆಂಬ ಭಾವನೆಯನ್ನು ಮಾಡಿಕೊಳ್ಳಬೇಕೆಂದು ಶಾಸ್ತ್ರಗಳೂ ಸಾಧುಗಳೂ ಹೇಳುತ್ತಿದಾರೆ. ಒಳ್ಳೆಯ ಪ್ರಾಣಿಗಳಲ್ಲಿ ಭಗವಂತನು ಇರುತ್ತಾನೆಂದು ಹೇಗೋ ಮನಸ್ಸಿನಲ್ಲಿ ತಂದುಕೊಳ್ಳಬಹುದು; ಆದರೆ ಹಾವು, ಹುಲಿ–ಮುಂತಾದ ದುಷ್ಟ ಪ್ರಾಣಿಗಳಲ್ಲಿ ಭಗವದ್ಭಾವವು ಬರುವದು ಹೇಗೆ ಸಾಧ್ಯ?–ಈ ಶಂಕೆಗೆ ಪರಿಹಾರವನ್ನು ದಯವಿಟ್ಟು ತಿಳಿಯಿಸಬೇಕು? ಎಂತ ಬರೆದಿರುತ್ತೀರಿ.*

ಅಧ್ಯಾತ್ಮಶಾಸ್ತ್ರದಲ್ಲಿ ಉಪದೇಶಿಸಿರುವ ಅರ್ಥಗಳನ್ನು ಮೊದಮೊದಲು ಶ್ರದ್ಧೆಯಿಂದ ನಂಬಿಕೊಂಡು ಭಾವನೆಯನ್ನು ಬೆಳೆಯಿಸಿಕೊಳ್ಳಬೇಕೇ ಹೊರತು ಒಣತರ್ಕದಿಂದ ಅವುಗಳ ಮೇಲೆ ಶಂಕೆಗಳನ್ನು ಪೇರಿಸುತ್ತಾ ಹೋಗಬಾರದು–ಎಂಬುದನ್ನು ಮೊದಲು ನೀವು ತಿಳಿದುಕೊಳ್ಳುವದು ಅತ್ಯವಶ್ಯ. ಅಂದಮಾತ್ರದಿಂದ ಶಾಸ್ತ್ರವು ತರ್ಕಕ್ಕೆ ವಿರುದ್ಧವಾಗಿಯೇ ಇರುತ್ತದೆಯೆಂದೇನೂ ಅಭಿಪ್ರಾಯವಲ್ಲ. ಒಂದು ತತ್ತ್ವದಿಂದ ವಿಚಿತ್ರವಾದ ಅನೇಕಾಕಾರವಾದ ಪದಾರ್ಥಗಳು ಹುಟ್ಟಿದಂತೆ ತೋರಿಕೊಳ್ಳಬಹುದೆಂಬುದಕ್ಕೆ ಜನರಿಗೆಲ್ಲ ಸಮಾನವಾಗಿ ಆಗುತ್ತಿರುವ ಸ್ವಪ್ನಾವಸ್ಥೆಯ ದೃಷ್ಟಾಂತವಿದೆ. ಸ್ವಪ್ನದ ಅನುಭವವು ಒಬ್ಬನಿಗೇ ಆಗುತ್ತದೆ ಎಂಬುದು ಸುನಿಶ್ಚಿತವಾಗಿದ್ದರೂ ಅಲ್ಲಿ ಚಿತ್ರವಿಚಿತ್ರವಾದ ಜಗತ್ತು ಹೇಗೆ ಎಲ್ಲಿಂದ ಬಂದಿರುವದೆಂಬುದನ್ನು ಯಾವ ತಾರ್ಕಿಕನು ತಾನೆ ನಿಶ್ಚಯಿಸಬಲ್ಲನು? ಪರಮೇಶ್ವರನು ಜೀವರ ಕರ್ಮಗಳಿಗೆ ತಕ್ಕಂತೆ ಬೇರೆಬೇರೆಯ ಫಲವನ್ನು ಅಣಿಮಾಡಿಕೊಂಡಿರುವ ಜಗತ್ತನ್ನು ಸೃಷ್ಟಿಮಾಡುತ್ತಾನೆಂದು ಶಾಸ್ತ್ರದಲ್ಲಿ ಹೇಳಿರುವದರಿಂದ ಪರಮೇಶ್ವರನು ಒಬ್ಬೊಬ್ಬರಿಗೆ ಒಂದೊಂದು ಬಗೆಯ ಜನ್ಮವನ್ನು ಕೊಟ್ಟು ಪಕ್ಷಪಾತವನ್ನೇಕೆ ತೋರಿಸುತ್ತಾನೆ?–ಎಂಬ ಶಂಕೆಗೆ ಕಾರಣವೇನೂ ಇರುವದಿಲ್ಲ.

ಇನ್ನು ಒಳ್ಳೆಯ ಜೀವದಲ್ಲಿ ಹೇಗೆ ಪರಮಾತ್ಮನಿರುತ್ತಾನೋ ಹಾಗೆಯೇ ದುಷ್ಟ ಪ್ರಾಣಿಗಳಲ್ಲಿಯೂ ಇರುತ್ತಾನೆಂಬುದನ್ನು ಹೇಗೆ ನಂಬುವದು?–ಎಂದು ನೀವು ಕೇಳಿದ ಪ್ರಶ್ನೆಗೆ ಎರಡು ಬಗೆಯ ಉತ್ತರವನ್ನು ಕೊಡಬಹುದು. ಒಬ್ಬ ಸುಂದರನಾದ ಪುರುಷನಿಗೆ ಹಲವು ಬಗೆಯ ಕನ್ನಡಿಗಳಲ್ಲಿ ಹಲವು ಬಗೆಯ ಪ್ರತಿಬಿಂಬಗಳು ಆಗುತ್ತವೆ. ಅದರಿಂದ ಮನುಷ್ಯನ ಸೌಂದರ್ಯಕ್ಕೇನೂ ಹಾನಿಯಾಗುವದಿಲ್ಲವಲ್ಲವೆ? ಆಕಾಶವು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿದ್ದರೂ ಅದಕ್ಕೆ ವಿವಿಧ ಪದಾರ್ಥಗಳ ಅಂಟೇನೂ ಆಗುವಂತಿಲ್ಲವಷ್ಟೆ? ಇದರಂತೆಯೇ ಒಬ್ಬನೇ ಪರಮಾತ್ಮನು ಸಾತ್ತ್ವಿಕರಾಜಸತಾಮಸ ಪ್ರಾಣಿಗಳಲ್ಲಿ ಸಮನಾಗಿಯೇ ಇದ್ದರೂ ಅಸಂಗನಾದ ಅವನ ಸ್ವರೂಪಕ್ಕೆ ಆ ಪದಾರ್ಥಗಳ ಯಾವ ಗುಣದೋಷಗಳೂ ಅಂಟುವದಿಲ್ಲವೆಂದು ನಿಶ್ಚಯಿಸಬಹುದು. ಇದು ಒಂದು ಉತ್ತರ.

ದುಷ್ಟಪ್ರಾಣಿಗಳನ್ನು ಕಂಡಾಗ ಅಂಜಿಕೆಯಾಗುತ್ತಿರುವಲ್ಲಿ ಅವುಗಳಲ್ಲಿಯೂ ಅದೇ ದಯಾಮಯನಾದ ಭಗವಂತನು ಇರುತ್ತಾನೆಂದು ಹೇಗೆ ನಂಬಬೇಕು?–ಎಂಬ ಪ್ರಶ್ನೆಗೆ ನನ್ನ ಉತ್ತರವೇನೆಂದರೆ, ಮೊದಲು ಒಳ್ಳೆಯ ಪ್ರಾಣಿಗಳಲ್ಲಿ ಭಗವದ್ಭಾವನೆಯನ್ನು ಮಾಡುವ ಕ್ರಮವನ್ನು ಆಚರಣೆಗೆ ತಂದುಕೊಳ್ಳಿರಿ.

**ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।**
**ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಮ್ ॥10–40**

ಎಂದಿರುವಂತೆ ಯಾವಯಾವದು ತನ್ನ ವೈಶಾಲ್ಯ, ಸೌಂದರ್ಯ, ಉತ್ಸಾಹಶಕ್ತಿ ಆಶ್ಚರ್ಯಜನಕತ್ವ–ಮುಂತಾದ ಮೆಚ್ಚಿಕೆಗೆ ಪಾತ್ರವಾಗಿ ತೋರುವದೋ ಅದನ್ನೇ ಭಗವಂತನ ತೇಜಸ್ಸಿನ ಅಂಶದಿಂದ ಉಂಟಾಗಿರುವದೆಂಬ ಭಾವನೆಯನ್ನು ಮೊದಲು ಅಳವಡಿಸಿಕೊಳ್ಳಿರಿ. ಭಗವಂತನು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವದರಿಂದ ಎಲ್ಲಾ ವಸ್ತುಗಳಲ್ಲಿಯೂ ಎಲ್ಲಾ ಪ್ರಾಣಿಗಳಲ್ಲಿಯೂ ಯಾವದಾದರೊಂದು ಮೆಚ್ಚಿಕೆಗೆ ಪಾತ್ರವಾದ ಗುಣವಿದ್ದೇ ಇರುತ್ತದೆ. ಈ ಭಾವನೆಯು ಬಲಿತುಕೊಂಡರೆ ಸರ್ವಾತ್ಮಭಗವದ್ಭಾವನೆಯು ತನಗೆತಾನೇ ನಿಮಗೆ ವಶವಾಗುವದು. ಈ ವಿಷಯಕ್ಕೆ ನಿಮಗೆ ಶಂಕೆಯಿದ್ದರೆ ಮತ್ತೆ ಬರೆಯಿರಿ.

## 309. ಧ್ಯಾನಯೋಗಕ್ಕೆ ಅಣಿಯಾಗುವದು

**(ಜುಲೈ 1972)**

*ನಿಮ್ಮ ಪತ್ರವು ತಲುಪಿರುತ್ತದೆ. 'ಧ್ಯಾನವನ್ನು ಯಾವಯಾವಕಾಲದಲ್ಲಿ ಹೇಗೆ ಹೇಗೆ ಮಾಡಬೇಕು?' ಎಂದು ಕೇಳಿರುತ್ತೀರಿ. ಇದು ಈಗ ನೀವು ಅವಲಂಬಿಸಿರುವ ಆಶ್ರಮಕ್ಕೆ*

*ಅನುಗುಣವಾದ ಪ್ರಶ್ನೆಯೇ ಸರಿ. ಧ್ಯಾನಯೋಗದ ಅನುಷ್ಠಾನ ಪ್ರಕಾರವನ್ನು ಗುರುಗಳ ಮುಖದಿಂದಲೇ ಕೇಳಿ, ಅವರ ಸೂಚನೆಗಳನ್ನು ಆಗಾಗ್ಗೆ ಅನುಸರಿಸುತ್ತಾ ಬರುವದರಿಂದ ಹೆಚ್ಚು ಲಾಭವುಂಟು. ಆದ್ದರಿಂದ ಈ ಲೇಖನದಲ್ಲಿ ಆ ಯೋಗಕ್ಕೆ ಸಿದ್ಧತೆಯನ್ನು ಹೇಗೆ ಮಾಡಿಕೊಳ್ಳಬೇಕೆಂಬುದನ್ನು ಸ್ವಲ್ಪ ಮಟ್ಟಿಗೆ ಬರೆಯುವದಕ್ಕೆ ಪ್ರಯತ್ನಿಸುವೆನು.*

ನೀವು ಊರಿಂದೂರಿಗೆ ಹೋಗುವ ಪದ್ಧತಿಯನ್ನಿಟ್ಟುಕೊಂಡಿರುವದು ಉಚಿತವೇ ಆಗಿದೆ. ಪರಿವ್ರಾಜಕನೆಂದರೆ ಯಾವದೊಂದು ಸ್ಥಲದಲ್ಲಿಯೂ ಹೆಚ್ಚು ದಿನಗಳು ಉಳಿಯದೆ, ಯಾರೊಬ್ಬರ ವಿಶೇಷಪರಿಚಯವನ್ನೂ ಮಾಡಿಕೊಳ್ಳದೆ ಇರುವವನೇ ಆಗಿರುತ್ತಾನೆ. ಇಂದ್ರಿಯಗಳನ್ನೂ ಮನಸ್ಸನ್ನೂ ಜಯಿಸುವದಕ್ಕೆ ಸತತವಾಗಿ ಪ್ರಯತ್ನಿಸುತ್ತಿರುವವನೇ ಅನ್ವರ್ಥವಾಗಿ '**ಯತಿ**' ಎನಿಸುತ್ತಾನೆ. ಆದ್ದರಿಂದ ಬೇರೆಬೇರೆಯ ಸ್ಥಾನಗಳ ವಾಯುಗುಣದ ಮಾರ್ಪಾಡಿನಿಂದ ಅನಿವಾರ್ಯವಾಗಿ ಆಗುವ ಶೀತೋಷ್ಣಗಳಿಂದಾಗ ಬಹುದಾದ ಸುಖದುಃಖಗಳಿಂದ ಮನಸ್ಸನ್ನು ಏರುಪೇರಾಗದಂತೆ ಇಟ್ಟುಕೊಳ್ಳುವದಕ್ಕೆ ಪ್ರಯತ್ನಿಸುತ್ತಿರಬೇಕು. ಜನಗಳು ಎಷ್ಟೇ ಹೊಸಬರಾದರೂ ಅವರ ಸ್ಥೂಲಪರಿಚಯ ದಿಂದಲೇ ಅವರು ಒಳ್ಳೆಯವರು ಅಥವಾ ಕೆಟ್ಟವರು—ಎಂಬ ಭಾವನೆಯು ಬಂದು ಮೂಡಿಕೊಳ್ಳುತ್ತಲೇ ಇರುತ್ತದೆ. ಇದರ ಜೊತೆಗೆ ಆಯಾ ದೇಶಾಚಾರಗಳು ನಮಗೆ ಒಗ್ಗದೆ ಇರುವದರಿಂದ ಜನರ ವಿಷಯಕ್ಕೆ ನಮಗೆ ದುರಭಿಪ್ರಾಯವಾಗುವ ಸಂಭವವೂ ಇದೆ. ಅದಕ್ಕೂ ಅವಕಾಶವನ್ನು ಕೊಡಬಾರದು. ಈಗಿನ ಕಾಲದಲ್ಲಿ ವೃತ್ತಾಂತಪತ್ರಿಕೆಗಳು ಭೂಲೋಕದ ಜನರಲ್ಲಿ ಆರ್ಥಿಕ, ಸಾಮಾಜಿಕ, ಅಥವಾ ರಾಷ್ಟ್ರವಿಷಯಕ—ಮುಂತಾದ ವಿವಿಧ ನಿಮಿತ್ತಗಳಿಂದ ಮನಸ್ಸು ರಾಗದ್ವೇಷಪೂರಿತವಾಗಿರುವದನ್ನೇ ಕೆಲವುವೇಳೆ ಉತ್ಪ್ರೇಕ್ಷಿತವಾದ ರೀತಿಯಿಂದ 'ಸುದ್ದಿ' ಎಂಬ ಹೆಸರಿನಿಂದ ಹರಡುತ್ತಿರುವವು. ಆದ್ದರಿಂದ ಪತ್ರಿಕೆಗಳನ್ನು ಓದುವ, ಮತ್ತು ಜನರೊಡನೆ ಲೌಕಿಕವಿಚಾರದ ಸಂಭಾಷಣೆಯಲ್ಲಿ ತೊಡಗುವ, ಹವ್ಯಾಸವನ್ನು ಮೊದಲು ಬಿಡಬೇಕು. (ಗೀತೆಯ 6–8, 9 ಈ ಶ್ಲೋಕಗಳ ಅರ್ಥವನ್ನು ಚಿಂತಿಸುತ್ತಿರಿ.)

ತಾರತಮ್ಯದಿಂದ ಕಾಣುತ್ತಿರುವ ಜೀವರಲ್ಲೆಲ್ಲ ಭಗವಂತನು ಸಮನಾಗಿರುತ್ತಾನೆಂಬುದನ್ನು ಮನಸ್ಸಿಗೆ ತಂದುಕೊಳ್ಳುತ್ತಾ ಆತನ ಪ್ರತೀಕವೂ ಆಗಿರುವ ಪ್ರಣವವನ್ನು ಎಡೆಬಿಡದೆ ಅನುಸಂಧಾನಮಾಡುತ್ತಿರಬೇಕು. ಸದ್ಯಕ್ಕೆ ಇಷ್ಟನ್ನು ನೆನಪಿನಲ್ಲಿಟ್ಟಿರಿ.

# 310. ಅಧಿಕಾರವಾದ

## (ಆಗಸ್ಟ್ 1972)

*ನಿಮ್ಮ ಪತ್ರವನ್ನು ಓದಿ ನೋಡಿಕೊಂಡಿದೇನೆ. ಕೆಲವರಿಗೆ ವೇದಾಧ್ಯಯನದಲ್ಲಿ ಅಧಿಕಾರವಿಲ್ಲ, ಕೆಲವರು ಮಾತ್ರ ಈ ಕರ್ಮವನ್ನು ಅಥವಾ ಈ ಸಾಧನವನ್ನು ಮಾಡಬೇಕು–ಎಂದು ಆಗಾಗ್ಗೆ ನಮ್ಮ ದೇಶದ ಬ್ರಾಹ್ಮಣರು ಹೇಳುತ್ತಿರುತ್ತಾರೆ. ಈ ಪಕ್ಷಪಾತದ ತಾರತಮ್ಯದಿಂದ ಏನಾದರೂ ಪ್ರಯೋಜನವುಂಟೆ? ಇಲ್ಲದಿದ್ದರೆ ನವನಾಗರಿಕತೆಯ ಈ ಕಾಲಸ್ಥಿತಿಯ ದೃಷ್ಟಿಯಿಂದಲಾದರೂ ಈ ಬಗೆಯ ಕುತ್ಸಿತ ಬುದ್ಧಿಯನ್ನು ಬಿಡಬಾರದೇಕೆ?–ಎಂದು ಕೇಳಿರುತ್ತೀರಿ.*

ಅಧಿಕಾರವೆಂದರೆ ನೀವು ತಿಳಿದುಕೊಂಡಿರುವಂತೆ ಮತ್ತೊಬ್ಬರ ಅನುಮತಿಯಿಂದ ನಮಗೆ ಉಂಟಾಗಬಹುದಾದ ಸ್ಥಾನಮಾನಗಳಲ್ಲ. ಶಾಸ್ತ್ರದಲ್ಲಿ ಹೇಳಿರುವದು ಯಾರಿಗೋಸ್ಕರ?–ಎಂಬುದನ್ನು ವಿಚಾರಿಸಿಕೊಂಡು ಅಲ್ಲಿ ಸಾಧಕರಿಗೆ ಹೇಳಿರುವ ಸಾಧನಗಳಲ್ಲಿ ಯಾವದು ನನಗೆ ಹೊಂದುತ್ತದೆ?–ಎಂಬುದನ್ನು ನಿಶ್ಚಯಿಸಿಕೊಳ್ಳುವ ಯೋಗ್ಯತೆಯೇ ಅಧಿಕಾರ. ಉದಾಹರಣೆಗೆ ಶಾಸ್ತ್ರವು ಮನುಷ್ಯರಿಗಾಗಿ ಪ್ರವರ್ತಿಸಿದೆ; ಶಾಸ್ತ್ರಕ್ಕೆ ಮನುಷ್ಯನೇ ಅಧಿಕಾರಿ–ಎಂಬಲ್ಲಿ ಶಾಸ್ತ್ರವೇನೂ ಮನುಷ್ಯನಿಗೆ ಹೊಸ ಸ್ಥಾನಮಾನವನ್ನು ಏರ್ಪಡಿಸಿಲ್ಲ. ಶಾಸ್ತ್ರವನ್ನು ಅಭ್ಯಾಸಮಾಡಿ ಅದರಲ್ಲಿ ಹೇಳಿರುವಂತೆ ನಡೆಯುವ ಯೋಗ್ಯತೆ ಮನುಷ್ಯಜಾತಿಗೆ ಮಾತ್ರ ಇದೆ–ಎಂದೇ ಅಭಿಪ್ರಾಯ. ಇಷ್ಟು ಮಾತ್ರದಿಂದ ಶಾಸ್ತ್ರಕ್ಕೆ ಮನುಷ್ಯರಲ್ಲಿ ಪಕ್ಷಪಾತವಿದೆ ಎನ್ನುವದಕ್ಕಾದೀತೇನು?

ಮನುಷ್ಯರಲ್ಲಿ ಕೆಲವರಿಗೆ ಮಾತ್ರ ಶಾಸ್ತ್ರದಲ್ಲಿ ಹೇಳಿರುವ ಅಧ್ಯಾತ್ಮಸಾಧನಗಳನ್ನು ಮಾಡುವದಕ್ಕೆ ಯೋಗ್ಯತೆಯಿರುತ್ತದೆ. ಮಿಕ್ಕವರೂ ಮನುಷ್ಯರೇ ಆದರೂ ಅವರಿಗೆ ಬಾಹ್ಯಪ್ರಪಂಚದ ಜ್ಞಾನವನ್ನು ಸಂಪಾದಿಸಿಕೊಳ್ಳುವ ಹಂಬಲೇ ಹೆಚ್ಚಾಗಿರುತ್ತದೆ. ಆದ್ದರಿಂದ ಅವರಿಗೆ ಅಧ್ಯಾತ್ಮವಿದ್ಯೆಯಲ್ಲಿ ಅಧಿಕಾರವಿರುವದಿಲ್ಲ.

ವಿದ್ಯಾಶಾಲೆಗಳಲ್ಲಿ ಬೇರೆಬೇರೆಯ ತರಗತಿಗಳೂ, ಅವುಗಳಲ್ಲಿರುವ ಪಾಠಕ್ರಮಗಳಲ್ಲಿ ಹಂತಗಳೂ ಇರುತ್ತವೆಯಲ್ಲವೆ? ಅಲ್ಲಿ ಯಾವನನ್ನಾದರೂ ಯೋಗ್ಯತಾಪರೀಕ್ಷೆಯನ್ನು ಮಾಡದೆ ಎಲ್ಲರನ್ನೂ ಒಂದೇ ತರಗತಿಗೆ–ಅದರಲ್ಲಿಯೂ ಎಲ್ಲರನ್ನೂ ಅತ್ಯಂತ ಮೇಲಿನ ವರ್ಗಕ್ಕೇ ಸೇರಿಸಿಕೊಂಡುಬಿಡುವದಕ್ಕೆ ಆಗುವದೇನು? ಇಲ್ಲ. ಹೀಗೆಯೇ ಅಧ್ಯಾತ್ಮವಿದ್ಯೆಗೆ ತಕ್ಕ ಯೋಗ್ಯತೆಯಿದ್ದವರು ತಮ್ಮತಮ್ಮ ಅಧಿಕಾರಕ್ಕೆ ತಕ್ಕಂತೆ ಮನೋವಾಕ್ಕಾಯಪ್ರಧಾನವಾದ ಯಾವದಾದರೊಂದು ಸಾಧನವನ್ನು ಕೈಕೊಂಡು ಕ್ರಮಕ್ರಮವಾಗಿ ಮೇಲಿನ ಹಂತದ ಸಾಧನಕ್ಕೆ ಏರಬೇಕಾಗುತ್ತದೆ.

ವರ್ಣಾಶ್ರಮಗಳ ವಿಂಗಡದಲ್ಲಿಯೂ ಈ ಬಗೆಯ ಹಂತಗಳು ಕೆಲವಿವೆ. ಆದರೆ ಅಲ್ಲಿರುವ ಸೂಚಿತ ಪ್ರಭೇದಗಳ ಬಗ್ಗೆ ಬಲುಬೇಗನೆ ತೀರ್ಮಾನ ಮಾಡುವದು ಕಷ್ಟ. ಈ ಬಗ್ಗೆ ಮತ್ತೊಮ್ಮೆ ಬರೆಯುವೆನು.

## 311. ಬ್ರಹ್ಮವಿದ್ಯೆಯ ಈಗಿನ ದುರವಸ್ಥೆ

### (ಸೆಪ್ಟೆಂಬರ್ 1972)

*ನಿಮ್ಮ ಪತ್ರವು ತಲುಪಿ ನಿಮ್ಮ ಪ್ರಶ್ನೆಯ ಆಶಯವನ್ನು ತಿಳಿದುಕೊಂಡಿರುತ್ತೇನೆ. ಈಗಿನ ವಿದ್ಯಾಭ್ಯಾಸದಲ್ಲಿ ಇರುವ ಕೊರತೆ ಯಾವದು? ಇದರಲ್ಲಿ ಯಾವ ತಿದ್ದುಪಾಡನ್ನು ಮಾಡಿದರೆ ಲೋಕಕ್ಕೆ ಕಲ್ಯಾಣವಾದೀತು? ಅಧ್ಯಾತ್ಮವಿದ್ಯೆಯನ್ನು ಪಾಠಶಾಲೆಗಳಲ್ಲಿ ಬೋಧಿಸುವದು ಪ್ರಯೋಜನಕಾರಿಯಾದೀತೆ, ಅದು ಸಾಧ್ಯವೆ?—ಎಂದು ಕೇಳಿರುತ್ತೀರಿ.*

'ವಿದ್ಯೆಯಿಂದ ವಿನಯವುಂಟಾಗುವದು, ವಿನಯದಿಂದ ಯೋಗ್ಯತೆಯುಂಟಾಗುವದು, ಯೋಗ್ಯತೆಯಿಂದ ಧನಲಾಭವಾಗುವದು, ಧನದಿಂದ ಧರ್ಮವೂ ಆ ಧರ್ಮದಿಂದ ಸುಖವೂ ಉಂಟಾಗುವವು' ಎಂಬರ್ಥದ ಸುಭಾಷಿತವೊಂದುಂಟು. ಆದರೆ ಆ ಶ್ಲೋಕಕ್ಕೆ ಈಗಿನ ನಾಗರಿಕತೆಯ ದೃಷ್ಟಿಯಿಂದ ಜನರು ಬೇರೆಯ ಅರ್ಥವನ್ನೇ ಮಾಡಿಕೊಂಡಿರುವರೆಂದು ಹೇಳಬೇಕಾಗಿದೆ. 'ಓದುವದು ಸರಕಾರದ ಅಥವಾ ಸಾಹುಕಾರನ ನೌಕರಿಗೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವದಕ್ಕೆ; ಆ ನೌಕರಿಯಿಂದ ಹಣವು ದೊರಕುವದು; ಹಣದಿಂದ ಮನುಷ್ಯನ ನಡತೆಯೆಲ್ಲ ಜನರಿಗೆ ಮೆಚ್ಚಾಗುವದು, ಅದರಿಂದ ಮನುಷ್ಯನಿಗೆ ಸುಖವು ಸಿಕ್ಕುವದು' ಎಂಬುದು ಈಗಿನ ಬಹುಜನರ ಜೀವನ ಸೂತ್ರವಾಗಿಬಿಟ್ಟದೆ. ಓದು, ಬರಹ, ಲೆಕ್ಕಾಚಾರ, ಇತಿಹಾಸ, ಭೂಗೋಳದ ವಿವರಣೆಯ ವಿಜ್ಞಾನ—ಇವುಗಳ ತಿಳಿವಳಿಕೆಯೇ ವಿದ್ಯೆ. ಈ ವಿದ್ಯೆಯಿಂದ ಬೇರೆಬೇರೆಯ ಪ್ರಾಂತಗಳ ಸರಕಾರಗಳಲ್ಲಿ ನೌಕರನಾಗಿ ಅವುಗಳ ನೀತಿಗೆತಕ್ಕಂತೆ ವ್ಯವಹಾರಚತುರನಾಗಿ ವಿಷಯ ಭೋಗಗಳನ್ನೂ ಅವುಗಳ ಉಪಕರಣಗಳನ್ನೂ ರಾಶಿಹಾಕಿಕೊಳ್ಳುವದೇ ಸ್ವರ್ಗವು—ಎಂಬ ತಿಳಿವಳಿಕೆಯು ಯುವಕರಿಗೆ ಬೇರೂರಿಕೊಂಡುಬಿಟ್ಟದೆ!

ವಿದ್ಯೆ ಎಂದರೆ ಬುದ್ಧಿಯ ಚಾತುರ್ಯವಲ್ಲ, ವ್ಯವಹಾರಚತುರನಾಗುವದಕ್ಕೆ ಮಾಡಿಕೊಳ್ಳಬೇಕಾದ ತಿಳಿವಳಿಕೆಯ ಸಂಪಾದನೆಯಲ್ಲ, ವಿಶ್ವವಿದ್ಯಾಶಾಲೆ, ಸಕಲ ವಿದ್ಯಾಶಾಲೆ—ಎಂದು ಕರೆಯಿಸಿಕೊಳ್ಳುವ ಸ್ಥಾನಗಳಲ್ಲಿ ರಾಗದ್ವೇಷಗಳನ್ನು ಬೆಳೆಯಿಸಿಕೊಳ್ಳುವ ಜಾಣತನಕ್ಕೆ ಬೇಕಾದ ತಿಳಿವಳಿಕೆಯನ್ನು ಹೆಚ್ಚಿಸುವ ಪ್ರಯತ್ನವೇ ನಡೆದಿದೆ. ಭೂಮಂಡಲದಲ್ಲೆಲ್ಲ ವಿದ್ಯಾರ್ಥಿಗಳೆಂಬ ಹೆಸರಿನ ತರುಣತರುಣಿಯರು ಗುರುಹಿರಿಯರ

ಮೇಲೆ ತಿರುಗಿಬಿದ್ದು ದಂಗೆಯ ಮನೋಭಾವವನ್ನು ಪ್ರಚಾರಗೊಳಿಸುವ ಆಚಾರ್ಯರಾಗಿ ಬಿಟ್ಟಿರುತ್ತಾರೆ. ಮತಗಳೂ, ತತ್ತ್ವಶಾಸ್ತ್ರವಿಚಾರಗಳೂ ಮೋಸಗಾರರಿಗೂ ಹಿಂಸಕರಿಗೂ ಕೈಗೊಂಬೆಯಾಗಿಬಿಟ್ಟಿವೆ. ವೇದಾಂತದಲ್ಲಿರುವ ಬ್ರಹ್ಮವಿದ್ಯೆಯೂ ಒಂದು ಓದಿನ ಕಲೆಯೇ ಆಗಿಬಿಟ್ಟಿರುವದರಿಂದ ಜನರು ಅದಕ್ಕೂ ಆರ್ಥಿಕದೃಷ್ಟಿಯಿಂದಲೇ ಬೆಲೆಯನ್ನು ಕಟ್ಟುತ್ತ ಬಂದಿರುತ್ತಾರೆ!

ನಿಜವಾದ ಬ್ರಹ್ಮವಿದ್ಯೆ ಯಾವದು? ಅದನ್ನು ಹೇಗೆ ಪ್ರಚಾರ ಮಾಡಬೇಕು?– ಎಂಬುದನ್ನು ಇನ್ನೊಂದು ಪತ್ರದಲ್ಲಿ ಬರೆಯುವೆನು.

## 312. ಸಾಧನೆಯ ಕ್ರಮ

### (ಅಕ್ಟೋಬರ್ 1972)

*ನಿಮ್ಮ ಪತ್ರವು ಬಂದು ತಲುಪಿರುತ್ತದೆ. ನೀವು ಬರೆದಿರುವ ಸಾಧನಕ್ರಮಗಳು ಬಹಳ ಚೆನ್ನಾಗಿವೆ. ಅದರಲ್ಲಿರುವ ವಿವರಗಳನ್ನು ಕೇಳಿ, ನಿಮಗೆ ಈ ಇಳಿಯ ವಯಸ್ಸಿನಲ್ಲಿ ಇಷ್ಟು ಅನುಷ್ಠಾನವನ್ನು ಇಟ್ಟುಕೊಂಡಿರುವದು ಹೇಗೆ ಸಾಧ್ಯವಾಯಿತೊ!–ಎನಿಸುತ್ತಿದೆ.*

ಜಪ, ಸ್ತೋತ್ರ, ಪೂಜೆ–ಇಂಥ ಸಾಧನಗಳೆಲ್ಲ ಭಗವಂತನ ಭಾವನೆಯಿಂದಲೇ ಹೆಚ್ಚಿನ ಫಲವನ್ನು ಕೊಡುವವು. ಗಾಯತ್ರಿಯ ಜಪದಲ್ಲಿ ಹೇಳಿರುವಂತೆ ಭಗವಂತನು ಚೈತನ್ಯ (ಅರಿವಿನ) ರೂಪನಾಗಿರುತ್ತಾನೆ; ಆತನನ್ನು ನೆನಪಿಗೆ ತಂದುಕೊಳ್ಳುವದರಿಂದ ನಮ್ಮ ಬುದ್ಧಿಯು ಸರಿಯಾದ ಹಾದಿಯಲ್ಲಿ ನಡೆಯುವದಕ್ಕೆ ಸಹಾಯವಾಗುತ್ತದೆ. 'ಭಗವಂತನು ಒಳ್ಳೆಯ ಬುದ್ಧಿಯನ್ನು ಕೊಡಲಿ!' ಎಂಬುದೇ ಆ ಮಂತ್ರದ ಅರ್ಥ. ಹೀಗೆಯೇ ಶಿವಪಂಚಾಕ್ಷರಿಗೆ 'ಮಂಗಲರೂಪನಾದ ಭಗವಂತನಿಗೆ ನಮಸ್ಕಾರ!' ಎಂದು ಅರ್ಥ. ಅದರ ಅರ್ಥವನ್ನು ಅನುಸಂಧಾನ ಮಾಡಿದರೆ–ಎಂದರೆ ಮನಸ್ಸಿಗೆ ತಂದುಕೊಂಡರೆ ಸಾಧಕರಿಗೆ ಜೀವನದಲ್ಲಿ ಆಗಬಹುದಾದ ಅಮಂಗಲವು ನಾಶವಾಗುವದು. ಮುಖ್ಯವಾಗಿ ವಿಷಯಗಳ ಭಾವನೆಯನ್ನೇ ಮತ್ತೆಮತ್ತೆ ಮಾಡುತ್ತಿರುವ ಜೀವರಿಗೆ 'ಎಲ್ಲೆಲ್ಲಿಯೂ ಭಗವಂತನಿದಾನೆ; ಆತನಿಂದಲೇ ನಮ್ಮ ಇಂದ್ರಿಯಗಳು, ಮನಸ್ಸು, ಶರೀರ–ಇವುಗಳ ವ್ಯಾಪಾರವು ಸಾಗುತ್ತಿರುವದು'–ಎಂಬ ಭಾವನೆಯನ್ನು ಮನಸ್ಸಿನಲ್ಲಿ ಊಡಿಸಿಕೊಳ್ಳುವದೇ ಸರ್ವ ಪುರುಷಾರ್ಥಗಳಿಗೂ ಸಾಧಕವಾಗುವದು; ಎಲ್ಲಾ ಅನಿಷ್ಟಗಳೂ ತೊಲಗುವವು.

ಸಂಧ್ಯಾವಂದನೆ, ದೇವರಪೂಜೆ, ಅತಿಥಿಸತ್ಕಾರ–ಇಂಥ ನಿತ್ಯಕರ್ಮಗಳನ್ನು ಮಾಡುವದು, ಪರ್ವಕಾಲಗಳಲ್ಲಿ ವಾಡಿಕೆಯಲ್ಲಿರುವ ನೈಮಿತ್ತಿಕಕರ್ಮಗಳನ್ನು ಮಾಡುವದು–ಇವೂ ಭಗವದ್ಭಾವನೆಯಿಂದ ಕೂಡಿಯೇ ಇರಬೇಕು. ಆಗಲೇ ಇವು

ಅಧ್ಯಾತ್ಮಸಾಧನಗಳೆನಿಸುವವು. ಇಂಥ ಕರ್ಮಗಳನ್ನು ಮಾಡುವ ಪದ್ಧತಿಯಿಲ್ಲದ ಬೇರೆಯ ಜಾತಿಯವರೂ ಬೆಳಗ್ಗೆ ಹಾಸಿಗೆಯಿಂದ ಎದ್ದಾಗ ಮತ್ತು ರಾತ್ರೆ ಮಲಗುವ ಮುಂಚೆ ತಪ್ಪದೆ ಭಗವಂತನನ್ನು ನೆನಪಿಗೆ ತಂದುಕೊಳ್ಳಬೇಕು. 'ಭಗವಂತ! ಈ ದಿನ ನಾನು ಮಾಡುವ ವ್ಯವಹಾರದಲ್ಲಿ ನನಗೆ ದುಷ್ಟಬುದ್ಧಿಯು ಏಳದಂತೆ ಮಾಡು!' ಎಂದು ಬೆಳಗ್ಗೆ, ಮತ್ತು ರಾತ್ರೆ 'ಭಗವಂತ! ನಾನು ಅರಿತು ಅಥವಾ ಅರಿಯದೆ ಈ ದಿನ ಮಾಡಿದ ಪಾಪಗಳನ್ನು–ಎಂದರೆ ಮಾಡಬಾರದ ಕರ್ಮಗಳನ್ನು–ಮಾಡಿದ್ದನ್ನು ಕ್ಷಮಿಸು!' ಎಂದು ಹೀಗೆ ತಪ್ಪದೆ ಪ್ರಾರ್ಥನೆ ಮಾಡಿಕೊಳ್ಳುವದನ್ನು ಆಚರಣೆಗೆ ತಂದುಕೊಳ್ಳಬೇಕು.

ಸಾಧ್ಯವಾದರೆ ನಿಮ್ಮ ಊರಿನಲ್ಲಿ ಯಾರಾದರೂ ಇತಿಹಾಸ ಪುರಾಣಗಳನ್ನು ವಿವರಿಸಿ ಹೇಳುವವರಿದ್ದರೆ ಅವಶ್ಯವಾಗಿ ಶ್ರವಣ ಮಾಡಬೇಕು. ಅದರಿಂದ ಎಷ್ಟೋ ಸಂಶಯಗಳು ತೊಲಗುವವು.

## 313. ಚಾತುರ್ಮಾಸ್ಯವೂ ಮಹಾಲಯವೂ

### (ನವೆಂಬರ್ 1972)

*ನೀವು ಕೇಳಿರುವ ಪ್ರಶ್ನೆಗೆ ಪೂರ್ಣವಾಗಿ ಉತ್ತರವನ್ನು ಕೊಡುವದಕ್ಕೆ ನಾವಿಬ್ಬರೂ ಇನ್ನೊಮ್ಮೆ ಕಲೆತು ಮಾತನಾಡುವದು ಅವಶ್ಯ. ಆದರೂ ಇಲ್ಲಿ ಸಂಕ್ಷೇಪವಾಗಿ ಉತ್ತರವನ್ನು ಬರೆದಿರುತ್ತೇನೆ. ಇದರಿಂದ ಎಷ್ಟರಮಟ್ಟಿಗೆ ನಿಮಗೆ ಪ್ರಯೋಜನವಾಗುವದೋ ಅದು ನಿಮಗೇ ಗೊತ್ತಾಗಬೇಕಾಗಿದೆ.*

ಚಾತುರ್ಮಾಸ್ಯದಲ್ಲಿ ಗೃಹಸ್ಥರು ಹೇಗೆ ನಡೆದುಕೊಳ್ಳಬೇಕೆಂಬುದನ್ನು ಸ್ಮೃತಿಗಳಲ್ಲಿ ಬರೆದಿರುತ್ತಾರೆ. ಆಹಾರವಿಹಾರಗಳಲ್ಲಿ ಆಗ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಶಾಸ್ತ್ರದಿಂದಲೂ ದೇಶಾಚಾರ, ಕುಲಾಚಾರ–ಇವುಗಳಿಂದಲೂ ಅರಿತುಕೊಳ್ಳಬೇಕು. ಸಂನ್ಯಾಸಿಗಳು ಚಾತುರ್ಮಾಸ್ಯಕ್ಕಾಗಿ ಸಂಕಲ್ಪವನ್ನು ಮಾಡಿ ಒಂದೇ ಸ್ಥಳದಲ್ಲಿ ನಿಂತು ನಿಯತಕಾಲವು ಮುಗಿದಮೇಲೆಯೇ 'ಸೀಮೋಲ್ಲಂಘನೆ' (ಸ್ಥಲದ ಗಡಿಯನ್ನು ಬಿಟ್ಟು ಮತ್ತೊಂದು ನದೀತೀರಕ್ಕೆ ಹೋಗುವ ಕರ್ಮ)ವನ್ನು ಮಾಡಬೇಕು–ಎಂಬ ನಿಯಮವನ್ನು ಈಗಲೂ ಆಚರಣೆಯಲ್ಲಿಟ್ಟುಕೊಂಡಿರುತ್ತಾರೆ.

ಮುಖ್ಯವಾಗಿ ವರ್ಷಋತುವಿನ (ಮಳೆಗಾಲದ) ಒಂದೇ ಕಡೆಯಲ್ಲಿ ನಿಲ್ಲಬೇಕು–ಎಂದು ಗೌತಮಾದಿಸ್ಮೃತಿಗಳಲ್ಲಿದೆ. ಆಗ ಅವರು ವ್ಯಾಸಪೂಜೆಯನ್ನು ಮಾಡುವ ಪದ್ಧತಿಯಿದೆ. ಆ ಕ್ರಮದಲ್ಲಿ ಈಗ ಆಗಬೇಕಾಗಿರುವ ಮಾರ್ಪಾಡುಗಳು ಕೆಲವಿವೆ. ಅವನ್ನು ಎದುರಿಗೇ ಹೇಳಬೇಕಾಗಿದೆ. ಆದರೆ ಆಗ ಸಂನ್ಯಾಸಿಗಳಾದವರು–ಗೃಹಸ್ಥರು

ಕೊಡಬಹುದಾದ ಭಿಕ್ಷೆಯಿಂದಲೂ ಅವರ ಸತ್ಕಾರದಿಂದಲೂ–ತೃಪ್ತರಾಗಿ ಮುಖ್ಯವಾಗಿ ವೇದಾಂತವಿಚಾರದಲ್ಲಿಯೇ ನಿರತರಾಗಿರುವದು ಅತ್ಯವಶ್ಯವೆಂಬುದನ್ನು ಮರೆಯಬಾರದು.

ಮಳೆಗಾಲವು ಎಲ್ಲಾ ಕಡೆಯಲ್ಲಿಯೂ ಒಂದೇ ಸಮಯದಲ್ಲಿ ಒದಗುವದಿಲ್ಲವಾದರೂ ಸಂಕಲ್ಪವನ್ನು ಮಾತ್ರ ಆಚಾರಕ್ಕೆ ಅನುಗುಣವಾಗಿಯೇ ಮಾಡುತ್ತಿದಾರೆ. ಇದು ಹೇಗಾದರೂ ಇರಲಿ. ಪರಮಹಂಸರಾದವರು ಪ್ರಣವನಿಷ್ಠರಾಗಿ ತತ್ತ್ವಾನುಸಂಧಾನದಲ್ಲಿ ಕಾಲವನ್ನು ಕಳೆಯಬೇಕು ಎಂಬುದನ್ನು ಮುಖ್ಯವಾಗಿ ಲಕ್ಷಿಸಬೇಕು.

ಮಹಾಲಯವು ಪಿತೃತುಷ್ಟ್ಯರ್ಥವಾಗಿ ಗೃಹಸ್ಥರು ಮಾಡುವ ಕರ್ಮ. ಆದರೆ ಅದನ್ನು ಒಂದು ಹಬ್ಬವಾಗುವಂತೆ ಪರಿಣಮಿಸಿಕೊಂಡು ಊಟದ ವಿಸ್ತಾರದಲ್ಲಿಯೇ ಜನರು ಉತ್ಸಾಹವನ್ನು ತೋರಿಸುತ್ತಿದಾರೆ. ಈಗಿನ ಕಾಲದಲ್ಲಿ ದೇವತೆಗಳು, ಋಷಿಗಳು, ಪಿತೃದೇವತೆಗಳು–ಇವರ ಅಸ್ತಿತ್ವದಲ್ಲಿ ಶ್ರದ್ಧೆಯೂ ಅವರ ತೃಪ್ತಿಗಾಗಿ ಭಕ್ತಿಯಿಂದ ಕರ್ಮವನ್ನು ಮಾಡುವದರಲ್ಲಿ ಆದರವೂ ಶಿಥಿಲವಾಗಿಬಿಟ್ಟಿದೆ. ದೇವತಾರ್ಚನೆ, ವೇದಾಧ್ಯಯನದ ಉತ್ಸರ್ಜನೋಪಾಕರ್ಮಗಳು, ಋಷಿತರ್ಪಣ, ಪಿತೃಶ್ರಾದ್ಧ–ಇವುಗಳ ರಹಸ್ಯವನ್ನು ಶ್ರುತಿಸ್ಮೃತಿ ಪುರಾಣಗಳ ಆಧಾರದಿಂದ ಜನರಿಗೆ ತಿಳಿಯಿಸುವದಲ್ಲದೆ ತಮ್ಮ ಆದರ್ಶವಾದ ನಡತೆಯಿಂದಲೂ ಜನರನ್ನು ಸನ್ಮಾರ್ಗಕ್ಕೆ ಎಳೆಯುವ ಮಹಾತ್ಮರ ಅವಶ್ಯಕತೆಯು ಈಗ ಹೆಚ್ಚಾಗಿದೆ.

## 314. ಪರಮಹಂಸಪರಿವ್ರಾಜ್ಯ

(ಡಿಸೆಂಬರ್ 1972)

*ನಿಮ್ಮ ಪತ್ರವನ್ನು ಓದಿದೆನು. ನೀವು ಅಲ್ಲಲ್ಲಿ ತೀರ್ಥಕ್ಷೇತ್ರಗಳನ್ನು ನೋಡುತ್ತಾ ಅಲ್ಲಿಯ ದೃಶ್ಯವಿಶೇಷಗಳನ್ನು ನೋಡಿ ಏತರಲ್ಲಿಯೂ ಆಸಕ್ತನಾಗದೆ ಮುಂದುಮುಂದಕ್ಕೆ ಪ್ರಯಾಣ ಮಾಡುತ್ತಿರುವಿರೆಂಬುದು ಒಂದು ವಿಧವಾದ ಹರ್ಷಕ್ಕೆ ಕಾರಣವಾಗಿದೆ. ತುರ್ಯಾಶ್ರಮದಲ್ಲಿರುವವರಿಗೆ ಇದೊಂದು ಭೂಷಣವೇ ಸರಿ.*

ಆದರೆ ಪರಮಹಂಸಪರಿವ್ರಾಜಕರಾಗಿರುವವರು ಎರಡು ವರ್ಗಕ್ಕೆ ಸೇರಿರುತ್ತಾರೆ. ಅವರು ಪರಮಾರ್ಥತತ್ತ್ವದ ವಿಜ್ಞಾನವನ್ನು ಸಂಪಾದಿಸಿಕೊಳ್ಳುವ **ವಿವಿದಿಷು**ಗಳಾಗಿರಬಹುದು; ಇಲ್ಲವೆ, ಪರಮಾರ್ಥತತ್ತ್ವವನ್ನು ನೇರಾಗಿ ಅನುಭವಿಸುತ್ತಾ ಅಲ್ಲಲ್ಲಿ ಭಗವಂತನ ವಿಭೂತಿಗಳನ್ನು ಕಂಡು ಭಾವಸಮಾಧಿಯಿಂದ ಮತ್ತೆಮತ್ತೆ ಪರಮಾರ್ಥದ ಅನುಸಂಧಾನದಲ್ಲಿಯೇ ಮುಳುಗುತ್ತಿರುವ ಜೀವನ್ಮುಕ್ತರಾಗಿರುವ **ವಿದ್ವತ್ಸಂನ್ಯಾಸಿ**ಗಳಾಗಿಯೂ ಇರುತ್ತಾರೆ.

ಪಾರಿವ್ರಾಜ್ಯಕ್ಕೆ ಪ್ರಮಾಣವಿಲ್ಲವೆನ್ನುವವರೊಡನೆ ವಾದಮಾಡುವ ಹವ್ಯಾಸವನ್ನು ಬಿಟ್ಟುಬಿಡಬೇಕು. **'ಏತಂ ವೈ ತಮಾತ್ಮಾನಂ ವಿದಿತ್ವಾ ಬ್ರಾಹ್ಮಣಾಃ ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ ಲೋಕೈಷಣಾಯಾಶ್ಚ ವ್ಯುತ್ಥಾಯಾಥ ಭಿಕ್ಷಾಚರ್ಯಂ ಚರನ್ತಿ॥ '** (ಬೃ. 3–5–1) ಎಂಬ ಶ್ರುತಿಯಲ್ಲಿ ಹೇಳಿರುವಂತೆ ಅವಿದ್ಯಾಕಲ್ಪಿತವಾಗಿರುವ ದೇಹೇನ್ದ್ರಿಯಾದಿಸಂಘಾತವೇ ತಾನೆಂಬ ಅಭಿಮಾನರೂಪ ವಾದ ಭ್ರಾಂತಿಯಿರುವವರೆಗೇ ಲೌಕಿಕವೈದಿಕ ವ್ಯವಹಾರವಿರುತ್ತದೆ; ಯಾವಾಗ 'ಇದೆಲ್ಲವೂ ಹುಸಿತೋರಿಕೆಯೇ, ತನಗೆರಡನೆಯದಿಲ್ಲದ ಅದ್ವಿತೀಯಬ್ರಹ್ಮವೇ ನಾನು' ಎಂದು ಅನುಭವಕ್ಕೆ ಯಾರಿಗೆ ಬಂದಿರುವದೋ ಅಂಥವರಿಗೆ ಯಾವ ವಿಧಿಯು ತಾನೆ ಅಂಟೀತು? ಈ ಜ್ಞಾನದ ಮಹಿಮೆಯಿಂದಲೇ ಅವರಿಗೆ ಸರ್ವಕರ್ಮಸಂನ್ಯಾಸವು ಸ್ವತಃ ಸಿದ್ಧವಾಗಿರುತ್ತದೆ.

ಆದರೆ 'ಕರ್ಮವನ್ನು ಬಿಟ್ಟದ್ದರಿಂದ ನಮಗೆ ಪ್ರತ್ಯವಾಯವು ಬರುವದಿಲ್ಲವೆ?' ಎಂದು ನಿಮ್ಮಂತೆ ಕೇಳುವವರಿಗೆ–ಇನ್ನು ಆ ತತ್ತ್ವಜ್ಞಾನವಿಲ್ಲದಿದ್ದರೂ ತತ್ತ್ವವನ್ನೇ ಅರಿಯಬೇಕೆಂಬ ಇಚ್ಛೆಯುಳ್ಳವರಿಗೆ **'ಏತಮೇವ ಪ್ರವ್ರಾಜಿನೋ ಲೋಕಮಿಚ್ಛನ್ತಃ ಪ್ರವ್ರಜನ್ತಿ।'** (ಬೃ. 4–4–22) ಎಂಬ ಶ್ರುತಿಯಲ್ಲಿ ವಿವಿದಿಷಾಸಂನ್ಯಾಸವನ್ನು ವಿಧಿಸಿರುತ್ತದೆ. ಬ್ರಹ್ಮಸೂತ್ರದಲ್ಲಿ (ಸೂ. 3–4–20) **'ವಿಧಿರ್ವಾ ಧಾರಣವತ್'** ಎಂಬ ಸೂತ್ರಕ್ಕೆ ಆಚಾರ್ಯರು ಬರೆದಿರುವ ಭಾಷ್ಯವನ್ನು ನೋಡಿರಿ. ಆ ಸೂತ್ರದ ಭಾಷ್ಯದಲ್ಲಿ ಹೀಗಿದೆ:–

**'ಬ್ರಹ್ಮಸಂಸ್ಥಃ' ಇತಿ ಹಿ ಬ್ರಹ್ಮಣಿ ಪರಿಸಮಾಪ್ತಿಃ ಅನನ್ಯ ವ್ಯಾಪಾರತಾರೂಪಂ ತನ್ನಿಷ್ಠತ್ವಮ್ ಅಭಿಧೀಯತೇ। ತಚ್ಚ ತ್ರಯಾಣಾಮ್ ಆಶ್ರಮಾಣಾಂ ನ ಸಂಭವತಿ। ಸ್ವಾಶ್ರಮವಿಹಿತಕರ್ಮಾನನುಷ್ಠಾನೇ ಪ್ರತ್ಯವಾಯಶ್ರವಣಾತ್ । ಪರಿವ್ರಾಜಕಸ್ಯ ತು ಸರ್ವಕರ್ಮ ಸಂನ್ಯಾಸಾತ್ ಪ್ರತ್ಯವಾಯೋ ನ ಸಂಭವತ್ಯನನುಷ್ಠಾನನಿಮಿತ್ತಃ । ಶಮದಮಾದಿಸ್ತು ತದೀಯೋ ಧರ್ಮೋ ಬ್ರಹ್ಮಸಂಸ್ಥತಾಯಾ ಉಪೋದ್ಬಲಕೋ ನ ವಿರೋಧೀ। ಬ್ರಹ್ಮನಿಷ್ಠತ್ವಮೇವ ಹಿ ತಸ್ಯ ಶಮದಮಾದ್ಯುಪಬೃಂಹಿತಂ ಸ್ವಾಶ್ರಮ ವಿಹಿತಂ ಕರ್ಮ ಯಜ್ಞಾದೀನಿ ಚೇತರೇಷಾಮ್। ತದ್ವ್ಯತಿಕ್ರಮೇ ಚ ತಸ್ಯ ಪ್ರತ್ಯವಾಯಃ॥**

ಈ ವಾಕ್ಯದ ಅಭಿಪ್ರಾಯವನ್ನು ಮನಮುಟ್ಟಿ ಮನಸ್ಸಿನಲ್ಲಿ ಹೊರಳಾಡಿಸಬೇಕು. ಶ್ರುತಿಯಲ್ಲಿ ಹೇಳಿರುವ ಶಮದಮಾದಿಗಳನ್ನೂ ಸ್ಮೃತಿಗಳಲ್ಲಿ ಹೇಳಿರುವ ಜ್ಞಾನಸಾಧನ ಗಳನ್ನೂ ಅಳವಡಿಸಿಕೊಂಡು ಮಿಕ್ಕ ಕರ್ಮವನ್ನೆಲ್ಲ ಬಿಟ್ಟು ಬ್ರಹ್ಮಾತ್ಮರೂಪದಲ್ಲಿ ನಿಲ್ಲುವದಕ್ಕೆ ಪ್ರಯತ್ನಿಸುವದೇ ಪರಿವ್ರಾಜಕನಿಗೆ ವಿಹಿತವಾಗಿರುವ ಆಶ್ರಮಕರ್ಮವು. ಅದನ್ನು ಬಿಟ್ಟರೆ ಅವನಿಗೆ ಪ್ರತ್ಯವಾಯವುಂಟಾಗುವದು ನಿಶ್ಚಯ.

ಕಾವಿಯನ್ನುಟ್ಟುಕೊಂಡು ದಂಡಕಮಂಡಲುಗಳನ್ನು ಧರಿಸಿರುವ ಮಾತ್ರದಿಂದ ತಾವು ಪರಿವ್ರಾಜಕರೆಂದು ಹೇಳಿಕೊಳ್ಳುವವರು ದಾಂಭಿಕರಾವಣಸಂನ್ಯಾಸಿಗಳು. ಅವರಿಗೆ ಏಷಣಾತ್ರಯದ ಮಲವು ಇನ್ನೂ ತಪ್ಪಿರುವದೇ ಇಲ್ಲವಾದರೂ ಶಾಸ್ತ್ರವಿಹಿತವಾದ ಆಶ್ರಮಕರ್ಮವನ್ನು ಬಿಟ್ಟ ಪ್ರತ್ಯವಾಯದೋಷವೂ ಉಂಟು. ಈಗ ಬ್ರಹ್ಮಾನುಸಂಧಾನವನ್ನು ಬಿಟ್ಟು ಲೌಕಿಕವಿಚಾರಗಳಲ್ಲಿ ಮನಸ್ಸುಹಾಕುವದರಿಂದ ಪಾತಿತ್ಯವೂ ಉಂಟಾಗುವದು.

ಆದ್ದರಿಂದ ನೀವು ಎಲ್ಲಿಯೇ ಇರುತ್ತಿದ್ದರೂ ಬ್ರಹ್ಮತತ್ತ್ವದ ಅನುಸಂಧಾನವನ್ನು ಬಿಡಬೇಡಿರಿ. ಉಪನಿಷತ್ತುಗಳಲ್ಲಿ ಹೇಳಿರುವ ಪರಮಾತ್ಮಸ್ವರೂಪವನ್ನು ಅನುಸಂಧಾನ ಮಾಡುತ್ತಾ:

**ಯದೃಚ್ಛಾಲಾಭಸನ್ತುಷ್ಟೋ ದ್ವನ್ದ್ವಾತೀತೋ ವಿಮತ್ಸರಃ ।**
**ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಪಿ ನ ನಿಬಧ್ಯತೇ ॥ ಗೀ. 4–22**

ಎಂದಿರುವಂತೆ ನಿಮಗೆ ಶರೀರಸ್ಥಿತಿಗೆ ಮಾತ್ರ ಬೇಕಾದಷ್ಟು ಅನ್ನಪಾನಾದಿಗಳು ಸಿಕ್ಕಿದಷ್ಟಕ್ಕೇ ತೃಪ್ತರಾಗಿ, ಅದೂ ಸಿಕ್ಕದಿದ್ದರೆ ಮನಸ್ಸಿಗೆ ಉದ್ವೇಗವನ್ನು ತಂದುಕೊಳ್ಳದೆ ಶೀತೋಷ್ಣಾದಿದ್ವಂದ್ವಗಳನ್ನು ಸಹಿಸಿಕೊಂಡು ಯಾರೊಬ್ಬರಲ್ಲಿಯೂ ವೈರಬುದ್ಧಿಯನ್ನು ಮಾಡದೆ ವ್ಯಾವಹಾರಿಕದೃಷ್ಟಿಯಿಂದ ಮಾಡಬಹುದಾದ ಕರ್ಮಗಳಲ್ಲಿಯೂ ಕರ್ತೃತ್ವ ಬುದ್ಧಿಯನ್ನು ಇಟ್ಟುಕೊಳ್ಳದೆ, ಹೊರಗೆ ತೋರುತ್ತಿರುವ ವಿಶ್ವದಲ್ಲಿಯೂ 'ಇದೆಲ್ಲವೂ ಬ್ರಹ್ಮಾತ್ಮನೇ!' ಎಂಬ ಬುದ್ಧಿಯನ್ನು ಅಳವಡಿಸಿಕೊಂಡು ಸಂಚಾರದಲ್ಲಿರುವ ಪ್ರಯತ್ನವನ್ನು ಮಾಡಿರಿ.

ಇದರಿಂದ ನಿಮಗೆ ಜ್ಞಾನಪ್ರಾಪ್ತಿಯಾಗಿ 'ಬ್ರಾಹ್ಮೀಸ್ಥಿತಿಯ' ಪ್ರಾಪ್ತಿಯು ಬೇಗನೆ ಆಗುವದು. ಶ್ರೀಭಗವತ್ಪಾದಾಚಾರ್ಯರ ಅನುಗ್ರಹದಿಂದ ನಿಮಗೆ ಇಂಥ ಸ ಸ್ಥಿತಿಯು ಬೇಗನೆ ಅಳವಡಲಿ!–ಎಂದು ಪ್ರಾರ್ಥಿಸುತ್ತೇನೆ.

## 315. ಪತಿಭಕ್ತಿ

**(ಜನವರಿ 1973)**

*ನಿಮ್ಮ ಪತ್ರವನ್ನು ಓದಿನೋಡಿಕೊಂಡೆ. ''ಪತಿಯನ್ನು ದೇವರೆಂದು ಭಾವಿಸುವದು ಹೇಗೆ? ಬೆಳಗ್ಗೆ ಎದ್ದು ಸಾಯಂಕಾಲದವರೆಗೆ ದುಡಿಯುತ್ತಿದ್ದರೂ ಒಂದಲ್ಲದಿದ್ದರೆ ಒಂದು ನೆಪದಿಂದ ಏನಾದರೊಂದು ಆಕ್ಷೇಪವನ್ನು ಎತ್ತುತ್ತಿರುವರನ್ನು 'ದೇವರು' ಎಂದು ಕಾಣುವದಕ್ಕೆ ಮನಸ್ಸಾದರೂ*

*ಹೇಗೆ ಬರಬೇಕು''? ಎಂದು ಮುಂತಾಗಿ ಬರೆದಿರುತ್ತೀರಿ. 'ಗೌರಿಯ ಪೂಜೆಯನ್ನು ಪ್ರತಿದಿನವೂ ಮಾಡುತ್ತಿರುತ್ತೇನೆ. ಆದರೆ ಮನಸ್ಸಿಗೆ ಅದರಿಂದ ಯಾವ ಶಾಂತಿಯೂ ಬಂದಿಲ್ಲ'–ಎಂದೂ ಬರೆದಿರುತ್ತೀರಿ.*

ನಿಮ್ಮ ಪತ್ರವನ್ನು ಮೊದಲಿನಿಂದ ಕೊನೆಯವರೆಗೂ ಓದಿದ ಮೇಲೆ ನನಗೆ ಕೆಲವು ಅಭಿಪ್ರಾಯಗಳು ಮೂಡಿವೆ. ಈ ವಿಷಯಕ್ಕೆ ಇಲ್ಲಿ ಕೆಲವು ಮಾತುಗಳನ್ನು ಬರೆಯುತ್ತಿದೇನೆ. ಬೇಸರವಿಲ್ಲದೆ ಓದಿಕೊಂಡು ಈ ಉತ್ತರದಿಂದ ಏನಾದರೂ ಸಮಾಧಾನವು ಸಿಕ್ಕೀತೊ, ಹೇಗೆಂಬುದನ್ನು ನೋಡಿಕೊಂಡ ಮೇಲೆ ಮತ್ತೊಂದು ಪತ್ರದಲ್ಲಿ ನಿಮ್ಮ ಕುಟುಂಬದ ಸ್ಥಿತಿಯನ್ನು ಸ್ವಲ್ಪ ವಿವರಿಸಿ ಬರೆಯಿರಿ.

ಮನೆಯಲ್ಲಿ ನಿಮ್ಮ ಅತ್ತೆ, ಮಾವ–ಇವರೂ ಇದಾರೆಯೆ? ಅವರಿಗೆ ನಿಮ್ಮ ವಿಷಯದಲ್ಲಿ ಏನು ಭಾವನೆ ಉಂಟಾಗಿದೆ? ಕುಟುಂಬದಲ್ಲಿ ದಿನದಿನದ ಜೀವನಕ್ಕೆ ತೊಂದರೆಯೇನೂ ಇಲ್ಲವಷ್ಟೆ? ನಿಮ್ಮ ಅತ್ತೆಯವರು ಜೀವಂತರಾಗಿರುತ್ತಾರೆಂದು ಹೇಗೋ ನನಗೆ ಊಹೆಯಾಗಿಬಿಟ್ಟಿದೆ. ಅವರು ನಿಮಗೆ ಬಹಳ ಕೆಲಸವನ್ನು ಹೇಳುತ್ತಿದಾರೆಯೆ? ನೀವು ಎಷ್ಟರ ಮಟ್ಟಿಗೆ ಓದಿರುತ್ತೀರಿ? ನಿಮಗೆ ಓದುವದಕ್ಕೆ, ಅಥವಾ ಪುರಾಣಶ್ರವಣವೇ ಮುಂತಾದ ಸತ್ಕಾಲಕ್ಷೇಪವನ್ನು ಮಾಡುವದಕ್ಕೆ ಅವಕಾಶವಿದೆಯೆ? ನಿಮ್ಮ ಅತ್ತೆಯವರಿಗೂ ನಿಮಗೂ ಇರಬಹುದಾದ ಮತಭೇದದಿಂದ ನಿಮ್ಮ ಯಜಮಾನರಿಗೆ ಬೇಸರವಾಗಿರ ಬಹುದೆ? ಅವರು ಯಾವಾಗಲೂ ನಿಮ್ಮನ್ನು ಬಯ್ಯುತ್ತಲೇ ಇರುತ್ತಾರೆಯೇ? ಅವರು ಉದ್ಯೋಗದ ನಿಮಿತ್ತ ಹೊರಗೆ ಹೋದಾಗ ಮನೆಯಲ್ಲಿ ನಿಮ್ಮ ಮನಃಸ್ಥಿತಿ ಹೇಗೆ ಇರುತ್ತದೆ?–ಇವನ್ನೆಲ್ಲ ವಿವರಿಸಿ.

ಸದ್ಯಕ್ಕೆ ನಾನು ಊಹಿಸಿರುವ ವಿಷಯಗಳು ನಿಜವಾದರೆ, ಈ ಕಾಗದದಲ್ಲಿರುವ ಬುದ್ಧಿವಾದವನ್ನು ಮನಸ್ಸಿನಲ್ಲಿ ಹೊರಳಾಡಿಸಿ, ಅದರಿಂದ ಆದ ಲಾಭವನ್ನು ಪಡೆದುಕೊಳ್ಳಿರಿ. ಹಾಗಿಲ್ಲದಿದ್ದರೆ ಈ ಕಾಗದವನ್ನು ಹರಿದುಹಾಕಿಬಿಟ್ಟು ನಿಮ್ಮ ಕುಟುಂಬದ ವಾಸ್ತವಸ್ಥಿತಿಯನ್ನು ಇನ್ನೊಂದು ಪತ್ರದ ಮೂಲಕ ವಿವರಿಸಿರಿ. ಆಗ ನನ್ನ ಸೂಚನೆಗಳನ್ನು ಮತ್ತೆ ಬರೆಯುವೆನು.

ಮನಸ್ಸಮಾಧಾನವನ್ನು ಕಾಯ್ದುಕೊಳ್ಳುವದು ಯಾವ ಸ್ಥಿತಿಯಲ್ಲಿಯೂ ಅವಶ್ಯ. ದೇವರ ವಿಷಯದಲ್ಲಿ ನೀವು ಪತ್ರವನ್ನು ಬರೆದಿರುವದರಿಂದ ಈಗ ಆ ವಿಷಯಕ್ಕೆ ಎರಡು ವಾಕ್ಯಗಳನ್ನು ಬರೆದಿರುತ್ತೇನೆ.

'ದೇವರು' ಎಂದರೆ ನೀವು ಪೂಜೆಮಾಡುತ್ತಿರುವ ಗೊಂಬೆಯಂತೆ, ನೀವು ಮಾಡಿದ ಅಲಂಕಾರಕ್ಕೆ ಒಪ್ಪಿ, ನೀವು ಒಪ್ಪಿಸುವ ಹೂಗಳ ಪೂಜೆ, ಹಣ್ಣುಹಂಪಲುಗಳ ನೈವೇದ್ಯದ ವಸ್ತು–ಇವುಗಳ ವಿಷಯಕ್ಕೆ ಯಾವ ಪ್ರತಿಕ್ರಿಯೆಯ ಮಾತನ್ನೂ ಆಡದೆ ಇರುವ

ತತ್ತ್ವವೆಂದು ಭಾವಿಸಬಾರದು. ನಿಮ್ಮ ಅತ್ತೆ, ನಿಮ್ಮ ಪತಿ–ಮೊದಲಾದವರಿಗಿಂತಲೂ ಹೆಚ್ಚು ನಿಮ್ಮ ಹತ್ತಿರವೇ ಯಾವಾಗಲೂ ಇರುತ್ತಿರುವ, ನೀವು ಮಾಡುತ್ತಿರುವ ಕೆಲಸಗಳು, ನಿಮ್ಮ ವಿಚಾರಗಳು, ಮಾತುಗಳು–ಇವೆಲ್ಲಕ್ಕೂ ಪ್ರೇರಕವಾಗಿ ಅವುಗಳಿಗೆ ತಕ್ಕ ಫಲವು ನಿಮಗೆ ತಪ್ಪದೆ ಲಭಿಸುವಂತೆ ಏರ್ಪಡಿಸುತ್ತಾ ಇರುವವನು, ಆತನು. ನಿಮ್ಮ ತಂದೆ ತಾಯಿ, ಬಂಧು ಬಳಗ–ಎಲ್ಲರಿಗಿಂತಲೂ ಹೆಚ್ಚಾಗಿ ನಿಮ್ಮ ಹಿತಕ್ಕೇ ಹೇತುವಾದ ನಿಮ್ಮ ಆತ್ಮ(ಸ್ವರೂಪ)ವೇ ಆಗಿ ಇದ್ದುಕೊಂಡಿರುವವನು, ಆತನು.

'ಗುರುಹಿರಿಯರಲ್ಲಿ ದೇವರ ಭಾವನೆಯನ್ನು ಮಾಡಬೇಕು'–ಎಂದರೆ ಅವರು ಹೊರಗೆ ಹೇಗೇ ವರ್ತಿಸುತ್ತಿರಲಿ, ಅವರ ಅಂತರಾತ್ಮನೂ ದೇವರೇ ಎಂಬ ಭಾವನೆಯನ್ನು ಮನಸ್ಸಿಗೆ ತಂದುಕೊಳ್ಳುತ್ತಿರಬೇಕು ಎಂದರ್ಥ. ಶಾಸ್ತ್ರದೃಷ್ಟಿಯಂತೆ ನೋಡಿದರೆ ಸಾತ್ತ್ವಿಕರು, ರಾಜಸರು, ತಾಮಸರು–ಹೀಗೆ ಮೂರು ವಿಧವಾಗಿರುವ ಜನರ ನಡೆ ನುಡಿಗಳು ಭಿನ್ನವಾಗಿದ್ದರೂ ಅವರ ಆತ್ಮನೂ ನಿಜವಾಗಿ ಭಗವಂತನೇ ಆಗಿರುತ್ತಾನೆಂಬ ಬಲ್ಲವರ ಉಪದೇಶವನ್ನು ನೆನಪಿನಲ್ಲಿಟ್ಟುಕೊಂಡು ನಮ್ರತೆಯಿಂದ ನಡೆಯಬೇಕು. ಈಗ ನಿಮಗೆ ಯಾವದಾದರೂ ಕಾರಣದಿಂದ ನಿಮ್ಮ ಪತಿಯಾಗಲಿ, ಅತ್ತೆಯವರಾಗಲಿ ಮತ್ತೆ ಯಾವ ಬಂಧುಗಳಾಗಲಿ ಮನಸ್ಸಿಗೆ ನೋವಾಗುವಂತೆ ನಡೆದುಕೊಳ್ಳುತ್ತಿದ್ದರೂ ಅದಕ್ಕೆ ಕಾರಣವು ನಿಮ್ಮ ಕರ್ಮದ ಫಲವೆಂದೂ ಈ ಸಂನಿವೇಶವನ್ನು ನಿಮ್ಮ ನಡತೆಯಿಂದಲೇ ಬಲುಮಟ್ಟಿಗೆ ಸರಿಪಡಿಸಿಕೊಳ್ಳುವದು ಸಾಧ್ಯವೆಂದೂ ನಂಬಿರಿ.

ನೀವು ಗೌರಿಯ ಪೂಜೆಯನ್ನು ಮಾಡುತ್ತಿರುವಾಗ ಜಗತ್ತೆಲ್ಲವನ್ನೂ ಹಡೆದು ಪೋಷಿಸುತ್ತಿರುವ ತಾಯಿಯೇ ಈ ರೂಪದಲ್ಲಿರುತ್ತಾಳೆ–ಎಂಬ ಭಾವನೆಯಿರಬೇಕು. ಹೀಗೆಯೇ ನಿಮ್ಮ ಗಂಡ, ಅತ್ತೆ–ಮುಂತಾದ ಎಲ್ಲರಲ್ಲಿಯೂ 'ನನ್ನ ಉಪಾಸ್ಯನಾದ ದೇವರೇ ಈ ರೂಪದಲ್ಲಿರುತ್ತಾನೆ'–ಎಂದುಕೊಂಡು ಗೌರವದಿಂದ ಅವರ ಸೇವೆಯನ್ನು ಮಾಡುತ್ತಿರಬೇಕು. ಇದರಿಂದ, ನಿಮ್ಮ ಶಾಂತಸ್ವಭಾವದ ಪರಿಣಾಮವು ಅವರ ಮೇಲೂ ಆಗಿ ಅವರೂ ನಿಮ್ಮ ವಿಷಯಕ್ಕೆ ಸೌಮ್ಯರಾಗಿ ವರ್ತಿಸುವರು. ನೀವು ಈ ಸಾಧನವನ್ನು ಇಟ್ಟುಕೊಂಡು ಇದರ ಪರಿಣಾಮವೇನಾಗುವದೆಂಬುದನ್ನು ನನಗೆ ಬರೆಯಿರಿ.

## 316. ಉತ್ಸವಗಳು

### (ಫೆಬ್ರವರಿ 1973)

*ಮಹಾಶಯ, ನಿಮ್ಮ ಪತ್ರವನ್ನು ಓದಿ ಅಭಿಪ್ರಾಯವನ್ನು ತಿಳಿದುಕೊಂಡೆನು. ಉತ್ಸವಗಳನ್ನು ಮಾಡುವದರ ಗುರಿಯೇನು? ನಿಮ್ಮ ಕಾರ್ಯಾಲಯದಲ್ಲಿ ಪ್ರತಿವರ್ಷವೂ ಗೀತಾಜಯಂತಿ, ಶ್ರೀ*

*ಬ್ರಹ್ಮಚೈತನ್ಯರ ಆರಾಧನೆ–ಎಂಬ ಉತ್ಸವಗಳನ್ನು ಮಾಡುತ್ತಿರುವದು ಸರಿಯಷ್ಟೆ? ಆ ಉತ್ಸವಗಳಲ್ಲಿ ಭಾಗಿಗಳಾಗಿರುವವರಿಗೆ ಯಾವ ಪ್ರಯೋಜನವಾಗುವದೆಂದು ಉದ್ದೇಶಿಸಿದೆ?–ಎಂದು ಕೇಳಿರುತ್ತೀರಿ.*

ಉತ್ಸವ–ಎಂಬ ಶಬ್ದಕ್ಕೆ ಭಗವಂತನ ವಿಚಾರವನ್ನು ಕೇಳಿದವರಿಗೆ ಹರ್ಷವನ್ನುಂಟುಮಾಡುತ್ತದೆಯೆಂಬ ಅರ್ಥವಿರುವದರಿಂದ–ಭಗವಂತನ ವಿಚಾರದಲ್ಲಿಯೂ ಆತನ ಗುಣಕರ್ಮಲೀಲೆಗಳನ್ನು ನೆನಪಿಗೆ ತಂದುಕೊಡುವ ಭಕ್ತರ ವಿಚಾರದಲ್ಲಿಯೂ ಆಸಕ್ತಿಯನ್ನುಂಟುಮಾಡಬೇಕೆಂಬುದೇ ಉತ್ಸವಗಳನ್ನು ಏರ್ಪಡಿಸುವ ಉದ್ದೇಶವು. ಉತ್ಸವಕಾಲಗಳು ಕೇವಲ ಭಗವಂತನ ವಿಷಯದ ಶ್ರವಣಕ್ಕಾಗಿಯೇ ಬರುವ ಆಸ್ತಿಕರ ಸಮ್ಮೇಲನವಾಗಬೇಕು.

ಮಹಾಭಾರತಯುದ್ಧವು ನಡೆದ ದ್ವಾಪರಯುಗದಲ್ಲಿ ಶ್ರೀಕೃಷ್ಣನೆಂಬ ಹೆಸರಿನಿಂದ ಅವತರಿಸಿದ್ದ ಭಗವಂತನು ತನ್ನ ಅವತಾರದ ತತ್ತ್ವವು ಸಾಧುಗಳ ರಕ್ಷಣೆ, ದುಷ್ಟರ ನಾಶ, ಧರ್ಮದ ಸ್ಥಾಪನೆ–ಎಂಬ ಮೂರು ಪ್ರಯೋಜನಗಳುಳ್ಳದ್ದೆಂದು ಭಕ್ತನಾದ ಅರ್ಜುನನನ್ನು ನಿಮಿತ್ತವಾಗಿಟ್ಟುಕೊಂಡು ಎಲ್ಲರಿಗೂ ಉಪದೇಶಿಸಿರುತ್ತಾನೆ. ಭಗವಾನ್ ವೇದವ್ಯಾಸರು ಆ ಉಪದೇಶವನ್ನು ಏಳುನೂರೇ ಶ್ಲೋಕಗಳಲ್ಲಿ ಸಂಗ್ರಹಿಸಿ ಬರೆದ ಅಲ್ಪಾಕಾರದ ಗ್ರಂಥವು ನಮ್ಮ ಸೌಭಾಗ್ಯದಿಂದ ಇನ್ನೂ ದೊರೆಯುತ್ತಿದೆ. ಸರ್ವಭೂತಗಳಿಗೂ ಆತ್ಮನಾಗಿರುವ ಆ ಭಗವಂತನು ಈಗಲೂ ನಮ್ಮಗಳ ಹೃದ್ದೇಶದಲ್ಲಿದ್ದುಕೊಂಡಿರುತ್ತಿದ್ದರೂ ಅಷ್ಟು ಸಮೀಪವಾಗಿ ನಮಗೆ ದರ್ಶನಯೋಗ್ಯನಾಗಿರುವ ಈ ಯೋಗೇಶ್ವರನನ್ನು ಮರೆತು, ಕಾಮಕ್ರೋಧಗಳಿಗೆ ಪರವಶರಾಗಿ ಮಾಡಬಾರದ ಆಸುರಕೃತ್ಯಗಳಿಗೆ ಹೇಸದೆ ಪಾಪಕೂಪದಲ್ಲಿ ಬೀಳುತ್ತಿರುವ ಕಲಿಗಾಲದ ಜನರಿಗೆ ಗೀತೆಯ ಸದುಪದೇಶಗಳನ್ನು ನೆನಪುಕೊಡುವ ಗೀತಾಜಯಂತ್ಯುತ್ಸವವು ಆತ್ಮೋದ್ಧಾರಕ್ಕೆ ಸಹಾಯಕವಾಗುವದೆಂಬುದರಲ್ಲಿ ಸಂಶಯವೆಲ್ಲಿಂದ ಬರಬೇಕು?

ಭಗವದ್ಭಕ್ತರುಗಳು ಇಲ್ಲದ ಕಾಲವೇ ಇರುವದಿಲ್ಲ. ಅವರ ದರ್ಶನ, ಪಾದಸ್ಪರ್ಶನ, ಸಂಭಾಷಣೆ, ಉಪದೇಶಶ್ರವಣ–ಮುಂತಾದ ದ್ವಾರಗಳಿಂದ ಕಲಿಕಲ್ಮಷವನ್ನು ತೊಳೆದುಕೊಳ್ಳುವದಕ್ಕೆ, ಅಂಥ ಮಹನೀಯರ ಸಂಸ್ಮರಣೆಗೆ ಅವಕಾಶವನ್ನು ಕಲ್ಪಿಸುವ ಉತ್ಸವಗಳು ಉತ್ತಮವಾದ ಸಾಧನಗಳಾಗುವವೆಂಬುದನ್ನು ಆಸ್ತಿಕರೆಲ್ಲರೂ ಒಪ್ಪುತ್ತಾರೆ. ಈ ಕಲಿಯುಗದಲ್ಲಿಯೂ ಎಷ್ಟೋ ಜನ ಭಗವದ್ಭಕ್ತರಾದ ಸಾಧುಗಳು ಆವಿರ್ಭವಿಸಿ ತಮ್ಮ ನಡೆನುಡಿಗಳಿಂದ ಸಾಧಕರಿಗೆ ಮೇಲುಪಙ್ಕ್ತಿಯನ್ನು ಹಾಕಿಕೊಟ್ಟಿರುತ್ತಾರೆ. ಅಂಥವರಲ್ಲಿ ಬಹಳ ಇತ್ತೀಚೆಗೆ ಶ್ರೀರಾಮದಾಸರ ಪಂಥದ ಪೀಳಿಗೆಯಲ್ಲಿ

ಮಹಾರಾಷ್ಟ್ರಕರ್ಣಾಟಕದೇಶಗಳ ನಡುವೆ ಇದ್ದು ತಮ್ಮ ಮನೆಯನ್ನೇ ಶಿಷ್ಯರಿಗೆಲ್ಲ ಮುಕ್ತಿದ್ವಾರವಾದ ರಾಮಮಂದಿರವಾಗಿ ಮಾರ್ಪಡಿಸಿಕೊಂಡು ರಾಮನಾಮದ ಮಹತ್ತ್ವವನ್ನು ಮನಗಾಣಿಸಿಕೊಟ್ಟ ಮಹನೀಯರೆಂದರೆ ಶ್ರೀ ಗೋಂದಾವಲಿಯ ಬ್ರಹ್ಮಚೈತನ್ಯಸದ್ಗುರುಮಹಾರಾಜರವರು. ಅಂಥವರ ಶಿಷ್ಯವೃತ್ತಿಗೆ ಹಾತುವರಿಯುತ್ತಿದ್ದ ಲೌಕಿಕವೈದಿಕಬ್ರಾಹ್ಮಣರು, ಬ್ರಾಹ್ಮಣೇತರ ಜಾತಿಯ ಹಿಂದುಗಳು, ಧರ್ಮದಲ್ಲಿ ಆಸಕ್ತಿಯುಳ್ಳ ಹಿಂದುಗಳಲ್ಲದ ಶುಶ್ರೂಷಗಳು—ಇವರುಗಳು. ಅವರು ದೇಶದ ಬೇರೆ ಬೇರೆಯ ಕಡೆಗಳಲ್ಲಿ ಸ್ಥಾಪಿಸಿರುವ ರಾಮಮಂದಿರಗಳಲ್ಲಿ ಈಗಲೂ ಅಲ್ಲಲ್ಲಿ ಕಂಗೊಳಿಸುತ್ತಿದಾರೆ.

ಅಧ್ಯಾತ್ಮವಿದ್ಯೆಯನ್ನು ಅನುಭವಕ್ಕೆ ತಂದುಕೊಂಡು ಕೃತಾರ್ಥರಾಗಬಹುದೆಂಬುದಕ್ಕೆ ನಿದರ್ಶನವಾಗಿ ಅನೇಕ ಆಚಾರ್ಯರುಗಳು ಬರೆದಿರುವ ವೇದಾಂತ ಭಾಷ್ಯಗಳು ಈಗಲೂ ಪ್ರಚುರವಾಗಿವೆ. ಅಂಥ ಅನುಭವವನ್ನು ತಂದುಕೊಳ್ಳುವದಕ್ಕೆ ಬೇಕಾಗಿರುವ ಕರ್ಮಯೋಗ, ಧ್ಯಾನಯೋಗ, ಭಕ್ತಿಯೋಗ—ಮುಂತಾದ ಬಗೆಬಗೆಯಾದ ಯೋಗಗಳನ್ನು ಮನಸ್ಸಿನಲ್ಲಿ ಪ್ರತಿಬಿಂಬಿಸುವದಕ್ಕೆ ಸಾಧನವಾಗಿರುವ ಭಗವದ್ಗೀತೆಯ ಉಪದೇಶವನ್ನು ನೆನಪಿಗೆ ತಂದುಕೊಳ್ಳುವದಕ್ಕೆ ಗೀತಾಜಯಂತಿಯ ಉತ್ಸವವನ್ನು ಬಲ್ಲವರು ಏರ್ಪಡಿಸಿರುತ್ತಾರೆ. ಈ ಕ್ರಮವನ್ನೇ ಕಾರ್ಯಾಲಯದಲ್ಲಿಯೂ ಆಚರಣೆಗೆ ತರಲಾಗಿದೆ.

ಭಗವದ್ಗೀತೆಯ ಶ್ಲೋಕಗಳನ್ನು ಸಾರ್ಥವಾಗಿ ಪಾರಾಯಣಮಾಡುವದು, ಅದರ ಮೇಲೆ ಭಕ್ತಿಪ್ರಧಾನವಾಗಿ ಬರೆದಿರುವ ಭಾಷ್ಯಗಳ ಪ್ರವಚನಕ್ಕೆ ಏರ್ಪಾಡುಮಾಡಿಕೊಂಡು ಶ್ರವಣದಿಂದ ಧನ್ಯರಾಗುವದು, ಭಗವದ್ಭಕ್ತರ ಪಾವನವಾದ ಚರಿತ್ರೆಗಳನ್ನೂ ಅವರ ಸದುಪದೇಶಗಳನ್ನೂ ಅರಿತುಕೊಂಡು ಪಾಪಭೂಯಿಷ್ಠವಾದ ಈ ಕಲಿಯುಗದ ಸುಂಟರಗಾಳಿಗೆ ಸಿಕ್ಕದಂತೆ ಎಚ್ಚರಿಕೆಯಿಂದಿರುವದು—ಇವೇ ಮುಂತಾದ ಸಾಧನಗಳನ್ನು ಏರ್ಪಡಿಸಿಕೊಂಡಿರುವ ಮಹನೀಯರಿಗೆ ಗೀತಾಜಯಂತಿಯೂ, ಭಗವದ್ಭಕ್ತರ ಸ್ಮಾರಣೋತ್ಸವಗಳೂ ನಿತ್ಯವೂ ಲಭಿಸಿಯೇ ಇರುತ್ತವೆ. ಅವರು ತಮ್ಮ ಈ ಆನಂದದಲ್ಲಿ ಸಾಧಾರಣ ಜನರೂ ಪಾಲ್ಗೊಳ್ಳುವದನ್ನು ನೋಡಿ ಸಂತೋಷಪಡಬೇಕೆಂದು ಇಂಥ ಉತ್ಸವಗಳನ್ನು ಏರ್ಪಡಿಸುವದು ಅವರ ಉದಾರವಾದ ಹೃಯದಕ್ಕೆ ಭೂಷಣವೇ ಅಷ್ಟೆ? ಭಗವಂತನು ನಿಮಗೆ ಇಂಥ ಉತ್ಸವಗಳಲ್ಲಿ ಭಾಗಿಗಳಾಗುವಂತೆ ಅನುಗ್ರಹಿಸಲೆಂದು ನಾನು ಪ್ರಾರ್ಥಿಸುತ್ತೇನೆ.

## 317. ಸಾಧುಗಳ ಅನುಕರಣೆ

(ಮಾರ್ಚ್ 1973)

*ಮಹಾಶಯ, ನಿಮ್ಮ ಪತ್ರದಲ್ಲಿರುವ ಪ್ರಶ್ನೆಗೆ ಸ್ವಲ್ಪದರಲ್ಲಿ ಉತ್ತರವನ್ನು ಕೊಡಬೇಕಾದರೆ 'ದುಸ್ಸಂಗವನ್ನು ಸಂಪೂರ್ಣವಾಗಿ ಬಿಡುವದು. ಸತ್ಸಂಗವನ್ನು ಸಂಪಾದಿಸಿಕೊಳ್ಳುವದು–ಇದೊಂದೇ ಪರಮಪುರಷಾರ್ಥಕ್ಕೆ ಹಾದಿ' ಎಂಬ ಒಂದು ವಾಕ್ಯವನ್ನು ಬರೆದರೆ ಸಾಕಾದೀತು. ಆದರೆ ದುಸ್ಸಂಗವೆಂದರೆ ಯಾವದು? ಸತ್ಸಂಗವೆಂದರೆ ಯಾವದು?–ಎಂಬುದನ್ನು ಬಿಡಿಸಿ ತಿಳಿಯಿಸುವದು ಈಗಿನ ಕಾಲಕ್ಕೆ ಬಹಳ ಕಷ್ಟವಾಗಿರುತ್ತದೆ. ಏಕೆಂದರೆ ಸತ್ಸಂಗವೆಂಬುದು ಈಗ್ಗೆ ಒಂದು ಅಂಕಿತನಾಮವಾಗಿ ಪರಿಣಮಿಸಿಬಿಟ್ಟದೆ.*

ಸಾಧುಗಳು, ಭಕ್ತರು, ಸಂನ್ಯಾಸಿಗಳು, ವಿರಾಗಿಗಳು–ಎಂದು ತೋರ್ಪಡಿಸಿ ಕೊಳ್ಳುವದಕ್ಕೆ ಬಗೆಬಗೆಯ ವೇಷವನ್ನು ಧರಿಸುವವರು ಈಗ ನಮ್ಮ ದೇಶದಲ್ಲಿ ಹರಡಿ ಕೊಂಡಿರುತ್ತಾರೆ. 'ಉಪದೇಶ', 'ಪ್ರವಚನ'–ಮುಂತಾದ ಹೆಸರುಗಳಿಂದ ಜನರನ್ನು ಭಾವನೆಗಳಿಂದ ಬಲೆಗೆಹಾಕಿಕೊಳ್ಳುವ ಕಪಟಿಗಳ ಗುಂಪುಗಳೂ ಹೆಚ್ಚಾಗುತ್ತಿವೆ. ಹೀಗಿರುವಲ್ಲಿ 'ಸಾಧುಗಳ ಸಂಗವನ್ನು ಮಾಡಬೇಕು' ಎಂದರೆ 'ಯಾರ ಸಂಗವನ್ನು ಮಾಡಬೇಕು'–ಎಂಬ ಪ್ರಶ್ನೆ ಹುಟ್ಟುವದು ಸ್ವಾಭಾವಿಕವಾಗಿದೆ.

ಕಾವಿ, ದಂಡಕಮಂಡಲುಗಳನ್ನು ಧರಿಸಿರುವದು, ಗಡ್ಡವನ್ನು ಬಿಟ್ಟಿರುವದು, ಯೋಗದಂಡವನ್ನು ಹಿಡಿದು ಸಂಚರಿಸುತ್ತಿರುವದು, ತಾಳಗಳ ಸದ್ದಿನ ಗುಂಪುಗಳನ್ನು ಕಟ್ಟಿಕೊಂಡು ಭಜನೆ ಮಾಡುತ್ತಿರುವದು–ಇಂಥ ಗುರುತುಗಳನ್ನು ನೋಡಿ ಮರುಳಾಗ ಬಾರದು. ಯಾರ ಸಂನಿವೇಶದಲ್ಲಿ ಇದ್ದಮಾತ್ರದಿಂದಲೇ ಸಂಸಾರದ ತಾಪತ್ರಯಗಳ ಕ್ಲೇಶವು ಮರೆತುಹೋಗುವದೋ, ಮತ್ತೆ ಯಾರ ಉಪದೇಶದಿಂದ–ಅಜ್ಞಾನದಿಂದಾದ ಮೋಹವು ಮುಮುಕ್ಷುಗಳಿಗೆ ಹಾರಿಹೋಗುವದೋ ಅವರೇ ಜ್ಞಾನಿಗಳು, ಸತ್ಪುರುಷರು. ಯಾರ ಉಪದೇಶದಿಂದ ವಿಷಯಗಳಲ್ಲಿರುವ ಆಸಕ್ತಿಯು ಕಡಿಮೆಯಾಗಿ ಭಗವದ್ಭಕ್ತಿಯು ಮೊಳೆಯುವದೋ ಅವರೇ ಭಗವಂತನ ಪರಮಪ್ರಿಯರಾದ ಪರಭಕ್ತರು–ಎಂದು ತಿಳಿಯಬೇಕು.

ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ ಪರಭಕ್ತರ ಲಕ್ಷಣಗಳನ್ನು ಶ್ರೀಕೃಷ್ಣನು ವಿವರಿಸಿರುತ್ತಾನೆ. ಆ ಲಕ್ಷಣಗಳು ಇರುವವರು ನಿಮಗೆ ಈಗ ಸಿಕ್ಕದೆ ಇರಬಹುದು. ಆದರೆ ಅಲ್ಲಿರುವ ಭಕ್ತರ ಲಕ್ಷಣಗಳನ್ನು ಸಾಧನೆಯಿಂದ ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಿಸಿರಿ. ನಿಮ್ಮ ಸಾಧನಮಾರ್ಗವು ಬಲಿತುಕೊಂಡಂತೆಲ್ಲ, ನಿಮಗೆ ದುಸ್ಸಂಗದಲ್ಲಿ ವಿರಕ್ತಿ ಯುಂಟಾಗುವದು, ಸತ್ಪುರುಷರ ದರ್ಶನವು ಕಾಲಾನುಕಾಲಕ್ಕೆ ಅವಶ್ಯವಾಗಿ

ದೊರಕುವದು. ಸದ್ಯಕ್ಕೆ ಸ್ತ್ರೀಗಂಧಾದಿವಿಷಯಗಳ ಸಂಪರ್ಕವನ್ನೂ ಧನಸಂಚಯದ ವಾಸನೆಯನ್ನೂ ನಾಸ್ತಿಕ್ಯಭಾವನೆಯನ್ನೂ ದೂರಮಾಡಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿರಿ. ನಿಮಗೆ ಭಗವಂತನ ಅನುಗ್ರಹವು ತಪ್ಪದೆ ದೊರಕುವದು.

## 318. ಸಂನ್ಯಾಸದ ತತ್ತ್ವ

### (ಏಪ್ರಿಲ್ 1973)

ನಿಮ್ಮ ಪತ್ರವು ತಲುಪಿದೆ. '*ಈಗ ತುರೀಯಾಶ್ರಮವನ್ನು ಸ್ವೀಕರಿಸಿದ್ದರಿಂದ ನನ್ನ ಮನಸ್ಸಿನ ಒಂದು ಹೊರೆಯನ್ನು ಇಳಿಸಿಕೊಂಡಂತೆ ಆಯಿತು. ಇನ್ನು ಮುಂದೆ ಸದ್ಗುರುಗಳ ಉಪದೇಶದಿಂದ ದೊರಕಿರುವ ಪ್ರಣವವನ್ನು ಸತತವಾಗಿ ಜಪಿಸಿ ಕೃತಾರ್ಥನಾಗಬೇಕೆಂದು ಸಂಕಲ್ಪಿಸಿಕೊಂಡಿರುತ್ತೇನೆ. ಆ ಮಂತ್ರವನ್ನು ಜಪಿಸುವಾಗ ಅನುಸಂಧಾನಮಾಡಬೇಕಾಗಿರುವ ರಹಸ್ಯವಾದ ಕ್ರಮವೇನಾದರೂ ಇದ್ದರೆ ದಯವಿಟ್ಟು ಬರೆಯಬೇಕು*' *ಎಂದು ಕೇಳಿಕೊಂಡಿರುತ್ತೀರಿ.*

ನನ್ನ ಮನಸ್ಸಿನಲ್ಲಿರುವದನ್ನು ಬಿಚ್ಚುನುಡಿಗಳಿಂದ ಹೇಳಿದರೆ ನಿಮಗೆ ಅನ್ಯಥಾ ಭಾವನೆಯುಂಟಾಗಲಾರದೆಂದು ನಂಬಿ ಎರಡು ವಾಕ್ಯಗಳನ್ನು ಇಲ್ಲಿ ಬರೆಯುತ್ತಿದೇನೆ.

ಪರಮಹಂಸಪಾರಿವ್ರಾಜ್ಯವೆಂಬುದು ನಿಜವಾಗಿ ಒಂದು ಆಶ್ರಮವಲ್ಲ, ಸ್ಮಾರ್ತ ಸಂನ್ಯಾಸವೆಂಬುದೊಂದು ಬೇರೆಯಿದೆ. ಈ ಪರಮಾರ್ಥಸಂನ್ಯಾಸವನ್ನೂ ಅದರಂತೆಯೇ ಒಂದು ಆಶ್ರಮವೆಂದು ತಿಳಿಯುವದು ತಪ್ಪು. '**ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್**' 'ಯಾವ ದಿನ ವೈರಾಗ್ಯವಂಟಾಗುವದೋ ಆ ದಿನವೇ ಆಶ್ರಮವನ್ನು ಬಿಟ್ಟು ಹೊರಟು ಹೋಗಬೇಕು'– ಎಂಬ ಜಾಬಾಲಶ್ರುತಿಯಲ್ಲಿ ಪಾರಿವ್ರಾಜ್ಯದ ತತ್ತ್ವವನ್ನು ಸ್ಫುಟವಾಗಿ ತಿಳಿಯಿಸಿರುತ್ತದೆ.

ಪುತ್ರೈಷಣೆ, ವಿತ್ತೈಷಣೆ, ಲೋಕೈಷಣೆ– ಎಂಬ ಮೂರು ಬಗೆಯ ಬಯಕೆಗಳೂ ಇಲ್ಲದವರಿಗೆ ನಿಜವಾದ ವೈರಾಗ್ಯವು ಬರುತ್ತದೆ. ಈ ಲೋಕದ ಭೋಗಗಳನ್ನು ಅನುಭವಿಸಬೇಕು, ಪ್ರಜಾಸಂತತಿಯನ್ನು ಪಡೆಯಬೇಕು; ಪರಲೋಕದಲ್ಲಿ ಸುಖವನ್ನು ಪಡೆಯಬೇಕು–ಎಂಬ ಹಂಬಲಿನಲ್ಲಿದ್ದವನೇ ಈ ಪಾರಿವ್ರಾಜ್ಯವನ್ನು ವಹಿಸಿ ಪರಮಾತ್ಮ ತತ್ತ್ವದ ಶ್ರವಣ, ಮನನ, ನಿದಿಧ್ಯಾಸನಗಳಲ್ಲಿ ರತನಾಗುವವನೇ ಹೊರತು ವಿಷಯಗಳ ಹಂಬಲಲ್ಲಿರುವವನು ಯಾವ ವೇಷವನ್ನು ಹಾಕಿಕೊಂಡರೂ ಎಂದಿಗೂ ಪರಮಹಂಸನಾಗಲಾರನು.

ಪ್ರಣವಜಪವೆಂಬುದು ಆಶ್ರಮಸಂನ್ಯಾಸಿಗಳಿಗೂ ಪರಮಾತ್ಮತತ್ತ್ವವನ್ನು ಅರಿತುಕೊಳ್ಳಬೇಕೆಂಬ ಹಂಬಲಿರುವವರಿಗೂ ಶಾಸ್ತ್ರದಲ್ಲಿ ಉಕ್ತವಾಗಿದೆ. ಬರಿಯ

ಶಬ್ದೋಚ್ಚಾರಣೆಯನ್ನು ಮಾಡಿದ್ದರಿಂದಲೇ ತತ್ತ್ವಜ್ಞಾನವಾಗುವದೆಂಬ ಭಾವನೆಯು ನಿಮಗಾಗಿದ್ದರೆ ಅದನ್ನು ಎಷ್ಟು ಬೇಗನೆ ಕೈ ಬಿಟ್ಟರೆ ಅಷ್ಟು ಒಳ್ಳೆಯದು.

ವಿಷಯದ ಆಸಕ್ತಿಯನ್ನು ಸಂಪೂರ್ಣವಾಗಿ ಬಿಟ್ಟು, ತತ್ತ್ವವನ್ನು ಬಲ್ಲ ಗುರುಗಳ ಬಳಿಯಲ್ಲಿದ್ದುಕೊಂಡು ಶ್ರವಣಮನನವನ್ನು ಮಾಡಿದ ಹೊರತು ವಿವಿದಿಷಾಸಂನ್ಯಾಸದ ಧ್ಯೇಯವು ದಕ್ಕುವಂತಿಲ್ಲ–ಎಂಬುದನ್ನು ದೃಢವಾಗಿ ನಂಬಿರಿ. ಹೆಚ್ಚಿಗೆ ವಿಷಯವನ್ನು ಮತ್ತೊಂದು ಪತ್ರದಲ್ಲಿ ಬರೆಯುವೆನು.

## 319. ಜಪದ ಮರ್ಮ

(ಮೇ 1973)

*ನಿಮ್ಮ ಪತ್ರವು ತಲುಪಿದೆ. ಜಪವು ವೀರ್ಯವತ್ತರವಾಗುವದಕ್ಕೆ ಸಾಧನವು ಹೇಗಿರಬೇಕೆಂಬುದನ್ನು ತಿಳಿಯುವ ಕುತೂಹಲವನ್ನು ಹೊರಪಡಿಸಿರುತ್ತೀರಿ. ಇದು ಕೇಳಬೇಕಾದ ಪ್ರಶ್ನೆಯೇ ಸರಿ. ಇಲ್ಲಿ ಈ ವಿಷಯಕ್ಕೆ ಒಂದೆರಡು ವಾಕ್ಯಗಳನ್ನು ಬರೆಯುತ್ತಿದೇನೆ.*

ಪ್ರಣವವನ್ನೇ ಪ್ರತೀಕವಾಗಿಟ್ಟುಕೊಂಡು ಜಪಿಸುತ್ತಿರುವದು, ಶಾಲಗ್ರಾಮಾದಿಗಳಲ್ಲಿ ವಿಷ್ಣ್ವಾದಿಬುದ್ಧಿಯನ್ನು ಮಾಡುವ ಉಪಾಸಕರಂತೆ, ಶಬ್ದರೂಪವಾಗಿಯೂ ಪ್ರಕೃತಿಯಲ್ಲಿ ಬೀಜರೂಪವಾಗಿರುವ ಆ ಪ್ರಣವವನ್ನೇ ಪರಮಾತ್ಮರೂಪವಾಗಿ ಭಾವಿಸುವದೂ ಅಲ್ಲದೆ, ಈ ಪ್ರಣವಕ್ಕಿಂತಲೂ ಸೂಕ್ಷ್ಮವಾಗಿ ಅದಕ್ಕೂ ವ್ಯಾಪಕವಾಗಿರುವ ಪರತತ್ತ್ವದ ಸ್ವರೂಪವಿಚಾರವನ್ನು ಮಾಡುತ್ತಿರಬೇಕು. ಇದಕ್ಕೆ ಲೋಕಾಂತರದಲ್ಲಿ ಕಾಲಾಂತರದಲ್ಲಿ ಫಲವಾಗುತ್ತದೆ.

ಇನ್ನು ಭಗವಂತನ ನಾಮವೇ ಇದು–ಎಂದು ಭಕ್ತಿಯಿಂದ ಈ ಪ್ರಣವವನ್ನು ಜಪಿಸುತ್ತಿರುವವರು, ಈ ನಾಮಕ್ಕೆ ವಾಚ್ಯವಾಗಿರುವ ಭಗವಂತನ ಸ್ವರೂಪವನ್ನು ಬದುಕಿರುವವರೆಗೂ ಚಿಂತನೆಮಾಡುತ್ತಿರುವದು ಇನ್ನೊಂದು ಬಗೆಯ ಪ್ರಣವೋಪಾಸನೆ. ಈ ಉಪಾಸನೆಯನ್ನು ಮಾಡುವ ಪ್ರಕಾರಗಳನ್ನೂ ಅದರಿಂದ ಕಾಲಾಂತರದಲ್ಲಿ ಆಗುವ ಫಲವನ್ನೂ ಪ್ರಶ್ನೋಪನಿಷತ್ತಿನಲ್ಲಿಯೂ ಅಲ್ಲಿ ಅನುಸರಿಸಬೇಕಾದ ಧಾರಣಾಯೋಗದ ಕ್ರಮವನ್ನು ಭಗವದ್ಗೀತೆಯ ಎಂಟನೆಯ ಅಧ್ಯಾಯದಲ್ಲಿಯೂ ವಿಸ್ತರಿಸಿದೆ. ಈ ಎರಡು ಬಗೆಯ ಉಪಾಸನೆಗೂ ಅಲ್ಲಿ ಅನುಸರಿಸಬೇಕಾದ ಸಾಧನಪ್ರಕಾರಕ್ಕೂ ಬಲ್ಲ ಸದ್ಗುರುಗಳ ಉಪದೇಶವನ್ನು ಅರಿತು ಅನುಷ್ಠಾನಮಾಡಬೇಕಾಗುವದು.

ಪ್ರಣವೋಪಾಸನೆಯು ಶ್ರದ್ಧಾಭಕ್ತಿಗಳಿಂದ ಮಾಡತಕ್ಕದ್ದಾಗಿರುತ್ತದೆ. ಉಪಾಸಕನು ಉಪಾಸ್ಯವಾದ ಪರಮಾತ್ಮತತ್ತ್ವವನ್ನು ನಿತ್ಯನಿರಂತರವಾಗಿ ಚಿಂತಿಸುತ್ತ ತನ್ಮಯನಾಗುವ

ಧ್ಯೇಯವನ್ನಿಟ್ಟುಕೊಂಡಿರಬೇಕು ಇನ್ನು ಸದ್ಯೋಮುಕ್ತಿಗೆ ಬೇಕಾದ ತತ್ತ್ವಜ್ಞಾನಕ್ಕೆ ಅರ್ಥವಾಗಿರುವ ಪರತತ್ತ್ವವೇ ಓಂಕಾರವೆಂಬ ಗೂಢಾರ್ಥವನ್ನು ಮಾಂಡೂಕ್ಯೋಪನಿಷತ್ತಿನಲ್ಲಿಯೂ ಅದರ ವಿವರಣೆಯನ್ನು ಮಾಡಿರುವ ಶ್ರೀಗೌಡಪಾದರವರ ಕಾರಿಕೆಯಲ್ಲಿಯೂ ಬರೆದಿದೆ. ಅದನ್ನು ಸಾಕ್ಷಾದನುಭವದಿಂದ ಅರಿಯಬೇಕಾದದ್ದಾಗಿರುವದರಿಂದ ಆ ವಿಷಯಕ್ಕೆ ಇಲ್ಲಿ ಬರೆಯುವದು ಸಾಧ್ಯವೇ ಇಲ್ಲ. ಸದ್ಯಕ್ಕೆ ನೀವು ಕೂಡಿದಮಟ್ಟಿಗೂ ಯತಿಗಳಿಗೆ ವಿಧಿಸುವ ರೀತಿಯಿಂದ ಪ್ರಣವವನ್ನು ಜಪಿಸುತ್ತಾ ಪ್ರಣವವೇ ಪರಬ್ರಹ್ಮರೂಪವು ಎಂಬ ಶ್ರದ್ಧೆಯನ್ನು ಸಂಪಾದಿಸಿಕೊಳ್ಳಿರಿ. ಗುರುವಿನಿಂದ ನಿಮಗೆ ಕಾಲಕ್ರಮದಲ್ಲಿ ಉಪದೇಶವಾಗಿ ಇದರ ಫಲವನ್ನು ಪಡೆಯುವಂತಾಗಲಿ—ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

## 320. ಆತ್ಮನಿಶ್ಚಯ

### (ಜೂನ್ 1973)

*ನಿಮ್ಮ ಪತ್ರವನ್ನು ಓದಿ ನೋಡಿದೆನು. ನಿಮ್ಮ ಶಂಕೆಗೆ ಪರಿಹಾರವನ್ನು ತರ್ಕ ಸರಣಿಯಿಂದ ವಾದಿಸುವದರಿಂದ ಎಂದಿಗೂ ಆಗಲಾರದು. ಆದ್ದರಿಂದ ನೀವು ವಿಚಾರವನ್ನು ಮುಂದುವರಿಸುವದಕ್ಕೆ ಸಹಾಯಕವಾಗಿರುವ ಕೆಲವು ಸೂಚನೆಗಳನ್ನು ಇಲ್ಲಿ ಕೊಡುವೆನು.*

ಜ್ಞಾನರಾಶಿಯನ್ನು ಕೂಡಿಹಾಕಿಕೊಳ್ಳುವದಕ್ಕೆ ಮಾನವನಿಗೆ ಮುಖ್ಯವಾಗಿ ಇಂದ್ರಿಯಾನುಭವ, ತರ್ಕ—ಇವೆರಡೇ ವ್ಯವಹಾರದಲ್ಲಿ ಫಲಕಾರಿಯಾಗಿರುತ್ತವೆ. ಇಂದ್ರಿಯಗಳ ಪಾಟವವನ್ನು ಆಹಾರಾದಿಗಳಿಂದಲೂ ಯಂತ್ರಗಳ ಸಹಾಯದಿಂದಲೂ ಹೆಚ್ಚಿಸಿಕೊಂಡು ಮನುಷ್ಯನು ಭೂಲೋಕದ ಕೆಲವು ಭಾಗಗಳ ಜ್ಞಾನವನ್ನು ಸಾಕ್ಷಾದನುಭವದಿಂದಲೂ ಮಿಕ್ಕ ಭಾಗಗಳ ಅರಿವನ್ನು ಶಾಸ್ತ್ರಾಧ್ಯಯನ, ತರ್ಕದ ಬಲ—ಇವುಗಳಿಂದಲೂ ಹೆಚ್ಚಿಸಿಕೊಂಡಿರುತ್ತಾನೆ. ತರ್ಕದಿಂದ ಸಂಪಾದಿಸಿಕೊಂಡ ಜ್ಞಾನವು ಎಷ್ಟೇ ಬಲವಾಗಿದ್ದರೂ, ಅನುಭವಪರ್ಯಂತವಾಗಿರುವದಿಲ್ಲ. ಮನುಷ್ಯನು ಭೂಲೋಕವನ್ನೇ ಅಲ್ಲದೆ ಚಂದ್ರಾದಿಗ್ರಹಗಳ ವಿಜ್ಞಾನವನ್ನೂ ಹೀಗೆಯೇ ಸಂಪಾದಿಸಿಕೊಳ್ಳುತ್ತಿದ್ದಾನೆ. ಆದರೆ ಅಧ್ಯಾತ್ಮಾನುಭವವು—ಎಂದರೆ ಶರೀರದೊಳಗೇ ಇದ್ದುಕೊಂಡು ಕೆಲಸಮಾಡುತ್ತಿರುವ ಇಂದ್ರಿಯಗಳೂ ಅಂತಃಕರಣವೂ ಅವುಗಳ ವೃತ್ತಿಗಳೂ ಯಾವ ಇಂದ್ರಿಯಕ್ಕಾಗಲಿ ಯಂತ್ರಕ್ಕಾಗಲಿ ವಿಷಯವಾಗುವ ಹಾಗಿಲ್ಲ. ಅವುಗಳನ್ನು ಮಾನಸಾನುಭವದಿಂದಲೇ ಕಂಡುಕೊಳ್ಳಬೇಕು.

ಇನ್ನು ಸಂಶಯ, ನಿಶ್ಚಯ, ಕಾಮ, ಸಂಕಲ್ಪ, ಅಂಜಿಕೆ, ಕುತೂಹಲ, ಆಶ್ಚರ್ಯ—ಇವುಗಳೆಲ್ಲವನ್ನೂ ವಿಸ್ಮೃತಿ, ನಿರೀಕ್ಷಣೆ, ಮನೋರಥ—ಮುಂತಾದವುಗಳನ್ನು ಸೇರಿಸಿ

ಕೊಂಡು ಒಟ್ಟು ಅಂತಃಕರಣದ ಆಗುಹೋಗುಗಳನ್ನು ಅದಕ್ಕಿಂತಲೂ ಸಾಕ್ಷಾದನುಭವದಿಂದ ನೋಡಿ ಅರಿತುಕೊಳ್ಳಬೇಕಾಗಿದೆ. ಎಚ್ಚರ, ಕನಸು, ತನಿನಿದ್ರೆಗಳೆಂಬ ಅವಸ್ಥೆಗಳ ಆಗುಹೋಗುಗಳನ್ನು ಯಾವ ಇಂದ್ರಿಯದಿಂದಲಾಗಲಿ ಬಾಹ್ಯತರ್ಕದಿಂದಲಾಗಲಿ ಅರಿತುಕೊಳ್ಳುವದಕ್ಕೆ ಆಗುವಂತಿಲ್ಲ. ಹೀಗಾದಲ್ಲಿ ಆತ್ಮವಿಚಾರವನ್ನು ಬುದ್ಧಿಯ ಕೇವಲ ತರ್ಕದಿಂದ ತಿಳಿದುಕೊಳ್ಳುವದಾದೀತೆ? ಇದನ್ನು ಆಲೋಚಿಸಿರಿ. ನೈಸರ್ಗಿಕಾನುಭವ, ತರ್ಕ–ಇವುಗಳಿಂದಲೇ ಆತ್ಮಜ್ಞಾನವು ಉಂಟಾಗುವದೆಂದಾಗಲಿ. ಉಪನ್ಯಾಸಗಳು, ವಾದಗಳು–ಮುಂತಾದವುಗಳ ಮೂಲಕವಾಗಲಿ ತತ್ತ್ವವನ್ನು ಅರಿತುಕೊಳ್ಳುವೆನು–ಎಂಬ ಭ್ರಾಂತಿಯನ್ನು ಮೊದಲು ತೊಲಗಿಸಿಕೊಳ್ಳಿರಿ. ಈ ವಿಷಯಕ್ಕೆ ಮತ್ತೊಂದು ಪತ್ರವನ್ನು ಬರೆಯುವೆನು.

## 321. ಅಧ್ಯಾತ್ಮವಿದ್ಯೆಯು ಯಾರಿಗಾಗಿ ಹೇಳಿದ್ದು?

(ಜುಲೈ 1973)

*ನಿಮ್ಮ ಪತ್ರವನ್ನು ಓದಿನೋಡಿದ ಮೇಲೆ ಅದಕ್ಕೆ ಕೂಡಲೆ ಉತ್ತರವನ್ನು ಬರೆಯಬೇಕೆನಿಸಿತು. "ನಾನು ಹೆಚ್ಚಿನ ವಿದ್ಯೆಯನ್ನು ಸಂಪಾದಿಸಿಕೊಂಡಿಲ್ಲ. ಒಂದುವೇಳೆ ಓದಿದ್ದರೂ ಸ್ತ್ರೀಯರಿಗೆ ವೇದಾಧಿಕಾರವಿಲ್ಲವೆಂದು ದೊಡ್ಡವರು ಆಗಾಗ್ಗೆ ಹೇಳಿದ್ದನ್ನು ಕೇಳಿರುತ್ತೇನೆ. ಮನೆಗೆಲಸವೇ ಮುಂತಾದವುಗಳಲ್ಲಿ ಎಡೆಬಿಡದೆ ತೊಡಗಿರುವ ನಮ್ಮಂಥವರಿಗೆ ಅಧ್ಯಾತ್ಮವಿದ್ಯೆಯು ವಶವಾದೀತೆ? ನಿಮ್ಮ ಪತ್ರಿಕೆಯಲ್ಲಿ ಬರುವಂಥ ಪ್ರೌಢವಿಷಯಗಳನ್ನು ನಮ್ಮಂಥವರೂ ಅರಿತುಕೊಳ್ಳುವದಕ್ಕಾದೀತೆ? ಇಲ್ಲದಿದ್ದರೆ ನಮಗೆ ಪುರುಷಾರ್ಥವು ದೊರಕುವ ಬಗೆ ಹೇಗೆ?"–ಎಂದು ಕೇಳಿರುತ್ತೀರಿ.*

ಅಧ್ಯಾತ್ಮವಿದ್ಯೆಯು ಪುರುಷರಿಗೆ ಮಾತ್ರ ಎಂದು ನಿಮಗೆ ಹೇಳಿದವರು ಯಾರು? ಆತ್ಮನು ಎಲ್ಲ ಮನುಷ್ಯರಿಗೂ–ಮನುಷ್ಯರು ಏಕೆ?–ಎಲ್ಲ ಪ್ರಾಣಿಗಳಿಗೂ ಆತ್ಮನೇ. ಆತ್ಮನ ನಿಜವನ್ನು ಅರಿತುಕೊಳ್ಳಬೇಕೆಂಬ ಹಂಬಲು ಯಾರುಯಾರಿಗೆ ಉಂಟೋ ಅವರೆಲ್ಲರೂ ಅಧ್ಯಾತ್ಮವಿದ್ಯೆಗೆ ಅಧಿಕಾರಿಗಳೇ ಆಗಿರಬೇಕಲ್ಲವೆ? "ಸ್ತ್ರೀಯರಾಗಲಿ, ವೈಶ್ಯರಾಗಲಿ, ಶೂದ್ರರಾಗಲಿ–ನನ್ನನ್ನು ಆಶ್ರಯಿಸಿದರೆ ಪರಗತಿಯನ್ನೈದುವರು" (ಗೀ. 9–32) ಎಂದು ಭಗವಂತನು ಸ್ಪಷ್ಟವಾಗಿ ಹೇಳಿರುತ್ತಾನೆ. ಹೊರಗಿನ ವಿಷಯಗಳ ಭೋಗದ ಚಿಂತೆಯಲ್ಲಿಯೇ ಮುಳುಗಿರುವ ಗಂಡಸರು ಶ್ರೋತ್ರಿಯಬ್ರಾಹ್ಮಣರಾದರೂ ಋಷಿಗಳೇ ಆದರೂ ಎಂದಿಗೂ ಆತ್ಮವಿದ್ಯೆಗೆ ಅಧಿಕಾರಿಗಳಾಗಲಾರರು.

ಕೆಟ್ಟನಡತೆಯನ್ನು ಬಿಡಬೇಕು, ಇಂದ್ರಿಯಗಳನ್ನು ಬಿಗಿಹಿಡಿದು ಮನಸ್ಸನ್ನು ಶಾಂತಿಯಕಡೆಗೆ ತಿರುಗಿಸಿಕೊಳ್ಳಬೇಕು; ಹೀಗೆ ಮಾಡುವವನು ಸ್ತ್ರೀಯಾಗಲಿ, ಪುರುಷನಾಗಲಿ, ವರ್ಣಾಶ್ರಮಗಳಲ್ಲಿರಲಿ, ಇಲ್ಲದಿರಲಿ–ಭಗವಂತನಕಡೆಗೇ ತಿರುಗುವ ಅಭ್ಯಾಸವಿದ್ದವರು ಯಾರೇ ಆದರೂ ಅವಶ್ಯವಾಗಿ ಭಗವಂತನ ಕರುಣೆಗೆ ಪಾತ್ರರಾಗುವರು. ಪಾಪವೆಂದರೆ ಭಗವಂತನ ಕಡೆಗೆ ಬೆನ್ನುತಿರುಗಿಸಿ ವಿಷಯಗಳಕಡೆಗೇ ಧಾವಿಸುತ್ತಿರುವ ಪ್ರವೃತ್ತಿ ಇದನ್ನು ಬಿಟ್ಟು ಭಗವನ್ನಾಮಸ್ಮರಣೆ, ಸ್ತೋತ್ರ, ಮಂತ್ರಜಪಾದಿಗಳು–ಇವುಗಳಲ್ಲಿ ನಿರತನಾದವನು ಭಗವಂತನಿಗೆ ಅತ್ಯಂತಪ್ರಿಯನಾಗುಗವನು. ಹೀಗಿಲ್ಲದೆ ಸ್ವೇಚ್ಛೆಯಿಂದ ನೆಡೆಯುತ್ತಿರುವಾತನು ಎಷ್ಟು ಶಾಸ್ತ್ರಗಳನ್ನು ಓದಿದ ವಿದ್ವಾಂಸನಾಗಿದ್ದರೂ ಭಗವಂತನು ಅವನ ಹೃದಯದಲ್ಲಿಯೇ ನಿತ್ಯವೂ ಇರುತ್ತಿದ್ದರೂ ಅವನ ತತ್ತ್ವವು ಮನಸ್ಸಿನಲ್ಲಿ ಮಿಂಚುವ ಸಂಭವವಿಲ್ಲ. ಭಗವಂತನಲ್ಲಿರುವ ಪ್ರೇಮರೂಪವಾದ ಭಕ್ತಿಯೇ ಅಧ್ಯಾತ್ಮಜ್ಞಾನಕ್ಕೆ ಮುಖ್ಯವಾದ ಸಾಧನವೆಂಬುದನ್ನು ದೃಢವಾಗಿ ನಂಬಿರಿ.

## 322. ಇನ್ನಾದರೂ ಕಾಲವನ್ನು ಸದುಪಯೋಗಮಾಡಿಕೊಳ್ಳಬಾರದೆ?

(ಆಗಸ್ಟ್ 1973)

*ನೀವು ಬರೆದ ಪತ್ರವನ್ನು ಓದಿ ಅಭಿಪ್ರಾಯವನ್ನು ತಿಳಿದುಕೊಂಡೆನು. ಸಂಸಾರದಲ್ಲಿ ತಾಪತ್ರಯಗಳು ದಿನದಿನಕ್ಕೂ ಹೆಚ್ಚುತ್ತಿವೆ; ಈಗ ನನಗೆ ಸ್ವಲ್ಪವೂ ಬಿಡುವಿಲ್ಲ. ವಯಸ್ಸಾಗುತ್ತಾ ಬಂದಿದೆ. ಈ ಸ್ಥಿತಿಯಲ್ಲಿ ನಾನು ಅಧ್ಯಾತ್ಮವಿಚಾರಕ್ಕೆ ಯಾವಾಗ, ಹೇಗೆ ಕಾಲವನ್ನು ವಿನಿಯೋಗಿಸಬೇಕೆಂಬುದು ತಿಳಿಯದೆ ಇದೆ. ನನ್ನ ಸ್ಥಿತಿಗೆ ತಕ್ಕ ಯಾವದಾದರೂ ಸೂಚನೆಯನ್ನು ಬರೆಯಿಸೋಣವಾಗಲಿ!–ಎಂದು ಬರೆದಿರುತ್ತೀರಿ.*

ನಿಮ್ಮ ಕಳವಳವನ್ನು ಮನಸ್ಸಿಗೆ ತಂದುಕೊಂಡರೆ ನನಗೆ ಸ್ವಲ್ಪ ನಗು ತಲೆದೋರಿತು; ಆ ಕೂಡಲೆ ಮರುಕವೂ ಹಿಂಬಾಲಿಸಿತು.

ಪ್ರತಿದಿನವೂ ಮೋಟಾರುಗಳ, ರೈಲುಗಳ, ವಾಯುವಿಮಾನಗಳ– ಅಪಘಾತದಿಂದ ಆದ ಆಕಸ್ಮಿಕಮರಣಗಳ ವಿಚಾರವನ್ನು ವೃತ್ತಪತ್ರಿಕೆಗಳು ಪ್ರಕಟಿಸುತ್ತಿವೆ. ಕ್ಷಾಮಡಾಮರಗಳಿಂದ ಜನರು ಅಲ್ಲಲ್ಲಿ ಬಾಯಿಬಾಯಿಬಿಡುತ್ತಿದಾರೆ. ಅವೆಲ್ಲ ಇರಲಿ, ಗಡಿಯಾರವು 'ಟಿಕ್ ಟಿಕ್!' ಎಂದಂತೆಲ್ಲ ನಿಮ್ಮ ಆಯುಸ್ಸು ಸವೆಯುತ್ತಿದೆ ಎಂದು ಎಚ್ಚರಿಕೆಯನ್ನು ಕೊಡುವ ಶಬ್ದವದೆಂದು ನಿಮಗೆ ಎನಿಸುತ್ತಿಲ್ಲವೆ? ಶರೀರದಲ್ಲಾಗುತ್ತಿರುವ ರೋಗಗಳೂ–ಮುಪ್ಪಿನಿಂದ ಕಣ್ಣು, ಕಿವಿ, ಕೈಕಾಲುಗಳು ಶಕ್ತಿಯಲ್ಲಿ ಕುಗ್ಗುತ್ತಿರುವದೂ

ನಿಮಗೇ ನೇರಾಗಿ ಅನುಭವಕ್ಕೆ ಬರುತ್ತಿಲ್ಲವೆ? 'ಕುಟುಂಬಭರಣವನ್ನು ಹೇಗೆ ಮಾಡಲಿ? ನಾನು ಹೋದ ಬಳಿಕ ಮನೆಯವರಿಗೆಲ್ಲ ಏನು ಗತಿ?' ಎಂದು ಚಿಂತಿಸುತ್ತಿರುವದು ಹಾಗಿರಲಿ ನಿಮಗೆ 'ಇವರನ್ನೆಲ್ಲ ಬಿಟ್ಟು ಎಲ್ಲಿಗೋ ಹೋಗುತ್ತಿರುವೆನಲ್ಲ! ನನಗೆ ಯಾರು ಗತಿ?' ಎಂಬ ಯೋಚನೆ ಏತಕ್ಕೆ ಬರುವದಿಲ್ಲ?

ತನಗಾಗಿ ಮನೆ, ಹೆಂಡಿರುಮಕ್ಕಳು, ನೆಂಟರು, ನೆರೆಯವರು, ಹೆಚ್ಚೇಕೆ? ಈ ಲೋಕವೆಲ್ಲವೂ ತನಗಾಗಿಯೇ ಅಲ್ಲವೆ, ಬೇಕೆನಿಸಿರುವದು? ಇನ್ನುಮೇಲಾದರೂ ದೈನಿಕಪತ್ರಿಕೆಯಲ್ಲಿ ಅವರಿವರ ಸುದ್ದಿಯನ್ನು ಓದಿ ತಿಳಿದುಕೊಳ್ಳುವ ತವಕವನ್ನು ಕಡಿಮೆ ಮಾಡಿಕೊಳ್ಳಿರಿ. ಇನ್ನು ಮೇಲಾದರೂ 'ನಾನು ಈ ಜನ್ಮಕ್ಕೆ ಬಂದಿರುವದೇಕೆ? ಇನ್ನು ಮುಂದೆ ನನ್ನ ಗತಿಯೇನಾದೀತು?–ಎಂಬದರ ಚಿಂತೆಯನ್ನು ಮಾಡುವದಕ್ಕೆ ಮೊದಲುಮಾಡಿರಿ. ನಿಮ್ಮ ಇಂದ್ರಿಯಗಳು ಕೆಲಸಮಾಡುವದರಲ್ಲಿ ಸಡಿಲವಾಗಿದೆಯಲ್ಲವೆ? ಇದೇ ದೇವರು ನಿಮಗೆ ಕೊಟ್ಟಿರುವ ಎಚ್ಚರಿಕೆಯೆಂದು ತಿಳಿದುಕೊಳ್ಳಿರಿ. ಆಯುಸ್ಸು, ಬಲ, ಇಂದ್ರಿಯಶಕ್ತಿ ಮನಸ್ಸಿನಲ್ಲಿ ವಿಚಾರಶಕ್ತಿ–ಇವೆಲ್ಲ ಕುಗ್ಗುತ್ತಾ ನಿಮಗೆ ಹೀಗೆಂದು ಎಚ್ಚರಿಕೆ ಮಾಡುತ್ತಿರುವವು: ನನ್ನದೆಂಬುದರ ವಿಚಾರವನ್ನು ಕಡಿಮೆಮಾಡಿಕೊಳ್ಳಿರಿ; ನಾನು ಎಂಬುದರ ವಿಚಾರಕ್ಕೆ ಈಗಲೇ ಮನಸ್ಸು ಮಾಡಿರಿ! ದೇವರು ನಿಮ್ಮನ್ನು ಈ ಕಡೆಗೆ ತಿರುಗಿಸಲಿ!

## 323. ಪರಮಹಂಸನ ನಿಷ್ಠೆ

### (ಡಿಸೆಂಬರ್ 1973)

*ನಿಮ್ಮ ಪತ್ರವು ಬಂದು ಕೈ ಸೇರಿದೆ. ಪರಮಹಂಸನಾದವನು ಯಾವಾಗಲೂ ಸ್ಥಳದಿಂದ ಸ್ಥಳಕ್ಕೆ ಪರ್ಯಟನಮಾಡುತ್ತಲೇ ಇರಬೇಕೆಂತಲೂ ಅಲ್ಲಲ್ಲಿ ವೇದಾಂತಪ್ರಚಾರಕ್ಕಾಗಿ ಉಪನ್ಯಾಸಾದಿಗಳನ್ನು ಮಾಡುತ್ತಿರಬೇಕೆಂತಲೂ ನೀವು ಭಾವಿಸಿಕೊಂಡಿರುವಂತೆ ತೋರುತ್ತಿದೆ. ಆದ್ದರಿಂದ ಈಗಿನ ಕಾಲಕ್ಕೆ ನಿಜವಾದ ಸಂನ್ಯಾಸಿಯು ಏನು ಮಾಡಬಾರದೆಂಬುದನ್ನು ಮೊದಲು ತಿಳಿಯಿಸುವದು ಅವಶ್ಯವೆಂತ ನನ್ನ ಮನಸ್ಸಿನಲ್ಲಿ ಹೊಳೆದಿದೆ.*

ಪರಮಹಂಸನಾದವನು ಗ್ರಂಥವ್ಯಾಖ್ಯಾನಪರನಾಗಬಾರದು. ತತ್ತ್ವನಿರ್ಣಯಕ್ಕಾಗಿ ತನ್ನಲ್ಲಿಗೆ ಬಂದವರಿಗೆ ವೇದಾಂತವಿಚಾರದ ಸರಣಿಯನ್ನು ತನಗೆ ತಿಳಿದಮಟ್ಟಿಗೆ ಹೇಳಿಕೊಡುವದೂ ಅವನ ಕರ್ತವ್ಯವೇ ಸರಿ. ಆದರೆ ಭಾಷಣಾದಿಗಳಿಂದ ಅಲ್ಲಲ್ಲಿ ವಿದ್ವತ್ ಪ್ರಕಾಶನಕ್ಕೆ ಎಂದಿಗೂ ಪ್ರಯತ್ನಿಸಬಾರದು.

ಜ್ಯೋತಿಷ, ಸಾಮುದ್ರಿಕ, ವೈದ್ಯ, ಮಂತ್ರತಂತ್ರಾದಿಗಳ ಉಪದೇಶ–ಇವೇ ಮುಂತಾದವುಗಳ ಮೂಲಕ ಎಂದಿಗೂ ಖ್ಯಾತಿಲಾಭಪೂಜೆಗಳನ್ನು ಪಡೆಯುವದಕ್ಕೆ ಹವಣಿಸಬಾರದು.

ಪರಮಹಂಸನಿಗೆ ಮುಖ್ಯವಾಗಿ ಬ್ರಹ್ಮಸಂಸ್ಥನಾಗಿರುವದು–ಎಂದರೆ ಉಪನಿಷದರ್ಥಗಳನ್ನು ಮನನಮಾಡುತ್ತಾ ಅವುಗಳ ಸಾರವಾದ ಪ್ರಣವದ ಅರ್ಥದ ಅನುಸಂಧಾನವನ್ನು ಮಾಡುತ್ತಿರುವದು–ನಿತ್ಯಕರ್ತವ್ಯ. ಶಾಂಕರಭಾಷ್ಯದ ಅರ್ಥವನ್ನು ಮತ್ತೆಮತ್ತೆ ಮೂಲಾನುಸಾರವಾಗಿ ಮನನಮಾಡುತ್ತಿರಬೇಕು. ಲೌಕಿಕರ ಪರಿಚಯವನ್ನು ಹೆಚ್ಚಾಗಿ ಬೆಳೆಯಿಸಿಕೊಂಡು ತತ್ತ್ವದಿಂದ ಪ್ರಚ್ಯುತನಾಗಬಾರದು. ಈ ವಿಷಯಕ್ಕೆ ಇನ್ನೊಮ್ಮೆ ಇನ್ನೂ ಸ್ವಲ್ಪ ವಿಸ್ತಾರವಾಗಿ ಬರೆಯುವೆನು.

## 324. ಭಗವಂತನಲ್ಲಿ ಮೊರೆಯಿಡುವದು

### (ಜನವರಿ 1974)

*ನಿಮ್ಮ ಪತ್ರವನ್ನು ಓದಿ ನೋಡಿದೆನು. ಸರ್ವಸಾಕ್ಷಿಯಾದ ಭಗವಂತನು ನಿರ್ಗುಣನಾದ್ದರಿಂದ ಪ್ರಾರ್ಥನೆಗೆ ಸಗುಣಬ್ರಹ್ಮವನ್ನೇ ಆರಿಸಿಕೊಳ್ಳಬೇಕೆಂಬ ಭಾವನೆ ನಿಮ್ಮ ಮನಸ್ಸಿನಲ್ಲಿ ಮೂಡಿದೆ–ಎಂದು ನನಗೆ ತೋರುತ್ತಿದೆ. ಆದ್ದರಿಂದ ಈ ವಿಷಯಕ್ಕೆ ಎರಡು ವಾಕ್ಯಗಳನ್ನು ಇಲ್ಲಿ ಬರೆಯಬೇಕೆನಿಸಿರುತ್ತದೆ.*

ಬ್ರಹ್ಮದಲ್ಲಿ ಪರಬ್ರಹ್ಮವೆಂದೂ ಅಪರಬ್ರಹ್ಮವೆಂದೂ ಎರಡು ಬೇರೆಬೇರೆಯ ವಿಧಗಳು ಇವೆ ಎಂದೂ ಅಪರಬ್ರಹ್ಮವು ಪರಬ್ರಹ್ಮಕ್ಕಿಂತ ಕೀಳಂತಸ್ತಿನದೆಂದೂ ನೀವು ತಿಳಿದುಕೊಂಡಿದ್ದರೆ ಆ ಭಾವನೆಯನ್ನು ಎಷ್ಟು ಬೇಗ ತೊಲಗಿಸಿಕೊಂಡರೆ ಅಷ್ಟು ಒಳ್ಳೆಯದು.

(1) **''ಯತ್ರ ಅವಿದ್ಯಾಕೃತನಾಮರೂಪಪ್ರತಿಷೇಧಾತ್ ಅಸ್ಥೂಲಾದಿ ಶಬ್ದೈರ್ಬ್ರಹ್ಮೋಪದಿಶ್ಯತೇ ತತ್ಪರಮ್ । ತದೇವ ಯತ್ರ ನಾಮರೂಪಾದಿ ವಿಶೇಷೇಣ ಕೇನಚಿದ್ ವಿಶಿಷ್ಟಮುಪಾಸನಾಯ ಉಪದಿಶ್ಯತೇ 'ಮನೋಮಯಃ ಪ್ರಾಣಶರೀರೋ ಭಾರೂಪಃ' ಇತ್ಯಾದಿಭಿಃ ಶಬ್ದೈಃ ತದಪರಮ್''** ಸೂ. ಭಾ. 4–4–11.

(2) **''ಏವಮ್ ಏಕಮಪಿ ಬ್ರಹ್ಮ ಅಪೇಕ್ಷಿತೋಪಾಧಿಸಂಬನ್ಧಂ ನಿರಸ್ತೋಪಾಧಿ ಸಂಬನ್ಧಂ ಚ ಉಪಾಸ್ಯತ್ವೇನ ಜ್ಞೇಯತ್ವೇನ ಚ ವೇದಾನ್ತೇಷೂಪದಿಶ್ಯತೇ ॥''** ಸೂ. ಭಾ. 1–1–12. ಮೇಲಿನ ಈ ವಾಕ್ಯಗಳನ್ನು ನೋಡಿರಿ. ಭಗವದ್ಗೀತಾಭಾಷ್ಯದ ಪ್ರಾರಂಭದಲ್ಲಿ 'ನಾರಾಯಣಃ ಪರೋಽವ್ಯಕ್ತಾತ್' ಎಂಬ ಪೌರಾಣಿಕ ಶ್ಲೋಕವನ್ನು ಉದಾಹರಿಸಿ ಅದೇ ಭಗವಂತನೇ ನಿತ್ಯಶುದ್ಧಬುದ್ಧಮುಕ್ತಸ್ವಭಾವನಾಗಿದ್ದರೂ ತನ್ನ ಪ್ರಕೃತಿಯನ್ನು ವಶಪಡಿಸಿಕೊಂಡು, ಹುಟ್ಟಿದವನಂತೆಯೂ ದೇಹವುಳ್ಳವನಂತೆಯೂ ಕಾಣಿಸಿಕೊಂಡು ಲೋಕಾನುಗ್ರಹವನ್ನು ಮಾಡುತ್ತಾನೆ–ಎಂದು ಶಂಕರಾಚಾರ್ಯರು ಬರೆದಿರುವದನ್ನೂ ಮನಸ್ಸಿಗೆ ತಂದುಕೊಳ್ಳಿರಿ.

ಯಾವ ವಿಕಾರವಾಗಲಿ, ವಿಶೇಷವಾಗಲಿ ಇಲ್ಲದೆ ಇರುವ ಭಗವಂತನೇ ಭಕ್ತರ ಅನುಗ್ರಹಕ್ಕಾಗಿ ಉಪಾಧಿವಶದಿಂದ ಸಗುಣನೂ ಸಾಕಾರನೂ ಆಗಿ ತೋರಿಕೊಳ್ಳುತ್ತಾನೆ; ಆದರೆ ಆಗಲೂ ಅವನ ನಿತ್ಯನಿರ್ವಿಶೇಷಸ್ವಭಾವಕ್ಕೆ ಯಾವ ಕುಂದುಕೊರತೆಯೂ ಆಗಿರುವದಿಲ್ಲ.

ಹೀಗಿರುವದರಿಂದ ಪರಿಶುದ್ಧನಾದ ಭಗವಂತನೊಬ್ಬನೇ ಪರಮಾರ್ಥತತ್ತ್ವವು. ಆತನೇ ಸರ್ವಲೋಕಗಳಿಗೂ ಆತ್ಮನಾಗಿರುವ ಸರ್ವಸಾಕ್ಷಿಯು. ಆತನು ಈಗಲೂ ಇಲ್ಲಿಯೇ ನನ್ನ ಶರೀರದಲ್ಲಿಯೇ ನನ್ನ ಅಂತಃಕರಣಕ್ಕೆ ಸಾಕ್ಷಿಯೂ ಪ್ರೇರಕನೂ ಆಗಿರುತ್ತಾನೆಂದು ನೆರೆನಂಬಿರಿ. ಭಗವತ್ಪ್ರಾರ್ಥನೆಯನ್ನು ಶ್ರದ್ಧಾಭಕ್ತಿಪೂರ್ವಕವಾಗಿ ಮಾಡುವ ಅಭ್ಯಾಸವನ್ನು ಇಟ್ಟುಕೊಳ್ಳಿರಿ. ನಿಮಗೆ ನಿರ್ಗುಣನಾಗಿರುವ ಆತನನ್ನು ನಿರ್ವಿಕಲ್ಪರೂಪದಿಂದ ಅನುಭವಕ್ಕೆ ತಂದುಕೊಳ್ಳುವದಕ್ಕೆ ಆಗದೇಇರಬಹುದು. ಆದರೆ ನಿಮ್ಮ ಸಂಕಷ್ಟಗಳನ್ನು ಪರಿಹರಿಸುವದಕ್ಕೂ ಇಷ್ಟಾರ್ಥಗಳನ್ನು ನೆರವೇರಿಸುವದಕ್ಕೂ ಆತನೇ ಶಕ್ತನು. ಸರ್ವದೇವತೆಗಳ ಪಿತೃಗಳ ಮತ್ತು ಋಷಿಗಳ ರೂಪದಿಂದ ಜನರನ್ನು ಅನುಗ್ರಹಿಸುವ ಮಹಾಮಹಿಮರಿಗೂ ಆತ್ಮನಾಗಿರುವವನು ಆತನೇ–ಎಂದು ನೆರೆನಂಬಿರಿ.

**"ಚತುರ್ವಿಧಾ ಭಜನ್ತೇ ಮಾಂ ಜನಾಃ ಸುಕೃತಿನೋऽರ್ಜುನ । ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ॥"** (ಗೀ. 7–16) ಎಂದು ಭಗವಂತನೇ ಅಪ್ಪಣೆಕೊಡಿಸಿರುತ್ತಾನೆ. ಪುಣ್ಯಕರ್ಮದ ಸಂಸ್ಕಾರದಿಂದಲೇ ನಮ್ಮ ಇಷ್ಟಪ್ರಾಪ್ತಿಗೂ ಅನಿಷ್ಟನಿವೃತ್ತಿಗೂ ಆತನೇ ಗತಿ ಎಂಬ ದೃಢಭಾವನೆಯು ಹುಟ್ಟುತ್ತದೆ. ಸ್ಮೃತಿ ಪುರಾಣಗಳಲ್ಲಿ ವರ್ಣಿಸಿರುವಂತೆ ಆತನು ಸಗುಣನಾಗಿಯೂ ಸಾಕಾರನಾಗಿಯೂ ತೋರಿಕೊಂಡು ಭಕ್ತರ ಪ್ರಾರ್ಥನೆಯನ್ನು ನೆರವೇರಿಸಬಲ್ಲನು. ಮತ್ತು ಭಾವನಾ ಪ್ರಕರ್ಷದಿಂದ ಈ ಕಲಿಯುಗದಲ್ಲಿಯೂ ಆತನ ಸಾಕ್ಷಾತ್ಕಾರವೂ ಆಗಬಹುದಾಗಿದೆ.

ಪ್ರಾರ್ಥನೆಯನ್ನು ಮಾಡುವಾಗ ನಮ್ಮ ತಾಯಿತಂದೆಗಳಿಗಿಂತಲೂ ಹೆಚ್ಚಿನ ವಾತ್ಸಲ್ಯದಿಂದ ಆತನು ನಿಮ್ಮ ಮನವಿಯನ್ನು ಕೇಳುತ್ತಾನೆ–ಎಂದೂ ನಂಬಿರಿ. ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿ, ಜ್ಞಾನದಲ್ಲಿ ಹಂಬಲು–ಎಲ್ಲವೂ ಆತನ ಪ್ರಾರ್ಥನೆಯಿಂದಲೇ ಲಭಿಸುವವು.

## 325. ಅನುಭವ

### (ಫೆಬ್ರವರಿ 1974)

*ನಿಮ್ಮ ಪತ್ರದಲ್ಲಿ ನೀವು ಕೇಳಿರುವ ಅನೇಕ ಪ್ರಶ್ನೆಗಳೊಳಗೆ 'ಅನುಭವ' ವೆಂದರೇನು?–ಎಂಬುದು ಮುಖ್ಯವಾಗಿರುತ್ತದೆ. ಅಧ್ಯಾತ್ಮಶಾಸ್ತ್ರದ ಬೋಧೆಯನ್ನು*

*ಅನುಭವದಿಂದಲೇ ಅರಿತುಕೊಳ್ಳಬೇಕೆಂಬುದು ಸಾಂಪ್ರದಾಯಿಕವಾದ ಅದ್ವೈತದ ಮುಖ್ಯವಾದ. ಆದ್ದರಿಂದ ಅದರ ವಿಷಯಕ್ಕೆ ಒಂದೆರಡು ವಾಕ್ಯಗಳನ್ನು ಇಲ್ಲಿ ಬರೆಯುತ್ತಿದ್ದೇನೆ.*

ವ್ಯವಹಾರದಲ್ಲಿ ಚಿತ್ರವಿಚಿತ್ರವಾದ ಪ್ರಪಂಚವು ಇಂದ್ರಿಯಗಳಿಗೆ ಗೋಚರ ವಾಗುತ್ತಿದೆಯಲ್ಲವೆ? ಈ ಇಂದ್ರಿಯಗಳನ್ನು ನಾವು 'ಮನಸ್ಸು' ಎಂದು ಸಾಮಾನ್ಯವಾಗಿ ಕರೆಯುತ್ತಿರುವ ಅಂತಃಕರಣದಿಂದಲೇ ತಿಳಿದುಕೊಳ್ಳುತ್ತಿದ್ದೇವೆ. ನಮಗೆ ಮನಸ್ಸಿನಲ್ಲಿ ಜ್ಞಾನ, ಅಜ್ಞಾನ, ಸುಖ, ದುಃಖ, ಅಂಜಿಕೆ, ಆಶ್ಚರ್ಯ, ಕುತೂಹಲ–ಮುಂತಾದ ಬಗೆಬಗೆಯ ವೃತ್ತಿಗಳು ಎದ್ದುಕೊಳ್ಳುತ್ತಿರುವವು–ಎಂಬುದೂ ಅನುಭವದಲ್ಲಿದೆ.

ಈ ಇಂದ್ರಿಯಾನುಭವವೂ ಮನಸ್ಸಿನಲ್ಲಾಗುವ ಅನುಭವಗಳೂ ನಮಗೆ ಎಚ್ಚರದಲ್ಲಿ ಆಗುತ್ತಿರುವಂತೆಯೇ ಸ್ವಪ್ನದಲ್ಲಿಯೂ ಆಗುತ್ತಿರುವವಷ್ಟೆ? ಎಚ್ಚರವೂ ಕನಸೂ ನಮಗೆ ಬಗೆಬಗೆಯ ಪ್ರಪಂಚವನ್ನು ತೋರಿಸುತ್ತಿರುವವೆಂಬುದನ್ನು ನಾವು ಏತರಿಂದ ಹೇಗೆ ಅರಿತುಕೊಳ್ಳುತ್ತಿದ್ದೇವೆ?–ಇದನ್ನು ಕುರಿತು ಸಾವಧಾನವಾಗಿ ಆಲೋಚಿಸಿರಿ.

ಶರೀರೇಂದ್ರಿಯಮನಸ್ಸುಗಳು ಈ ಎರಡು ಅವಸ್ಥೆಗಳಲ್ಲಿಯೂ ನಮಗೆ ನೇರಾಗಿ 'ಅನುಭವಕ್ಕೆ' ಬರುತ್ತಿರುವವಲ್ಲವೆ? ಈ ಅವಸ್ಥೆಗಳ ಅನುಭವವು ಏತರಿಂದಾಗುವದೋ ಅದೇ ಆತ್ಮನ ಸ್ವರೂಪವಾದ ಅನುಭವ. ಇದನ್ನು 'ಸಾಕ್ಷ್ಯಾನುಭವ'ವೆಂದೂ ಕರೆಯುವರು.

ಅನುಭವವೆಂದರೆ 'ಸಮಾಧಿ'ಯೆಂಬ ಒಂದು ವಿಶೇಷಾವಸ್ಥೆಯಲ್ಲಿ ಆಗುವ ಅನುಭವವೆಂದೂ ಸಮಾಧಿಯಿಂದ ಎಚ್ಚತ್ತಾಗ ನಮಗೆ ದ್ವೈತಪ್ರಪಂಚವು ಕಾಣುವ ದೆಂದೂ ಕೆಲವರು ವೇದಾಂತಿಗಳು ಹೇಳುತ್ತಿರುವದುಂಟು. ಇದು ಯಾವ ಶ್ರುತಿಯಲ್ಲಿಯೂ ಹೇಳಿಲ್ಲ, ಯಾವ ಸ್ಮೃತಿಯಲ್ಲಿಯೂ ಬರೆದಿಲ್ಲ. ಈ ವಾದದಲ್ಲಿ ಇನ್ನೂ ಕೆಲವು ಯುಕ್ತಿವಿರುದ್ಧವಾದ ನಂಬಿಕೆಗಳಿವೆ. ಇದನ್ನು ಹಿಂದಿನಿಂದ ತಿಳಿಯಿಸುವೆನು. ಅನುಭವದ ವಿಷಯಕ್ಕೆ ನಾನು ಬರೆದಿರುವದನ್ನು ಸದ್ಯಕ್ಕೆ ಮನನ ಮಾಡುತ್ತಿರಿ.

## 326. ಆತ್ಮನ ಸರ್ವವ್ಯಾಪ್ತಿ

### (ಮಾರ್ಚ್ 1974)

*ನಿಮ್ಮ ಪತ್ರವು ತಲುಪಿದೆ. ನೀವು ಕೇಳಿರುವ ಪ್ರಶ್ನೆಯಲ್ಲಿ ಪರಮಾತ್ಮನು ಸರ್ವಗತನಾಗಿರುತ್ತಾನೆಂದರೆ ಹೇಗೆ? ಎಲ್ಲೆಲ್ಲೂ ಇರುವ ಆತನನ್ನು ನಾವು ಕಂಡುಕೊಳ್ಳಲಾರದೆ ಇರುವದಕ್ಕೆ ಕಾರಣವೇನು?–ಎಂಬ ಶಂಕೆಯು ಅಡಕವಾಗಿದೆ.*

ನೀವು 'ಸರ್ವವ್ಯಾಪಿ' ಎಂಬ ಶಬ್ದಕ್ಕೆ ಪೂರ್ಣವಾಗಿ ಅರ್ಥವನ್ನು ಮಾಡಿಕೊಂಡಿರುವದಿಲ್ಲವೆಂತ ನನ್ನ ಊಹೆ. ಬಟ್ಟೆಯಲ್ಲೆಲ್ಲ ನೀರು ವ್ಯಾಪಿಸಿಕೊಂಡಿದೆ ಎನ್ನುವಾಗ ಬಟ್ಟೆಯೂ ಕಾಣುತ್ತಿದ್ದು ನೀರಿನಿಂದ ಅದು ಒದ್ದೆಯಾಗಿರುವದೂ ನಮಗೆ ಗೋಚರವಾಗುವಂತೆ ಜಗತ್ತನ್ನು ವ್ಯಾಪಿಸಿಕೊಂಡಿರುವ ಪರಮಾತ್ಮನು ಜನರ ಜ್ಞಾನಕ್ಕೆ ಏಕೆ ವಿಷಯವಾಗಬಾರದು?—ಎಂಬುದು ನಿಮ್ಮ ಪ್ರಶ್ನೆಯ ಅಭಿಪ್ರಾಯವಿರಬಹುದು.

ಆದರೆ ನಿಜವು ಹೀಗಿಲ್ಲ. ಪರಮಾತ್ಮನೇ ನಿಜವಾಗಿರುವವನು. ಅವನನ್ನೇ ಜನರು ಸ್ಥೂಲದೃಷ್ಟಿಯಿಂದ ಜಗತ್ತೆಂದು ಭಾವಿಸುತ್ತಿದಾರೆ. ಬಟ್ಟೆಯೆಲ್ಲ ಹತ್ತಿಯೇ ಆಗಿರುವಂತೆಯೂ ಮಡಿಕೆ ಕುಡಿಕೆ ಮುಂಥಾದವುಗಳು ಎಲ್ಲವೂ ಮಣ್ಣೇ ಆಗಿರುವಂತೆಯೂ ಮಂಜಿನಗಡ್ಡೆಯೆಲ್ಲವೂ ನೀರೇ ಆಗಿರುವಂತೆಯೂ ಆಕಾಶವೇ ವಾಯ್ವಾದಿಭೂತಗಳಾಗಿ ತೋರುತ್ತಿರುವಂತೆಯೂ ಪರಮಾತ್ಮನು ಈ ಜಗತ್ತೆಲ್ಲವೂ ಆಗಿ ತೋರುತ್ತಿದಾನೆ. ಈ ತತ್ತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ಗೀತೆಯಲ್ಲಿ ಬಂದಿರುವ ಈ ವಾಕ್ಯಗಳ ಆಶಯವನ್ನು ಮನದಟ್ಟು ಮಾಡಿಕೊಳ್ಳುವದಕ್ಕೆ ಯತ್ನಿಸಿರಿ:—

1. ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ।
   ಯಸ್ಯಾನ್ತಃ ಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಮ್ ॥ಗೀ. 8–22

2. ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ।
   ಮತ್ಸ್ಥಾನಿ ಸರ್ವಭೂತಾನಿ ಚಾಹಂ ತೇಷ್ವವಸ್ಥಿತಃ ॥ ಗೀ. 9–4

3. ವೇತ್ತಾಸಿ ವೇದ್ಯಂ ಚ ಪರಂ ಚ ಧಾಮ ।
   ತ್ವಯಾ ತತಂ ವಿಶ್ವಮನನ್ತರೂಪ ॥ ಗೀ. 11–38

4. ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್।
   ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥ ಗೀ. 18–46

ಪುರಾಣದಲ್ಲಿ ಈ ಶ್ಲೋಕವಿದೆ: "ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ । ಯಚ್ಚಾಸ್ಯ ಸನ್ತತೋ ಭಾವಸ್ತಸ್ಮಾದಾತ್ಮೇತಿ ಕೀರ್ತ್ಯತೇ॥

(ಎಲ್ಲವನ್ನೂ ವ್ಯಾಪಿಸಿಕೊಂಡಿರುವದರಿಂದಲೂ ಎಲ್ಲವನ್ನೂ ತನ್ನೊಳಕ್ಕೇ ಸರಿಯಿಸಿಕೊಂಡು ತಾನೊಬ್ಬನೇ ಉಳಿಯುವದರಿಂದಲೂ ಈ ಲೋಕದಲ್ಲಿ ಜೀವಭಾವದಿಂದ ಎಲ್ಲವನ್ನೂ ಅನುಭವಿಸುತ್ತಿರುವದರಿಂದಲೂ ಕಡಿವಡೆಯದೆ ಎಲ್ಲೆಲ್ಲಿಯೂ ತಾನೊಬ್ಬನೇ ಇರುವದರಿಂದಲೂ ಈತನನ್ನು ಆತ್ಮನೆಂದು ಕರೆಯುತ್ತಾರೆ).

## 327. ಅಧ್ಯಾತ್ಮಶಾಸ್ತ್ರದ ಸದುಪಯೋಗ
### (ಏಪ್ರಿಲ್ 1974)

*ನಿಮ್ಮ ಪತ್ರವು ತಲುಪಿದೆ . ನನಗೆ ವಿದ್ಯೆಗಳೊಳಗೆಲ್ಲ ಅಧ್ಯಾತ್ಮವಿದ್ಯೆಯೇ ದೊಡ್ಡದೆಂಬ ನಂಬಿಕೆಯಾಗಿಬಿಟ್ಟಿದೆ. ಆದ್ದರಿಂದ ಮಿಕ್ಕ ಕೆಲಸವನ್ನೆಲ್ಲ ಬಿಟ್ಟು ಅದರ ಪ್ರಚಾರಕ್ಕಾಗಿಯೇ ಜೀವನವನ್ನು ಬಳಸಬೇಕೆಂದು ಸಂಕಲ್ಪಿಸಿದ್ದೇನೆ. ನಾನು ಈ ಕೆಲಸದಲ್ಲಿ ಜಯಶೀಲನಾಗಿ ಲಾಭವನ್ನು ಪಡೆಯುವದಕ್ಕೇನಾದರೂ ಬುದ್ಧಿವಾದವನ್ನು ಬರೆಯೋಣವಾಗಲಿ! ಎಂದು ಬರೆದಿರುತ್ತೀರಿ.*

ಅಧ್ಯಾತ್ಮವಿದ್ಯೆಯ ಪ್ರಚಾರವೆಂಬುದು ಉದ್ಯೋಗಗಳಲ್ಲೆಲ್ಲ ಘನತೆಯ ಉದ್ಯೋಗವೆಂಬುದಕ್ಕೆ ಸಂಶಯವಿಲ್ಲ. ಈ ದಿಶೆಯಲ್ಲಿ ಬುದ್ಧಿಯು ಹರಿಯವಂತೆ ನಿಮಗೆ ಭಗವಂತನು ಪ್ರೇರಿಸಿರುವದೂ ಒಂದು ಭಾಗ್ಯವೇ ಸರಿ.

ಕರ್ಮ, ಭಕ್ತಿ ವೈರಾಗ್ಯ, ಯೋಗ, ತತ್ತ್ವಜ್ಞಾನ–ಇವುಗಳನ್ನು ಕುರಿತ ಪ್ರಾಸಾದಿಕ ಗ್ರಂಥಗಳನ್ನು ಓದುತ್ತಿರಬೇಕು. ನಿಮಗೆ ಯಾವ ಸಾಧನದಲ್ಲಿ ಅಭಿರುಚಿಯಿದೆಯೋ ಅದನ್ನು ಮನಮುಟ್ಟಿ ನಿಯಮದಿಂದ ಮಾಡುತ್ತಿರಬೇಕು. ಬೆಳಗ್ಗೆ ಎಚ್ಚತ್ತಕೂಡಲೆ, ಮತ್ತು ರಾತ್ರೆ ಮಲಗುವಾಗ, ಭಗವಂತನನ್ನು ''ನನಗೆ ನಿನ್ನಲ್ಲಿ ಅಚಲಭಕ್ತಿಯಿರುವಂತೆಯೂ ಓದಿರುವದನ್ನು ಓದಿರುವಂತೆ, ಉಪದೇಶವಾಗಿರುವಂತೆ ನನ್ನ ಮಿತ್ರರಲ್ಲಿ ಸಂಭಾಷಣೆಯ ಮೂಲಕ ಅಥವಾ ಲೇಖನದ ಮೂಲಕ ಪ್ರಸಾರಮಾಡುವಂತೆಯೂ ಅನುಗ್ರಹಿಸು? ಎಂದು ಹೃದಯವನ್ನು ಬಿಚ್ಚಿ ಬೇಡಿಕೊಳ್ಳಿರಿ.

ಆದರೆ ಒಂದು ಎಚ್ಚರಿಕೆಯ ಮಾತನ್ನು ನಿಮಗೆ ತಿಳಿಯಿಸಬೇಕಾಗಿದೆ. ನಿಮಗೆ ಅನುಭವವಿಲ್ಲದ ವಿಚಾರಗಳನ್ನು ಅನುಭವದಲ್ಲಿ ಕಂಡುಕೊಂಡಿರುವಂತೆ ನಟಿಸುವ ಗುರುಗಳಾಗುವದಕ್ಕೆ ಎಂದಿಗೂ ಹವಣಿಸಬೇಡಿರಿ. ನಿಮ್ಮ ಸಂಚಾರದಲ್ಲಿ ಆಸ್ತಿಕರಾದವರು ತಾವಾಗಿ ಭಕ್ತಿಯಿಂದ ಸಮರ್ಪಣೆಮಾಡುವ ಅಲ್ಪ ಧನವನ್ನು ನಿಮ್ಮ ಸ್ವಂತ ಜೀವನಕ್ಕಾಗಿ ಉಪಯೋಗಿಸುವದು ತಪ್ಪಲ್ಲ. ಆದರೆ 'ಅಧ್ಯಾತ್ಮವಿಚಾರವು ನನ್ನ ಕುಟುಂಬಭರಣಕ್ಕೇ ಉಪಾಯ; ಅದರಿಂದ ನಾನು ಹಣವನ್ನು ಗಳಿಸಿ ಹೊಲಗದ್ದೆಗಳನ್ನು ಸಂಪಾದನೆಮಾಡಿ ಕೊಳ್ಳಬೇಕು'–ಎಂಬ ಸಂಕಲ್ಪವನ್ನು ಮಾತ್ರ ಎಂದಿಗೂ ಮಾಡಿಕೊಳ್ಳಬೇಡಿರಿ. ವೇದ ವಿಕ್ರಯವನ್ನು ಮಾಡುವವರಿಗೆ ಬ್ರಾಹ್ಮಣ್ಯವು ಹೇಗೆ ಕ್ಷಯವಾಗುವದೋ ಹಾಗೆಯೇ ಅಧ್ಯಾತ್ಮವಿದ್ಯೆಯನ್ನು ಮಾರಿ ಜೀವಿಸುವವನ ಅಂತಃಕರಣವೂ ಮಲಿನವಾಗಿ ಭಗವಂತನು ಹೃದಯದಲ್ಲಿಯೇ ಇದ್ದರೂ ದೂರವಾಗುವನು. ಭಗವಂತನನ್ನು ಉಪೇಕ್ಷಿಸಿ ಭಕ್ತಿಜ್ಞಾನಾದಿ ಗಳ ಮರ್ಮವನ್ನು ಅರಿತುಕೊಳ್ಳುವೆನೆಂಬ ಸಂಕಲ್ಪವು, ನೆಲದ ಮೇಲೆ ಹರಿದಾಡುವ ಹಾವು, ಹಲ್ಲಿ–ಮುಂತಾದ ಪ್ರಾಣಿಗಳು ಆಕಾಶದಲ್ಲಿ ಹಕ್ಕಿಗಳಂತೆ ಹಾರಾಡಬೇಕೆಂದು ಇಚ್ಛಿಸುವಂತೆಯೇ ವಿಫಲವಾದೀತು! ನಿಮ್ಮ ಸದಿಚ್ಛೆಗೆ ಭಗವಂತನ ನೆರವು ಇದ್ದೇ ಇದೆ.

## 328. ಆತ್ಮೈಕತ್ವವಿದ್ಯೆಯಲ್ಲಿ ನಿಷ್ಠೆ

(ಮೇ 1974)

*ನಿಮ್ಮ ಪತ್ರವು ತಲುಪಿತು. 'ತತ್ತ್ವಜ್ಞಾನಪ್ರಧಾನವಾದ ಗ್ರಂಥಗಳ ಪಠನ, ಸತ್ಸಂಗ—ಮುಂತಾದ ಸಾಧನಗಳನ್ನವಲಂಬಿಸಿಕೊಂಡಿರುವದರಿಂದ ನನಗೆ ಅದ್ವೈತವೇ ಪರಮಾರ್ಥವು—ಎಂಬ ನಿಶ್ಚಯವೇನೊ, ಆಗಿಬಿಟ್ಟಿದೆ. ಆದರೆ ಪ್ರಾರಬ್ಧಶೇಷದಿಂದ ಮತ್ತೆಮತ್ತೆ ವ್ಯಾವಹಾರಿಕವಾದ ವಿಚಾರಗಳು ಮನಸ್ಸಿಗೆ ತಗುಲಿಕೊಂಡು ವ್ಯಥೆಯನ್ನುಂಟುಮಾಡುತ್ತಿವೆ. ಇದನ್ನು ತಪ್ಪಿಸಿಕೊಳ್ಳುವದಕ್ಕೆ ಏನಾದರೂ ಉಪಾಯವಿದೆಯೆ?' ಎಂದು ಕೇಳಿರುತ್ತೀರಿ.*

ಇದು ಬಹುಮುಖ್ಯವಾದ ಪ್ರಶ್ನೆ, ಏಕೆಂದರೆ ಗ್ರಂಥಕಾಲಕ್ಷೇಪದಿಂದಲೂ ಬಲ್ಲವರಲ್ಲಿ ವಿಚಾರವಿನಿಮಯವನ್ನು ಮಾಡುವದರಿಂದಲೂ ಅಜ್ಞಾನವು ತೊಲಗಿತೆಂಬ ನಿಶ್ಚಯವು ಜಿಜ್ಞಾಸುಗಳಿಗೆ ಉಂಟಾಗುವದು ಸ್ವಾಭಾವಿಕವಾಗಿದೆ. ಆದರೆ ಇಲ್ಲಿ ಒಂದು ಮುಖ್ಯವಾದ ವಿಷಯವನ್ನು ಮನಸ್ಸಿನಲ್ಲಿಟ್ಟಿರಬೇಕಾದದ್ದು ಅವಶ್ಯ. ಬುದ್ಧಿಪ್ರಧಾನವಾಗಿ ಎಲ್ಲವನ್ನೂ ತರ್ಕದಿಂದ ನಿಶ್ಚಯಿಸಿಕೊಳ್ಳಬಹುದೆಂದು ನೀವು ಭ್ರಾಂತರಾಗಿರುವವರೆಗೆ ತರ್ಕಕ್ಕೂ ಅನುಭವಕ್ಕೂ ಇರುವ ವೈಲಕ್ಷಣ್ಯವನ್ನು ಅಸಡ್ಡೆಮಾಡುವ ಅಪಾಯವಿರುತ್ತದೆ.

ಮನುಷ್ಯನಿಗೆ ದೇಹ, ಇಂದ್ರಿಯ, ಮನಸ್ಸು, ಬುದ್ಧಿ—ಇವುಗಳಲ್ಲಿಯೇ 'ನಾನು', 'ನನ್ನದು',—ಎಂಬ ಅಭಿಮಾನವು ಯಾರೂ ಹೇಳಿಕೊಡದೆಯೇ ಉಂಟಾಗುತ್ತಿರುವದು. ಆದರೆ ಈ 'ನಾನು' ಎಂಬ ಬುದ್ಧಿಯು, ಒಂದೊಂದು ಕನಸಿನಲ್ಲಿಯೂ ಬೇರೆ ಬೇರೆಯಾಗಿರುವದೆಂಬುದನ್ನೂ ಗಾಢನಿದ್ರೆಯಲ್ಲಿ ನಾನು ಎಂಬ ಬುದ್ಧಿಯಿಲ್ಲದೆ ಇದ್ದರೂ ಅದನ್ನು ನಾವೆಲ್ಲರೂ ಅನುಭವಿಸುತ್ತಿರುವೆವೆಂಬುದನ್ನೂ ಬಲ್ಲವರಿಂದ ತಿಳಿದುಕೊಂಡು ಆ ಅನುಭವಸ್ವರೂಪದಲ್ಲಿಯೇ ನೆಲೆನಿಲ್ಲುವವರೆಗೆ ಈ ಬರಿಯ ತರ್ಕದಿಂದ ಆಗುವ ಸಮಾಧಾನವು ಎಂದಿಗೂ ಪೂರ್ಣತೃಪ್ತಿಯನ್ನು ಕೊಡಲಾರದು.

ಭಗವಂತನನ್ನು ಅನನ್ಯಭಕ್ತಿಯಿಂದ ಅನವರತವೂ ಪ್ರಾರ್ಥಿಸಿಕೊಳ್ಳಿರಿ. ಆಗ ನಿಮಗೆ ಜ್ಞಾನಸಾಧನಗಳು ಅಳವಟ್ಟು ನಿಜವಾದ ಆತ್ಮನಲ್ಲಿಯೇ ನಾನು ಎಂಬ ಅನುಭವವು ಉಂಟಾಗುವದು.

## 329. ಋಜುಭಾವ

(ಜೂನ್ 1974)

*ನಿಮ್ಮ ಪತ್ರವು ತಲುಪಿ ಅಭಿಪ್ರಾಯವಾಯಿತು. ಅಧಿಕಾರಿಯು ಈ ಜನ್ಮದಲ್ಲಿಯೇ ಸದ್ಯೋಮುಕ್ತಿಯನ್ನು ಪಡೆಯಬಹುದು ಎಂದು ಶಾಸ್ತ್ರಗಳು ಹೇಳುತ್ತಿವೆ; ಆಚಾರ್ಯಶಂಕರರೂ*

*ಅಲ್ಲಲ್ಲಿ ಇದನ್ನು ಸ್ಪಷ್ಟಗೊಳಿಸಿರುತ್ತಾರೆ. ಆದರೆ ಈ ಕಲಿಯುಗದಲ್ಲಿಯೂ ಜನರಿಗೆ ಅಂಥ ಸೌಭಾಗ್ಯವು ದೊರೆತೀತೆ? ಬದುಕಿರುವಾಗಲೇ ಮುಕ್ತರಾಗಿರುವ ಮಹಾತ್ಮರು ಹೇಗಿರುವರು? ನಮ್ಮಂಥ ಕಿಞ್ಚಜ್ಞರೂ ಈ ಪರಮಪುರುಷಾರ್ಥವನ್ನು ಪಡೆದುಕೊಳ್ಳುವದಕ್ಕಾದೀತೆ?–ಎಂದು ಕೆಲವರು ಶಂಕಿಸುತ್ತಾರೆ. ತಮ್ಮ ನಿಜವಾದ ಅಭಿಪ್ರಾಯದಲ್ಲಿ ಇದರ ತತ್ತ್ವವೇನು? ದಯವಿಟ್ಟು ನನ್ನ ಮನಸ್ಸಿನ ಸಂಶಯವನ್ನು ಪರಿಹರಿಸಬೇಕು–ಎಂದು ಬರೆದಿರುತ್ತೀರಿ.*

ಇದು ಅವಶ್ಯವಾಗಿ ಕೇಳಬೇಕಾದ ಪ್ರಶ್ನೆಯೇ ಸರಿ. ಶ್ರೀಕೃಷ್ಣಭಗವಂತನು

**ಅಪಿ ಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಕ್ ।**
**ಸಾಧುರೇವ ಸ ಮನ್ತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥** ಗೀ. 9–30

ಮುಂತಾಗಿ ಹೇಳಿರುವದನ್ನು ಲಕ್ಷ್ಯದಲ್ಲಿಟ್ಟರೆ ಮನಃಪೂರ್ವಕವಾಗಿ ಭಗವಂತನನ್ನು ಅನನ್ಯಭಕ್ತಿಯಿಂದ ಶರಣುಹೊಕ್ಕವರಿಗೆ ಅವಶ್ಯವಾಗಿ ಪರಗತಿಯಾಗುವದು–ಎಂಬುದಕ್ಕೆ ಸಂಶಯವೇನೂ ಉಳಿಯುವದಿಲ್ಲ. **''ದೈವೀಸಂಪದ್ವಿಮೋಕ್ಷಾಯ ನಿಬನ್ಧಾಯಾಸುರೀ ಮತಾ''** (16–5) ಎಂಬ ಭಗವದ್ವಾಕ್ಯದಲ್ಲಿ ಶ್ರದ್ಧೆಯಿದ್ದವರು ದೈವಸಂಪತ್ತಿನ ಧರ್ಮಗಳನ್ನು ಅನುಕರಿಸುತ್ತಾಬಂದರೆ ಅವಶ್ಯವಾಗಿ ಯಾವ ಯುಗದಲ್ಲಿಯಾದರೂ ಮೋಕ್ಷಪ್ರಾಪ್ತಿಯು ದೊರೆಯುತ್ತದೆ–ಎಂದು ನಂಬಬೇಕಾಗುವದು.

ಇಲ್ಲಿ ಒಂದು ಮುಖ್ಯವಿಷಯವನ್ನು ನಾವು ಮನಸ್ಸಿನಲ್ಲಿಟ್ಟುಕೊಂಡಿರಬೇಕು. ದೈವಸಂಪತ್ತಿನಲ್ಲಿ ಹೇಳಿರುವ ಲಕ್ಷಣಗಳಲ್ಲಿ ಒಂದೊಂದನ್ನೂ ನಾವು ಮನಮುಟ್ಟಿ ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿರಬೇಕು. ಇವುಗಳಲ್ಲೆಲ್ಲ 'ಆರ್ಜವ' ಎಂಬ ಸಾಧನಕ್ಕೆ ಎಲ್ಲಕ್ಕಿಂತಲೂ ಹೆಚ್ಚಿನ ಬೆಲೆಯಿದೆ–ಎಂದು ನನ್ನ ಅಭಿಪ್ರಾಯವಾಗಿರುತ್ತದೆ. ಮನಸ್ಸಿನಲ್ಲಿರುವಂತೆಯೇ ಮಾತನ್ನಾಡುತ್ತಿರುವದು, ಅದರಂತೆಯ ನಡೆಯಲ್ಲಿಯೂ ಅನುಸರಿಸುವದು–ಇದೇ ಆರ್ಜವವು. **''ಯೋಽನ್ಯಥಾ ಸನ್ತಮಾತ್ಮಾನಮನ್ಯಥಾ ಪ್ರತಿಪದ್ಯತೇ । ಕಿಂ ತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ॥''** (ತಾನು ಇರುವ ಸ್ಥಿತಿಯನ್ನು ಮರೆಮಾಡಿ ಬೇರೊಂದು ವಿಧದಲ್ಲಿ ತೋರಿಸುವದಕ್ಕಿಂತ ಹೆಚ್ಚಿನ ಪಾಪವಿಲ್ಲ. ಏಕೆಂದರೆ ಅದು ಆತ್ಮಾಪಹಾರವೆಂಬ ಚೌರ್ಯವು) ಎಂಬ ಸೂಕ್ತಿಯನ್ನು ನಾವು ಎಂದೆಂದಿಗೂ ನೆನಪಿನಲ್ಲಿಟ್ಟುಕೊಂಡಿರಬೇಕು. ದೈವೀಪ್ರಕೃತಿಯವನೆಂದು ಹೊರಗೆ ನಟಿಸುತ್ತಾ ಒಳಗೆ ಸ್ವಾರ್ಥಪರನಾಗಿ ಬಾಳುವದಕ್ಕಿಂತ ಹೆಚ್ಚಿನ ಪಾಪವು ಮತ್ತೊಂದಿರುವದಿಲ್ಲ. ಸಾಧನದಲ್ಲಿ ಆಸಕ್ತಿ ಇರುವಂತೆ ಋಜುಭಾವದಿಂದಲೇ ವರ್ತಿಸುವ ಸೌಭಾಗ್ಯವನ್ನು ಭಗವಂತನು ನಿಮಗೆ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

## 330. ಮಹಾವಾಕ್ಯಜಪ

### (ಜುಲೈ 1974)

ನಿಮ್ಮ ಪತ್ರವು ತಲುಪಿ ಅಭಿಪ್ರಾಯವಾಯಿತು. *'ಮಹಾವಾಕ್ಯದ ಜಪವಿಲ್ಲದೆ ತತ್ತ್ವಜ್ಞಾನವು ಉಂಟಾಗಲಾರದೆ? ಈ ವಾಕ್ಯಗಳ ಜಪದಿಂದ ಅವಿದ್ಯೆಯ ನಾಶವು ಹೇಗಾದೀತು? ಸಂನ್ಯಾಸಿಗಳು ಪ್ರಣವಮಂತ್ರವನ್ನೂ ಮಹಾವಾಕ್ಯದ ಜಪವನ್ನೂ ಕಡ್ಡಾಯವಾಗಿ ಮಾಡುತ್ತಲೇ ಇರಬೇಕೆ? ಈ ವಿಷಯದಲ್ಲಿ ತಮ್ಮ ನಿಶ್ಚಿತವಾದ ಅಭಿಪ್ರಾಯವನ್ನು ತಿಳಿಸೋಣಾಗಲಿ!'* ಎಂದು ಬರೆದಿರುತ್ತೀರಿ.

ಪ್ರಣವವಿಚಾರವು ಛಾಂದೋಗ್ಯೋಪನಿಷತ್ತಿನಲ್ಲಿ (ಛಾಂ. 2–23–1ರಲ್ಲಿ) ಬಂದಿದೆ. ಇದರ ಆಧಾರದಿಂದಲೇ ಸೂತ್ರಭಾಷ್ಯದಲ್ಲಿ (ಸೂ. ಭಾ. 3–4–19) ಬಾದರಾಯಣರು ಪಾರಿವ್ರಾಜ್ಯವು ಶಾಸ್ತ್ರವಿಹಿತವೆಂಬ ವಿಚಾರವನ್ನು ತೆಗೆದಿರುತ್ತಾರೆ. ಮೂಲವಾದ ಉಪನಿಷತ್ತಿನಲ್ಲಿ ಓಂಕಾರವು ಬ್ರಹ್ಮದ ಪ್ರತೀಕವೆಂದು ಉಪಾಸನೆಮಾಡುವ ಬಗೆಯನ್ನು ಹೇಳಿರುತ್ತದೆ. ಸೂತ್ರಭಾಷ್ಯದಲ್ಲಿ ಬ್ರಹ್ಮಸಂಸ್ಥನು ಶಮದಮಾದಿಗಳನ್ನು ಅನುಸರಿಸುತ್ತಾ ಬ್ರಹ್ಮದಲ್ಲಿಯೇ ತಾತ್ಪರ್ಯವುಳ್ಳವನಾಗಿರುವದರಿಂದ ಶ್ರುತಿಯಲ್ಲಿ ಪಾರಿವ್ರಾಜ್ಯವನ್ನು ವಿಧಿಸಿದೆ ಎಂದು (ಸೂ. ಭಾ. 3–4–20) ಸಿದ್ಧಾಂತ ಮಾಡಿರುತ್ತದೆ. ಆಚಾರ್ಯರು ಜಾಬಾಲಶ್ರುತಿಯಲ್ಲಿ (ಜಾ.5) ಪಾರಿವ್ರಾಜ್ಯವನ್ನು ಕಂಠೋಕ್ತವಾಗಿ ವಿಧಿಸಿರುತ್ತದೆ–ಎಂದು ಸ್ಫುಟಗೊಳಿಸಿರುತ್ತಾರೆ. ಅಲ್ಲಿ ಸರ್ವಕರ್ಮಪರಿತ್ಯಾಗಪೂರ್ವಕವಾದ ಪಾರಿವ್ರಾಜ್ಯವನ್ನು ಮಾತ್ರ ಹೇಳಿದೆ. ಈ ಮೂರು ಕಡೆಗಳಲ್ಲಿಯೂ ಪ್ರಣವಮಂತ್ರವನ್ನು ಜಪಿಸಬೇಕೆಂದು ಸಾಕ್ಷಾತ್ತಾಗಿ ವಿಧಿಸಿಲ್ಲ. ಛಾಂದೋಗ್ಯದಲ್ಲಿ ವಾಕ್ಯಶೇಷದಲ್ಲಿ ಪ್ರಣವ ಪ್ರತೀಕದ ಉಪಾಸನೆಯಿದೆ.

ಪ್ರಣವೋಪಾಸನೆಯ ವಿಚಾರವು ಬೃಹದಾರಣ್ಯಕ, ಕಠ, ಮುಂಡಕ, ಪ್ರಶ್ನ, ಮಾಂಡೂಕ್ಯ–ಇವುಗಳಲ್ಲಿಯೂ ಬಂದಿದೆ. ಎಲ್ಲಿಯೂ ಪ್ರಣವವನ್ನು ಜಪಿಸುವದು ಕಡ್ಡಾಯವೆಂದು ಸ್ಪಷ್ಟವಾಗಿ ಹೇಳಿಲ್ಲ.

ಭಗವದ್ಗೀತೆಯ ಎಂಟನೆಯ ಅಧ್ಯಾಯದಲ್ಲಿ ಪ್ರಣವೋಪಾಸನೆಯ ವಿಚಾರವು ಬಂದಿದೆ. ಅಲ್ಲಿ ಭಾಷ್ಯಕಾರರು ಬ್ರಹ್ಮಕ್ಕೆ ಓಂಕಾರವು ವಾಚಕವೆಂದು ಅಥವಾ ಪ್ರತೀಕವೆಂದು ಉಪಾಸನೆಮಾಡುವ ಮಂದಮಧ್ಯಮಾಧಿಕಾರಿಗಳಿಗೆ ಕಾಲಾಂತರದಲ್ಲಿ ಪರಬ್ರಹ್ಮಪ್ರಾಪ್ತಿ ಯಾಗುವದೆಂದು ಸ್ಪಷ್ಟಪಡಿಸಿರುತ್ತಾರೆ. ಅಲ್ಲಿಯೂ ಪ್ರಣವಜಪದ ವಿಚಾರವನ್ನು ಆಚಾರ್ಯರು ಬರೆದಿಲ್ಲ.

ಇನ್ನು ಮಹಾವಾಕ್ಯದ ವಿಚಾರದ ಕಡೆಗೆ ಮನಸ್ಸನ್ನು ಹೊರಳಿಸಿದರೆ, ಮಹಾವಾಕ್ಯವು ಮಂತ್ರವೆಂದಾಗಲಿ ಅದನ್ನು ಜಪಿಸಬೇಕೆಂದಾಗಲಿ ಯಾವ ಶ್ರುತಿಯಲ್ಲಿಯೂ ವಿಧಿಸಿಲ್ಲ. ಉಪನಿಷತ್ತುಗಳೆಲ್ಲವೂ ಯಾವದಾದರೊಂದು ಕರ್ಮವನ್ನು ಅಥವಾ ಉಪಾಸನೆಯನ್ನು ವಿಧಿಸುವದಕ್ಕೆ ಬಂದಿದೆ–ಎಂಬ ಪೂರ್ವಪಕ್ಷವನ್ನೂ, ಬ್ರಹ್ಮವನ್ನು ಉಪಾಸನಾವಿಧಿಗೆ ಶೇಷವಾಗಿ ಹೇಳಿದೆ ಎಂಬ ಪೂರ್ವಪಕ್ಷವನ್ನೂ ಖಂಡಿಸಿ ಸ್ವತಂತ್ರವಾಗಿಯೇ ಬ್ರಹ್ಮಸ್ವರೂಪವನ್ನು ತಾತ್ಪರ್ಯದಿಂದ 'ತತ್ತ್ವಮಸಿ'–ಮುಂತಾದ ವಾಕ್ಯಗಳು ತಿಳಿಸುತ್ತವೆ ಎಂದು ಆಚಾರ್ಯರು ಸಿದ್ಧಾಂತಮಾಡಿರುತ್ತಾರೆ. 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ'–ಮುಂತಾದ ವಾಕ್ಯಗಳ ಅರ್ಥವನ್ನು ಅರಿತುಕೊಳ್ಳುವವರೆಗೇ ಎಲ್ಲಾ ವಿಧಿಗಳೂ ಎಲ್ಲಾ ಪ್ರಮಾಣಗಳೂ ಇರುತ್ತವೆ; ಆ ಜ್ಞಾನವಾದಬಳಿಕ ಮತ್ತೆ ಯಾವ ಅನುಷ್ಠೇಯಕಾರ್ಯವೂ ಉಳಿದಿರುವದಿಲ್ಲ–ಎಂದೇ ಆಚಾರ್ಯರು ಮತ್ತೆಮತ್ತೆ ಒತ್ತಿ ಹೇಳಿರುತ್ತಾರೆ.

ಆದ್ದರಿಂದ ಒಂದೊಂದು ವೇದಕ್ಕೆ ಒಂದೊಂದು ಮಹಾವಾಕ್ಯವು ನಿಯತವಾಗಿದೆ ಎಂದೂ ಈ ಮಹಾವಾಕ್ಯವನ್ನು ಪರಿವ್ರಾಜಕನು ನಿತ್ಯವೂ ಜಪಿಸುತ್ತಿರಬೇಕೆಂದೂ ವಾದಿಸುವ ಈಗಿನ ವೇದಾಂತಿಗಳಿಗೆ ಯಾವ ಪ್ರಮಾಣವೂ ಇಲ್ಲವೆಂಬುದಿಷ್ಟೇ ಅಲ್ಲದೆ ಈ ವಾಕ್ಯಗಳ ಅರ್ಥವನ್ನು ಅರಿತುಕೊಂಡು ಬಳಿಕ ಅವನ್ನು ಜಪಕ್ಕೆ ಉಪಯೋಗಿಸಬೇಕೆಂದು ಹೇಳುವದು ಶ್ರುತಿ, ಸ್ಮೃತಿ, ಯುಕ್ತಿಗಳಿಗೆ ವಿರುದ್ಧವಾಗಿದೆ. ಅದ್ವೈತಸಿದ್ಧಾಂತವನ್ನು ಸ್ಥಾಪಿಸುವದಕ್ಕೆಂದೇ ಪ್ರಸ್ಥಾನತ್ರಯಭಾಷ್ಯಗಳನ್ನು ಬರೆದಿರುವ ಆಚಾರ್ಯರನ್ನು ಸಂಪೂರ್ಣವಾಗಿ ಕಡೆಗಣಿಸಿದ ದೋಷವೂ ಅವರಿಗೆ ಗಂಟುಬೀಳುತ್ತದೆ–ಎಂದೇ ನನ್ನ ನಿಶ್ಚಿತವಾದ ಅಭಿಪ್ರಾಯವಾಗಿರುತ್ತದೆ.

ಈ ವಿಷಯದಲ್ಲಿ ಮತ್ತೇನಾದರೂ ಕೇಳಬೇಕಾದದ್ದಿದ್ದರೆ ಮತ್ತೊಮ್ಮೆ ಬರೆಯಿರಿ. ಇನ್ನಷ್ಟು ವಿಸ್ತಾರವಾಗಿ ಇದನ್ನು ಆಗ ಚರ್ಚಿಸುವದಕ್ಕೆ ಯತ್ನಿಸುವೆನು.

## 331. ಮೋಕ್ಷವೆಂಬುದು ನಿತ್ಯಸಿದ್ಧ

(ಆಗಸ್ಟ್ 1974)

*ನಿಮ್ಮ ಪತ್ರವು ತಲುಪಿರುತ್ತದೆ. ''ಅನೇಕರು ಮುಕ್ತಿಯು ಶರೀರವು ಬಿದ್ದಬಳಿಕ ಆಗುವ ಪರಮಪುರುಷಾರ್ಥವೆನ್ನುತ್ತಾರೆ; ಎಲ್ಲಿಯೋ ಕೆಲವರು ಈ ಜನ್ಮದಲ್ಲಿಯೇ ಅದು ದೊರಕಬಹುದು, ಆದರೆ ಬದುಕಿರುವಾಗ ಅವಿದ್ಯೆಯ ಲೇಶವು ಇರುತ್ತದೆ, ವಿದೇಹಮುಕ್ತಿಯೇ ಮುಖ್ಯ–ಎನ್ನುವರು. ಇನ್ನು ಕೆಲವರು 'ಸದ್ಯೋಮುಕ್ತಿ' ಎಂದರೆ ಜ್ಞಾನವಾದಕೂಡಲೆ ಆಗುವ ಮುಕ್ತಿಯೂ ಉಂಟು,*

*ಅದು ಆದ ಕೂಡಲೆ ಶರೀರವು ಬಿದ್ದುಹೋಗುವದು–ಎಂದು ವಾದಿಸುತ್ತಿರುವರು. ಇದರಲ್ಲಿ ನಿಜವು ಯಾವದು? ಅದಕ್ಕೆ ಆಧಾರವಾದ ಶಾಸ್ತ್ರವೇನಾದರೂ ಉಂಟೆ''? ಎಂದು ಕೇಳಿರುತ್ತೀರಿ.*

ಮೋಕ್ಷವೆಂದರೆ ಬ್ರಹ್ಮಪ್ರಾಪ್ತಿ. 'ಯಾವಾಗ ಮನಸ್ಸಿನಲ್ಲಿದ್ದುಕೊಂಡಿರುವ ಕಾಮಗಳೆಲ್ಲವೂ ಬಿಡುಗಡೆಯಾಗುವವೋ, ಆ ಕೂಡಲೆ ಮನುಷ್ಯನು ಅಮೃತನಾಗುವನು, ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ' (ಕಾ. 2–3–1) ಎಂಬ ಶ್ರುತಿಯಲ್ಲಿ ಬಂಧಕ್ಕೆ ಕಾಮವೇ ಕಾರಣವಾದ್ದರಿಂದ ನಿಶ್ಶೇಷವಾಗಿ ಕಾಮಗಳು ನಾಶವಾದರೆ ಕೂಡಲೆ ಬ್ರಹ್ಮ ಪ್ರಾಪ್ತಿಯಾಗುವದು ಎಂದು ಸುಸ್ಪಷ್ಟವಾಗಿ ಹೇಳಿರುತ್ತದೆ. ಆದ್ದರಿಂದ ಜೀವನ್ಮುಕ್ತಿವಾದಕ್ಕೆ ಆಧಾರವಾಗಿ ಶಾಸ್ತ್ರವಿದೆ.

ಆದರೆ ಬ್ರಹ್ಮಪ್ರಾಪ್ತಿ–ಎಂದರೇನು? ಇದನ್ನು ವಿಚಾರಿಸಿದರೆ ನಿತ್ಯಶುದ್ಧಬುದ್ಧಮುಕ್ತ ಸ್ವಭಾವವಾದ ಬ್ರಹ್ಮವೇ ನಾನು ಎಂಬ ಜ್ಞಾನವು. ನಾನು 'ನಿತ್ಯಮುಕ್ತನು' ಎಂಬ ಜ್ಞಾನವಾದ ಬಳಿಕ ಮತ್ತೇನಾದರೂ ಉಳಿಯುವದುಂಟೆ? ಇದು ಹಾಸ್ಯಾಸ್ಪದವಾದ ಮಾತು. 'ಪ್ರಾರಬ್ಧಕ್ಷಯವಾದ ಬಳಿಕ ವಿದೇಹಮುಕ್ತಿಯಾಗುವದು'–ಎಂಬುದು ದೇಹವು ನಿಜವಾಗಿದೆ–ಎಂಬ ವ್ಯವಹಾರದೃಷ್ಟಿಯನ್ನು ಒಪ್ಪಿ ಹೇಳುವ ಮಾತು. ಆದರೆ ಅಶರೀರತ್ವವೇ–ಯಾವ ಶರೀರೇಂದ್ರಿಯಮನೋಬುದ್ಧಿಸಂಯೋಗಗಳೂ ನಿಜವಾಗಿಲ್ಲ ವೆಂಬುದೇ–ಮುಕ್ತಿ ಎಂದು ಶ್ರುತಿಯಲ್ಲಿರುವದರಿಂದ ಪರಮಾರ್ಥದೃಷ್ಟಿಯಿಂದ ಮುಕ್ತಿಯು ಈಗಲೂ ಇದ್ದೇ ಇದೆಯಾಗಿ ಅದು ಸಾಧ್ಯಫಲವಲ್ಲ.

ಈ ಅಭಿಪ್ರಾಯದಿಂದ ಗೌಡಪಾದರು ಹೇಳಿರುವದೇನೆಂದರೆ: **''ಪ್ರಲಯವಿಲ್ಲ ಸೃಷ್ಟಿಯಿಲ್ಲ ಬದ್ಧನಿಲ್ಲ ಸಾಧಕನಿಲ್ಲ ಮುಮುಕ್ಷುವಿಲ್ಲ ಮುಕ್ತನೂ ಇಲ್ಲ–ಇದೇ ಪರಮಾರ್ಥವು.''** ಇದನ್ನು ಮನನ ಮಾಡುತ್ತಿರಿ. ಈ ವಿಷಯದಲ್ಲಿ ಇನ್ನೊಮ್ಮೆ ನಿಮಗೆ ಒಂದು ಪತ್ರವನ್ನು ಬರೆಯುವೆನು.

## 332. ಪಾರಿವ್ರಾಜ್ಯವು ವಿಹಿತವೆ?

### (ಸೆಪ್ಟೆಂಬರ್ 1974)

*ನಿಮ್ಮ ಪ್ರಶ್ನೆಗೆ ಉತ್ತರವನ್ನು ಕೊಡುವದು ಸ್ವಲ್ಪ ತಡವಾಯಿತು. ಪಾರಿವ್ರಾಜ್ಯವು ವಿಹಿತವೆ?–ಎಂಬ ಪ್ರಶ್ನೆಯನ್ನು ಸೂತ್ರಭಾಷ್ಯದಲ್ಲಿ (ಸೂ. 3–4–20) 'ಬ್ರಹ್ಮಸಂಸ್ಥೋ ಅಮೃತತ್ತ್ವಮೇತಿ' ಎಂಬ ಛಾಂದೋಗ್ಯವಾಕ್ಯದ ಆಧಾರದಿಂದ ವಿಚಾರಮಾಡಿದೆ. ಈ ವಾಕ್ಯದಲ್ಲಿ ವಿಧಿಯನ್ನು ಹೇಳುವ ಶಬ್ದವಿಲ್ಲದಿದ್ದರೂ ಅಪೂರ್ವವಾದ ಬ್ರಹ್ಮಸಂಸ್ಥತ್ವವನ್ನು ಹೇಳುವದರಿಂದ ಇದನ್ನು ವಿಧಿಯೆಂದೇ ಕಲ್ಪಿಸಬೇಕು–ಎಂದು ಅಲ್ಲಿ ನಿರ್ಣಯಿಸಿದೆ.*

ಆ ಸೂತ್ರದ ಭಾಷ್ಯದಲ್ಲಿ ಶಂಕರಭಗವತ್ಪಾದರು "**ಅನಪೇಕ್ಷ್ಯೈವ ಜಾಬಾಲ ಶ್ರುತಿಮ್ ಆಶ್ರಮಾನ್ತರವಿಧಾಯಿನೀಮ್ ಅಯಮಾಚಾರ್ಯೇಣ ವಿಚಾರಃ ಪ್ರವರ್ತಿತಃ**" ಪಾರಿವ್ರಾಜ್ಯಾಶ್ರಮವನ್ನು ವಿಧಿಸುವ ಜಾಬಾಲಶ್ರುತಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಬಾದರಾಯಣಾಚಾರ್ಯರು ಇಲ್ಲಿ ಈ ವಿಚಾರವನ್ನು ಮಾಡಿರುತ್ತಾರೆ–ಎಂದು ಬರೆದು "**ಬ್ರಹ್ಮಚರ್ಯಂ ಪರಿಸಮಾಪ್ಯ ವನೀ ಭವೇತ್ ವನೀ ಭೂತ್ವಾ ಪ್ರವ್ರಜೇತ್। ಯದಿ ವೇತರಥಾ ಬ್ರಹ್ಮಚರ್ಯಾದೇವ ಪ್ರವ್ರಜೇತ್ ಗೃಹಾದ್ವಾವನಾದ್ವಾ**" (ಜಾ. 4–5) ಎಂಬ ಎರಡು ವಾಕ್ಯಗಳನ್ನು ಜಾಬಾಲೋಪನಿಷತ್ತಿನಿಂದ ತೆಗೆದು ಉದಾಹರಿಸಿರುತ್ತಾರೆ. ಆ ವಾಕ್ಯಗಳಲ್ಲಿ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥಾಶ್ರಮ, ಪಾರಿವ್ರಾಜ್ಯ–ಈ ನಾಲ್ಕು ಆಶ್ರಮಗಳನ್ನು ಕ್ರಮದಿಂದಲಾಗಲಿ ವೈರಾಗ್ಯವು ಬಂದರೆ ಯಾವಾಗ ವಿರಕ್ತನಾಗುವನೋ ಆ ದಿನವೇ ಬ್ರಹ್ಮಚರ್ಯದಿಂದ, ಗಾರ್ಹಸ್ಥ್ಯದಿಂದ ಅಥವಾ ವಾನಪ್ರಸ್ಥಾಶ್ರಮದಿಂದ ನೇರಾಗಿಯೇ ಪಾರಿವ್ರಾಜ್ಯವನ್ನು ಮಾಡಬೇಕು–ಎಂದಿದೆ.

ಪಾರಿವ್ರಾಜ್ಯವು ಕರ್ಮಕ್ಕೆ ಅಧಿಕಾರವಿಲ್ಲದವರಿಗೆ ಹೇಳಿದ್ದು ಎಂದು ಕೆಲವರು ಪೂರ್ವಮೀಮಾಂಸಕರು ವಾದಿಸುತ್ತಿದ್ದರು. ಆದರೆ ಅಂಥವರ ವಿಷಯವನ್ನು ಬೇರೊಂದು ವಾಕ್ಯದಲ್ಲಿಯೇ ಇದೇ ಶ್ರುತಿಯಲ್ಲಿ ಹೇಳಿರುವದರಿಂದ ಇದು ವೈರಾಗ್ಯದ ವಿಷಯವೇ ಎಂದು ಆಚಾರ್ಯರು ಇದೇ ಭಾಷ್ಯದಲ್ಲಿ ಸ್ಫುಟಗೊಳಿಸಿರುತ್ತಾರೆ.

ಇಲ್ಲಿ ಜಾಬಾಲಶ್ರುತಿಯ ವಿಷಯದಲ್ಲಿ ಒಂದು ಮಾತನ್ನು ಬರೆಯುವದು ಅವಶ್ಯವಾಗಿದೆ. ಅದೇನೆಂದರೆ: ಈಗ ಅಚ್ಚಾಗಿರುವ ಈ ಉಪನಿಷತ್ತಿನಲ್ಲಿ ಸಿಕ್ಕದೆ ಇರುವ ಒಂದು ವಾಕ್ಯವನ್ನು ಆಚಾರ್ಯರು ತಮ್ಮ ಭಾಷ್ಯದಲ್ಲಿ (ಸೂ.ಭಾ. 4–1–3) ಉದಾಹರಿಸಿರುತ್ತಾರೆ. ಉಪನಿಷತ್ತಿನಲ್ಲಿ ಉಕ್ತನಾಗಿರುವ ಪರಮಾತ್ಮನನ್ನು 'ನಾನು' ಎಂದು ತಿಳಿಯಬೇಕೊ, ನನಗಿಂತ ಬೇರೆ ಎಂದು ತಿಳಿಯಬೇಕೊ? ಎಂಬ ವಿಚಾರವನ್ನು (ವೇ. ಸು. 4–1–3) ಚರ್ಚೆಗೆ ತೆಗೆದುಕೊಂಡಾಗ "**ಪರಮೇಶ್ವರ ಪ್ರಕ್ರಿಯಾಯಾಂ ಜಾಬಾಲಾಃ ಆತ್ಮತ್ವೇನೈವೈತಮ್ ಉಪಗಚ್ಛನ್ತಿ 'ತ್ವಂ ವಾ ಅಹಮಸ್ಮಿ ಭಗವೋ ದೇವತೇಽಹಂ ವೈ ತ್ವಮಸಿ ಭಗವೋ ದೇವತೇ' ಇತಿ**" ಎಂಬ ವಾಕ್ಯವೇ ಅದು. ಈ ವಾಕ್ಯವು ಜಾಬಾಲ ಬ್ರಾಹ್ಮಣದಲ್ಲಿ ಮತ್ತೆಲ್ಲಿಯಾದರೂ ಇದ್ದರೂ ಇರಬಹುದು.

ಇದು ಹೇಗಾದರೂ ಇರಲಿ. ಜಿಜ್ಞಾಸಾಧಿಕರಣದಲ್ಲಿ ಅಥಶಬ್ದಕ್ಕೆ ಆಚಾರ್ಯರು ಬರೆದಿರುವ ಅರ್ಥದಂತೆ ಸಾಧನಚತುಷ್ಟಯಸಂಪನ್ನನೇ ಜಿಜ್ಞಾಸೆಗೆ ಅರ್ಹನಾದ ಅಧಿಕಾರಿ–ಎಂದು ಸ್ಪಷ್ಟಪಡಿಸಿರುವದರಿಂದ ಕರ್ಮದ ಫಲದಲ್ಲಿ ವಿರಕ್ತನಾದವನಿಗೇ

ಬ್ರಹ್ಮಜ್ಞಾನವು ಲಭಿಸುವದೇ ಹೊರತು ಕರ್ತೃತ್ವಬುದ್ಧಿಯಿಂದ ಕರ್ಮವನ್ನು ಮಾಡುತ್ತಿರುವವನಿಗೆ ಅದು ಎಂದಿಗೂ ದೊರಕಲಾರದು ಎಂದು ಘಂಟಾಘೋಷವಾಗಿ ಹೇಳಿರುತ್ತದೆಂಬುದನ್ನು ಮನದಂದರೆ ಪಾರಿವ್ರಾಜ್ಯವು ವಿಹಿತವೆಂಬುದಿಷ್ಟೇ ಅಲ್ಲ; ಕರ್ತೃತ್ವಬುದ್ಧಿಯಿರುವವರಿಗೆ ಬ್ರಹ್ಮಜ್ಞಾನದ ಗಂಧವೂ ಮನಸ್ಸಿಗೆ ತಟ್ಟಲಾರದೆಂಬುದು ತಾನೇ ಸ್ಪಷ್ಟವಾಗುತ್ತದೆ.

ಯಜ್ಞೋಪವೀತ, ತ್ರಿದಂಡಕಮಣ್ಡಲ್ವಾದಿಗಳಿಂದ ಕೂಡಿದ ಸಂನ್ಯಾಸವೂ ಒಂದುಂಟು; ಆದರೆ ಅದು ಶ್ರುತಿವಿಹಿತವಲ್ಲ, ಸ್ಮೃತಿಗಳಲ್ಲಿ ಮಾತ್ರವೇ ಇರುವ ಉಪಾಸನಾಪ್ರಧಾನವಾದ ಸಂನ್ಯಾಸ. ಈ ಕಾರಣದಿಂದಲೇ ಛಾಂದೋಗ್ಯಭಾಷ್ಯದಲ್ಲಿ **'ಅತಶ್ಚ ಇದಮೇವೈಕಂ ವೇದೋಕ್ತಂ ಪಾರಿವ್ರಾಜ್ಯಂ ನ ಯಜ್ಞೋಪವೀತತ್ರಿದಣ್ಡಕಮಣ್ಡಲ್ವಾದಿಪರಿಗ್ರಹಃ'** (ಛಾಂ. ಭಾ. 2–22–1, ಪಾ. 408) ಎಂದು ಇದೊಂದೇ ವೇದೋಕ್ತವಾದ ಪಾರಿವ್ರಾಜ್ಯವು–ಎಂದು ಸಂನ್ಯಾಸಿವೇಷದಿಂದ ಕೂಡಿದ ಸ್ಮಾರ್ತಾಶ್ರಮವನ್ನು ನಿಂದಿಸಿರುತ್ತಾರೆ.

ಉಪಾಸನೆಯೂ ಮಾನಸಿಕಕರ್ಮವಾದ್ದರಿಂದ ಸ್ಮಾರ್ತಸಂನ್ಯಾಸಕ್ಕೆ ಲೋಕಾಂತರದಲ್ಲಿಯೇ ಫಲವು ಪ್ರಾಪ್ತವಾಗುತ್ತದೆ. ಅದರಲ್ಲಿಯೂ ವಿರಕ್ತನಾಗಿ ಅನುಭವಪರ್ಯಂತವಾದ ಜ್ಞಾನದಿಂದ ನಿತ್ಯಮುಕ್ತಸ್ವಭಾವವುಳ್ಳ ಬ್ರಹ್ಮವನ್ನೇ ಅರಿತು ಕೃತಕೃತ್ಯನಾಗುವ ಅತ್ಯಾಶ್ರಮವೇ ಪೂರ್ಣವೈರಾಗ್ಯದಿಂದ ಕೂಡಿದ್ದು–ಎಂಬುದನ್ನು ಬೇರೆಯಾಗಿ ಹೇಳತಕ್ಕದ್ದೇನಿದೆ?

ಈ ವಿಷಯದಲ್ಲಿ ನಿಮಗೆ ಮತ್ತೇನಾದರೂ ಸಂಶಯವಿದ್ದರೆ ಬರೆಯಿರಿ. ಇನ್ನಷ್ಟು ಇದನ್ನು ವಿಸ್ತರಿಸಿ ನಿಮಗೆ ಮತ್ತೊಂದು ಪ್ರತ್ಯುತ್ತರವನ್ನು ಬರೆಯುವೆನು.

## 333. ಎಲ್ಲಕ್ಕೂ ಹೆಚ್ಚಿನ ಓದು

### (ಅಕ್ಟೋಬರ್ 1974)

ನಿಮ್ಮ ಪತ್ರವು ಬಂದು ತಲುಪಿತು. *"ಯಾವ ಬಗೆಯ ವಿದ್ಯೆಯನ್ನು ವಿದ್ಯಾಭ್ಯಾಸದ ಇಲಾಖೆಯಲ್ಲಿ ಪ್ರಚಾರಕ್ಕೆ ತರುವದು ಈ ಕಾಲಕ್ಕೆ ಅವಶ್ಯವಾಗಿದ್ದೀತು? ಈಗ ಲೋಕದಲ್ಲಿ ಎಲ್ಲೆಲ್ಲಿಯೂ ವಿದ್ಯಾರ್ಥಿಗಳು ಗುರುಹಿರಿಯರಲ್ಲಿ ಶ್ರದ್ಧಾಭಕ್ತಿರಹಿತರಾಗುತ್ತಿದಾರೆ. ಗುರುಗಳಿಗೆ ತಿರುಮಂತ್ರಹೇಳಿಕೊಡುವದಕ್ಕೆ ಹೊರಟಿರುತ್ತಾರೆ. ಈಗ ವಿದ್ಯಾರ್ಥಿಗಳೆಂದರೆ ಜನಸಮಾಜದಲ್ಲಿ ಅಶಾಂತಿಯನ್ನೆಬ್ಬಿಸುವ ದಂಗೆಕೋರರಾಗಿರುತ್ತಾರೆ–ಎಂದರೂ ಅತಿಶಯೋಕ್ತಿಯಾಗುವಂತಿಲ್ಲ.*

*ಪ್ರೌಢಶಾಲೆಗಳಲ್ಲಿಯೂ ಕಲಾಶಾಲೆಗಳಲ್ಲಿಯೂ ಗುಣಾಧಾನವನ್ನು ಮಾಡುವ ಪ್ರಯತ್ನವು ವಿಫಲವಾಗುತ್ತಿದೆ. ರಾಷ್ಟ್ರನೀತಿಯಲ್ಲಿರುವ ಪಕ್ಷಪ್ರತಿಪಕ್ಷಗಳವರು ವಿದ್ಯಾಶಾಲೆಗಳನ್ನು ತಮ್ಮ ಕಾರ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ದುರುಪಯೋಗಪಡಿಸಿಕೊಳ್ಳುತ್ತಿರುವರೆಂದೇ ಕಾಣುತ್ತಿದೆಯಲ್ಲ! ಇದಕ್ಕೇನಾದರೂ ಪರಿಹಾರವುಂಟೆ''? ಎಂದು ಕೇಳಿರುತ್ತೀರ.*

ನಿಮ್ಮ ಅಭಿಪ್ರಾಯದಲ್ಲಿ ನನಗೂ ಸಹಾನುಭೂತಿಯಿದೆ. ವಿದ್ಯೆಯಿಂದ ವಿನಯವೂ ವಿನಯದಿಂದ ಸಮಾಜಕ್ಕೆ ಸಹಾಯಕರಾದ ಸ್ವಯಂಸೇವಕರದಳವನ್ನು ಸಜ್ಜು ಮಾಡಿಕೊಳ್ಳುವ ಉಪಾಯವೂ ದೊರೆತರೆ ಲೋಕಕ್ಕೆ ಕಲ್ಯಾಣವಾದೀತೆಂಬ ವಿಷಯಕ್ಕೆ ಯಾವ ಭಿನ್ನಾಭಿಪ್ರಾಯವೂ ಇರುವಂತಿಲ್ಲ.

ಆದರೆ ಈಗ ಮಾನವರಲ್ಲಿ ದೈವಭಕ್ತಿಜ್ಞಾನವೈರಾಗ್ಯಗಳ ಬೇರು ಸಡಿಲ ವಾಗುತ್ತಿರುವದೇ ಅಶಾಂತಿಗೆ ಕಾರಣವಾಗಿರುತ್ತದೆ–ಎಂದು ನನಗೆ ತೋರುತ್ತಿದೆ. ಈಗಿನ ಮಾನವಸಮಾಜವು ಕೇವಲ 'ಹಿರಣ್ಯಕಶಿಪು'ಗಳ ಗುಂಪಾಗಿ ಪರಿಣಮಿಸಿದೆ. ಈಶ್ವರ ನೊಬ್ಬನು ಇದಾನೆಯೆ? ಧರ್ಮವು ಜಗತ್ತಿನ ಸುವ್ಯವಸ್ಥೆಗೆ ಕಾರಣವೆಂಬುದು ನಿಜವೆ?–ಎಂಬ ವಿಷಯಕ್ಕೆ ಸಂಶಯವನ್ನು ಎಬ್ಬಿಸುತ್ತಿದೆ. ಸಮಾಜದ ನಾಯಕರು ರಾಗದ್ವೇಷಗಳು, ಕುಟಿಲನೀತಿ–ಇವುಗಳಿಗೇ ಹೆಚ್ಚು ಬೆಲೆಯನ್ನು ಕೊಡುತ್ತಿದಾರೆ. 'ಹಿರಿಯಕ್ಕನ ಚಾಳಿ ಮನೆಗೆಲ್ಲ'–ಎಂಬ ಗಾದೆಯು ಸಾರ್ಥಕವಾಗಿ ವಿವಿಧಜನಾಂಗಗಳು ಪರಸ್ಪರ ವಿನಾಶಕ್ಕೆಂದೇ ಹವಣಿಸುತ್ತಿರುವಂತೆ ತೋರುತ್ತಿದೆ.

'ಉಪಾಧ್ಯಾಯರಲ್ಲಿ ನೀನು ಕಲಿತ ಉತ್ತಮವಾದ ವಿಷಯವು ಯಾವದು? ಹೇಳು'–ಎಂದು ಹಿರಣ್ಯಕಶಿಪು ಕೇಳಿದುದಕ್ಕೆ ಪ್ರಹ್ಲಾದನು ಕೊಟ್ಟ ಉತ್ತರವನ್ನು ನಾವೆಲ್ಲರೂ ಮನಸ್ಸಿಗೆ ಹತ್ತಿಸಿಕೊಳ್ಳುವದು ಈಗ ಅತ್ಯಂತ ಅವಶ್ಯ.

**''ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್।**
**ಅರ್ಚನಂ ವನ್ದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥**
**ಇತಿ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾ।**
**ಕ್ರಿಯತೇ ಭಗವತ್ಯದ್ಧಾ ತನ್ಮನ್ಯೇಽಧೀತಮುತ್ತಮಮ್॥''**

ಒಂಭತ್ತು ಬಗೆಯ ಭಕ್ತಿಯನ್ನು ಸಂಪಾದಿಸಿಕೊಂಡರೆ ಅದೇ ಉತ್ತಮ ಅಧ್ಯಯನವು. ಈ ವಿಷಯಕ್ಕೆ ನಿಮ್ಮ ಅಭಿಪ್ರಾಯವೇನು?

## 334. ಭಕ್ತಿಯೂ ಅನುಭವವೂ

(ನವಂಬರ್ 1974)

*ಉಪನಿಷತ್ತುಗಳನ್ನು ಹೇಗೆ ವಿಚಾರಕ್ಕೆ ಇಟ್ಟುಕೊಳ್ಳಬೇಕು? ಭಗವದ್ಗೀತೆಯನ್ನು ಓದುವದಕ್ಕೆ ಯಾವ ಅಧಿಕಾರಸಂಪತ್ತು ಇರುವದು ಅವಶ್ಯ?–ಎಂಬ ವಿಷಯಕ್ಕೆ ಹಲವು ಭಿನ್ನಭಿನ್ನಾಭಿಪ್ರಾಯವಿರುತ್ತವೆ. ಈ ಗ್ರಂಥಗಳ ಪಠನದಿಂದ ನಮಗೆ ನಿಜವಾದ ಫಲವುಂಟಾಗಬೇಕಾದರೆ ನಾವು ಯಾವ ಯೋಗ್ಯತೆಯುಳ್ಳವರಾಗಿರಬೇಕು? ಎಂಬ ಬಗೆಗೆ ತಮ್ಮ ಸುನಿಶ್ಚಿತಾಭಿಪ್ರಾಯವನ್ನು ತಿಳಿಸೋಣಾಗಬೇಕು– ಎಂತ ನೀವು ಬರೆದ ಪತ್ರವನ್ನು ಓದಿ ಅಭಿಪ್ರಾಯವನ್ನು ಗ್ರಹಿಸಿರುತ್ತೇನೆ. ಈಗಿನ ಕಾಲಕ್ಕೆ ಇದು ಬಹಳ ಅವಶ್ಯವಾಗಿ ನಿರ್ಣಯಿಸಬೇಕಾದ ಪ್ರಶ್ನೆಯೇ ಸರಿ.*

ಗೀತಾಶಾಸ್ತ್ರದ ಬಗೆಗೆ ಭಗವಂತನ ಅಭಿಪ್ರಾಯವನ್ನು ಆತನೇ ಸ್ಪಷ್ಟವಾಗಿ ತಿಳಿಯಿಸಿರುತ್ತಾನೆ.

ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ ।
ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ ॥
ಗೀ. 18–67

''ಇದನ್ನು ಇಂದ್ರಿಯಮನಸ್ಸುಗಳ ಐಕಾಗ್ರ್ಯರೂಪವಾದ ತಪಸ್ಸಿಲ್ಲದವನಿಗೆ ಹೇಳಬಾರದು; ಗುರುದೇವತಾಭಕ್ತಿಯಿಲ್ಲದವನಿಗೆ ಎಂದಿಗೂ ಹೇಳಬಾರದು. ಯಾವನು ಶುಶ್ರೂಷುವಲ್ಲವೋ ಅವನಿಗೂ ಹೇಳಬಾರದು; ನನ್ನ ವಿಷಯಕ್ಕೆ ಅಸೂಯೆಯುಳ್ಳವನಿಗೂ ಹೇಳಬಾರದು'' ಎಂಬುದು ಶ್ಲೋಕದ ಅರ್ಥ. ಯಾವನು ವಿಷಯವಾಸನೆಯನ್ನು ಗೆದ್ದುಕೊಂಡು ಶಾಸ್ತ್ರಾಚಾರ್ಯರ ಉಪದೇಶಕ್ಕೆ ಕಿವಿಗೊಡುತ್ತಾ ಗುರುದೇವತೆಗಳಲ್ಲಿ ಭಕ್ತಿಯುಳ್ಳವನೋ ಅವನಿಗೆ ಮಾತ್ರ ಗೀತಾಶಾಸ್ತ್ರವು ದಕ್ಕುವದು. ಅಭಕ್ತನಾದವನಿಗೆ ಹೇಳಿದ್ದು ವ್ಯರ್ಥ.

ಉಪನಿಷತ್ತುಗಳು ವೇದದ ಭಾಗಗಳಾದ್ದರಿಂದ ಅವುಗಳ ತಿಳಿವಳಿಕೆಗೆ ವೇದಾರ್ಥವನ್ನು ನಿರ್ಣಯಿಸಿಕೊಳ್ಳುವದಕ್ಕೆ ತಕ್ಕ ಯೋಗ್ಯತೆಯಿರಬೇಕೆಂಬುದು ಸ್ಪಷ್ಟವಾಗಿದೆ. ಮೀಮಾಂಸಾಶಾಸ್ತ್ರದಲ್ಲಿ ಹೇಳಿರುವ ತಾತ್ಪರ್ಯಲಿಂಗಗಳನ್ನನುಸರಿಸಿ ಶಾಸ್ತ್ರವನ್ನು ವಿಚಾರಮಾಡಬಲ್ಲವನಾದ ವೇದಾಧಿಕಾರಿಯು ಉಪನಿಷತ್ತುಗಳ ಅರ್ಥವಿಚಾರವನ್ನು ನೇರಾಗಿ ಮಾಡಬಹುದು. ಆದರೆ ಅವುಗಳ ಅರ್ಥವನ್ನು ಅನುವಾದಗಳ ಮೂಲಕ ಓದುವಾಗ ಬರಿಯ ಶ್ರುತಿಪ್ರಾಮಾಣ್ಯವನ್ನು ನಂಬಿದರೆ ಸಾಲದು. ಅನುಭವ ಪ್ರಮಾಣದ ಒರೆಗಲ್ಲಿಗೆ ತಿಕ್ಕಿ ಅವುಗಳ ಉಪದೇಶವನ್ನು ನಿರ್ಣಯಿಸುವ ಯೋಗ್ಯತೆಯಿರಬೇಕು. ಒಂದು ಉಪನಿಷತ್ತಿನಲ್ಲಿ ಹೇಳಿರುವದೇನೆಂದರೆ: ''ಕೆಟ್ಟ

ನಡತೆಯನ್ನು ಬಿಡದೆ ಶಮದಮಾದಿಗಳನ್ನು ಅಳವಡಿಸಿಕೊಂಡು ಸಮಾಧಾನಚಿತ್ತನಾಗ ಲಾರದವನಿಗೆ ವಿಜ್ಞಾನದಿಂದ ಈ ಆತ್ಮನನ್ನರಿತುಕೊಳ್ಳುವದು ಆಗಲಾರದು.'' ಇದರಿಂದ ನಿಶ್ಚಯಿಸಬೇಕಾಗಿರುವದೇನೆಂದರೆ: ಯಾವನು ಅಂತರ್ಮುಖನಾಗಿರುವನೋ ಯಾವನಿಗೆ ಈಶ್ವರನಲ್ಲಿ ಭಕ್ತಿಯಿರುವದೋ ಯಾವನು ಕೇವಲ ಬಾಹ್ಯಪ್ರಮಾಣತರ್ಕಗಳಿಗೆ ಶರಣಾಗದೆ ಅನುಭವದ ಒರೆಗಲ್ಲಿನಿಂದಲೇ ತತ್ತ್ವವನ್ನು ಅರಿಯುವದಕ್ಕೆ ಯತ್ನಿಸುವನೋ ಅವನು ವೇದಾಂತವಿಚಾರಕ್ಕೆ ಅಧಿಕಾರಿಯಾಗುವನು.

ವೇದಾಂತವನ್ನು ಶುಷ್ಕತರ್ಕದಿಂದ ನಿಶ್ಚಯಿಸಿಕೊಳ್ಳುವೆನೆಂಬ ಹಂಬಲವನ್ನು ಇಟ್ಟುಕೊಳ್ಳಬೇಡಿರಿ. ಇದು ಅನುಭವಶಾಸ್ತ್ರವು. ಆತ್ಮನು ಅನುಭವಸ್ವರೂಪನಾಗಿದ್ದಾನೆ. ಅವನೇ ನಮ್ಮಗಳ ನಿಜವಾದ ಸ್ವರೂಪವಾದ್ದರಿಂದ ಆತ್ಮನನ್ನು ಆತ್ಮನ ಅನುಭವದಿಂದಲೇ ಅರಿತು ಆತ್ಮನಲ್ಲಿ ನಿಲ್ಲಬೇಕು.

ನಿಮಗೆ ಈ ವಿಷಯಕ್ಕೆ ಮತ್ತೇನಾದರೂ ಸಂಶಯವಿದ್ದರೆ ಕೂಡಲೆ ಬರೆಯಿರಿ. ಮತ್ತೊಂದು ಲೇಖನದಲ್ಲಿ ನಿಮಗೆ ಇದರ ವಿಷಯಕ್ಕೆ ಸ್ವಲ್ಪ ವಿವರವನ್ನು ಬರೆಯುವೆನು.

## 335. ವ್ಯವಹಾರವನ್ನು ಪರೀಕ್ಷೆ ಮಾಡುವದು ಹೇಗೆ?

### (ಡಿಸೆಂಬರ್ 1974)

*''ಪರಮಾರ್ಥ, ವ್ಯವಹಾರ–ಎಂದು ಶ್ರೀಶಂಕರಭಗವತ್ಪಾದರ ಭಾಷ್ಯದಲ್ಲಿ ಎರಡು ಶಬ್ದಗಳು ಅಲ್ಲಲ್ಲಿ ಕಾಣಬರುತ್ತವೆ. ವ್ಯವಹಾರವೇ ಪರಮಾರ್ಥವಲ್ಲವೆ? ಅದಕ್ಕಿಂತ ಬೇರೆಯಾಗಿ ಪರಮಾರ್ಥವು ಮತ್ತೆ ಬೇರೆ ಇದ್ದೀತೆ? ಇದ್ದರೆ ಅದನ್ನು ಅರಿತುಕೊಳ್ಳುವದು ಹೇಗೆ?–ಎಂದು ಬೇರೆ ಬೇರೆಯ ಪ್ರಸ್ಥಾನದವರು ಆಕ್ಷೇಪಿಸುತ್ತಿರುತ್ತಾರೆ. ಇದಕ್ಕೆ ತಮ್ಮ ಉತ್ತರವೇನು? ಆಕ್ಷೇಪದಲ್ಲಿರುವ ಪ್ರಶ್ನೆಗೆ ಉತ್ತರವು ಇಲ್ಲವೇ ಇಲ್ಲವೆಂದು ನನಗೆ ತೋರುತ್ತಿದೆ. ಆತ್ಮನು ಅನುಭವಸ್ವರೂಪನು ಎಂದು ತಾವು ನನಗೆ ಬರೆದ ಮೇಲೂ ಈ ಸಂಶಯವು ಬಗೆಹರಿದಿಲ್ಲ''–ಎಂದು ಬರೆದಿರುತ್ತೀರಿ. ಅದಕ್ಕೆ ಸಂಕ್ಷೇಪವಾಗಿ ಉತ್ತರವನ್ನು ಇಲ್ಲಿ ಬರೆದಿರುತ್ತೇನೆ. ಈಗಲೂ ಸಂಶಯವು ಏನಾದರೂ ಉಳಿದು ಕೊಂಡರೆ ಮತ್ತೆ ಬರೆಯಿರಿ. ಅದನ್ನು ವಿಮರ್ಶೆಮಾಡುವ ಕೆಲಸಕ್ಕೆ ಆಮೇಲೆ ಕೈಹಾಕಬಹುದು.*

'ಅನುಭವ' ಎಂಬ ಶಬ್ದಕ್ಕೆ ಅನೇಕಾರ್ಥಗಳಿವೆ. ಇಂದ್ರಿಯಗಳಿಗೆ ನೇರಾಗಿ ಮಾಡಿಕೊಳ್ಳುವ ವಿಶೇಷಜ್ಞಾನರೂಪವಾದ ಅನುಭವ, ಮನಸ್ಸಿನಿಂದ ಸುಖದುಃಖಾದಿ ಗಳನ್ನು ನೇರಾಗಿ ಅರಿತುಕೊಳ್ಳುವ ಅನುಭವ–ಇವುಗಳೆರಡೇ ಅಲ್ಲದೆ ಅಂತಃಕರಣವನ್ನೇ ನೇರಾಗಿ ಅರಿಯುವ ಅನುಭವವೂ ಇದೆ. ಇದನ್ನೇ ನಾನು ಆತ್ಮಸ್ವರೂಪದ ಅನುಭವ– ಎಂದು ಹೇಳಿದ್ದು.

ಎಚ್ಚರದಲ್ಲಿ ಪ್ರಮಾಣ, ಪ್ರಮೇಯ–ಇವುಗಳಲ್ಲದೆ ಪ್ರಮೇಯವನ್ನು ಅರಿಯುವ 'ನಾನು' ಎಂಬ ಪ್ರಮಾತೃವೂ ಇರುತ್ತಾನೆ. ನಮಗೆಲ್ಲರಿಗೂ ಇದು ನೇರಾಗಿ ಅನುಭವದಿಂದ ಗೊತ್ತಾಗುತ್ತದೆ. ಹಾಗೆಯೇ ಸ್ವಪ್ನದಲ್ಲಿಯೂ ಪ್ರಮಾತೃ, ಪ್ರಮಾಣ, ಪ್ರಮೇಯ ಎಂಬ ಮೂರು ವಿಭಾಗದ ಪ್ರಪಂಚವು ಕಾಣುವಂತೆ ತೋರುತ್ತದೆ, ಅಲ್ಲವೆ? ಹೀಗೆ ಎಚ್ಚರ, ಕನಸು–ಎಂಬ ಎರಡು ಅವಸ್ಥೆಗಳಲ್ಲಿಯೂ ಪ್ರಮಾತ್ರಾದಿಗಳನ್ನು ನೇರಾಗಿ ಅರಿಯುತ್ತಿರುವ ಸ್ವರೂಪವನ್ನು 'ಸಾಕ್ಷಿ' ಎಂದು ಉಪನಿಷತ್ತಿನಲ್ಲಿ ಕರೆದಿರುತ್ತದೆ. ಈ ಸಾಕ್ಷಿಯು ಎಚ್ಚರಕನಸುಗಳನ್ನು ನೇರಾಗಿಯೇ ಅನುಭವಿಸುತ್ತಿರುತ್ತಾನೆ–ಎಂದು ಹೇಳುವದುಂಟು. ಆದರೆ ಇಲ್ಲಿ ಅರಿಯುವದೆಂಬ ಕ್ರಿಯೆಯೇನೂ ಇರುವದಿಲ್ಲ. 'ಬೆಂಕಿಯು ಸುಡುತ್ತದೆ' –ಎಂಬಂತೆ ಎರಡು ವಿಧದಿಂದಲೂ ಸಾಕ್ಷಿಸ್ವರೂಪದ ಅನುಭವವನ್ನೇ ಬೇರೆಬೇರೆಯ ಮಾತುಗಳಿಂದ ಹೇಳುತ್ತಿರುವರು.

ಈ ಅನುಭವಸ್ವರೂಪನಾದ ಆತ್ಮನು ಎರಡವಸ್ಥೆಗಳನ್ನೂ ನೋಡುತ್ತಿರುವ ತತ್ತ್ವವಾಗಿರುತ್ತಾನೆ. ಈ ಆತ್ಮನಿಗೆ ಅವಸ್ಥೆಗಳಲ್ಲಿ ಕಾಣುತ್ತಿರುವ ಕ್ರಿಯಾಕಾರಕಫಲಗಳ ಪರಿಚ್ಛೇದವೇನೂ ಇರುವದಿಲ್ಲ. ಆದ್ದರಿಂದ ಇವನೇ ಎರಡವಸ್ಥೆಗಳನ್ನೂ ವ್ಯಾಪಿಸಿಕೊಂಡಿರುವವನು–ಎಂಬರ್ಥದಲ್ಲಿ ಇವನನ್ನು ಆತ್ಮನೆಂದು ಕರೆಯುತ್ತಾರೆ.

ಇದಲ್ಲದೆ 'ಎಚ್ಚರವನ್ನು ಸಾಕ್ಷಿಯು ನೋಡುತ್ತಿರುತ್ತಾನೆ' ಎಂಬ ವಾಕ್ಯದಲ್ಲಿ 'ನಾನು ಗೋಡೆಯನ್ನು ಕಾಣುತ್ತಿದೇನೆ' ಎಂಬಂತೆ ವಿಭಾಗವಾಗಿರುವ ಮೂರುಕುಪ್ಪೆಯ ಅರಿವು ಇದು–ಎಂದು ಭಾವಿಸುವಹಾಗಿಲ್ಲ. ಆತ್ಮನು ಎಚ್ಚರದಲ್ಲಿ ಪ್ರಮಾತೃಪ್ರಮಾಣ ಪ್ರಮೇಯಗಳ ರೂಪದಿಂದ ತೋರಿಕೊಳ್ಳುತ್ತಿರುತ್ತಾನೆ ಎಂದರೆ–ಆತ್ಮನು ಕನಸಿನಲ್ಲಿ ಕಾಣುವ ಹುಸಿತೋರಿಕೆಯ ಪ್ರಮಾತೃಪ್ರಮಾಣ ಪ್ರಮೇಯಗಳ ರೂಪದಿಂದ ತೋರಿಕೊಳ್ಳುತ್ತಿರುವಂತೆಯೇ–ಎಂದೇ ತಿಳಿಯಬೇಕು. ಸೂರ್ಯನು ಅಥವಾ ಚಂದ್ರನು ಜಲಾಶಯದಲ್ಲಿ ಅನೇಕ ಸೂರ್ಯರ ಅಥವಾ ಅನೇಕ ಚಂದ್ರರ ರೂಪದಿಂದ ಕಾಣಿಸಿಕೊಳ್ಳುತ್ತಿರುತ್ತಾನೆ–ಎಂಬ ವಾಕ್ಯದಂತೆ ಈ ವಾಕ್ಯಕ್ಕೂ ಅರ್ಥವನ್ನು ಮಾಡಿಕೊಳ್ಳಬೇಕು.

ಎಚ್ಚರ, ಕನಸು–ಎಂಬ ಎರಡು ಅವಸ್ಥೆಗಳಿವೆ, ಎಂಬುದು ವ್ಯವಹಾರ ಮಾತ್ರ. ಲೋಕದಲ್ಲಿ ಜನರು ಭಾವಿಸಿರುವದನ್ನು ಅನುಸರಿಸಿ ಆಡಿದಮಾತು, ಈ ಅವಸ್ಥೆಗಳಲ್ಲಿ ಪ್ರಮಾತೃಪ್ರಮಾಣ ಪ್ರಮೇಯ–ಎಂಬ ಮುಕ್ಕುಪ್ಪೆಯ ವಿಂಗಡವು ಗೋಚರವಾಗುತ್ತದೆ–ಎಂಬಿದೂ ವ್ಯವಹಾರವೇ. ಆದರೆ ಪರಮಾರ್ಥವೇನೆಂದರೆ: ಸಾಕ್ಷಿಯು ಅಥವಾ ಆತ್ಮನು ನಿಜವಾಗಿ ಅದ್ವಿತೀಯನು. ಇಬ್ಬರು ಆತ್ಮರು ಇಲ್ಲವೇ ಇಲ್ಲ. ಆತ್ಮನನ್ನೇ–ಅಂದರೆ ಅನುಭವ ಸ್ವರೂಪವಾದ ತತ್ತ್ವವನ್ನೇ–ಜನರು ಪ್ರಮಾತೃ, ಪ್ರಮಾಣ, ಪ್ರಮೇಯ–ಎಂದು ವಿಂಗಡಿಸಿಕೊಂಡು ಇವು ಮೂರೂ ಬೇರೆಬೇರೆಯೆಂದು ಭಾವಿಸಿಕೊಂಡಿರುತ್ತಾರೆ.

ಇದರಂತೆ ಸುಷುಪ್ತಿ–ಎಂದರೆ ಏನನ್ನೂ ಅರಿಯದ ಅವಸ್ಥೆ–ಎಂದು ಜನರು ಆಡಿಕೊಳ್ಳುವ ತನಿನಿದ್ರೆಯೂ ವ್ಯವಹಾರಮಾತ್ರವೇ. ಅಲ್ಲಿ ಈ ಮುಕ್ಕುಪ್ಪೆಯ ವಿಂಗಡವಿಲ್ಲದ ಆತ್ಮನೊಬ್ಬನೇ ಇರುತ್ತಾನೆ.

ಈ ವಿಷಯದಲ್ಲಿ ನಿಮಗೆ ಮತ್ತೇನಾದರೂ ಕೇಳಬೇಕಾದದ್ದಿದ್ದರೆ ಅವಶ್ಯವಾಗಿ ಬರೆಯಿರಿ. ಇದನ್ನು ಇನ್ನಷ್ಟು ವಿವರಿಸುವೆನು.

## 336. ಗುರುಗಳಾಗುವ ಹವಣಿಕೆಯೇಕೆ?

### (ಜನವರಿ 1975)

*ನಿಮ್ಮ ಪತ್ರವು ತಲುಪಿದೆ. ಅಲ್ಲಲ್ಲಿ ಜನರು ನನ್ನನ್ನು ತತ್ತ್ವೋಪದೇಶಮಾಡಬೇಕೆಂದು ಕೇಳುತ್ತಿರುತ್ತಾರೆ. ಅವರಿಗೆಲ್ಲ ಕಲಿಗಾಲದಲ್ಲಿ ರಾಮನಾಮವೊಂದೇ ಸರ್ವಪಾಪಪರಿಹಾರಕ ವಾಗಿರುತ್ತದೆ– ಎಂದು ಬೋಧಿಸುತ್ತಾ ಇರುತ್ತೇನೆ. ನಾನು ಮಾತ್ರ ಸಚ್ಚಿನ್ಮಾತ್ರವಾದ ಬ್ರಹ್ಮಚಿಂತನೆ ಯಲ್ಲಿಯೇ ನಿರತನಾಗಿರುತ್ತೇನೆ. ಇದು ಸರಿಯಷ್ಟೆ? ಪರಮಾರ್ಥವನ್ನು ಸಾಮಾನ್ಯ ಜನರಿಗೆ ಬೋಧಿ ಸುವದಕ್ಕೆ ಮತ್ತೇನಾದರೂ ಉಪಾಯವುಂಟೆ? ಎಂದು ಕೇಳಿ ಬರೆದಿರುತ್ತೀರಿ.*

ಇಲ್ಲಿ ನಿರ್ವಿಶೇಷವಾದ ಬ್ರಹ್ಮವು ಇದೆ; ಅದು ಉತ್ತಮಾಧಿಕಾರಿಗಳಾದ ನಮ್ಮಂಥವರಿಗೆ ತಕ್ಕದ್ದು, ನಾಮಸ್ಮರಣೆಯೇ ಮುಂತಾದದ್ದು ಸಾಮಾನ್ಯಗೃಹಸ್ಥರಿಗೆ ಶಾಸ್ತ್ರದಲ್ಲಿ ಹೇಳಿದ್ದು–ಎಂಬ ಅಧಿಕಾರತಾರತಮ್ಯವನ್ನು ಕಲ್ಪಿಸಿಕೊಂಡು ನೀವು ಸಂಚಾರಕ್ರಮದಲ್ಲಿ ಶಿಷ್ಯರಿಗೆ ಉಪದೇಶಮಾಡುವದಕ್ಕೆ ಇಟ್ಟುಕೊಂಡಿರುವ ಕ್ರಮವಿದೆಂಬ ಅಭಿಪ್ರಾಯವು ನಿಮ್ಮ ಹೃದಯದಲ್ಲಿದೆ ಎಂದು ಕಾಣಬರುತ್ತಿದೆ.

ಈ ಅಭಿಮಾನವನ್ನು ಮೊದಲು ಬಿಟ್ಟುಬಿಡುವದಕ್ಕೆ ಪ್ರಯತ್ನಿಸಿರಿ. ಇರುವ ಬ್ರಹ್ಮವು ಒಂದೇ; ಅದೇ ಭಕ್ತರ ಅನುಗ್ರಹಕ್ಕಾಗಿ ಸವಿಶೇಷವಾಗಿ ಸಗುಣವೆಂದೂ ಸಾಕಾರವೆಂದೂ ಕಾಣಿಸಿಕೊಂಡಿರುತ್ತದೆ. ನಿರ್ವಿಶೇಷಬ್ರಹ್ಮವೆಂಬುದು ಅದರ ಪರಮಾರ್ಥರೂಪವು. ಅದರಲ್ಲಿ ನಿಮಗೆ ಪರಭಕ್ತಿಯಿರಬೇಕು. **'ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ'** (ಗೀ. 18–55) ಎಂಬ ಗೀತೋಕ್ತಿಯಂತೆ ಅದೇ ಸರ್ವಭೂತಗಳಿಗೂ ಆತ್ಮನಾಗಿರುವದು. 'ನಾನು ಗುರು, ಇವನು ಶಿಷ್ಯನು'–ಎಂಬ ಭೇದಬುದ್ಧಿಯ ತಾರತಮ್ಯಾಭಿಮಾನವನ್ನು ಬಿಟ್ಟುಬಿಡಿರಿ. 'ಪರಮಾತ್ಮನು ನನ್ನ ಆತ್ಮನಾಗಿ ಹೇಗೆ ಇರುತ್ತಾನೋ ಹಾಗೆಯೇ ಬ್ರಹ್ಮಾದಿಸ್ತಂಬಪರ್ಯಂತವಾದ ಪ್ರಾಣಿಗಳಿಗೂ ಆತ್ಮ ನಾಗಿರುತ್ತಾನೆ'–ಎಂಬ ತತ್ತ್ವವನ್ನು ಮನಗಂಡುಕೊಳ್ಳುವದಕ್ಕೆ ಯತ್ನಿಸುತ್ತಾ ಸಗುಣ

ಸಾಕಾರಬ್ರಹ್ಮವನ್ನು ಭಕ್ತಿಯಿಂದಕಾಣುವ ಅಭ್ಯಾಸವನ್ನು ಮಾಡಿಕೊಳ್ಳಿರಿ. 'ಆತ್ಮಾರಾಮರಾದ ಮುನಿಗಳೂ ಯಾವ ಹೃದಯಗ್ರಂಥಿಯ ಬಾಧೆಯೂ ಇಲ್ಲದಿದ್ದರೂ ಶ್ರೀಹರಿಯಲ್ಲಿ ಅಹೈತುಕಭಕ್ತಿಯನ್ನು ಮಾಡುತ್ತಿರುತ್ತಾರೆ' ಎಂಬ ಭಾಗವತವಚನವನ್ನು ಇಲ್ಲಿ ಗ್ರಹಿಸತಕ್ಕದ್ದು.

## 337. ಅಹಂಕಾರಮಮಕಾರಗಳ ತ್ಯಾಗವೇ ಉತ್ತಮಸಾಧನ

**(ಫೆಬ್ರವರಿ 1975)**

*ನಿಮ್ಮ ಪತ್ರವು ತಲುಪಿತು. ಈಗ ಸಂಸಾರದ ಸಂಬಂಧವೆಲ್ಲವನ್ನೂ ಬಿಟ್ಟು ಊರಿನಿಂದ ದೂರವಾಗಿರುವ ಈ ದೇಶಕ್ಕೆ ಬಂದಿರುತ್ತೇನೆ. ನದೀ ತೀರದಲ್ಲಿ ಒಂದು ಕುಟೀರವನ್ನು ಕಟ್ಟಿಕೊಂಡು ಏಕಾಂತವಾಸದಲ್ಲಿ ಭಗವಚ್ಚಿಂತನೆಯಲ್ಲಿಯೇ ಕಾಲವನ್ನು ಕಳೆಯುವ ಪ್ರಯತ್ನ ಮಾಡಿರುತ್ತೇನೆ. ಈಗ ನಾನು ಮನಸ್ಸಿನ ವಿಕ್ಷೇಪವನ್ನು ಪರಿಹರಿಸಿಕೊಳ್ಳುವದಕ್ಕೆ ಮಾಡಬೇಕಾದ ಮುಖ್ಯ ಸಾಧನವು ಯಾವದು?–ಎಂದು ಕೇಳಿರುತ್ತೀರಿ.*

ನಿಮ್ಮ ಪ್ರಶ್ನೆಯು ಸಂನ್ಯಾಸಿಗಳಾದವರು ಅವಶ್ಯವಾಗಿ ಕೇಳತಕ್ಕದ್ದೇ ಆಗಿದೆ. ಊರಿನಿಂದ ದೂರವಾಗಿ ಬಂದಿದ್ದರೂ 'ನಾನು ಊರಿಗೆ ದೂರವಾಗಿರುತ್ತೇನೆ'–ಎಂಬ ಚಿಂತನೆಯು ತಪ್ಪಿಲ್ಲವೆಂಬುದು ಸ್ಪಷ್ಟ. 'ನದಿಯ ತೀರದಲ್ಲಿ ಏಕಾಂತ ವಾಸದಲ್ಲಿರುತ್ತೇನೆ' ಎಂಬ ಯೋಚನೆಯಲ್ಲಿ 'ನಮ್ಮವರು ನನ್ನ ಹತ್ತಿರವಿಲ್ಲ' ಎಂಬ ಭಾವವು ಅವಶ್ಯವಾಗಿ ಅಡಕವಾಗಿಯೇ ಇರಬೇಕಷ್ಟೆ? ಇನ್ನು ಭಿಕ್ಷಕ್ಕೆ ಹೇಗೆ? ಎಂಬ ಚಿಂತೆಯು ಆಗಾಗ್ಗೆ ಮನಸ್ಸಿನಲ್ಲಿ ತಟ್ಟುತ್ತದೆಯೊ, ಹೇಗೆ? ಇದನ್ನು ಯೋಚಿಸಿರಿ. ಇವೆಲ್ಲ ನನ್ನದು–ಎಂಬ ಬುದ್ಧಿಯ ರೂಪಗಳೇ ಆಗಿರುತ್ತವೆ.

ಇನ್ನೊಂದು ಪ್ರಶ್ನೆಯನ್ನು ಇಲ್ಲಿ ಉತ್ತರಿಸಿಕೊಳ್ಳುವದು ಅವಶ್ಯ. ಆಪತ್ತಿನ ಕಾಲಕ್ಕೆ ಇರಬೇಕೆಂದು ನಿಮ್ಮ ಆಸ್ತಿಯನ್ನು ಮಾರಿದ ಹಣದ ಭಾಗವನ್ನು ಯಾವದಾದರೊಂದು ಬ್ಯಾಂಕಿನಲ್ಲಿಟ್ಟುಕೊಂಡಿರುವಿರಾ? ಕುಟೀರದಲ್ಲಿ ಅಥವಾ ಅದರ ಸಮೀಪದಲ್ಲಿ ಯಾರಾದರೂ ನಿಮಗೆ 'ಆಪ್ತರು' ಇದಾರೆಯೆ? ಹೌದೆಂದರೆ ಆಗಲೂ 'ನಾನು', 'ನನ್ನದು' ಎಂಬ ಭಾವನೆಯು ನಿಮ್ಮನ್ನು ಬಿಟ್ಟಿಲ್ಲವೆಂದು ತಿಳಿಯಿರಿ.

'ನಾನು' ಎಂದರೆ ಶರೀರೇಂದ್ರಿಯಮನಸ್ಸುಗಳು ಎಂಬ ದೃಢವಾದ ಭಾವನೆಯು ನಿಮ್ಮ ಮನಸ್ಸಿನಲ್ಲಿರುವದೆ? ಅಥವಾ ಆಗಾಗ್ಗೆ ತೋರಿಕೊಳ್ಳುತ್ತಿರುವದೆ? ಇದನ್ನು ಚೆನ್ನಾಗಿ

ವಿಮರ್ಶೆಮಾಡಿ ನಿಶ್ಚಯಿಸಿಕೊಳ್ಳಿರಿ. ಏಕೆಂದರೆ ಇದಕ್ಕಿಂತ ಹೆಚ್ಚಿನ ಸಂಸಾರವು ಮತ್ತೊಂದಿರುವದಿಲ್ಲ.

'ನಾನು', 'ನನ್ನದು' ಎಂಬ ಬುದ್ಧಿಗಳು ಹೇಗೋ ನುಸುಳಿಕೊಂಡು ಮನಸ್ಸಿನಲ್ಲಿ ಮನೆಮಾಡಿಕೊಂಡಿರುವವು. 'ನಾನು' ಎಂಬುದನ್ನು ತನ್ನ ಅರಿವಿನ ಬೆಳಕಿನಿಂದ ಬೆಳಗುತ್ತಾ ನಿರ್ವಿಕಾರವಾಗಿ ನಿರ್ವಿಶೇಷವಾಗಿರುವ ಕೂಟಸ್ಥಚೈತನ್ಯವು ಮನಸ್ಸಿನ ಭಾವನೆಗಳ ಆತ್ಮವು. ಎಚ್ಚರದಲ್ಲಾಗಲಿ, ನಿದ್ರೆಯಲ್ಲಾಗಲಿ, ಆ ಬರಿಯರಿವಿನ ಸ್ವರೂಪವನ್ನು ಕೊಡವಿ ಕೊಳ್ಳುವದು ಯಾರಿಂದಲೂ ಆಗಲಾರದು. ನೀವು ಆಹ್ನಿಕವನ್ನು ಮಾಡುವಾಗಲಾಗಲಿ, ಸದ್ವಿಚಾರವನ್ನು ಮಾಡುವಾಗಲಾಗಲಿ ಯಾರ ಜೊತೆಯಾದರೂ ಆತ್ಮವಿಚಾರವನ್ನು ಕುರಿತು ಚರ್ಚೆ ಮಾಡುವಾಗಲಾಗಲಿ ಲಕ್ಷ್ಯವಿಟ್ಟು ನೋಡಿರಿ. ಇದೇ ಪರಮಾರ್ಥವು. ಇದರಲ್ಲಿ ನೆಲೆನಿಂತಿರುವದೇ ಯತಿಗಳ ಹೆಗ್ಗುರಿಯಾಗಿರಬೇಕು.

****

**4. ವೇದಾಂತ ಸಂದೇಶಗಳು : ಸಂಪುಟ 3 (ಅಧ್ಯಾತ್ಮ ಬೆಳಕು)**

ಅ.ಪ್ರ. ಪತ್ರಿಕೆಯಲ್ಲಿ 1923ರಲ್ಲಿ ಪ್ರಾರಂಭವಾಗಿ 1974ರವರೆಗೂ ಕೆಲವೊಮ್ಮೆ ಪ್ರತಿ ತಿಂಗಳೂ ಮತ್ತು ಕೆಲವು ಒಂದೆರಡು ವರ್ಷಗಳ ಅಂತರದಲ್ಲೂ ಶ್ರೀ ಶ್ರೀಗಳವರು ಬರೆದು ಪ್ರಕಟಿಸಿದ್ದ ಸುಮಾರು 210 ಲೇಖನಗಳ ಸಂಗ್ರಹ. ಅರ್ಧ ಪುಟದಿಂದ ಹಿಡಿದು ಮೂರು ನಾಲ್ಕು ಪುಟಗಳ ಲೇಖನಗಳನ್ನೊಳಗೊಂಡಿವೆ. ಸ್ಥೂಲವಾಗಿ (1) ಅಧ್ಯಾತ್ಮ ವಿದ್ಯೆ (2) ಅಧ್ಯಾತ್ಮದ ಮೊದಲ ಸೋಪಾನ (3) ಅಧ್ಯಾತ್ಮ ಸಾಧನಗಳು (4) ಅಧ್ಯಾತ್ಮ ಪ್ರಕಾಶ (5) ಅಧ್ಯಾತ್ಮ ಚಿಂತನೆ (6) ಅಧ್ಯಾತ್ಮಜ್ಞಾನ ಎಂಬ ಆರು ಅಧ್ಯಾಯಗಳಾಗಿ ವರ್ಗೀಕರಿಸಿ ಎಲ್ಲಾ ಲೇಖನಗಳನ್ನೂ ಅಳವಡಿಸಿದೆ.

ಸಭ್ಯಗೃಹಸ್ಥನ ಲೌಕಿಕ, ಧಾರ್ಮಿಕ ಕರ್ತವ್ಯಗಳೇನು, ದೇವಸ್ಥಾನಗಳಲ್ಲಿ ಹೇಗೆ ನಡೆದುಕೊಳ್ಳಬೇಕು, ಮನಃಶಾಂತಿಗೆ ಸುಲಭೋಪಾಯ, ನಮ್ಮ ಜೀವನದ ಸ್ವರೂಪ ಮತ್ತು ಹೆಗ್ಗುರಿ ಇತ್ಯಾದಿ ಸಾಮಾನ್ಯ ಜನರ ಪ್ರಶ್ನೆಗಳಿಗೆಲ್ಲಾ ಸರಳವಾಗಿಯೂ, ಶಾಸ್ತ್ರಯುಕ್ತಿಗಳಿಗೆ ಒಪ್ಪಾಗಿಯೂ ಇರುವ ಉತ್ತರಗಳಿವೆ. ದಿನಕ್ಕೊಂದು ಲೇಖನದಂತೆ ಪಠಿಸಿದರೂ ವರ್ಷವಿಡೀ ಓದಬಹುದಾದ ಉತ್ತಮ ಗ್ರಂಥ. ವೇದಾಂತದ ಆರಂಭದಲ್ಲಿರುವ ಮನುಷ್ಯರಿಂದ ಹಿಡಿದು ಜಿಜ್ಞಾಸುಗಳಿಗೂ ಅನ್ವಯಿಸುವ ಅತ್ಯುಪಯುಕ್ತವಾದ ವಿಷಯಗಳಿವೆ.

**(ಮೊದಲನೆಯ ಮುದ್ರಣ, 2010, ಪು. 356, ಬೆಲೆ. 50 ರೂ.)**

**5. ವೇದಾಂತ ಸಂದೇಶಗಳು : ಸಂಪುಟ 5 (ಶ್ರೀ ಶ್ರೀಗಳವರ ಹಿತವಚನಗಳು)**

ಅ.ಪ್ರ. ಪತ್ರಿಕೆಯಲ್ಲಿ ಸಂಪುಟ 14ರಿಂದ ಸಂ. 44ರವರೆಗೆ (ಜನವರಿ 1943–ಫೆಬ್ರವರಿ 1975) **ಶಂಕರರ ಪತ್ರಗಳು** ಎಂಬ ಶೀರ್ಷಿಕೆಯಲ್ಲಿ ಕೆಲವೊಮ್ಮೆ ಒಂದು ಮತ್ತು 2–3 ಪುಟಗಳಂತೆ ಪ್ರಶ್ನೋತ್ತರ ರೂಪದಲ್ಲಿ ಶ್ರೀಶ್ರೀಗಳವರೇ ಬರೆದು ಪ್ರಕಟಿಸಿದ್ದ 337 ಲೇಖನಗಳ (583 ಪು.) ಸಂಗ್ರಹ. ಓದುಗರ ಅನುಕೂಲಕ್ಕಾಗಿ ನಾಲ್ಕು ಭಾಗಗಳಲ್ಲಿ ಮುದ್ರಿಸಲಾಗಿದೆ. ಲೇಖನಗಳನ್ನು ಎರಡು ಗುಪುಗಳಾಗಿ ವಿಂಗಡಿಸಬಹುದು: 1) ಕುಟುಂಬ ಭಾವನೆ, ಹರಿಜನ ಪ್ರೇಮ, ಧನದ ಉಪಯೋಗ ಇತ್ಯಾದಿ ಸಾಮಾನ್ಯ ವಿಷಯಗಳನ್ನೊಳಗೊಂಡ ಮೊದಲನೆಯ ಭಾಗ. 2) ಪಾರಿವ್ರಾಜ್ಯ, ವೇದಾಂತದ ವಿಚಾರವನ್ನು ಚರ್ಚಿಸುವ ಕ್ರಮ, ಸಂನ್ಯಾಸಧರ್ಮ, ಆಧ್ಯಾತ್ಮಿಕ ಸಾಧನಗಳು, ನಿಜವಾದ ವಿದ್ಯೆ ಇತ್ಯಾದಿ ಶಾಸ್ತ್ರೀಯವಾದ ಲೇಖನಗಳನ್ನೊಳಗೊಂಡ ಎರಡನೆಯ ಭಾಗ. ಪರಮಪುರುಷಾರ್ಥಕ್ಕೆ ಸಾಧನವಾದ ವಿಚಾರವನ್ನು ತಿಳಿಸುವ ಲೇಖನಗಳಾದ್ದರಿಂದ ಎಲ್ಲರಿಗೂ ಉಪಯುಕ್ತವಾದ ಗ್ರಂಥ. **ಈಗ ಇದು ನಿಮ್ಮ ಕೈಯಲ್ಲಿದೆ. (ಮೊದಲನೆಯ ಮುದ್ರಣ, 2011, ಪು. 583, ಬೆಲೆ. 120 ರೂ.)** ಇತರ ಇನ್ನೂ ಕೆಲವು ಸಂಪುಟಗಳು ಹೊರಬರಲಿವೆ.

ಇತರ ಪುಸ್ತಕಗಳು, ಮತ್ತು DVD-MPS Format ನಲ್ಲಿ ಮುದ್ರಿತವಾಗಿರುವ ಧ್ವನಿಸುರುಳಿಗಳು (C.D) ರಿಯಾಯಿತಿ ದರದಲ್ಲಿ ದೊರಕುತ್ತವೆ. ಸಂಪರ್ಕಿಸಿ.

---

**ಅಧ್ಯಾತ್ಮಪ್ರಕಾಶ ಕಾರ್ಯಾಲಯ**
ನಂ.68, 2ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು – 28 ; ದೂ.–26765548

**ಅಧ್ಯಾತ್ಮಪ್ರಕಾಶ ಕಾರ್ಯಾಲಯ**
ಹೊಳೆನರಸೀಪುರ : 573211
ದೂ. : 08175–273820

# ಸಂಸ್ಥಾಪಕರ ಸ್ಮರಣೆ

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರಜೀವನ ಮತ್ತು ಅವರ ಅಸಾಧಾರಣ ಶ್ರೇಷ್ಠ ಸಾಧನೆಯನ್ನು ಅವಲೋಕಿಸಿದಾಗ, ಅವರ ಜನ್ಮ ಮತ್ತು ಬಾಳು ಎಲ್ಲವೂ ವೇದಾಂತಾಧ್ಯಯನ ಮತ್ತು ವೇದಾಂತ ಪ್ರಸಾರಕ್ಕೇ ಮೀಸಲಾಗಿರಬೇಕೆಂದು ಭಗವಂತನ ಇಚ್ಛೆ ಮತ್ತು ನಿಯಾಮಕವಾಗಿತ್ತೆಂದು ತೋರುತ್ತದೆ. ಇದೇನೂ ಉತ್ಪ್ರೇಕ್ಷೆಯಲ್ಲ. ಏಕೆಂದರೆ ಇನ್ನೂ ಅವರ ವಿದ್ಯಾರ್ಥಿದೆಶೆಯಲ್ಲಿಯೇ ತರಗತಿಯ ಸಂಸ್ಕೃತ ಪಾಠ ಪುಸ್ತಕವನ್ನು ಕೇಳಿದಾಗ ಅಂಗಡಿಯವರು ಕೊಟ್ಟದ್ದು "ಭಗವದ್ಗೀತಾ ಭಾಷ್ಯ" (ಅತ್ಯಂತ ಅನಿರೀಕ್ಷಿತವಾದ ಘಟನೆಯಿಂದ ನನಗೆ ಅರಿವಿಲ್ಲದೆಯೇ ಭಗವದ್ಗೀತಾ ಭಾಷ್ಯದಲ್ಲಿ ಪ್ರವೇಶವಾಯಿತು – ಶ್ರೀಗಳು), ಮತ್ತೊಮ್ಮೆ ಅಗ್ಗದ ಸಣ್ಣ ಪುಸ್ತಕ ಕೋರಿದಾಗ ಕೈಗೆ ಬಂದದ್ದು 'ವಿವೇಕ ಚೂಡಾಮಣಿ', ಸೆಂಟ್ರಲ್ ಕಾಲೇಜಿನ ಎಫ್.ಎ. ತರಗತಿಯಲ್ಲಿದ್ದಾಗ ಶ್ರೀಕೃಷ್ಣಸ್ವಾಮಿ ಅಯ್ಯರ್‌ರವರ ಮನೆಯಲ್ಲಿ ಅವರಿಂದ ಕೆಲವು ವೇದಾಂತ ಪಾಠಗಳು ಹಾಗೂ ಸೂತ ಸಂಹಿತೆಯನ್ನು ಓದಲು ಅವರ ಪ್ರೋತ್ಸಾಹ...... ಹೀಗೆ ಪ್ರವೃತ್ತಿ, ಉತ್ಸುಕತೆ, ಕ್ರಿಯಾಪ್ರಯತ್ನ ಹರಿದದ್ದೇ ವೇದಾಂತ ಮಾರ್ಗದಲ್ಲಿ.

"ಸಾಮಾನ್ಯವಾಗಿ ಒಬ್ಬ ಮನುಷ್ಯನ ಜೀವಿತದಲ್ಲಿ ಸಂಭವಿಸಬಹುದಾದ ಸಾಧಾರಣ............ ಘಟನೆಗಳ ನಡುವೆ ಶ್ರೀ ಸುಬ್ಬರಾಯರು (ಶ್ರೀಗಳವರ ಪೂರ್ವಾಶ್ರಮದ ಹೆಸರು) ಸಾಧಿಸಿದ ಅಪೂರ್ವ ಸಿದ್ಧಿಗಳು ತೆರೆದು ನಿಲ್ಲುತ್ತವೆ. ಶ್ರೀ ಶ್ರೀಶಿವಾಭಿನವನೃಸಿಂಹ ಭಾರತೀ ಸ್ವಾಮಿಗಳಿಂದ ಶ್ರೀ ಶಾಂಕರಭಾಷ್ಯ ಶಾಂತಿಪಾಠ, ವಿದ್ವದಗ್ರೇಸರರಾದ ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳ (ಮಾರ್ಗದರ್ಶನ), ಕೃಷ್ಣಸ್ವಾಮಿಅಯ್ಯರ್, ಕುರ್ತುಕೋಟಿ ಮಹಾಭಾಗವತರು, ಹೊಸಕೆರೆ ಚಿದಂಬರಯ್ಯನವರು ಮುಂತಾದವರ ಸಹವಾಸ ಸುಬ್ಬರಾಯರಿಗೆ ದೇವದತ್ತವರಗಳಾಗಿ ಪರಿಣಮಿಸಿದವು......... ಮನುಷ್ಯನಲ್ಲಿ ಪ್ರಬಲವಾದ ಉತ್ಸಾಹವೂ, ಕರ್ತೃತ್ವಶಕ್ತಿಯೂ ಇದ್ದಲ್ಲಿ ಆತನು ಯಾವ ಮಟ್ಟಕ್ಕೆ ಏರುತ್ತಾನೆ ಎಂಬುದಕ್ಕೆ ಶ್ರೀಗಳೇ ನಿದರ್ಶನ. ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳಲ್ಲಿ ಅವರು ಗಳಿಸಿದ, ಬಳಸಿದ ಪ್ರೌಢಪಾಂಡಿತ್ಯ, ಶೈಲಿ ವಿಸ್ಮಯಕಾರಿಯಾದದ್ದು. ಶ್ರೀಗಳವರ ಅಧ್ಯಯನ ಆಳ, ಜನೋಪಯೋಗವಾಗಲೆಂಬ ಹೃದಯದ ಕಳಕಳಿ ಗಮನೀಯ. ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ ಲೇಖನಗಳೂ ಗಂಭೀರವಾದವು. ಮತ್ತೆ ಮತ್ತೆ ಓದಬೇಕಾದವು.– ಈ ಲೇಖನಗಳನ್ನು ಸಂಗ್ರಹಿಸಿ, ಪ್ರಕಟಿಸಿದರೆ ಜಿಜ್ಞಾಸುಗಳಿಗೆ ಮಹೋಪಕಾರವಾಗುತ್ತದೆ"– ಶ್ರೀ ಎಸ್.ರಂಗನಾಥ ಶರ್ಮ (ಶ್ರೀಗಳವರ ಆತ್ಮಚರಿತ್ರೆಯ 2006 ಮುನ್ನುಡಿಯಲ್ಲಿ). ಪಂಡಿತರಾಗಿದ್ದ ಶ್ರೀ ಲಕ್ಷ್ಮೀನರಸಿಂಹಮೂರ್ತಿಯವರು ಸಂಗ್ರಹಿಸಿ ಪ್ರಕಟಿಸಿದ 15–18 ಗ್ರಂಥಗಳು ಈ ಮೊದಲೇ ಪ್ರಕಟವಾಗಿವೆ. ಅನಂತರದಲ್ಲೂ ಕೆಲವು ಸಂಪುಟಗಳು ಬಂದಿವೆ. "ವೇದಾಂತ ಸಂದೇಶಗಳು" ಎಂಬ ಈ ಕೃತಿ ಶ್ರೇಣಿಯಲ್ಲಿ ಇದುವರೆಗೆ ನಾಲ್ಕು ಸಂಪುಟಗಳು ಪ್ರಕಟವಾಗಿ ಶ್ರೀಶ್ರೀಗಳವರ ಹಿತವಚನಗಳು ಎಂಬ ಶೀರ್ಷಿಕೆಯಲ್ಲಿ ಐದನೆಯ ಸಂಪುಟ ಪ್ರಕಾಶನಗೊಂಡಿದೆ. ಇನ್ನೂ ಕೆಲವು ಸಂಪುಟಗಳು ಹೊರಬರಲಿವೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್॥